ಗುರುವಾರ, ನವೆಂಬರ್ 14, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಾಗೃತಿ

ತಾಪಮಾನ ಏರಿಕೆ, ವಾಯುಮಾಲಿನ್ಯ ಕುರಿತ ಜಾಗೃತಿಗೆ ವಾರಾಣಸಿಯಲ್ಲಿ ಗೋಡೆ ಮೇಲೆ ಮೂಡಿಸಿರುವ ಚಿತ್ರದ ಎದುರು ವ್ಯಕ್ತಿ ಹಾದುಹೋದರು

ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿಯವರಿಗೆ
90ನೇ ಜನ್ಮದಿನದ ಹಾರ್ದಿಕ ಶುಭಾಷಯಗಳು

ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ

ಸಂಸ್ಥಾನದ "ಅನ್ನಪೂರ್ಣೇಶ್ವರಿ" ಎಂದು ಪ್ರೀತಿಯಿಂದ ಕರೆಯಿಸಿಕೊಳ್ಳುವ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿಯವರಿಗೆ 55ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು. ತಮ್ಮ ಇಡೀ ಜೀವನವನ್ನು ಸಂಸ್ಥಾನಕ್ಕಾಗಿ ಮುಡಿಪಾಗಿಟ್ಟು, ಸಂಸ್ಥಾನ ಮತ್ತು ಸಂಘದ ಎಲ್ಲಾ ಚಟುವಟಿಕೆಗಳಿಗೆ ಶಕ್ತಿಯ ಮೂಲವಾಗಿರುವರು. ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಮತ್ತು ಪ್ರತಿಯೊಬ್ಬರಿಗೂ ಸುಸ್ಥಿತಿಯ ಜೀವನವನ್ನು ಒದಗಿಸುವುದು ಪೂಜ್ಯ ಡಾ. ಅವ್ವಾಜಿಯವರ ಮುಖ್ಯ ಧ್ಯೇಯವಾಗಿದೆ.

ಚಿರಂಜೀವಿ ಪೂಜ್ಯ ದೊಡ್ಡಪ್ಪ ಅಪ್ಪಾಜಿ

7ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರ ಪುನರ್ಜನ್ಮ ಪಡೆದಿರುವ ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿಯವರಿಗೆ 8ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು. ಪ್ರಸ್ತುತ ಮತ್ತು ಉದಯೋನ್ಮುಖ ತಲೆಮಾರಿನ ಯುವ ಮನಸ್ಸುಗಳಿಗೆ ಮತ್ತು ಶರಣಬಸವೇಶ್ವರ ದೇವರ ಭಕ್ತರಿಗೆ ಹೊಸ ಆಶಾಕಿರಣವಾಗಿರುವರು.

ಶಿಕ್ಷಣದ ಬದ್ಧತೆಯಿಂದ ಅಸಂಖ್ಯಾತ ಜೀವನ ಮತ್ತು ಸಮುದಾಯಗಳನ್ನು ಪರಿವರ್ತಿಸಿದ, ಪರಮಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿಯವರಿಗೆ 90ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು. ಕಲಬುರಗಿ ಪ್ರದೇಶವನ್ನು ಪ್ರಮುಖ ಶೈಕ್ಷಣಿಕ ಕೇಂದ್ರವನ್ನಾಗಿ ಪರಿವರ್ತಿಸಿದ, ದೂರದೃಷ್ಟಿಯ ಶಿಕ್ಷಣತಜ್ಞ ಎಂದು ನಾವು ನಿಮ್ಮನ್ನು ಗೌರವಿಸುತ್ತೇವೆ.

ಶುಭ ಕೋರುವವರು:

ಶರಣಬಸವೇಶ್ವರ ವಿದ್ಯಾವರ್ಧಕ ಸಂಘ
ಸಂಘದಡಿಯಲ್ಲಿ ಬರುವ ಎಲ್ಲಾ ಶಾಲಾ ಕಾಲೇಜುಗಳು
ಶರಣಬಸವ ವಿಶ್ವವಿದ್ಯಾಲಯ
SBR ರೆಸಿಡೆನ್ಶಿಯಲ್ ಶಾಲೆ ಮತ್ತು SBR ಪಿ.ಯು. ಕಾಲೇಜು
ಅಪ್ಪಾ ಪಬ್ಲಿಕ್ ರೆಸಿಡೆನ್ಶಿಯಲ್ ಸ್ಕೂಲ್
ಬೀದರ್‌ನ ಎಲ್ಲಾ ಶಾಲಾ ಕಾಲೇಜುಗಳು
ಬಸವಕಲ್ಯಾಣದ ಎಲ್ಲಾ ಶಾಲಾ ಕಾಲೇಜುಗಳು
ಸುರಪುರದ ಎಲ್ಲಾ ಶಾಲಾ ಕಾಲೇಜುಗಳು

ಕೋವಿಡ್ ಅವಧಿಯಲ್ಲಿ ಅಗತ್ಯವಿಲ್ಲದೆಯೂ ಯಂತ್ರ ಖರೀದಿ: ನ್ಯಾಯಮೂರ್ತಿ ಡಿಕುನ್ಹ ವರದಿ

ಸಿ.ಟಿ ಸ್ಕ್ಯಾನ್: ₹15.83 ಕೋಟಿ ಅಕ್ರಮ

• ಜಯಸಿಂಹ ಆರ್.

ಬೆಂಗಳೂರು: ಕೋವಿಡ್ ಪತ್ತೆ ಮತ್ತು ಚಿಕಿತ್ಸೆಯಲ್ಲಿ ಅಗತ್ಯವೇ ಇಲ್ಲದ ಸಿ.ಟಿ ಸ್ಕ್ಯಾನ್ ಯಂತ್ರಗಳನ್ನು₹84.99 ಕೋಟಿ ವೆಚ್ಚದಲ್ಲಿ ಖರೀದಿಸಿದ್ದು, ಇದರಲ್ಲಿ ಒಟ್ಟು ₹15.83 ಕೋಟಿಯಷ್ಟು ಅಕ್ರಮ ನಡೆದಿದೆ ಎಂದು ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಆಯೋಗದ ವರದಿ ಹೇಳಿದೆ.

ಈ ಕುರಿತು ತನಿಖೆ ನಡೆಸಬೇಕು ಮತ್ತು ಸಂಬಂಧಿತ ಅಧಿಕಾರಿಗಳಿಂದ ನಷ್ಟದ ಮೊತ್ತವನ್ನು ವಸೂಲಿ ಮಾಡಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಕೋವಿಡ್ ನಿರ್ವಹಣೆ ಸಂದರ್ಭದ ಖರೀದಿಗೆ ಸಂಬಂಧಿಸಿದಂತೆ ಆಯೋಗವು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಮೂರನೇ ಭಾಗದಲ್ಲಿ ಈ ಮಾಹಿತಿ ಇದೆ. 351 ಪುಟಗಳ ವರದಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.



'ಕೊರೋನಾ ವೈರಾಣು ಪತ್ತೆಗೆ ಯಾವ ರೀತಿಯಲ್ಲೂ ನೆರವಿಗೆ ಬರದ 17 ಸಿ.ಟಿ ಸ್ಕ್ಯಾನ್ ಯಂತ್ರಗಳನ್ನು, ಕೋವಿಡ್ ನಿರ್ವಹಣೆಗಾಗಿ ಬಿಡುಗಡೆ ಮಾಡಿದ ಅನುದಾನದಲ್ಲೇ ಖರೀದಿಸಲಾಗಿದೆ. ಇದರಿಂದ ಕೋವಿಡ್ ನಿಯಂತ್ರಣಕ್ಕೆ ಯಾವ ಪ್ರಯೋಜನವೂ ಆಗಿಲ್ಲ' ಎಂದು ವರದಿ ಹೇಳಿದೆ.

2020–2022ರ ನಡುವೆ ವಿವಿಧ ಜಿಲ್ಲಾಸ್ಪತ್ರೆಗಳಿಗೆಂದು 128 ಸ್ಲೈಸ್ ಸಾಮರ್ಥ್ಯದ 11 ಸಿ.ಟಿ ಸ್ಕ್ಯಾನ್ ಯಂತ್ರಗಳನ್ನು ಖರೀದಿಸಲಾಗಿದೆ. ಸೇವ್ ಮೆಡಿಟೆಕ್ ಸಿಸ್ಟಮ್ಸ್ ಎಂಬ ಕಂಪನಿಯು 2020ರ ಆಗಸ್ಟ್‌ನಲ್ಲಿ ಒಂದು ಯಂತ್ರವನ್ನು ₹4.92 ಕೋಟಿ ದರದಲ್ಲಿ ಪೂರೈಕೆ ಮಾಡಿದೆ. ಇದೇ ಕಂಪನಿ 2021ರ ಜೂನ್‌ನಲ್ಲಿ ಎರಡು ಯಂತ್ರಗಳನ್ನು ಅದೇ ದರದಲ್ಲಿ ಪೂರೈಸಿದೆ ಎಂಬ ಮಾಹಿತಿ ವರದಿಯಲ್ಲಿದೆ.

'ಜಿಇಎಂ ಪೋರ್ಟಲ್‌ನಲ್ಲಿ ಈ ಯಂತ್ರಕ್ಕೆ ₹4.92 ಕೋಟಿ ಎಂದು ನಮೂದಾಗಿದೆ. ನಿಯಮಗಳ ಪ್ರಕಾರ ಸರ್ಕಾರಿ ಸಂಸ್ಥೆಗಳು ಈ ಯಂತ್ರಗಳನ್ನು ಅದೇ ದರದಲ್ಲಿ ಖರೀದಿಸಬೇಕು. ಸೇವ್ ಮೆಡಿಟೆಕ್‌ನಿಂದ ಮೂರು ಯಂತ್ರಗಳನ್ನು ಅದೇ ದರದಲ್ಲಿ ಖರೀದಿಸಿದ್ದರೂ, ಕೆಲವೇ ತಿಂಗಳ ಅಂತರದಲ್ಲಿ ಒಂದು ಕೋಟಿಗೂ ಹೆಚ್ಚು ದರ ನೀಡಿ ಏಳು ಯಂತ್ರಗಳನ್ನು ಖರೀದಿಸಲಾಗಿದೆ. ಇಲ್ಲಿ ಅಕ್ರಮ ನಡೆದಿದೆ' ಎಂದು ವರದಿ ಹೇಳಿದೆ.

2021ರ ಅಕ್ಟೋಬರ್‌ನ 10ರಂದು ಫೋರ್ಸಸ್ ಹೆಲ್ತ್‌ಕೇರ್ ಕಂಪನಿಯು 2 ಯಂತ್ರಗಳನ್ನು ತಲಾ ₹6.10 ಕೋಟಿ ದರದಲ್ಲಿ ಪೂರೈಕೆಗೆ ಒಪ್ಪಿಕೊಂಡಿದೆ. ಮತ್ತು ಅದೇ ಅಕ್ಟೋಬರ್ 12ರಂದು ಇನ್ನೂ ಆರು ಯಂತ್ರಗಳನ್ನು ತಲಾ ₹5.95 ಕೋಟಿ ದರದಲ್ಲಿ ಪೂರೈಸಲು ಸಹಿ ಮಾಡಿದೆ. ₹4.92 ಕೋಟಿ ವೆಚ್ಚದಲ್ಲಿ ಖರೀದಿಸಬೇಕು ಎಂಬ ನಿಬಂಧನೆ ಇದ್ದರೂ, ಹೆಚ್ಚಿನ ದರಕ್ಕೆ ಖರೀದಿಸಿದ ಕಾರಣಕ್ಕೆ ₹8.55 ಕೋಟಿ ನಷ್ಟವಾಗಿದೆ ಎಂದು ವರದಿ ವಿವರಿಸಿದೆ.

ಮೇಲಿನ ಎರಡೂ ಕಂಪನಿಗಳು ಯಂತ್ರಗಳ ಪೂರೈಕೆ ಮತ್ತು ಅಳವಡಿಕೆಯಲ್ಲಿ ಹಲವು ತಿಂಗಳ ವಿಳಂಬ ಮಾಡಿದ್ದು, ಅವುಗಳಿಂದ ₹7.28 ಕೋಟಿ ದಂಡ ವಸೂಲಿ ಮಾಡಬೇಕಿತ್ತು. ಅಧಿಕಾರಿಗಳು ದಂಡ ವಸೂಲಿ ಮಾಡದೇ ಇದ್ದ ಕಾರಣಕ್ಕೆ ಬೊಕ್ಕಸಕ್ಕೆ ನಷ್ಟವಾಗಿದೆ ಎಂದು ವರದಿ ಹೇಳಿದೆ.

'ಷರತ್ತು ಬದಲು: ಫೋರ್ಸಸ್‌ಗೆ ಲಾಭ'

'128 ಸ್ಲೈಸ್ ಸಾಮರ್ಥ್ಯದ ಸಿ.ಟಿ ಸ್ಕ್ಯಾನ್ ಯಂತ್ರಗಳ ಖರೀದಿಗೆ ಸಂಬಂಧಿಸಿದಂತೆ ಫಿಲಿಪ್ಸ್ ಇಂಡಿಯಾ 128 ಸ್ಲೈಸ್ ಸಾಮರ್ಥ್ಯದ ಯಂತ್ರಕ್ಕೆ ದರ ನಮೂದಿಸಿ, ಫೋರ್ಸಸ್ ಹೆಲ್ತ್‌ಕೇರ್ 160 ಸ್ಲೈಸ್ ಸಾಮರ್ಥ್ಯದ ಯಂತ್ರಕ್ಕೆ ದರ ನಮೂದಿಸಿ ಬಿಡ್ ಸಲ್ಲಿಸಿದ್ದವು. ವೈದ್ಯಕೀಯ ಶಿಕ್ಷಣ ಇಲಾಖೆಯು ಟೆಂಡರ್ ಷರತ್ತು ಬದಲಿಸುವ ಮೂಲಕ ಫೋರ್ಸಸ್ ಕಂಪನಿಗೆ ಅನುಕೂಲ ಮಾಡಿಕೊಟ್ಟಿದೆ ಎಂದು ವರದಿ ಆಪಾದಿಸಿದೆ.

ಮೂಲ ಟೆಂಡರ್‌ನಲ್ಲಿ '128 ಸ್ಲೈಸ್ ಸಾಮರ್ಥ್ಯದ' ಎಂದು ಉಲ್ಲೇಖಿಸಲಾಗಿತ್ತು. ಬಿಡ್ ಸಲ್ಲಿಕೆ ನಂತರ ಫೋರ್ಸಸ್ ಕಂಪನಿಗೆ ಅನುಕೂಲ ಮಾಡಿಕೊಡಲು, '128 ಸ್ಲೈಸ್ ಮತ್ತು ಅದಕ್ಕಿಂತಲೂ ಹೆಚ್ಚು ಸಾಮರ್ಥ್ಯದ' ಎಂದು ಬದಲಿಸಲಾಗಿದೆ ಎಂದು ವರದಿ ಹೇಳಿದೆ.

ಇದರ ವಿರುದ್ಧ ಫಿಲಿಪ್ಸ್ ಕಂಪನಿ ಹೈಕೋರ್ಟ್ ಮೊರೆ ಹೋಗಿತ್ತು. ಆದರೆ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ 2022ರ ಜುಲೈನಲ್ಲಿ ನೂತನ ಆದೇಶ ಹೊರಡಿಸಿದರು. ಇದರಿಂದ ಫಿಲಿಪ್ಸ್ ಕಂಪನಿಯ ಅರ್ಜಿ ತಿರಸ್ಕೃತವಾಯಿತು ಎಂದು ವರದಿ ಹೇಳಿದೆ.

ಒಟ್ಟಾರೆ ಫೋರ್ಸಸ್ ಕಂಪನಿಗೆ ಅನುಕೂಲ ಮಾಡಿಕೊಡಲು ನಿಯಮಗಳನ್ನು ಹಲವು ಬಾರಿ ಉಲ್ಲಂಘಿಸಲಾಗಿದೆ. ಕಂಪನಿಗೆ ಲಾಭ ಮಾಡಿಕೊಡುವ ಉದ್ದೇಶ ಮಾತ್ರವಲ್ಲದೇ, ಅಧಿಕಾರಿಗಳು ಮತ್ತು ಇತರರು ತಾವು ಲಾಭ ಮಾಡಿಕೊಳ್ಳಲು ಹೀಗೆ ಮಾಡಿದ್ದಾರೆ. ಇವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ವರದಿ ಶಿಫಾರಸು ಮಾಡಿದೆ.

ಬಿಜೆಪಿಯಿಂದ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ: ಸಿದ್ದರಾಮಯ್ಯ

'ಕೈ' ಶಾಸಕರಿಗೆ ತಲಾ ₹50 ಕೋಟಿ ಆಮಿಷ

ಪ್ರಜಾವಾಣಿ ವಾರ್ತೆ

ತಿ.ನರಸೀಪುರ (ಮೈಸೂರು ಜಿಲ್ಲೆ): 'ಬಿಜೆಪಿಯವರು ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಮುಂದುವರಿಸಿದ್ದು, ಪಕ್ಷದ 50 ಶಾಸಕರಿಗೆ ತಲಾ ₹ 50 ಕೋಟಿ ಆಮಿಷ ಒಡ್ಡಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ತಾಲ್ಲೂಕಿನ ಸೋಸಲೆ ಗ್ರಾಮದ ಬಳಿ ಬುಧವಾರ ₹ 470 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, 'ಬಿಜೆಪಿ ಎಂದೂ ನೇರವಾಗಿ ಅಧಿಕಾರಕ್ಕೆ ಬಂದಿಲ್ಲ. ಹಿಂದೆ 17 ಶಾಸಕರಿಗೆ ತಲಾ ₹25-30 ಕೋಟಿ ಕೊಟ್ಟು ಖರೀದಿಸಿದ್ದರು. ಈಗ ₹ 50 ಕೋಟಿ ಆಮಿಷ ಒಡ್ಡಿದ್ದಾರೆ. ಈ ಹಣ ಎಲ್ಲಿಂದ ಬರುತ್ತದೆ? ಬಿಜೆಪಿಯವರು ನೋಟು ಪ್ರಿಂಟ್ ಮಾಡಿದ್ದರಾ' ಎಂದು ಪ್ರಶ್ನಿಸಿದರು.

'ನಮ್ಮ ಶಾಸಕರು ಆಮಿಷಕ್ಕೆ ಒಪ್ಪದ ಕಾರಣ, ನನ್ನ ಮೇಲೆ ಮಸಿ ಬಳಿಯುವ ಪ್ರಯತ್ನ ನಡೆದಿದೆ. ನನ್ನನ್ನು ಮುಟ್ಟಿದರೆ ಕರ್ನಾಟಕದ ಜನ ಸುಮ್ಮನೆ ಬಿಡುವುದಿಲ್ಲ' ಎಂದು ಎಚ್ಚರಿಸಿದರು.

'ಇಂದು ಕೆಲವು ನ್ಯಾಯಾಲಯಗಳು ಸಹ ಕೇಂದ್ರ ಸರ್ಕಾರ ಹೇಳಿದ ರೀತಿಯಲ್ಲಿ ತೀರ್ಪು ಕೊಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಹೀಗೆಯೇ ಆದರೆ ನಾವು ಎಲ್ಲಿಗೆ ಹೋಗಬೇಕು' ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಮಾಡಿದ್ದನ್ನು ಸಾಬೀತುಪಡಿಸಿದರೆ ನಾನು ರಾಜಕೀಯ ಬಿಡುತ್ತೇನೆ. ನಮ್ಮ ವಿರುದ್ಧ ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ ಬಿಡುತ್ತಾರೆಯೇ?'
ಸಿದ್ದರಾಮಯ್ಯ, ಮುಖ್ಯಮಂತ್ರಿ

'ವಿರೋಧ ಪಕ್ಷಗಳು ನಮ್ಮ ಮೇಲೆ ಷಡ್ಯಂತ್ರ ಮಾಡಿ, ಸುಳ್ಳು ಆರೋಪ ಮಾಡಿದಾಗ, ನಾವು ನ್ಯಾಯಾಲಯಗಳ ಮೊರೆ ಹೋಗಿ ನ್ಯಾಯ ಸಿಗುವ ವಿಶ್ವಾಸದಲ್ಲಿರುತ್ತೇವೆ. ಆದರೆ ಇಂದು ಎಲ್ಲ ಸಂಸ್ಥೆಗಳು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವುದರಿಂದ ನಮಗೆ ನ್ಯಾಯ ಸಿಗುತ್ತಿಲ್ಲ. ಅಂತಿಮವಾಗಿ ನಾವು ಜನರ ನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ. ಜನರ ಆಶೀರ್ವಾದವಿರುವವರೆಗೂ ನಾವು ಹೆದರುವುದಿಲ್ಲ' ಎಂದು ಹೇಳಿದರು.

ಗುತ್ತಿಗೆಯಲ್ಲಿ ಮೀಸಲಾತಿ ಮುಸ್ಲಿಮರ ಬೇಡಿಕೆಯಷ್ಟೇ: ಮುಖ್ಯಮಂತ್ರಿ ಸ್ಪಷ್ಟನೆ

ಬೆಂಗಳೂರು: ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡುವ ವಿಚಾರ ಬುಧವಾರವೂ ರಾಜಕೀಯ ವಲಯದಲ್ಲಿ ಚರ್ಚಾ ವಿಷಯವಾಗಿತ್ತು.

ಈ ಬಗ್ಗೆ ಮೈಸೂರಿನಲ್ಲಿ ಸ್ಪಷ್ಟನೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಗುತ್ತಿಗೆಗಳಲ್ಲಿ ಮೀಸಲಾತಿ ನೀಡಿರುವಂತೆ ತಮಗೂ ನೀಡಬೇಕು ಎಂದು ಮುಸ್ಲಿಂ ಮುಖಂಡರೂ ಮನವಿ ಮಾಡಿದ್ದರು. ಪರಿಶೀಲಿಸಲು ಸೂಚಿಸಿದ್ದೆ. ಈ ಬಗ್ಗೆ ಯಾವುದೇ ತೀರ್ಮಾನವನ್ನೂ ತೆಗೆದುಕೊಂಡಿಲ್ಲ' ಎಂದಿದ್ದಾರೆ.

'ಸರ್ಕಾರಿ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವ ಬಗ್ಗೆ ಬಿಜೆಪಿ ಮಾಡುತ್ತಿರುವ ಟೀಕೆ ಆಧಾರರಹಿತ. ಅವರಿಗೆ ಕೋಮುವಾದವನ್ನು ಸೃಷ್ಟಿಸುವುದೇ ಕಾಯಕ. ಎರಡು ಧರ್ಮಗಳ ಜನರ ನಡುವೆ ಬೆಂಕಿ ಹಚ್ಚುವ ಕೆಲಸದಲ್ಲಿ ಅವರು ನಿರತರಾಗಿದ್ದಾರೆ. ಶಾಂತಿ, ಸಹೋದರತ್ವವನ್ನು ಬಿಜೆಪಿ ಎಂದೂ ಬಯಸಿದವರಲ್ಲ' ಎಂದರು. ಮುಸ್ಲಿಮರ ಮನವಿಯ ಪರಿಶೀಲನೆ ಅಷ್ಟೆ: ಬೆಂಗಳೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಗೃಹ ಸಚಿವ ಪರಮೇಶ್ವರ, 'ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವ ಯಾವುದೇ ತೀರ್ಮಾನ ಸರ್ಕಾರದ ಮಟ್ಟದಲ್ಲಿ ಆಗಿಲ್ಲ. ಮುಸ್ಲಿಂ ಸಮುದಾಯದ ಕೆಲ ಶಾಸಕರು ಹಾಗೂ ಮುಖಂಡರು ಸಲ್ಲಿಸಿದ ಮನವಿ ಪರಿಶೀಲಿಸಲು ಮುಖ್ಯಮಂತ್ರಿ ಸಂಬಂಧಪಟ್ಟ ಇಲಾಖೆಗೆ ಸೂಚಿಸಿದ್ದಾರೆ. ಇಲಾಖೆ ಪರಿಶೀಲಿಸಿದ ಬಳಿಕ ಪ್ರಸ್ತಾವ ಸಂಪುಟದ ಮುಂದೆ ತರಬೇಕು. ಅಲ್ಲಿ ಸಮ್ಮತಿ ಸಿಕ್ಕರೆ ಸರ್ಕಾರಿ ಆದೇಶ ಆಗಬೇಕಾಗುತ್ತದೆ. ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚೆಯೇ ನಡೆದಿಲ್ಲ' ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷ ಮುಸ್ಲಿಮರ ತುಷ್ಟೀಕರಣ ಮಾಡುತ್ತಿದೆ ಎನ್ನುವ ಬಿಜೆಪಿ ಆರೋಪ ಸರಿಯಲ್ಲ. ಪರಿಶಿಷ್ಟರಿಗೆ ನೀಡಿದಂತೆ ತಮಗೂ ಸೌಲಭ್ಯ ಕಲ್ಪಿಸಬೇಕು ಎಂಬ ಮುಸ್ಲಿಂ ಮುಖಂಡರ ವಿನಂತಿಯನ್ನೇ ಆದೇಶ ಎಂಬಂತೆ ಬಿಂಬಿಸಲಾಗುತ್ತಿದೆ. ಯಾವುದೇ ಸಮುದಾಯ, ಧರ್ಮದ ಬಡವರ ಅಭಿವೃದ್ಧಿಗೆ ಒತ್ತು ನೀಡುವುದು ಸರ್ಕಾರದ ಕರ್ತವ್ಯ ಎಂದರು.

ನಟ ಸಲ್ಮಾನ್ ಖಾನ್‌ಗೆ ಬೆದರಿಕೆ ಮಾನ್ವಿ ಯುವಕನ ಬಂಧನ

ಪ್ರಜಾವಾಣಿ ವಾರ್ತೆ

ಸೊಹೇಲ್ ಪಾಷಾ

ಮಾನ್ವಿ (ರಾಯಚೂರು ಜಿಲ್ಲೆ): ನಟ ಸಲ್ಮಾನ್ ಖಾನ್ ಹಾಗೂ ಅವರ ಸಿನಿಮಾದ ಗೀತ ರಚನಕಾರನಿಗೆ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೆಸರಿನಲ್ಲಿ ಬೆದರಿಕೆ ಒಡ್ಡಿದ ಆರೋಪದಡಿ ಮಾನ್ವಿಯ ಸೊಹೇಲ್ ಪಾಷಾ (23) ಎಂಬಾತನನ್ನು ಮಹಾರಾಷ್ಟ್ರ ಪೊಲೀಸರು ಬಂಧಿಸಿ ಮುಂಬೈಗೆ ಕರೆದೊಯ್ದಿದ್ದಾರೆ.

ಪಟ್ಟಣದ ಶಾದಿ ಮಹಲ್ ಹತ್ತಿರದ ನಿವಾಸಿ ಸೊಹೇಲ್ ಪಾಷಾ ನವೆಂಬರ್ 7ರಂದು ಮುಂಬೈ ನಗರದ ಪೊಲೀಸರ ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ, 'ನನಗೆ ₹5 ಕೋಟಿ ನೀಡದಿದ್ದರೆ ಸಲ್ಮಾನ್ ಖಾನ್ ಮತ್ತು 'ಮೈ ಸಿಕಂದರ್ ಹೂಂ' ಗೀತೆಯ ರಚನಕಾರನನ್ನು ಕೊಲ್ಲುವೆ' ಎಂದು ಬೆದರಿಕೆ ಹಾಕಿದ್ದನು ಎನ್ನಲಾಗಿದೆ.

ವಾಟ್ಸ್‌ಆ್ಯಪ್ ಕರೆ ಮಾಡಿದ್ದ ಫೋನ್ ಸಂಖ್ಯೆಯ ಮಾಹಿತಿ ಆಧರಿಸಿ ತನಿಖೆ ನಡೆಸಿದ ಮುಂಬೈ ನಗರದ ಅಪರಾಧ ವಿಭಾಗದ ಪೊಲೀಸರು, ಮಾನ್ವಿಗೆ ಬಂದು ಒಂದು ವಾರ ಕಾರ್ಯಾಚರಣೆ ನಡೆಸಿದಾಗ ಬೆದರಿಕೆ ಕರೆಗೆ ಬಳಸಿದ ಫೋನ್ ನಂಬರ್ ಮಾನ್ವಿ ತಾಲ್ಲೂಕಿನ ಚೀಕಲಪರ್ವಿ ಗ್ರಾಮದ ವೆಂಕಟೇಶ ನಾರಾಯಣ ಅವರಿಗೆ ಸೇರಿದ್ದು ಎಂಬುದು ಗೊತ್ತಾಗಿದೆ.

ವೆಂಕಟೇಶ ನಾರಾಯಣ ಅವರು ಸಾಮಾನ್ಯ ಮೊಬೈಲ್ ಫೋನ್ ಇಟ್ಟುಕೊಂಡಿದ್ದರು. ಇಂಟರ್‌ನೆಟ್ ಬಳಸುತ್ತಿಲ್ಲ. ಆದರೆ, ಅವರ ಫೋನ್ ನಂಬರ್‌ಗೆ ವಾಟ್ಸ್‌ಆ್ಯಪ್ ಇನ್‌ಸ್ಟಾಲ್ ಮಾಡಲು ಒಟಿಪಿ ಬಂದಿರುವ ಜಾಡು ಹಿಡಿದು ತನಿಖೆ ಚುರುಕುಗೊಳಿಸಿದ್ದರು.

'ಸಲ್ಮಾನ್ ಖಾನ್ ಸಿನಿಮಾದ ಗೀತೆ ಹೆಚ್ಚು ಜನಪ್ರಿಯಗೊಳ್ಳಲಿ ಎಂದು ಬೆದರಿಕೆ ಕರೆ ಮಾಡಿದ್ದೇನೆ' ಎಂದು ಸೊಹೇಲ್ ಪಾಷಾ ತನಿಖೆ ವೇಳೆ ಹೇಳಿಕೆ ಕೊಟ್ಟಿದ್ದಾನೆ.

ಸುದ್ದಿ 2 ನಿಮಿಷ

'ನದಿ ನೀರು ಬಳಕೆಗೆ ಹಸಿರು ಸೆಸ್'

ಬೆಂಗಳೂರು: ಪಶ್ಚಿಮ ಘಟ್ಟದಲ್ಲಿ ಹುಟ್ಟಿ, ಹರಿಯುವ ನದಿಯ ನೀರು ಬಳಸುವ ನಗರಗಳಿಗೆ ಹಸಿರು ಸೆಸ್ ವಿಧಿಸಲು ಅರಣ್ಯ ಇಲಾಖೆ ಚಿಂತನೆ ನಡೆಸಿದೆ.

ಈ ಕುರಿತು ಪ್ರಸ್ತಾವ ಸಲ್ಲಿಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಸೂಚನೆ ನೀಡಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ, ಜೀವವೈವಿಧ್ಯ ತಾಣವಾದ ಪಶ್ಚಿಮಘಟ್ಟ ಹಲವು ನದಿಗಳ ಮೂಲವಾಗಿದೆ. ತುಂಗಾ, ಭದ್ರಾ, ಕಾವೇರಿ, ಕಬಿನಿ, ಹೇಮಾವತಿ, ಕೃಷ್ಣಾ, ಮಲಪ್ರಭಾ, ಘಟಪ್ರಭಾ ಸೇರಿದಂತೆ ಹಲವು ನದಿಗಳ ನೀರು ರಾಜ್ಯದ ಹಲವು ನಗರ, ಪಟ್ಟಣ ಪ್ರದೇಶಗಳಿಗೆ ಪೂರೈಕೆ ಮಾಡಲಾಗುತ್ತಿದೆ. ಮುಂದೆಯೂ ರಾಜ್ಯದ ನೀರಿನ ಅಗತ್ಯವನ್ನು ಈ ನದಿಗಳೇ ಪೂರೈಸಬೇಕಾಗುತ್ತದೆ. ಹಾಗಾಗಿ, ಈ ಎಲ್ಲ ನದಿಗಳ ಮೂಲವಾಗಿರುವ ಪಶ್ಚಿಮಘಟ್ಟವನ್ನು ಸಂರಕ್ಷಿಸಲು ಹಸಿರು ಸೆಸ್ ವಿಧಿಸುವ ಅಗತ್ಯವಿದೆ ಎಂದಿದ್ದಾರೆ.

ನೀರಿನ ಬಳಕೆದಾರರು ₹2 ಅಥವಾ ₹3 ಪಾವತಿಸಿದರೆ ಸಾಕು. ಅವರಲ್ಲಿ ಪಶ್ಚಿಮ ಘಟ್ಟದ ಮಹತ್ವದ ಅರಿವು ಮೂಡುತ್ತದೆ. ಸಂಗ್ರಹವಾಗುವ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸುವುದಿಲ್ಲ ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ.

ಮುಂಗಾರು ಮಳೆಯ ಮಾರುತಗಳನ್ನು ತಡೆದು ವ್ಯಾಪಕ ಮಳೆ ಸುರಿಸುವಲ್ಲಿ ಪಶ್ಚಿಮಘಟ್ಟಗಳು ಮಹತ್ವದ ಪಾತ್ರ ವಹಿಸುತ್ತವೆ. ಪಶ್ಚಿಮಘಟ್ಟದ ನದಿಗಳಿಂದ ನಗರ, ಪಟ್ಟಣಗಳಿಗೆ ಪೂರೈಕೆ ಆಗುವ ನೀರಿನ ಬಳಕೆಯ ಬಿಲ್‌ನಲ್ಲಿ ಕೆಲವು ರೂಪಾಯಿ ಹಸಿರು ಸೆಸ್ ವಿಧಿಸಿ, ಕಾಪು ನಿಧಿ ಸ್ಥಾಪಿಸಬೇಕು. ಈ ಹಣವನ್ನು ಪಶ್ಚಿಮಘಟ್ಟ ಅರಣ್ಯ ಅಭಿವೃದ್ಧಿಗಾಗಿ, ವೃಕ್ಷ ಸಂವರ್ಧನೆಗೆ ಬಳಸಬಹುದು ಎಂದು ಹೇಳಿದ್ದಾರೆ.

ಜಿಎಸ್‌ಟಿ ಮಸೂದೆಗೆ ರಾಜ್ಯಪಾಲರ ಅಂಕಿತ

ಬೆಂಗಳೂರು: ಆರ್ಥಿಕ ಶಿಸ್ತು ಮತ್ತು ಸಂಪನ್ಮೂಲ ಕ್ರೋಡೀಕರಣಕ್ಕೆ ಒತ್ತು ನೀಡಲು ಹಾಗೂ ತೆರಿಗೆ ವಸೂಲಾತಿಯಲ್ಲಿ ಸುಧಾರಣೆಗಳನ್ನು ತರಲು ರಾಜ್ಯ ಸರ್ಕಾರ ಸಿದ್ಧಪಡಿಸಿದ್ದ ಕರ್ನಾಟಕ ಸರಕು ಮತ್ತು ಸೇವೆಗಳ (ತಿದ್ದುಪಡಿ) ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಕಳೆದ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸಿದ್ದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ವ್ಯಾಟ್ ವ್ಯವಸ್ಥೆ ಇದ್ದಾಗ ಕೇವಲ 5.8 ಲಕ್ಷ ತೆರಿಗೆ ಪಾವತಿದಾರರಿದ್ದರು. ಜಿಎಸ್‌ಟಿ ವ್ಯಾಪ್ತಿಯಲ್ಲಿ 10 ಲಕ್ಷಕ್ಕೂ ಹೆಚ್ಚು ಮಂದಿ ಇದ್ದಾರೆ. ಅಡಿಕೆ, ಗುಜರಿ, ಸಿಮೆಂಟ್, ಕ್ರಷರ್‌ಗಳಿಂದ ವ್ಯಾಪಕ ತೆರಿಗೆ ವಂಚನೆಯಾಗುತ್ತಿದೆ. ಹೊಸ ಕಾಯ್ದೆ ಈ ಎಲ್ಲ ವಂಚನೆಗಳಿಗೂ ಕಡಿವಾಣ ಹಾಕಲು ನೆರವಾಗಲಿದೆ. ಶೇ 56ರಷ್ಟು ತೆರಿಗೆ ಸೇವಾ ವಲಯದಿಂದ ದೊರೆಯುತ್ತದೆ' ಎಂದು ವಿಧಾನಸಭೆ, ವಿಧಾನ ಪರಿಷತ್‌ಗೆ ಮನವರಿಕೆ ಮಾಡಿಕೊಟ್ಟಿದ್ದರು.

ಉಭಯ ಸದನಗಳಲ್ಲೂ ಅಂಗೀಕಾರವಾಗಿ ರಾಜ್ಯಪಾಲರ ಸಹಿಗೆ ಕಳುಹಿಸಲಾಗಿತ್ತು. ಈಗ ರಾಜ್ಯಪಾಲರ ಅಂಕಿತದೊಂದಿಗೆ ಮಸೂದೆ ಕಾಯ್ದೆಯ ಸ್ವರೂಪ ಪಡೆದಿದೆ.

ದೀಪೋತ್ಸವ ಉತ್ಥಾನ ದ್ವಾದಶಿ ಪ್ರಯುಕ್ತ ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಬುಧವಾರ ಲಕ್ಷ ದೀಪೋತ್ಸವ ಮತ್ತು ರಥೋತ್ಸವ ಜರುಗಿತು ಪ್ರಜಾವಾಣಿ ಚಿತ್ರ: ಉಮೇಶ್ ಮಾರ್ಪಳ್ಳಿ

ಏಕಕಾಲದಲ್ಲಿ 2 ಹುದ್ದೆ ಸೇವೆಯಿಂದ ವಜಾ

ಮೈಸೂರು: ಏಕಕಾಲದಲ್ಲಿ ಮೈಸೂರು ಮಹಾನಗರ ಪಾಲಿಕೆ ಮತ್ತು ಮುಡಾದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನೌಕರನನ್ನು ಪಾಲಿಕೆ ಆಯುಕ್ತರು ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದು, ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆಯೂ ಸೂಚಿಸಿದ್ದಾರೆ.

ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಮಲಿನ ನೀರು ಶುದ್ಧಿಕರಣ ಘಟಕದ ಎಸ್‌ಡಿಎ ಬಿ.ಕೆ. ಕುಮಾರ್ ಸೇವೆಯಿಂದ ವಜಾಗೊಂಡವರು. ಅವರು ಮುಡಾದಲ್ಲೂ ಹೊರಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿರುವುದು ವಿಚಾರಣೆಯಿಂದ ಬೆಳಕಿಗೆ ಬಂದಿತ್ತು. ತನಿಖೆ ನಡೆಸಲು ರಚಿಸಿದ್ದ ಸಮಿತಿಯು ಪರಿಶೀಲನೆ ಕೈಗೊಂಡು ವರದಿ ನೀಡಿತ್ತು. ಕುಮಾರ್ ಮುಡಾದ ಕೆಲವು ಅಧಿಕಾರಿಗಳಿಗೆ ಆಪ್ತರಾಗಿದ್ದರು. ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ವಿಚಾರಣೆಗೆ ಬರುವಂತೆ ಅವರಿಗೆ ಇ.ಡಿ. ನೋಟಿಸ್ ಸಹ ನೀಡಿದೆ ಎನ್ನಲಾಗಿದೆ.

ನಾಳೆಯಿಂದ ಸನ್ನತಿ ಪಂಚಶೀಲ ಪಾದಯಾತ್ರೆ

ಕಲಬುರಗಿ: ವಿಶ್ವಶಾಂತಿಗಾಗಿ ಹಾಗೂ ಸನ್ನತಿಯ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿ ಮತ್ತು ಬೌದ್ಧ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸನ್ನತಿಯಿಂದ ಬೆಂಗಳೂರಿನ ವಿಧಾನಸೌಧದವರೆಗೆ 'ಸನ್ನತಿ ಪಂಚಶೀಲ ಪಾದ ಯಾತ್ರೆ'ಯನ್ನು ನವೆಂಬರ್ 15ರಿಂದ 2025ರ ಜನವರಿ 24ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಬೀದರ್ ಅಣದೂರಿನ ವರಜ್ಯೋತಿ ಭಂತೇಜಿ ತಿಳಿಸಿದರು.

ವರಜ್ಯೋತಿ ಭಂತೇಜಿ

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,'15ರಂದು ಸನ್ನತಿಯಲ್ಲಿ ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾಗುವ ಪಾದಯಾತ್ರೆ ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ, ವಿಜಯನಗರ, ಚಿತ್ರದುರ್ಗ, ತುಮಕೂರು ಮೂಲಕ ಬೆಂಗಳೂರು ಜಿಲ್ಲೆ ತಲುಪಲಿದೆ. ಜನವರಿ 24ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೇಡಿಕೆಗಳ ಮನವಿ ಸಲ್ಲಿಸುತ್ತೇವೆ' ಎಂದು ವಿವರಿಸಿದರು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಅರ್ಜಿ

ವಾಲ್ಮೀಕಿ ನಿಗಮದ ಅಕ್ರಮ ಸಿಬಿಐ ತನಿಖೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಣ ದುರ್ಬಳಕೆ ಪ್ರಕರಣವನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ತನಿಖೆಗೆ ವಹಿಸಬೇಕು' ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಅರ್ಜಿಯ ಸಿಂಧುತ್ವಕ್ಕೆ ಸಂಬಂಧಿಸಿದಂತೆ ವಾದ-ಪ್ರತಿವಾದ ಆಲಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯದ ವಿವಾದ ಎಂಬುದಕ್ಕೆ ಸಂಬಂಧಿಸಿದಂತೆ ಇದನ್ನು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸಬೇಕೆ? ಮತ್ತು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ–1949 ಕಲಂ 35ಎ ಅಡಿ ಹೊರಡಿಸಿರುವ ಮಾಸ್ಟರ್ ಸುತ್ತೋಲೆಯ ಪ್ರಕಾರ ನಿರ್ದಿಷ್ಟ ಮೊತ್ತದ ಹಣಕಾಸು ಅವ್ಯವಹಾರವನ್ನು ಸಿಬಿಐ ತನಿಖೆ ನಡೆಸಬೇಕೇ? ಎಂಬುದರ ಸಿಂಧುತ್ವವನ್ನು ನಿಷ್ಕರ್ಷಿಸಿರುವ ನ್ಯಾಯಪೀಠ, 'ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವುದಕ್ಕೆ ಸಂಬಂಧಿಸಿದಂತೆ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ–1949ರ ಕಲಂ 35ಎ ಅಡಿಯಲ್ಲಿನ ವ್ಯಾಖ್ಯಾನವನ್ನು ಒಪ್ಪಲಾಗದು' ಎಂದು ಹೇಳಿದೆ.

'ಒಂದು ವೇಳೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಕೋರಿಕೆಗೆ ಅನುಮತಿ ನೀಡಿದರೆ ಭವಿಷ್ಯದಲ್ಲಿ ಪ್ರತಿಯೊಂದು ಬ್ಯಾಂಕಿಂಗ್ ಸಂಸ್ಥೆಯೂ ಸಿಬಿಐ ತನಿಖೆಗೆ ಕೋರಬಹುದು. ಇದಕ್ಕೆಲ್ಲಾ ಸಮ್ಮತಿಸುತ್ತಾ ಹೋದರೆ ದೆಹಲಿ ಪೊಲೀಸ್ ವಿಶೇಷ ಕಾಯ್ದೆ ಅನುಪಯುಕ್ತವಾಗಲಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ವಾಲ್ಮೀಕಿ ನಿಗಮದ ಹಗರಣದಲ್ಲಿ ಮಾಜಿ ಸಚಿವ ಬಿ. ನಾಗೇಂದ್ರ ಅವರು ನಿರ್ದೋಷಿಯಾದರೆ ಸಂಪುಟಕ್ಕೆ ಮರುಸೇರ್ಪಡೆ ಮಾಡಿಕೊಳ್ಳಬಹುದು
ಜಿ. ಪರಮೇಶ್ವರ, ಗೃಹ ಸಚಿವ

ರಾಜ್ಯ ಸರ್ಕಾರದ ಪರ ಹಿರಿಯ ವಕೀಲರಾದ ಬಿ.ವಿ.ಆಚಾರ್ಯ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಪರ ರವಿವರ್ಮ ಕುಮಾರ್ ಮತ್ತು ಯೂನಿಯನ್ ಬ್ಯಾಂಕ್ ಪರ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹಾಗೂ ಸಿಬಿಐ ಪರ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

2025ರಲ್ಲಿ 'ನೆಹರೂ ಡಿಜಿಟಲ್ ಆರ್ಕೈವ್'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಕುರಿತಾದ 'ಮಲ್ಟಿಮೀಡಿಯಾ ಡಿಜಿಟಲ್ ಆರ್ಕೈವ್' ಮುಂದಿನ ವರ್ಷದ ನವೆಂಬರ್‌ನಲ್ಲಿ ಅನಾವರಣಗೊಳ್ಳಲಿದೆ. ನೆಹರೂ ಅವರ ಅಪ್ರಕಟಿತ ಬರಹಗಳೂ ಸೇರಿದಂತೆ ಇಲ್ಲಿಯವರೆಗೆ ದೊರೆಯದ ಕೆಲ ಅಮೂಲ್ಯ ದಾಖಲೆಗಳು ಇದರಲ್ಲಿ ಲಭ್ಯವಾಗಲಿವೆ.

ನೆಹರೂ ಅವರ 135ನೇ ಜನ್ಮದಿನದ ಮುನ್ನಾದಿನವಾದ ಬುಧವಾರ ಜವಾಹರಲಾಲ್ ನೆಹರೂ ಸ್ಮಾರಕ ನಿಧಿಯು (ಜೆಎನ್‌ಎಂಎಫ್) 'ದಿ ನೆಹರೂ ಆರ್ಕೈವ್' ಕುರಿತು ಪ್ರಕಟಿಸಿದೆ. ಮುಂದಿನ ವರ್ಷ ನೆಹರೂ ಅವರ 136ನೇ ಜನ್ಮದಿನದಿಂದ (ನವೆಂಬರ್ 14) ಆನ್‌ಲೈನ್ ಆರ್ಕೈವ್ ಆದ nehruarchive.in ಬಳಕೆದಾರರಿಗೆ ಲಭ್ಯವಾಗುತ್ತದೆ ಎಂದು ಅದು ತಿಳಿಸಿದೆ.

ನೆಹರೂ ಅವರ ಬರಹ ಮತ್ತು ಭಾಷಣಗಳು ಒಂದೇ ವೇದಿಕೆಯಲ್ಲಿ ದೊರೆಯಲಿದೆ. ನೆಹರೂ ಅವರ ಕುರಿತ ಪ್ರಾಥಮಿಕ ದಾಖಲೆಗಳು ಸುಲಭವಾಗಿ ಸಂಶೋಧಕರು ಮತ್ತು ಜನ ಸಾಮಾನ್ಯರಿಗೆ ದೊರೆಯುವಂತಾಗಲಿ ಎಂಬುದು ಇದರ ಹಿಂದಿನ ಉದ್ದೇಶ ಎಂದು ಅದು ಹೇಳಿದೆ.

'ದಿ ಸೆಲೆಕ್ಟೆಡ್ ವರ್ಕ್ಸ್ ಆಫ್ ಜವಾಹರಲಾಲ್ ನೆಹರೂ'ದ 100 ಸಂಪುಟಗಳು, 1947ರಿಂದ 1964ರವರೆಗೆ ಅವರು ದೇಶದ ಮುಖ್ಯಮಂತ್ರಿಗಳಿಗೆ ಬರೆದ ಪತ್ರಗಳು ಮತ್ತು 'ಲೆಟರ್ಸ್ ಫ್ರಮ್ ಎ ಫಾದರ್ ಟು ಡಾಟರ್', 'ಗ್ಲಿಂಪ್ಸೆಸ್ ಆಫ್ ವರ್ಲ್ಡ್ ಹಿಸ್ಟರಿ, ಎನ್ ಆಟೊಬಯೋಗ್ರಫಿ', 'ದಿ ಯೂನಿಟಿ ಆಫ್ ಇಂಡಿಯಾ', 'ದಿ ಡಿಸ್ಕವರಿ ಆಫ್ ಇಂಡಿಯಾ', 'ಎ ಬಂಚ್ ಆಫ್ ಓಲ್ಡ್ ಲೆಟರ್ಸ್' ಸೇರಿದಂತೆ ಅವರ ಪುಸ್ತಕಗಳು ಹಾಗೂ ಇತರ ಬರಹಗಳು ಇಲ್ಲಿ ಸುಲಭವಾಗಿ ದೊರೆಯುತ್ತವೆ.

ಮುಡಾ ಬದಲಿ ನಿವೇಶನ ಹಂಚಿಕೆ: ಮಾಹಿತಿ ಪಡೆದ ಇ.ಡಿ

ಕುಮಾರ ನಾಯ್ಕ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಬದಲಿ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ರಾಯಚೂರು ಲೋಕ ಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದ ಜಿ. ಕುಮಾರ ನಾಯ್ಕ್ ಅವರನ್ನು ಬುಧವಾರ ಆರೂವರೆ ಗಂಟೆಗಳ ಕಾಲ ವಿಚಾರಣೆ ನಡೆಸಿದರು.

ನಿವೃತ್ತ ಐಎಎಸ್ ಅಧಿಕಾರಿಯಾಗಿರುವ ಕುಮಾರ ನಾಯ್ಕ್ 2002ರಿಂದ 2005ರವರೆಗೆ ಮೈಸೂರು ಜಿಲ್ಲಾಧಿಕಾರಿಯಾಗಿದ್ದರು. ಮೈಸೂರಿನ ಕೆಸರೆ ಗ್ರಾಮದಲ್ಲಿ ಮುಡಾ ಸ್ವಾಧೀನಪಡಿಸಿಕೊಂಡಿದ್ದ 3 ಎಕರೆ 16 ಗುಂಟೆ ಜಮೀನನ್ನು ಇದೇ ಅವಧಿಯಲ್ಲಿ ಭೂ ಪರಿವರ್ತನೆ ಮಾಡಲಾಗಿತ್ತು. ಭೂ ಪರಿವರ್ತನೆ ಪ್ರಕ್ರಿಯೆಯಲ್ಲೂ ಅಕ್ರಮ ನಡೆದಿದೆ ಎಂಬ ಆರೋಪದ ಕುರಿತು ಇ.ಡಿ. ವಿಚಾರಣೆ ನಡೆಸಿದೆ.

ಶಾಂತಿನಗರದಲ್ಲಿರುವ ಇ.ಡಿ. ಕಚೇರಿಗೆ ಬುಧವಾರ ಬೆಳಿಗ್ಗೆಯೇ ಬಂದ ಕುಮಾರ ನಾಯ್ಕ್, ತನಿಖಾ ತಂಡ ಅಧಿಕಾರಿಗಳ ಎದುರು ಹಾಜರಾದರು. ಸಂಜೆಯವರೆಗೂ ಸತತವಾಗಿ ವಿಚಾರಣೆ ಎದುರಿಸಿದರು. ಖಾಸಗಿ ದೂರನ್ನು ಆಧರಿಸಿ ಲೋಕಾಯುಕ್ತ ಪೊಲೀಸರು ದಾಖಲಿಸಿಕೊಂಡಿರುವ ಎಫ್‌ಐಆರ್ ನಲ್ಲಿರುವ ಮಾಹಿತಿ ಮತ್ತು ಈ ಪ್ರಕರಣದ ಭಾಗವಾಗಿ ಇ.ಡಿ. ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ವಶಕ್ಕೆ ಪಡೆದಿರುವ ದಾಖಲೆಗಳನ್ನು ಆಧರಿಸಿ ವಿಚಾರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಚಾರಣೆ ಮುಗಿಸಿ ಹೊರಬಂದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರ ನಾಯ್ಕ್, 'ನಾನು ಮೈಸೂರು ಜಿಲ್ಲಾಧಿಕಾರಿ ಆಗಿದ್ದ ಅವಧಿ ಯಲ್ಲಿ ಮೈಸೂರಿನ ಕೆಸರೆ ಗ್ರಾಮದ 3 ಎಕರೆ 16 ಗುಂಟೆ ಜಮೀನಿನ ಭೂ ಪರಿವರ್ತನೆ ಆದೇಶ ಹೊರಡಿಸಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕೇಳಿದ ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಿದ್ದೇನೆ' ಎಂದರು.

'ಭೂ ಪರಿವರ್ತನೆ ಪ್ರಕ್ರಿಯೆಯಲ್ಲಿ ನನ್ನ ಮೇಲೆ ಯಾರೂ ಒತ್ತಡ ಹೇರಿರಲಿಲ್ಲ. ಕಾನೂನಿನ ಪ್ರಕಾರವೇ ಪ್ರಕ್ರಿಯೆ ನಡೆದಿತ್ತು. ಆ ವಿವರಗಳನ್ನು ತನಿಖಾ ತಂಡದ ಜತೆ ಹಂಚಿಕೊಂಡಿದ್ದೇನೆ' ಎಂದು ಹೇಳಿದರು.

ಸಿ.ಎಂ ಆಪ್ತ ಕುಮಾರ್ ವಿಚಾರಣೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಸಿ.ಟಿ. ಕುಮಾರ್ ಅವರನ್ನೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬುಧವಾರ ವಿಚಾರಣೆ ನಡೆಸಿದ್ದಾರೆ.

'ಕುಮಾರ್ ಅವರು ಮೈಸೂರಿನಲ್ಲಿ ಸಿದ್ದರಾಮಯ್ಯ ಅವರ ಖಾಸಗಿ ಆಪ್ತ ಸಹಾಯಕರಾಗಿದ್ದರು. ಬದಲಿ ನಿವೇಶನ ಹಂಚಿಕೆ ಮಾಡುವಂತೆ ಕೋರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಹೆಸರಿನಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿದ್ದ ಮನವಿಯಲ್ಲಿ 'ಪಾರ್ವತಿ' ಎಂದು ನಕಲಿ ಸಹಿ ಮಾಡಿದ ಆರೋಪ ಕುಮಾರ್ ಮೇಲಿದೆ. ಈ ಕುರಿತು ಕೆಲವು ಗಂಟೆಗಳ ಕಾಲ ಅವರನ್ನು ವಿಚಾರಣೆ ನಡೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮೂವರು ಸಚಿವರ ನೇತೃತ್ವದ ಸಭೆಯಲ್ಲಿ ನಿರ್ಣಯ

ಇ– ಖಾತಾ: ಜಂಟಿ ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ, ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಇ-ಆಸ್ತಿ, ಇ-ವಿನ್ಯಾಸ ಹಾಗೂ ಇ-ಸ್ವತ್ತು ವಿತರಣೆಯಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಅಭಿವೃದ್ಧಿ ಆಯುಕ್ತೆ ಉಮಾ ಮಹದೇವನ್ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಜಂಟಿ ಕಾರ್ಯಪಡೆ ರಚಿಸಲು ತೀರ್ಮಾನಿಸಲಾಗಿದೆ.

ಆಸ್ತಿಗಳ ಖಾತೆ ಹಾಗೂ ನಕ್ಷೆಗಳ ಮಂಜೂರಾತಿಗೆ ಸಂಬಂಧಿಸಿದ ತೊಡಕುಗಳ ನಿವಾರಣೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಪೌರಾಡಳಿತ ಸಚಿವ ರಹೀಂ ಖಾನ್ ನೇತೃತ್ವದಲ್ಲಿ ಬುಧವಾರ ನಡೆದ ಮೂರೂ ಇಲಾಖೆಗಳ ಅಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಚಿಕ್ಕಮಗಳೂರು, ಹಾಸನ, ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಖಾತಾ ವಿತರಿಸುವಲ್ಲಿ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಠಾಣಾ ವ್ಯಾಪ್ತಿಯ ವಿಸ್ತರಣೆ ಕುರಿತೂ ಅಧ್ಯಯನ ನಡೆಸಿ ಶಿಫಾರಸು ಸಲ್ಲಿಸುವಂತೆ ಕಾರ್ಯಪಡೆಗೆ ನಿರ್ದೇಶನ ನೀಡಲು ತೀರ್ಮಾನಿಸಲಾಗಿದೆ.

ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ನಗರಸಭೆಗಳ ವ್ಯಾಪ್ತಿಯಲ್ಲಿ ಖಾತೆ ಹೊಂದಿರದ ವಸತಿ ಹಾಗೂ ವಾಣಿಜ್ಯ ಆಸ್ತಿಗಳಿಗೆ ಬಿಬಿಎಂಪಿ ಮಾದರಿಯಲ್ಲಿ ಖಾತಾ ನೀಡುವ ವ್ಯವಸ್ಥೆ ತರಲು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಕರ್ನಾಟಕ ಗೃಹಮಂಡಳಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗಳನ್ನೂ ಇ-ಆಸ್ತಿ ವ್ಯಾಪ್ತಿಗೆ ತರಲಾಗುವುದು ಎಂದು ಕೃಷ್ಣ ಬೈರೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲ ನಗರಾಭಿವೃದ್ಧಿ ಪ್ರಾಧಿಕಾರಗಳನ್ನೂ ಇ-ಆಸ್ತಿ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದೆ. ಆಸ್ತಿಗಳ ವಿಸ್ತೀರ್ಣದ ಮಾಹಿತಿ ಇಲ್ಲದ ಪ್ರಕರಣಗಳಲ್ಲಿ ಅಳತೆ ನಮೂದಿಸಲು ಅವಕಾಶ ಕಲ್ಪಿಸಲು ಎನ್‌ಐಸಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹಕ್ಕು ಬಿಡುಗಡೆ ಪತ್ರ ಸಲ್ಲಿಸಿದ ಸಂದರ್ಭದಲ್ಲಿ ಡೆವಲಪರ್‌ಗಳ ಹೆಸರಿಗೆ ನಿವೇಶನಗಳ ಖಾತೆ ಮಾಡಿಕೊಡುವ ಸಂಬಂಧ ಸುತ್ತೋಲೆಯನ್ನೂ ಹೊರಡಿಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ಅಭಿವೃದ್ಧಿ ಹಕ್ಕುಗಳ ವರ್ಗಾವಣೆಗೆ (ಟಿಡಿಆರ್) ಸಂಬಂಧಿಸಿದ ವಹಿವಾಟುಗಳಲ್ಲಿ ವ್ಯಾಪಕ ಅಕ್ರಮಗಳು ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಅದನ್ನು ತಡೆಯಲು ಟಿಡಿಆರ್‌ಗಳನ್ನೂ ಇ-ಆಸ್ತಿ/ ಇ-ಸ್ವತ್ತು ವ್ಯಾಪ್ತಿಗೆ ತಂದು, ಪ್ರತ್ಯೇಕ ಆಸ್ತಿ ಗುರುತಿನ ಸಂಖ್ಯೆ (ಪಿಐಡಿ) ನೀಡುವ ತೀರ್ಮಾನವನ್ನೂ ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

'ಎಲ್ಲ ಆಸ್ತಿಗಳಿಗೂ ಇ-ಖಾತಾ ನೀಡುವುದನ್ನು ಕಡ್ಡಾಯಗೊಳಿಸ ಲಾಗಿದೆ. ಈಗ ಪ್ರಕ್ರಿಯೆಯಲ್ಲಿ ಇರುವ ಲೋಪಗಳನ್ನು ಸರಿಪಡಿಸಲಾಗುತ್ತಿದೆ. ಇ-ಖಾತಾ ಕಡ್ಡಾಯಗೊಳಿಸಿರುವುದರಿಂದ ನಕಲಿ ಖಾತೆಗಳನ್ನು ಸೃಷ್ಟಿಸಿ ಅಕ್ರಮ ಎಸಗುವುದು ಸಂಪೂರ್ಣವಾಗಿ ನಿಯಂತ್ರಣಕ್ಕೆ ಬರಲಿದೆ' ಎಂದಿದ್ದಾರೆ.

ಪ್ರಕ್ರಿಯೆ ಸರಳೀಕರಣಕ್ಕೆ ನಿರ್ಧಾರ

ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿಗಳ ಖಾತಾ ನೀಡಲು ವಿಳಂಬವಾಗುತ್ತಿದ್ದು, ಜನರು ಸಂಕಷ್ಟ ಎದುರಿಸುತ್ತಿರುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ. ತ್ವರಿತವಾಗಿ ಖಾತಾ ನೀಡಲು ಅವಕಾಶವಾಗುವಂತೆ ಸರಳ ವಿಧಾನವೊಂದನ್ನು ಅಭಿವೃದ್ಧಿಪಡಿಸಲು ನಿರ್ಧಾರ ಕೈಗೊಳ್ಳಲಾಗಿದೆ.

ಸ್ನೇಹಮಯಿ ಕೃಷ್ಣ ವಿರುದ್ಧ ಎಫ್‌ಐಆರ್

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಅಪಪ್ರಚಾರ ಮಾಡಿದ ಆರೋಪದ ಮೇರೆಗೆ, ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ವಿರುದ್ಧ ಇಲ್ಲಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ನಿವೇಶನ ಖರೀದಿಸಿದ ಸಂದರ್ಭ, ಅವರ ಬದಲಿಗೆ ಮುಡಾ ತಹಶೀಲ್ದಾರ್ ಮುದ್ರಾಂಕ ಶುಲ್ಕ ಪಾವತಿಸಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಸುಳ್ಳು ಆರೋಪ ಮಾಡಿದ್ದಾರೆ. ಖರೀದಿದಾರರು ಉಪ ನೋಂದಣಾಧಿಕಾರಿ ಕಚೇರಿಗೆ ಹಾಜರಾಗದೇ ವಿನಾಯಿತಿ ಪಡೆದ ಪ್ರಕರಣಗಳಲ್ಲಿ ಅಧಿಕಾರಿಗಳ ಹೆಸರು ಉಲ್ಲೇಖವಾಗುತ್ತದೆ. ಆದರೆ ಖರೀದಿದಾರರೇ ಶುಲ್ಕ ಪಾವತಿಸಿದ್ದಾರೆ. ಸ್ನೇಹಮಯಿ ಕೃಷ್ಣ ಆರೋಪ ನಿರಾಧಾರವಾಗಿದೆ. ಹೀಗಾಗಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕೋರಿ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಮಂಗಳವಾರ ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಎನ್‌ಸಿಆರ್ ದೂರು ದಾಖಲಿಸಿದ್ದ ಪೊಲೀಸರು ನ್ಯಾಯಾಲಯದ ಅನುಮತಿ ಪಡೆದು ಬಿಎನ್‌ಎಸ್ ಕಾಯ್ದೆ ಸೆಕ್ಷನ್ 353 (1) (ಬಿ) ಅಡಿ ಪ್ರಕರಣ ದಾಖಲಿಸಿದ್ದು, ಬುಧವಾರ ಸಂಜೆ ಕಾಂಗ್ರೆಸ್ ಕಚೇರಿಯಲ್ಲಿ ಸ್ಥಳ ಮಹಜರು ನಡೆಸಿದರು.

ಗುರುವಾರ, ನವೆಂಬರ್ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 315 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ ಜಗತ್ತಿನಾದ್ಯಂತ ಇರುವ ವಿವಿಧ ರಾಮಾಯಣಗಳು

ವಿಶೇಷ ಪುಟ: ಬಣ್ಣದ ತಗಡಿನ ತುತ್ತೂರಿ 7

ಮಕ್ಕಳ ದಿನಾಚರಣೆಯ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,690	23,559	₹79,200 (ಬೆಂಗಳೂರು)	₹95,100 (ಬೆಂಗಳೂರು)	84.39



ಸತೀಶ್ ಸೈಲ್ ಶಿಕ್ಷೆ ಅಮಾನತು: ಹೈಕೋರ್ಟ್ ಆದೇಶ

ಬೆಂಗಳೂರು: 'ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಪ್ರಕರಣದ ಅಪರಾಧಿಗಳಾದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಮತ್ತಿತರರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಕಠಿಣ ಜೈಲು ಶಿಕ್ಷೆಯನ್ನು ಹೈಕೋರ್ಟ್ ಅಮಾನತ್ತಿನಲ್ಲಿ ಇರಿಸಿದೆ. ₹44 ಕೋಟಿಗೂ ಹೆಚ್ಚಿನ ದಂಡದ ಮೊತ್ತದಲ್ಲಿ ಶೇ 25ರಷ್ಟನ್ನು ಠೇವಣಿ ಇರಿಸಬೇಕು' ಎಂದಿದೆ.

4B

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಆರೋಪಿಗಳ ಮನೆ ಧ್ವಂಸ ಕೆಲಸವನ್ನು ಅರಣ್ಯ ನ್ಯಾಯಕ್ಕೆ ಹೋಲಿಸಿದ ಸುಪ್ರೀಂ ಕೋರ್ಟ್

'ಬುಲ್ಡೋಜರ್ ನ್ಯಾಯ'ಕ್ಕೆ ಅಂಕುಶ

ನವದೆಹಲಿ (ಪಿಟಿಐ): 'ಬುಲ್ಡೋಜರ್ ನ್ಯಾಯ'ವನ್ನು ಕಾನೂನಿನ ಅಸ್ತಿತ್ವಕ್ಕೆ ಬೆಲೆಯನ್ನೇ ನೀಡದ 'ಅರಣ್ಯ ನ್ಯಾಯ'ದ ಜೊತೆ ಹೋಲಿಸಿರುವ ಸುಪ್ರೀಂ ಕೋರ್ಟ್, ಕಟ್ಟಡಗಳ ಧ್ವಂಸಕ್ಕೆ ಸಂಬಂಧಿಸಿದಂತೆ ಇಡೀ ದೇಶಕ್ಕೆ ಅನ್ವಯವಾಗುವ ಮಾರ್ಗಸೂಚಿಗಳನ್ನು ಬುಧವಾರ ಪ್ರಕಟಿಸಿದೆ.

ನೋಟಿಸ್ ನೀಡದೆ ಯಾವ ಕಟ್ಟಡವನ್ನೂ ಧ್ವಂಸಗೊಳಿಸುವಂತೆ ಇಲ್ಲ ಹಾಗೂ ನೋಟಿಸ್ ನೀಡಿದ ನಂತರ ಅದಕ್ಕೆ ಉತ್ತರ ನೀಡಲು ಸಂಬಂಧಪಟ್ಟ ವ್ಯಕ್ತಿಗೆ 15 ದಿನಗಳ ಕಾಲಾವಕಾಶ ನೀಡಬೇಕು ಎಂದು ಕೋರ್ಟ್ ಸೂಚನೆ ನೀಡಿದೆ.

ಪ್ರಜೆಗಳಿಗೆ ಶಿಕ್ಷೆ ವಿಧಿಸಲು ನ್ಯಾಯಾಂಗಕ್ಕೆ ಇರುವ ಅಧಿಕಾರವನ್ನು ಕಾರ್ಯಾಂಗವು ಚಲಾಯಿಸುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಸ್ಪಷ್ಟಪಡಿಸಿದೆ.

ಕಾನೂನನ್ನು ಸರಿಯಾಗಿ ಪಾಲನೆ ಮಾಡದೆ ಕಟ್ಟಡಗಳನ್ನು ಧ್ವಂಸಗೊಳಿಸುವುದು ಇನ್ನೊಬ್ಬರ ಭಾವನೆಗಳಿಗೆ ಬೆಲೆಯನ್ನೇ ಕೊಡದ ಕೃತ್ಯ, ಅಂತಹ ಕೃತ್ಯಗಳನ್ನು ಕಾನೂನಿನ ಶಕ್ತಿಯನ್ನು ಬಳಸಿ ನಿಗ್ರಹಿಸಬೇಕು ಎಂದು ಪೀಠವು ಹೇಳಿದೆ. ವ್ಯಕ್ತಿ ಆರೋಪಿ ಎಂಬ ಕಾರಣಕ್ಕೆ ಆತನಿಗೆ ಸೇರಿದ ಕಟ್ಟಡ ಧ್ವಂಸಗೊಳಿಸುವುದು ಅರಾಜಕತೆ ಎಂದಿದೆ.

8ನೇ ಪುಟ ನೋಡಿ

> ಕಾರ್ಯಾಂಗವು ನ್ಯಾಯಾಧೀಶನಂತೆ ವರ್ತಿಸಿ, ವ್ಯಕ್ತಿಯೊಬ್ಬ ಆರೋಪಿ ಎಂಬ ಕಾರಣಕ್ಕೆ ಆತನ ಮನೆ ಉರುಳಿಸುವ ಶಿಕ್ಷೆಯನ್ನು ವಿಧಿಸಿದರೆ, ಅದು ಅಧಿಕಾರವನ್ನು ಪ್ರತ್ಯೇಕಿಸುವ ತತ್ವಕ್ಕೆ ವಿರುದ್ಧ

> ಅಧಿಕಾರಿಗಳು ಸಹಜ ನ್ಯಾಯದ ಮೂಲಭೂತ ತತ್ವಗಳನ್ನು ಪಾಲಿಸದೆ, ಸಹಜ ಪ್ರಕ್ರಿಯೆಯ ತತ್ವಕ್ಕೆ ಅನುಗುಣವಾಗಿ ವರ್ತಿಸದೆ, ಬುಲ್ಡೋಜರ್ ಬಳಸಿ ಕಟ್ಟಡವನ್ನು ಧ್ವಂಸಗೊಳಿಸುವ ಭೀತಿಯ ದೃಶ್ಯವು ಕಾನೂನಿಗೆ ಬೆಲೆಯೇ ಇಲ್ಲದ, ಬಲಿಷ್ಠನು ಮಾಡಿದ್ದೆಲ್ಲವೂ ಸರಿ ಎನ್ನುವ ಸ್ಥಿತಿಯನ್ನು ನೆನಪಿಸುತ್ತದೆ
>
> ಸುಪ್ರೀಂ ಕೋರ್ಟ್

ನ್ಯಾಯಪೀಠ ರೂಪಿಸಿರುವ ಮಾರ್ಗಸೂಚಿ ಹೀಗಿದೆ...

- ಸ್ಥಳೀಯ ಆಡಳಿತ ಸಂಸ್ಥೆಯ ನಿಯಮಗಳಲ್ಲಿ ಉಲ್ಲೇಖವಾಗಿರುವಷ್ಟು ಸಮಯ ನೀಡಿ ಅಥವಾ 15 ದಿನಗಳ ಸಮಯ ನೀಡಿ (ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಪರಿಗಣಿಸಬೇಕು) ನೋಟಿಸ್ ಜಾರಿಗೊಳಿಸದ ಹೊರತು ಧ್ವಂಸ ಕಾರ್ಯ ಕೈಗೊಳ್ಳುವಂತಿಲ್ಲ. 15 ದಿನ ಎಂಬುದು ವ್ಯಕ್ತಿಯು ನೋಟಿಸ್ ಪಡೆದ ದಿನದಿಂದ ಪರಿಗಣಿತವಾಗಬೇಕು.
- ಕಟ್ಟಡ ಧ್ವಂಸಕ್ಕೆ ಆದೇಶ ಹೊರಡಿಸಿದ ನಂತರವೂ, ಸಂಬಂಧಪಟ್ಟ ವ್ಯಕ್ತಿಗೆ ಆ ಆದೇಶವನ್ನು ಸೂಕ್ತ ವೇದಿಕೆಯಲ್ಲಿ ಪ್ರಶ್ನಿಸಲು ತುಸು ಕಾಲಾವಕಾಶ ನೀಡಬೇಕು.
- ಅಧಿಕಾರಿಗಳು ಕೆಲವು ಸಮಯದವರೆಗೆ ತಮ್ಮ ಕೈಗಳನ್ನು ಕಟ್ಟಿ ಕುಳಿತರೆ ಆಕಾಶ ಕಳಚಿ ತಲೆಮೇಲೆ ಬೀಳುವುದಿಲ್ಲ. ವ್ಯಕ್ತಿಯು ಕಟ್ಟಡ ಧ್ವಂಸ ಆದೇಶವನ್ನು ಪ್ರಶ್ನಿಸದೆ ಇರಲು ಬಯಸಿದರೆ, ಆ ವ್ಯಕ್ತಿಗೆ ಕಟ್ಟಡವನ್ನು ತೆರವು ಮಾಡಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು 15 ದಿನಗಳ ಅವಕಾಶ ನೀಡಬೇಕು.

8ನೇ ಪುಟ ನೋಡಿ

ಕವಿ ಪ್ರದೀಪ ಬರೆದ ಸಾಲುಗಳ ಉಲ್ಲೇಖ

ಸ್ವಂತ ಮನೆಯೊಂದನ್ನು ಹೊಂದಲು ಪ್ರತಿ ವ್ಯಕ್ತಿಯೂ ಬಯಸುತ್ತಾನೆ, ಈ ಕನಸು ನುಚ್ಚುನೂರಾಗುವುದನ್ನು ಆತ ಇಷ್ಟಪಡುವುದಿಲ್ಲ ಎಂಬುದನ್ನು ಹೇಳಲು ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಖ್ಯಾತ ಹಿಂದಿ ಕವಿ ಪ್ರದೀಪ ಅವರು ಬರೆದ ಕೆಲವು ಸಾಲುಗಳನ್ನು ಉಲ್ಲೇಖಿಸಿದ್ದಾರೆ.

ಪ್ರದೀಪ ಅವರು ದೇವನಾಗರಿ ಲಿಪಿಯಲ್ಲಿ ಬರೆದಿರುವ ಸಾಲುಗಳನ್ನು ನ್ಯಾಯಮೂರ್ತಿ ಗವಾಯಿ ಅವರು ತೀರ್ಪಿನ ಆರಂಭದಲ್ಲಿ ಉಲ್ಲೇಖಿಸಿದ್ದಾರೆ.

'ಅಪ್ನಾ ಘರ್, ಅಪ್ನಾ ಆಂಗನ್ ಹೊ, ಇಸ್ ಖ್ವಾಬ್ ಮೆ ಹರ್ ಕೊಯಿ ಜೀತಾ ಹೈ; ಇನ್ಸಾನ್ ಕೆ ದಿಲ್ ಕಿ ಯೆ ಚಾಹತ್ ಹೈ ಕಿ ಎಕ್ ಘರ್ ಕಾ ಸಪ್ನಾ ಕಭಿ ನಾ ಛೂಟೆ' ಎಂಬುದು ಆ ಸಾಲು.

ಇದರ ಭಾವಾನುವಾದ ಹೀಗಿದೆ: ಪ್ರತಿಯೊಬ್ಬನೂ ತನ್ನದೇ ಮನೆ, ತನ್ನದೇ ಅಂಗಳ ಇರಬೇಕೆಂಬ ಬಯಕೆ ಹೊತ್ತು ಜೀವಿಸುತ್ತಾನೆ. ಹೃದಯಕ್ಕೆ ಹತ್ತಿರವಾದ ಈ ಕನಸು ಯಾವತ್ತಿಗೂ ಭಗ್ನಗೊಳ್ಳದೇ ಇರಲಿ ಎಂದೇ ಭಾವಿಸುತ್ತಾನೆ.

ಈ ಸಾಲುಗಳ ಮೂಲಕ ಕವಿ ಪ್ರದೀಪ ಅವರು ಸೂರಿನ ಮಹತ್ವವನ್ನು ಹೇಳಿದ್ದಾರೆ ಎಂದು ಗವಾಯಿ ಬರೆದಿದ್ದಾರೆ. ಸೂರನ್ನು ಹೊಂದುವ ಹಕ್ಕು ಸಂವಿಧಾನದ 21ನೆಯ ವಿಧಿಯು ನೀಡಿರುವ ಹಕ್ಕುಗಳ ಒಂದು ಆಯಾಮ ಎಂದು ಪೀಠವು ಹೇಳಿದೆ.

ಒಳ ಮೀಸಲಾತಿಗೆ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತು ಪರಿಶೀಲಿಸಿ, ಸೂಕ್ತ ಶಿಫಾರಸುಗಳ ಸಹಿತ ವರದಿ ನೀಡಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗವನ್ನು ರಾಜ್ಯ ಸರ್ಕಾರ ರಚಿಸಿದೆ.

ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆ ನ.12ರಂದು ಆದೇಶ ಹೊರಡಿಸಿದೆ.

ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರನ್ನು ಈ ಆಯೋಗದ ಸಂಚಾಲಕರಾಗಿ ಮತ್ತು ಇಂದಿರಾ ಗಾಂಧಿ ವೃತ್ತಿ ತರಬೇತಿ ಕೇಂದ್ರದ ಹೆಚ್ಚುವರಿ ನಿರ್ದೇಶಕಿ ಎಂ.ಎನ್. ಸತ್ಯಶ್ರೀ ಅವರನ್ನು ಕಾರ್ಯದರ್ಶಿಯಾಗಿ ನೇಮಿಸಲು ತೀರ್ಮಾನಿಸಲಾಗಿದೆ ಎಂದು ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ರಾಜ್ಯದಲ್ಲಿ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿಯ ವಿವಿಧ ಉಪಜಾತಿಗಳಿಗೆ ಸೇರಿದವರ ಪ್ರಾತಿನಿಧ್ಯ ಕುರಿತು ಪರಿಶೀಲನಾರ್ಹ ದತ್ತಾಂಶ (ಎಂಫರಿಕಲ್ ಡಾಟಾ) ಪಡೆದು, ಒಳ ಮೀಸಲಾತಿ ಬಗ್ಗೆ ಎರಡು ತಿಂಗಳ ಒಳಗೆ ಆಯೋಗವು ವರದಿ ಸಲ್ಲಿಸಬೇಕಿದೆ.

ಮುಖ್ಯಾಂಶಗಳು

- ಆಗಸ್ಟ್ 24ರ ಸಚಿವ ಸಂಪುಟ ಸಭೆಯಲ್ಲಿ ಆಯೋಗ ರಚನೆ ತೀರ್ಮಾನ
- ಎರಡು ತಿಂಗಳಲ್ಲಿ ವರದಿ ಸಲ್ಲಿಕೆಗೆ ಸೂಚನೆ

4B ಪುಟ ನೋಡಿ

3 ಕ್ಷೇತ್ರ: ಶಾಂತಿ ಮತದಾನ

ಮತದಾನದ ಪ್ರಮಾಣ			
	80.48% ಶಿಗ್ಗಾವಿ	76.24% ಸಂಡೂರು	88.80% ಚನ್ನಪಟ್ಟಣ

ಬೆಂಗಳೂರು: ಶಿಗ್ಗಾವಿ, ಸಂಡೂರು ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಶಾಂತಿಯುತವಾಗಿ ಮತದಾನ ಪೂರ್ಣಗೊಂಡಿದೆ.

ಆಡಳಿತಾರೂಢ ಕಾಂಗ್ರೆಸ್ ಮತ್ತು ಪ್ರತಿಪಕ್ಷಗಳಾದ ಬಿಜೆಪಿ–ಜೆಡಿಎಸ್ ಮೈತ್ರಿಕೂಟಗಳು ಈ ಉಪ ಚುನಾವಣೆಯನ್ನು ಸವಾಲಾಗಿ ಪರಿಗಣಿಸಿದ್ದವು. ಮೂರೂ ಪಕ್ಷಗಳ ಪ್ರಮುಖ ನಾಯಕರು ಹಲವು ದಿನಗಳಿಂದ ಚುನಾವಣಾ ಕಣದಲ್ಲೇ ಬೀಡುಬಿಟ್ಟು, ತಮ್ಮ ಅಭ್ಯರ್ಥಿಗಳ ಗೆಲುವಿಗಾಗಿ ಬೆವರು ಹರಿಸಿದ್ದರು.

ಬುಧವಾರ ನಡೆದ ಮತದಾನದಲ್ಲಿ ಚನ್ನಪಟ್ಟಣದಲ್ಲಿ 2.06 ಲಕ್ಷ, ಶಿಗ್ಗಾವಿಯಲ್ಲಿ 1.91 ಲಕ್ಷ ಮತ್ತು ಸಂಡೂರಿನಲ್ಲಿ 1.80 ಲಕ್ಷ ಮತದಾರರು ಹಕ್ಕು ಚಲಾಯಿಸಿದ್ದಾರೆ.

ಎದೆಹಾಲು ವಾಣಿಜ್ಯೀಕರಣಕ್ಕೆ ತಡೆ: ಸ್ಪಷ್ಟನೆ

ಹೈಕೋರ್ಟ್ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾಯಂದಿರ ಎದೆ ಹಾಲನ್ನು ಸಂಗ್ರಹಿಸಿ, ಸಂಸ್ಕರಣೆ ಮಾಡಿ ಅದನ್ನು ಮಾರಾಟ ಮಾಡಲು ಖಾಸಗಿ ಕಂಪನಿಗಳಿಗೆ ನೀಡಿರುವ ಪರವಾನಗಿ ರದ್ದುಗೊಳಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶಿಸಲಾಗಿದೆ' ಎಂದು ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಎದೆಹಾಲಿನ ವಾಣಿಜ್ಯೀಕರಣ ತಡೆಯಬೇಕು' ಎಂದು ಕೋರಿ ಮರಳ ಕುಂಟೆಯ ಮುನೇಗೌಡ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್, 'ಎದೆ ಹಾಲು ಸಂಗ್ರಹಕ್ಕೆ ಖಾಸಗಿ ಕಂಪನಿಗಳಿಗೆ ಅನುಮತಿ ನೀಡಿರುವ ಪರವಾನಗಿ ರದ್ದುಗೊಳಿಸಿ ಎಂದು ರಾಜ್ಯ ಸರ್ಕಾರಕ್ಕೆ, ಕೇಂದ್ರ ಆಯುಷ್ ಸಚಿವಾಲಯ ಇತ್ತೀಚೆಗಷ್ಟೇ ನಿರ್ದೇಶನ ನೀಡಿದೆ. ರಾಜ್ಯಗಳು ನೀಡಿರುವ ಪರವಾನಿಗೆಗಳನ್ನು ರದ್ದುಗೊಳಿಸುವಂತೆಯೂ ನಿರ್ದೇಶಿಸಿದೆ' ಎಂದರು.

ಅರ್ಜಿದಾರರ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಬಿ.ವಿಶ್ವೇಶ್ವರಯ್ಯ 'ಕೆಲವು ಬಹು ರಾಷ್ಟ್ರೀಯ ಕಂಪನಿಗಳು ತಾಯಂದಿರ ಎದೆಹಾಲು ಸಂಗ್ರಹಿಸಿ ಮಾರಾಟ ಮಾಡುತ್ತಿವೆ. ಇದರಿಂದ ವಾಣಿಜ್ಯ ಪ್ರಯೋಜನ ಪಡೆಯುತ್ತಿವೆ' ಎಂಬ ಅಂಶವನ್ನು ಪುನರುಚ್ಚರಿಸಿದರು.

'ಪ್ರಕರಣದಲ್ಲಿ ಆಯುಷ್ ಸಚಿವಾಲಯವನ್ನೂ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲು ತಿದ್ದುಪಡಿ ಮಾಡಿ' ಎಂದು ಅರ್ಜಿದಾರರಿಗೆ ಸೂಚಿಸಿದ ನ್ಯಾಯಪೀಠ, ಆಯುಷ್ ಸಚಿವಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಕೆಲ ಖಾಸಗಿ ಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ತಾಯಂದಿರಿಗೆ ಹಣ ನೀಡಿ ಎದೆಹಾಲು ಸಂಗ್ರಹಿಸಿ, ನಂತರ ಅದನ್ನು ಪೌಡರ್ ರೂಪದಲ್ಲಿ ದೇಶದಾದ್ಯಂತ ಮಾರಾಟ ಮಾಡುತ್ತಿವೆ. ತಾಯಂದಿರ ಎದೆಹಾಲನ್ನು ನವಜಾತ ಶಿಶುಗಳಿಗೆ ಉಣಿಸಲು ಮಾತ್ರವೇ ಬಳಸಬಹುದು. ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಕ್ಕೆ ಬಳಸಬಾರದು ಎಂದು ಆರೋಗ್ಯ ಇಲಾಖೆ ಯಡಿ ಕಾರ್ಯ ನಿರ್ವಹಿಸುವ ಹಾಲುಣಿಸುವ ನಿರ್ವಹಣಾ ಕೇಂದ್ರಗಳಿಗೆ 2017 ರಲ್ಲಿಯೇ ಮಾರ್ಗಸೂಚಿ ನಿಗದಿಪಡಿಸಲಾಗಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಎ.ಸಿ ಕಚೇರಿ ವಾಹನ, ಪೀಠೋಪಕರಣ ಜಪ್ತಿ

ಚಿಕ್ಕಬಳ್ಳಾಪುರ: ರಸ್ತೆ ವಿಸ್ತರಣೆಗೆ ಜಾಗ ಕಳೆದುಕೊಂಡ ಮಾಲೀಕರಿಗೆ ಸೂಕ್ತ ಪರಿಹಾರ ನೀಡದೆ ನಿರ್ಲಕ್ಷ್ಯ ತೋರಿದ ಹಿನ್ನೆಲೆಯಲ್ಲಿ ಇಲ್ಲಿನ ಉಪವಿಭಾಗಧಿಕಾರಿ ಕಚೇರಿ ಚರಾಸ್ತಿ ಜಪ್ತಿಗೆ ಚಿಕ್ಕಬಳ್ಳಾಪುರ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಲಯ ಆದೇಶಿಸಿದೆ.

ಬುಧವಾರ ವರ್ತಕರು, ನ್ಯಾಯಾಲಯದ ಇಬ್ಬರು ಸಿಬ್ಬಂದಿ ಬಂದು ಉಪವಿಭಾಗಾಧಿಕಾರಿ ಕಚೇರಿ ಕುರ್ಚಿ, ಮೇಜು ಸೇರಿದಂತೆ ಪೀಠೋಪಕರಣ, ಕಂಪ್ಯೂಟರ್, ಮತ್ತಿತರ ವಸ್ತುಗಳನ್ನು ಕಚೇರಿಯಿಂದ ಹೊರಗೆ ಇಟ್ಟರು.

ಕೆಲ ಸಮಯದ ನಂತರ ಕಟ್ಟಡಗಳ ಮಾಲೀಕರು, ನ್ಯಾಯಾಲಯದ ಸಿಬ್ಬಂದಿ ಮತ್ತು ಉಪವಿಭಾಗಾಧಿಕಾರಿ ನಡುವೆ ಮಾತುಕತೆ ನಡೆಯಿತು. ತಿಂಗಳ ಒಳಗೆ ಪರಿಹಾರ ಹಣ ನೀಡುವುದಾಗಿ ಭರವಸೆ ಸಿಕ್ಕ ಬಳಿಕ ಪೀಠೋಪಕರಣಗಳನ್ನು ಕಚೇರಿಯೊಳಗೆ ಇರಿಸಲಾಯಿತು.

ಕಾವೇರಿ ಪೈಪ್‌ಗೆ ಒಳಚರಂಡಿ ಸಂಪರ್ಕ

ರಾಯಲ್ ಬ್ಲಿಸ್ ಅಪಾರ್ಟ್‌ಮೆಂಟ್ ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಣಿಸಂದ್ರ ಸಮೀಪದ ಹೆಗಡೆ ನಗರದ ರಾಯಲ್ ಬ್ಲಿಸ್ ಅಪಾರ್ಟ್‌ಮೆಂಟ್‌ನ ಒಳಚರಂಡಿ ಕೊಳವೆಯನ್ನು ಕಾವೇರಿ 5ನೇ ಹಂತದ ಪೈಪ್‌ಲೈನ್‌ಗೆ ಸಂಪರ್ಕ ನೀಡಿದ್ದ ಕಟ್ಟಡ ಮಾಲೀಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಜಲಮಂಡಳಿ ನಿರ್ಧರಿಸಿದೆ.

ಒಳಚರಂಡಿ ಸಂಪರ್ಕವನ್ನು ಕಾವೇರಿ ನೀರು ಪೂರೈಕೆಯ ಕೊಳವೆಗೆ ಕಲ್ಪಿಸಿದ್ದರಿಂದ, ನೀರು ಸರಬರಾಜು ಕೊಳವೆಗೆ ಹಾನಿಯಾಗಿ ಅಕ್ಕಪಕ್ಕದ ಮನೆಯವರಿಗೆ ನಷ್ಟ ಉಂಟಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಅವರು ಕಟ್ಟಡ ಮಾಲೀಕರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜೊತೆಗೆ, ಜಲಮಂಡಳಿ ಹಾಗೂ ಅಕ್ಕಪಕ್ಕದ ಜನರಿಗೆ ಆಗಿರುವ ಆರ್ಥಿಕ ನಷ್ಟವನ್ನು ಕಟ್ಟಡ ಮಾಲೀಕರಿಂದ ತುಂಬಿಸಿ ಕೊಳ್ಳುವಂತೆಯೂ ಆದೇಶಿಸಿದ್ದಾರೆ.

ಘಟನೆ: ಹೆಗಡೆ ನಗರದಲ್ಲಿ ಕಾವೇರಿ ನೀರು ಪೂರೈಸುವ ಕೊಳವೆಯಿಂದ ರಭಸವಾಗಿ ನೀರು ಹೊರ ಹರಿದು, ಅಕ್ಕಪಕ್ಕದ ಮನೆಗಳಿಗೆ ಹಾನಿಯುಂಟಾಗುತ್ತಿದೆ ಎಂದು ಜಲಮಂಡಳಿಗೆ ದೂರು ಬಂದಿತ್ತು. ಜಲಮಂಡಳಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸಿದರು. ಆಗ, ರಾಯಲ್ ಬ್ಲಿಸ್ ಅಪಾರ್ಟ್‌ಮೆಂಟ್‌ನ ಕಟ್ಟಡದ ಮಾಲೀಕರು, ತಮ್ಮ ಕಟ್ಟಡದ ಒಳಚರಂಡಿ ಸಂಪರ್ಕವನ್ನು ಕಾವೇರಿ ನೀರು ಪೂರೈಸುವ ಕೊಳವೆಗೆ ನೀಡಿ, ಅದರ ಮೇಲೆ ಕಾಂಕ್ರೀಟ್ ಹಾಕಿದ್ದರು.

ರಾಯಲ್‌ಬ್ಲಿಸ್ ಅಪಾರ್ಟ್‌ಮೆಂಟ್

ಅಪಾರ್ಟ್‌ಮೆಂಟ್‌ನ ಒಳಚರಂಡಿ ಸಂಪರ್ಕವನ್ನು ಕಾವೇರಿ ಕೊಳವೆಗೆ ಜೋಡಿಸಿದ್ದ ಸ್ಥಳ

ಹೊಸದಾಗಿ ಅಳವಡಿಸಿದ್ದ ಕಾವೇರಿ ನೀರು ಸರಬರಾಜು ಕೊಳವೆ ಮಾರ್ಗದಲ್ಲಿ ಇನ್ನೂ ಕಾವೇರಿ ನೀರನ್ನು ಹರಿಸಿರಲಿಲ್ಲ. ಮಂಗಳವಾರ ರಾತ್ರಿ ಕೊಳವೆಯಲ್ಲಿ ಪರೀಕ್ಷಾರ್ಥ ನೀರು ಹರಿಸಿದಾಗ, ನೀರಿನ ಒತ್ತಡ ತಡೆಯದೇ ರಭಸವಾಗಿ ನೀರು ಹೊರಚೆಲ್ಲಿತು. ಇದರಿಂದ ನೀರು ಸರಬರಾಜು ಕೊಳವೆಯ ಜೊತೆಗೆ ಅಕ್ಕಪಕ್ಕದ ಮನೆಗಳ ಸಂಪರ್ಕಕ್ಕೂ ಹಾನಿಯಾಗಿತ್ತು.

ಜಲಮಂಡಳಿ ಸಿಬ್ಬಂದಿ, ಕೊಳವೆ ಮಾರ್ಗವನ್ನು ಶುದ್ಧೀಕರಿಸಿ, ಸೋಂಕು ರಹಿತಗೊಳಿಸಿದರು.

ಪತ್ತೆ ಕಾರ್ಯ ಚುರುಕು

ನಗರದಲ್ಲಿ ಅನಧಿಕೃತವಾಗಿ ಒಳಚರಂಡಿ ಸಂಪರ್ಕಗಳನ್ನು ಪತ್ತೆ ಮಾಡುವ ಕಾರ್ಯವನ್ನು ಚುರುಕುಗೊಳಿಸಲು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ಇಂಥ ಪ್ರಕರಣಗಳು ಪತ್ತೆಯಾದಲ್ಲಿ ಅನಧಿಕೃತ ಸಂಪರ್ಕ ಪಡೆದಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಹೇಳಿದ್ದಾರೆ.

ವೇಣುಗೋಪಾಲ್, ನಾಗರಾಜಗೆ ಪ್ರಶಸ್ತಿ

ಬೆಂಗಳೂರು: ಕನ್ನಡ ಗೆಳೆಯರ ಬಳಗ ನೀಡುವ 'ಕನ್ನಡ ಅರವಿಂದ ಪ್ರಶಸ್ತಿ'ಗೆ ಕನ್ನಡ ಪರಿಚಾರಕ ಪ್ರೊ.ಆರ್. ವೇಣುಗೋಪಾಲ್ ಹಾಗೂ 'ಕನ್ನಡ ಚಿರಂಜೀವಿ ಪ್ರಶಸ್ತಿ'ಗೆ ಕನ್ನಡ ಪರ ಹೋರಾಟಗಾರ ಹೊಸೂರು ನಾಗರಾಜ ಆಯ್ಕೆಯಾಗಿದ್ದಾರೆ.

ನ.3ರಂದು ನಯನ ಸಭಾಂಗಣದಲ್ಲಿ ನಡೆಯುವ ಕನ್ನಡ ಗೆಳೆಯರ ಬಳಗದ ವಾರ್ಷಿಕ ಪ್ರಶಸ್ತಿ ಪ್ರದಾನ, ಪುಸ್ತಕ ಬಹುಮಾನ, ಕನ್ನಡ ಕನ್ನಡ ಚಿಂತನೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಅವರು ತಿಳಿಸಿದ್ದಾರೆ.

ಪ್ರೊ. ಆರ್. ವೇಣುಗೋಪಾಲ್

ಹೊಸೂರು ನಾಗರಾಜ

ಮಸೀದಿಯಲ್ಲಿ ಮದರಸಾ ತೆರವಿಗೆ ಕೇಂದ್ರದ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀರಂಗಪಟ್ಟಣದ ಜುಮ್ಮಾ ಮಸೀದಿಯಲ್ಲಿರುವ ಮದರಸಾ ತೆರವಿಗೆ ಮಂಡ್ಯ ಜಿಲ್ಲಾಧಿಕಾರಿ ಹಾಗೂ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಕೇಂದ್ರ ಸರ್ಕಾರ, ಹೈಕೋರ್ಟ್‌ಗೆ ಮನವಿ ಮಾಡಿದೆ.

'ಮಸೀದಿಯಲ್ಲಿ ಅಕ್ರಮವಾಗಿ ಮದರಸಾ ಚಟುವಟಿಕೆ ನಡೆಯುತ್ತಿದೆ' ಎಂದು ಆರೋಪಿಸಿ ಕನಕಪುರ ತಾಲ್ಲೂಕು ಕಬ್ಬಾಳು ಗ್ರಾಮದ ಅಭಿಷೇಕ್ ಗೌಡ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್, 'ಜುಮ್ಮಾ ಮಸೀದಿಯನ್ನು 1951ರಲ್ಲೇ ಸಂರಕ್ಷಿತ ಸ್ಮಾರಕ ಎಂದು ಘೋಷಿಸಲಾಗಿದೆ. ಆದರೆ, ಅಲ್ಲಿ ಕಾನೂನು ಬಾಹಿರ ಮದರಸಾ ಚಟುವಟಿಕೆಗಳು ನಡೆಯುತ್ತಿವೆ. ಈ ಚಟುವಟಿಕೆಗಳನ್ನು ತಡೆಯಲು ಹೋದರೆ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಉಂಟಾಗಲಿದೆ ಎಂಬ ಕಾರಣಕ್ಕೆ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಮಸೀದಿಯಲ್ಲಿನ ಮದರಸಾ ತೆರವು ಮಾಡಲು ಜಿಲ್ಲಾಧಿಕಾರಿಗೆ ಅಗತ್ಯ ನಿರ್ದೇಶನ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ರಾಜ್ಯ ಸರ್ಕಾರ ಮತ್ತು ವಕ್ಫ್ ಬೋರ್ಡ್ ಪರ ಹಾಜರಿದ್ದ ವಕೀಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 'ಮಸೀದಿಯನ್ನು ವಕ್ಫ್ ಬೋರ್ಡ್ ಆಸ್ತಿ ಎಂದು 1963ರಲ್ಲಿಯೇ ಅಧಿಸೂಚನೆ ಹೊರಡಿಸಲಾಗಿದೆ. ವಕ್ಫ್ ಬೋರ್ಡ್ ಆಸ್ತಿಯಲ್ಲಿ ಮದರಸಾ ಚಟುವಟಿಕೆಗೆ ಅವಕಾಶವಿದೆ' ಎಂದು ಪ್ರತಿಪಾದಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿತು.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖೋಡೆಸ್ ಗ್ಲಾಸ್ ಕಾರ್ಖಾನೆಯ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ನಡೆಯುತ್ತಿರುವುದರಿಂದ ಗುರುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಕೇಂದ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವತ್ಯಯವಾಗುವ ಸ್ಥಳಗಳು: ಕೋಣನಕುಂಟೆ, ತಲಗಟ್ಟಪುರ, ದೊಡ್ಡಕಲ್ಲಸಂದ್ರ, ಶ್ರೀನಿಧಿ ಲೇಔಟ್, ಆವಲಹಳ್ಳಿ ಮತ್ತು ಸುತ್ತಮುತ್ತಲ ಪ್ರದೇಶಗಳು.

ನಾಳೆ ವಿದ್ಯುತ್ ವ್ಯತ್ಯಯ: ರಾಜಾನ ಕುಂಟೆಯ ವಿದ್ಯುತ್ ಉಪಕೇಂದ್ರದಲ್ಲಿ ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ, ಹೆಬ್ಬಾಲದ ಸಿ-7 ಉಪವಿಭಾಗದ ವ್ಯಾಪ್ತಿಯ ಪ್ರದೇಶಗಳಲ್ಲಿ ಶುಕ್ರವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 4 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ರಾಜಾನಕುಂಟೆ, ಅದ್ದೆ ವಿಶ್ವನಾಥಪುರ, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲಕುಂಟೆ, ಹನಿಯೂರು, ಚೆಲ್ಲಹಳ್ಳಿ, ಕರ್ಲಾಪುರ, ಕೆಎಂಎಫ್, ಇಟಗಲ್‌ಪುರ, ಅರಕೇರಿ, ಬೈರಾಪುರ, ಬೂದಮನಹಳ್ಳಿ, ದಿಬ್ಬೂರು, ಕಾಕೋಳು, ಸೊನ್ನೇನಹಳ್ಳಿ. ಸೆಂಚುರಿ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

'ಕೆಸೆಟ್ ಪರೀಕ್ಷೆ: ಪ್ರಶ್ನೆ ಪತ್ರಿಕೆ ಕನ್ನಡದಲ್ಲಿ ನೀಡಿ'

ಬೆಂಗಳೂರು: 'ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆಸೆಟ್) ಪ್ರಶ್ನೆ ಪತ್ರಿಕೆಯನ್ನು ಕನ್ನಡದಲ್ಲಿಯೂ ನೀಡಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸೂಚಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇದೇ 24ರಂದು ಹಮ್ಮಿಕೊಂಡಿರುವ ಕೆಸೆಟ್ ಪರೀಕ್ಷೆಯ ಮನೋವಿಜ್ಞಾನ ಪ್ರಶ್ನೆ ಪತ್ರಿಕೆಯನ್ನು ಕೇವಲ ಇಂಗ್ಲಿಷ್ ಭಾಷೆಯಲ್ಲಿ ನೀಡುವ ನಿರ್ಧಾರವನ್ನು ಖಂಡಿಸಿರುವ ಬಿಳಿಮಲೆ, ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

'ಪರೀಕ್ಷಾ ಪ್ರಾಧಿಕಾರದ ನಿರ್ಣಯವು ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಮಾಡುತ್ತಿರುವ ಅನ್ಯಾಯವಷ್ಟೇ ಅಲ್ಲ, ಈ ನೆಲದ ಕಾನೂನನ್ನು ಉಲ್ಲಂಘಿಸುವ ವಿಷಯವಾಗಿದೆ. ಕೂಡಲೇ ಈ ಬಗ್ಗೆ ಕ್ರಮವಹಿಸಿ ಕನ್ನಡ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಒದಗಿಸಿ, ಈ ಅಚಾತುರ್ಯಕ್ಕೆ ಕಾರಣವೇನು ಎಂಬ ಬಗ್ಗೆ ವರದಿ ಸಲ್ಲಿಸಬೇಕು' ಎಂದು ತಿಳಿಸಿದ್ದಾರೆ.



ನಂ. ಕ್ಯೂ-15014/01/2023-ಸಿಪಿಎ

ಭಾರತ ಸರ್ಕಾರ

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ

2ನೇ ಮಹಡಿ, ಜಲ ವಿಂಗ್, ಇಂದಿರಾ ಪರ್ಯಾವರಣ ಭವನ, ಜೋರ್ ಬಾಗ್ ರಸ್ತೆ, ನವದೆಹಲಿ

ವಿಷಯ: ಎನ್‌ಸಿಆರ್ ಮತ್ತು ನೆರೆ ಪ್ರದೇಶಗಳಲ್ಲಿನ ವಾಯು ಗುಣಮಟ್ಟ ನಿರ್ವಹಣೆಗಾಗಿನ ಆಯೋಗದಲ್ಲಿ ಒಂದು (1) ಪೂರ್ಣಾವಧಿ ಸದಸ್ಯ (ತಾಂತ್ರಿಕ) ಹುದ್ದೆ ನೇಮಕಾತಿ ಕುರಿತು.

ಎನ್‌ಸಿಆರ್ ಮತ್ತು ನೆರೆ ಪ್ರದೇಶಗಳು, ದೆಹಲಿ ಇಲ್ಲಿನ ವಾಯು ಗುಣಮಟ್ಟ ನಿರ್ವಹಣೆಗಾಗಿನ ಆಯೋಗದಲ್ಲಿನ ಒಂದು (1) ಪೂರ್ಣಾವಧಿ ಸದಸ್ಯ (ತಾಂತ್ರಿಕ) ಹುದ್ದೆಗೆ ಆಯ್ಕೆ ಮತ್ತು ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎನ್‌ಸಿಆರ್ ಮತ್ತು ನೆರೆ ಪ್ರದೇಶಗಳ ವಾಯು ಗುಣಮಟ್ಟ ನಿರ್ವಹಣೆಗಾಗಿನ ಆಯೋಗವು (ಸಿಎಕ್ಯೂಎಂ) ಒಂದು ಶಾಸನಬದ್ಧ ಅಂಗಸಂಸ್ಥೆಯಾಗಿದ್ದು, ರಾಷ್ಟ್ರ ರಾಜಧಾನಿ ಪ್ರದೇಶ ಮತ್ತು ನೆರೆ ಪ್ರದೇಶಗಳಲ್ಲಿ ವಾಯು ಗುಣಮಟ್ಟ ನಿರ್ವಹಣೆಗಾಗಿನ ಆಯೋಗ ಕಾಯ್ದೆ, 2021 (29/2021)ರ ಅಡಿಯಲ್ಲಿ ಸ್ಥಾಪನೆಗೊಂಡಿರುತ್ತದೆ. ಸದಸ್ಯ ಹುದ್ದೆಯು ಪೂರ್ಣಾವಧಿ ಹುದ್ದೆಯಾಗಿರುತ್ತದೆ.

ವಿವರವಾದ ಜಾಹೀರಾತು ಸಚಿವಾಲಯದ https://moef.gov.in ವೆಬ್‌ಸೈಟ್‌ನಲ್ಲಿ ಮತ್ತು ಸಿಎಕ್ಯೂಎಂ' ರವರ https://caqm.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಸಹಿ/-
ವೇದಪ್ರಕಾಶ್ ಮಿಶ್ರಾ
ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ

CBC 13101/11/0008/2425

ನೈಋತ್ಯ ರೈಲ್ವೆ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರು ಸೂಚನೆ ಸಂ.: SWR/W/TS/USFD/2024/04/E, ದಿನಾಂಕ: 07.11.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ನೈಋತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಇತ್ತೀಚಿನ ತಿದ್ದುಪಡಿ ಚೀಟಿಗಳು ಹಾಗೂ ಅದಕ್ಕೆ ಸಂಬಂಧಪಟ್ಟ ನಿರ್ದೇಶನಗಳೊಂದಿಗೆ ಭಾರತೀಯ ರೈಲ್ವೆಯ "ರೈಲ್ಸ್ & ವೆಲ್ಡ್‌ಗಳ ಅಲ್ಟ್ರಾಸಾನಿಕ್ ಪರಿಶೀಲನೆಯ ಯುಎಸ್‌ಎಫ್‌ಡಿ ಮ್ಯಾನುವಲ್ & ಸ್ಪೆಸಿಫಿಕೇಶನ್ಸ್" ಅನುಸಾರವಾಗಿ 12 ತಿಂಗಳುಗಳ ಅವಧಿಗೆ ರೈಲ್‌ಗಳ ಮೇಲಿನ ಅಲ್ಟ್ರಾಸಾನಿಕ್ ಪರಿಶೀಲನಾ ಕಾರ್ಯ.	ರೂ. 46,49,500/-
2	ನೈಋತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಇತ್ತೀಚಿನ ತಿದ್ದುಪಡಿ ಚೀಟಿಗಳು ಹಾಗೂ ಅದಕ್ಕೆ ಸಂಬಂಧಪಟ್ಟ ನಿರ್ದೇಶನಗಳೊಂದಿಗೆ ಭಾರತೀಯ ರೈಲ್ವೆಯ "ರೈಲ್ಸ್ & ವೆಲ್ಡ್‌ಗಳ ಅಲ್ಟ್ರಾಸಾನಿಕ್ ಪರಿಶೀಲನೆಯ ಯುಎಸ್‌ಎಫ್‌ಡಿ ಮ್ಯಾನುವಲ್ & ಸ್ಪೆಸಿಫಿಕೇಶನ್ಸ್" ಅನುಸಾರವಾಗಿ 12 ತಿಂಗಳುಗಳ ಅವಧಿಗೆ ಎಟಿ ವೆಲ್ಡ್‌ಗಳ ಮೇಲಿನ ಅಲ್ಟ್ರಾಸಾನಿಕ್ ಪರಿಶೀಲನಾ ಕಾರ್ಯ.	ರೂ. 8,87,744/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.12.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ಟ್ರ್ಯಾಕ್ ಪ್ರೊಕ್ಯೂರ್‌ಮೆಂಟ್

PUB/564/AAF/PRB/SWR/2024-25 ಪ್ರಕಾ/ಹುಬ್ಬಳ್ಳಿ

South Western Railway - SWR | SWRRLY | SWRRLY

ಮಾಳವಿಯ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಜೈಪುರ

ಜವಾಹರ ಲಾಲ್ ನೆಹರು ಮಾರ್ಗ, ಜೈಪುರ 302017

2024-25ನೇ ಸಾಲಿನ ಪಿಎಚ್.ಡಿ. ಕಾರ್ಯಕ್ರಮಕ್ಕೆ ಪ್ರವೇಶಾತಿ

ಎಫ್.4/ಎ-6-1/24-25/ಅಕಾಡ/ಪಿಎಚ್.ಡಿ./02

ಸನ್ 2024-25ನೇ ಸಾಲಿನ (ಜನವರಿ 2025) ಈವನ್ ಸೆಮಿಸ್ಟರ್‌ಗೆ ಎಲ್ಲಾ ವಿಭಾಗಗಳಲ್ಲಿ / ಕೇಂದ್ರಗಳಲ್ಲಿ **ಪಿಎಚ್.ಡಿ.** ಕಾರ್ಯಕ್ರಮಕ್ಕೆ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಭೇಟಿ ಕೊಡಿ **www.mnit.ac.in.** ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 28ನೇ ನವಂಬರ್ 2024.

ರಿಜಿಸ್ಟ್ರಾರ್

CBC 21312/12/0008/2425

Chamundeshwari Electricity Supply Corporation Limited
(Govt. of Karnataka Undertaking)

General Notice in respect of Interlocutory Application IN THE HIGH COURT OF KARNATAKAAT BENGALURU WRIT PETITION NO. 29628/2015(GM-RES) (SUBSTITUTED SERVICE OF NOTICE TO THE R2 BY THE WAY OF PAPER PUBLICATION VIDE COURT ORDER DATED 25.10.2024)

Petitioner

CHAMUNDESHWARI ELECTRICITY SUPPLY CORPORATION LIMITED, A COMPANY INCORPORATED UNDER THE COMPANIES ACT, 1956 HAVING ITS REGD. OFFICE AT NO.29, VIJAYANAGARA 2ND STAGE, HINKAL, MYSURU 570 017, REP. BY GENERAL MANAGER (COMMERCIAL).

VS

Respondents

1. INTERNATIONAL ASSET RECONSTRUCTION COMPANY PRIVATE LIMITED, A COMPANY INCORPORATED UNDER THE PROVISIONS OF THE COMPANIES ACT 1956, HAVING ITS CORPORATE OFFICE AT A-508, 215 ATRIUM ANDHERI KURLA ROAD, ANDHERI(EAST), MUMBAI 400 093, REP. BY ITS DIRECTOR & OTHERS

TO

2. HASSAN BIOMASS POWER SUPPLY LIMITED, A COMPANY INCORPORATED UNDER THE PROVISIONS OF THE COMPANIES ACT 1956, HAVING ITS REGD. OFFICE AT 5022, SHOBHA DAHLIA, SARJAPUR, OUTER RING ROAD, NEAR BELLANDUR LAKE, BANGALORE 560 013, REP. BY ITS CHIEF OPERATIONS MANAGER.

Whereas the above named petitioner have preferred I.A.No.1/2022 praying this Court to and also on petition filed under Articles 226 & 227 of the Constitution of India, praying to:-

a) Quash the auction notice dated 12.06.2015 (Annexure J) issued by Respondent No.1.
b) Declare that the action of the Respondent No.1 in conducting the auction sale in furtherance of auction notice dated 12.06.2015 is illegal and arbitrary;
c) Declare that the rights of Respondent No.1 to recover dues of Respondent No.2 is subject to the right of the Petitioner to recover electricity dues under the provisions of the Karnataka Land Revenue Act 1964.
d) Declare that the Petitioner has a right to recover arrears of electricity tariff as arrears of land revenue in terms of Regulation 41 of the KERC (ES & D) Code 2000-01.
e) Direct the 3rd Respondent to initiate action in terms of communication dated 02.07.2015 (Annexure-N);

Notice is hereby given to you to appear in this Court either in person or through counsel duly instructed or through someone authorised by law, to act for you in the above Writ Petition on 11/12/2024 at 10.30 A.M. in case you intend to contest the Writ Petition. If you fail to appear, the same will be dealt with, heard and decided in your absence.

Sd/- General Manager (Commercial), CESC, Mysuru.

DIPR/DDMYS-789/KSMCA-535/2024-25

GOKALDAS EXPORTS LIMITED

Corporate Identification Number (CIN): L18101KA2004PLC033475

Regd. Office : No. 25, 2nd Cross, 3rd Main, Industrial Suburb, Yeshwanthpur, Bangalore-560022.

Tel: +91 80 68951000 Fax: +91 80 68951001 E-mail: info@gokaldasexports.com Website: www.gokaldasexports.com

Statement of unaudited Standalone and Consolidated Ind AS financial results for the quarter and half year ended September 30, 2024

(Regulation 47(1) (b) of the SEBI (LODR) Regualtions, 2015)

(in Rs. lakh, except earnings per share)

Sl. No.	Particulars	Standalone						Consolidated					
		Quarter Ended			Half year Ended		Year Ended	Quarter Ended			Half year Ended		Year Ended
		Sep 30, 2024	June 30, 2024	Sep 30, 2023	Sep 30, 2024	Sep 30, 2023	Mar 31, 2024	Sep 30, 2024	June 30, 2024	Sep 30, 2023	Sep 30, 2024	Sep 30, 2023	Mar 31, 2024
		Unaudited	Unaudited	Unaudited	Unaudited	Unaudited	Audited	Unaudited	Unaudited	Unaudited	Unaudited	Unaudited	Audited
1	Total Income	65,689.87	58,090.90	50,948.62	1,23,780.77	1,03,429.25	2,18,380.95	94,181.63	93,973.20	50,900.99	1,88,154.83	1,03,124.03	2,40,898.71
2	Net profit/(Loss) before tax and exceptional items	6,040.43	4,477.41	3,788.04	10,517.84	8,545.68	19,695.89	3,559.87	3,610.31	2,933.40	7,170.18	7,251.10	15,899.42
3	Net profit/(Loss) before tax and after exceptional items	6,040.43	4,477.41	3,788.04	10,517.84	8,545.68	19,695.89	3,559.87	3,610.31	2,933.40	7,170.18	7,251.10	15,899.42
4	Net Profit/(Loss) after tax and exceptional items	5,263.06	3,647.98	3,100.16	8,911.04	6,658.86	16,415.89	2,816.11	2,717.96	2,371.37	5,534.07	5,626.60	13,097.20
5	Total Comprehensive Income for the period / year	4,585.44	3,870.10	2,479.92	8,455.54	8,079.84	18,291.86	1,985.39	2,959.49	1,748.02	4,944.88	7,034.89	14,234.23
6	Paid-up equity share capital (face value Rs 5 each, fully paid up)	3,570.42	3,558.75	3,032.58	3,570.42	3,032.58	3,169.15	3,570.42	3,558.75	3,032.58	3,570.42	3,032.58	3,169.15
7	Other equity as shown in the Audited Balance Sheet of the previous year	-	-	-	-	-	1,30,987.61	-	-	-	-	-	1,25,964.85
8	Earnings Per Equity Share (EPS) Basic	7.37	5.27	5.11	12.67	10.98	27.01	3.94	3.92	3.91	7.87	9.28	21.55
	Diluted	7.06	5.03	4.86	12.13	10.44	25.70	3.78	3.75	3.72	7.54	8.82	20.51

Note: The above is an extract of the detailed format of Quarterly / Half yearly /Annual Financial Results filed with the Stock Exchanges under Regulation 33 of the SEBI (Listing obligations and Disclosure Requirements) Regulations, 2015. The full format of the financial results are available on the stock exchange websites www.bseindia.com and www.nseindia.com) and on the company's website (www.gokaldasexports.com).

For Gokaldas Exports Ltd.
Sd/-
Sivaramakrishnan Ganapathi
Vice Chairman & Managing Director
DIN : 07954560

Place: Gurgaon
Date: November 12, 2024

5 ಸಾವಿರ ಇ–ಖಾತಾ ಡೌನ್‌ಲೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಐದು ಸಾವಿರಕ್ಕೂ ಹೆಚ್ಚು ಮಾಲೀಕರು ಸಂಪರ್ಕರಹಿತವಾಗಿ ಇ-ಖಾತಾ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

ಫೇಸ್‌ಲೆಸ್, ಸಂಪರ್ಕರಹಿತ ಹಾಗೂ ಆನ್‌ಲೈನ್ ಮೂಲಕ ಬಿಬಿಎಂಪಿ ಇ-ಖಾತಾ ವಿತರಣಾ ವ್ಯವಸ್ಥೆಯನ್ನು ಅಕ್ಟೋಬರ್ 1ರಿಂದ ಆರಂಭಿಸಲಾಗಿದೆ. ಆರಂಭದಲ್ಲಿ ಹಲವು ತಾಂತ್ರಿಕ ತೊಂದರೆಗಳಿದ್ದು, ಅವುಗಳನ್ನು ಬಿಬಿಎಂಪಿ ಸಿಬ್ಬಂದಿ ನಿವಾರಿಸಿದ್ದಾರೆ.

ಇ-ಖಾತಾ ಪಡೆಯಲು ಪ್ರಮುಖ ತೊಡಕಾಗಿದ್ದ ಋಣಭಾರ ಪ್ರಮಾಣ ಪತ್ರಕ್ಕಾಗಿ (ಇ.ಸಿ) ಮಾಲೀಕರು ಸಾಕಷ್ಟು ಹಣ ವ್ಯಯಮಾಡಬೇಕಾಗಿತ್ತು. ಆಸ್ತಿ ಮಾರಾಟ ಮಾಡುವ ಉದ್ದೇಶಕ್ಕಾಗಿ ಇ-ಖಾತಾ ಪಡೆಯುವವರಿಗೆ ಮಾತ್ರ ಇ.ಸಿ ಅಗತ್ಯವಿದೆ. ಈಗಿರುವ ದಾಖಲೆಯಂತೆ ಇ-ಖಾತಾ ಪಡೆಯಲುಇ.ಸಿ ಸಲ್ಲಿಕೆಯಿಂದ ವಿನಾಯಿತಿ ನೀಡಲಾಗಿದೆ. ಹೀಗಾಗಿ, ಉಳಿದ ಎಲ್ಲ ದಾಖಲೆಗಳು ಸರಿಯಾಗಿದ್ದರೆ, ಅಪ್‌ಲೋಡ್ ಮಾಡಿದ ಕೂಡಲೇ ಇ-ಖಾತಾ ಲಭ್ಯವಾಗುತ್ತಿದೆ.

ಆಧಾರ್ ಹೊಂದಿಲ್ಲದವರು ಇ-ಖಾತಾ ಪಡೆಯಲು ಸಹಾಯಕ ಕಂದಾಯ ಅಧಿಕಾರಿ ಕಚೇರಿಗೆ ಹೋಗಿ, ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಮತದಾರರ ಗುರುತಿನ ಚೀಟಿಯಲ್ಲಿ ಯಾವುದಾದರೂ ಒಂದನ್ನು ದಾಖಲೆಯಾಗಿ ನೀಡಬಹುದು. ನೋಂದಾಯಿತ ಪ್ರಮಾಣ ಪತ್ರದ ಸಂಖ್ಯೆ, ಆಸ್ತಿ ತೆರಿಗೆ ಎಸ್‌ಎಎಸ್ ಸಂಖ್ಯೆ, ಜಲಮಂಡಳಿ, ಬೆಸ್ಕಾಂ ಸಂಪರ್ಕದ 10 ಅಂಕಿಯ ಖಾತೆ ಸಂಖ್ಯೆಯನ್ನು ನೀಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೆಂಗಳೂರು ಒನ್ ಕೇಂದ್ರದಲ್ಲಿ ಇ-ಖಾತಾ ಶುಲ್ಕವಾಗಿ ₹45 ಶುಲ್ಕ ಪಾವತಿಸಬೇಕು. ನಂತರ ಪ್ರತಿ ದಾಖಲೆಯ ಪ್ರತಿ ಪುಟ ಸ್ಕ್ಯಾನ್ ಮಾಡಲು ₹5 ನೀಡಬೇಕು. ಅಂತಿಮ ಇ-ಖಾತಾ ಮುದ್ರಣಕ್ಕೆ ಸಿದ್ಧವಾದಾಗ ಅದರ ಶುಲ್ಕ ₹125 ಅನ್ನು ಬಿಬಿಎಂಪಿಗೆ ಪಾವತಿಸಬೇಕು ಎಂದು ವಿವರ ನೀಡಲಾಗಿದೆ.

ಅಂಕಿ ಅಂಶಗಳು

53 ಲಕ್ಷ
ಜನರಿಂದ ಇ–ಖಾತಾ ವೆಬ್‌ಸೈಟ್‌ಗೆ ಭೇಟಿ

6 ಲಕ್ಷ
ಕರಡು ಇ–ಖಾತಾ ಡೌನ್‌ಲೋಡ್

30 ಸಾವಿರ ಮಂದಿ
ಆನ್‌ಲೈನ್‌ನಲ್ಲಿ ದಾಖಲೆ ಅಪ್‌ಲೋಡ್

5,612 ಮಂದಿ
ಅಂತಿಮ ಇ–ಖಾತಾ ಡೌನ್‌ಲೋಡ್

‘ಮನೆ ಸುಟ್ಟವರು ಮುಸ್ಲಿಮರಲ್ಲ, ರಜಾಕಾರರು’

ಬೆಂಗಳೂರು: ‘ನಮ್ಮ ಮನೆಯನ್ನು ಸುಟ್ಟಿದ್ದು ರಜಾಕಾರರು, ಮುಸ್ಲಿಮರಲ್ಲ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಮಲ್ಲಿಕಾರ್ಜುನ ಖರ್ಗೆಯವರ ಇತಿಹಾಸ ಗೊತ್ತಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

‘ರಜಾಕಾರರಿಂದ ತನ್ನ ತಾಯಿ, ಸಹೋದರಿ ಸುಟ್ಟು ಹೋದರೂ ಖರ್ಗೆ ಮೌನ ವಹಿಸಿದ್ದಾರೆ’ ಎಂಬ ಯೋಗಿ ಆದಿತ್ಯನಾಥ ಟೀಕೆ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, ‘ಮನೆ ಸುಟ್ಟಿದ್ದು ಮುಸ್ಲಿಂ ಸಮುದಾಯವಲ್ಲ. ಒಂದು ಸಮುದಾಯದ ಯಾರೋ ಮೋಸ ಮಾಡುತ್ತಾರೆ ಎಂಬ ಕಾರಣಕ್ಕೆ ಇಡೀ ಸಮುದಾಯವನ್ನು ಹೊಣೆ ಮಾಡಲು ಆಗುತ್ತದಾ’ ಎಂದು ಕೇಳಿದರು.

ಈ ಚರ್ಚೆಯೇ ಈಗ ಅಪ್ರಸ್ತುತ. ಇಷ್ಟೆಲ್ಲ ಮಾತನಾಡುವ ಇವರು ದಲಿತರಿಗೆ ದೇವಸ್ಥಾನಗಳಿಗೆ ಪ್ರವೇಶ ಕೊಡುತ್ತಾರಾ? ಬಿಜೆಪಿ, ಆರ್‌ಎಸ್‌ಎಸ್ ಸಿದ್ಧಾಂತಗಳಲ್ಲಿ ಮೊದಲು ಸಮಾನತೆ ತರಲಿ ಎಂದರು.

ಬಿಜೆಪಿಯವರು ಭಯಗೊಂಡಿದ್ದಾರೆ: ಮೈಕಲ್ ಡಿಕುನ್ಹ ಆಯೋಗ ಮಧ್ಯಂತರ ವರದಿ ಬಂದಿದೆ. ಅದಕ್ಕೇ ಬಿಜೆಪಿಯವರು ಭಯಗೊಂಡಿದ್ದಾರೆ.ಇನ್ನೂ ಆಯೋಗದಿಂದ ಅಂತಿಮ ವರದಿ ಬರಬೇಕಿದೆ. ಮಧ್ಯಂತರ ವರದಿಯಲ್ಲಿ ಬಲವಾದ ಸಾಕ್ಷ್ಯಗಳಿದ್ದರೆ ಕ್ರಮಕ್ಕೆ ನಮ್ಮ ಸರ್ಕಾರ ಹಿಂಜರಿಯುವುದಿಲ್ಲ’ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಚರಸ್ ಚಾಕೊಲೇಟ್ ಮಾರಾಟ: 6 ಮಂದಿ ಸೆರೆ

ಆನೇಕಲ್: ಚರಸ್ ಚಾಕೊಲೇಟ್ ಮತ್ತು ಗಾಂಜಾ ಮಾರಾಟ ಮಾಡುತ್ತಿದ್ದ ಆರು ಆರೋಪಿಗಳನ್ನು ಜಿಗಣಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಂಧಿತರಿಂದ ₹10ಲಕ್ಷ ಮೌಲ್ಯದ 60 ಕೆ.ಜಿಯಷ್ಟು ಚರಸ್ ಚಾಕೊಲೇಟ್ ಮತ್ತು ಅರ್ಧ ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ.

ಜಿಗಣಿ ಕೆರೆ ಬಳಿ ಸರಕು ಸಾಗಣೆ ವಾಹನವೊಂದರಲ್ಲಿ ಗಾಂಜಾ ಮತ್ತು ಚರಸ್ ಚಾಕೊಲೇಟ್ ಮಾರಾಟ ಮಾಡುತ್ತಿದ್ದಾಗ ಆರೋಪಿಗಳನ್ನು ಬಂಧಿಸಲಾಗಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಚರಸ್ ಚಾಕೊಲೇಟ್

ಉತ್ತರಪ್ರದೇಶ ಮೂಲದ ಆರೋಪಿಗಳು ವಾಸವಿದ್ದ ಬೆಂಗಳೂರಿನ ರಾಜಾಜಿ ನಗರದ ಮನೆಯಲ್ಲಿ ಪರಿಶೀಲಿಸಿದಾಗ 60 ಕೆ.ಜಿ ತೂಕದ 12 ಸಾವಿರ ಚರಸ್ ಚಾಕೊಲೇಟ್‌ಗಳು ಪತ್ತೆಯಾಗಿವೆ. ಈ ಆರೋಪಿಗಳು ಉತ್ತರಪ್ರದೇಶದ ಕಾನ್ಪುರ ಮಹಾಲಕ್ಷ್ಮಿ ಫಾರ್ಮಾ ಕಂಪನಿಯ ಮೊನು ಎಂಬುವವರಿಂದ ಮಹಾಕಾಳ್ ಹೆಸರಿನ ಚಾಕೊಲೇಟ್‌ಗಳನ್ನು ರೈಲಿನ ಮೂಲಕ ತರಿಸಿಕೊಂಡಿದ್ದರು.

ನಗರದ ಸುತ್ತಮುತ್ತ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಅಂತರ ರಾಜ್ಯ ವಿದ್ಯಾರ್ಥಿಗಳಿಗೆ ಚರಸ್ ಚಾಕೊಲೇಟ್ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.





ಬೈಕ್ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದ್ದ ಸವಾರ
ಕಾರು ಹರಿದು ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿ ಪಾಳಿ ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದ ಯುವಕನ ಮೇಲೆ ತಿಗಳರಪಾಳ್ಯ 14ನೇ ಅಡ್ಡರಸ್ತೆಯಲ್ಲಿ ಕಾರಿನ ಚಕ್ರ ಹರಿದು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಾಗೇಪಲ್ಲಿಯ ಶಶಿಕುಮಾರ್(20) ಮೃತ ಯುವಕ.

ಶಶಿಕುಮಾರ್ ಅವರು ಪೀಣ್ಯ ಬಳಿಯ ಕಾರ್ಖಾನೆಯಲ್ಲಿ ಫ್ಯಾಬ್ರಿಕೇಷನ್ ಕೆಲಸ ಮಾಡುತ್ತಿದ್ದರು. ಮಂಗಳವಾರ ರಾತ್ರಿ ಪಾಳಿ ಇತ್ತು. ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದರು. ವೇಗವಾಗಿ ಬೈಕ್ ಓಡಿಸಿಕೊಂಡು ಬರುತ್ತಿದ್ದರು. ಬೈಕ್ ನಿಯಂತ್ರಣ ತಪ್ಪಿದ್ದರಿಂದ ಸವಾರ ಕೆಳಕ್ಕೆ ಬಿದ್ದಿದ್ದರು. ಅದೇ ಮಾರ್ಗವಾಗಿ ಬರುತ್ತಿದ್ದ ಕಾರಿನ ಚಕ್ರಗಳು ಸವಾರನ ಮೇಲೆ ಹರಿದ ಪರಿಣಾಮ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

'ಕಾರನ್ನು ಚಾಲಕ ನಿಲ್ಲಿಸದೇ ತೆರಳಿದ್ದಾನೆ. ಆ ಮಾರ್ಗದಲ್ಲಿದ್ದ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಲಾಗಿದೆ. ಯುವಕನ ಮೇಲೆ ಹರಿದ ಕಾರು ಬಿಳಿ ಬಣ್ಣದ್ದು ಎಂಬುದು ಗೊತ್ತಾಗಿದೆ. ಕಾರಿನ ನೋಂದಣಿ ಸಂಖ್ಯೆಯನ್ನು ಪತ್ತೆ ಮಾಡಲಾಗುತ್ತಿದೆ. ಉದ್ದೇಶ ಪೂರ್ವಕವಾಗಿಯೇ ಬೈಕ್ ಸವಾರನ ಮೇಲೆ ಕಾರು ಹರಿಸಲಾಗಿದೆಯೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಯ ನಂತರ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಅಪಘಾತ: ಕಾನ್‌ಸ್ಟೆಬಲ್ ಸಾವು

ಬೆಂಗಳೂರು: ನಾಯಂಡಹಳ್ಳಿ ಹೊರವರ್ತುಲ ರಸ್ತೆಯಲ್ಲಿ ಮಂಗಳವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಕಾನ್‌ಸ್ಟೆಬಲ್ ಸಿ.ಬಿ. ಮನು(27) ಅವರು ಮೃತಪಟ್ಟಿದ್ದಾರೆ.

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನವರಾದ ಮನು ಅವರು ನಗರದ ಸಶಸ್ತ್ರ ಮೀಸಲು ಪೊಲೀಸ್ ಪಡೆಯಲ್ಲಿ ಕೆಲಸ ಮಾಡುತ್ತಿದ್ದರು. ಗೌರಿಪಾಳ್ಯದಲ್ಲಿ ನೆಲಸಿದ್ದ ಅವರ ಸ್ನೇಹಿತರ ಮನೆಗೆ ತೆರಳಿ ತಡರಾತ್ರಿ ವಾಪಸ್ ಬರುತ್ತಿದ್ದರು. ಆಗ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ನಾಗರಬಾವಿಯಿಂದ ನಾಯಂಡಹಳ್ಳಿ ಮಾರ್ಗವಾಗಿ ಬೈಕ್‌ನಲ್ಲಿ ಮನು ಬರುತ್ತಿದ್ದರು. ರಸ್ತೆಯ ಬದಿಯಲ್ಲಿ ಬಿದ್ದಿದ್ದ ಮರಳಿನಿಂದ ಬೈಕ್ ನಿಯಂತ್ರಣ ತಪ್ಪಿ ಮುಂದಿದ್ದ ಸರಕು ಸಾಗಣೆ ವಾಹನಕ್ಕೆ ಡಿಕ್ಕಿಯಾಗಿದೆ. ಕೆಳಕ್ಕೆ ಬಿದ್ದಿದ್ದ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳದಲ್ಲಿದ್ದವರು ಮನು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಮಾರ್ಗಮಧ್ಯದಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ನಿಂದನೆ ಆರೋಪ: ಪುನೀತ್ ಕೆರೆಹಳ್ಳಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಅವಹೇಳನಕಾರಿ ಪದ ಪ್ರಯೋಗ ಹಾಗೂ ಧರ್ಮ, ಜಾತಿ ನಿಂದನೆ ಮಾಡಿದ್ದ ಆರೋಪದಡಿ ರಾಷ್ಟ್ರ ರಕ್ಷಣಾ ಪಡೆ ಮುಖಂಡ ಪುನೀತ್ ಕೆರೆಹಳ್ಳಿ ಅವರನ್ನು ಬುಧವಾರ ತಡರಾತ್ರಿ ಚಾಮರಾಜಪೇಟೆ ಪೊಲೀಸರು ವಶಕ್ಕೆ ಪಡೆದರು.

ಸಚಿವರ ಆಪ್ತ ಸಹಾಯಕ ಬಿ. ಎಸ್. ಅಶೋಕ್ ನೀಡಿದ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ. ಅಗತ್ಯ ಬಿದ್ದರೆ ಬಂಧಿಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಪ್ರಚಾರದ ವೇಳೆ ಜಮೀರ್ ಅವರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು 'ಕರಿಯ' ಎಂದು ನಿಂದಿಸಿದ್ದರು. ಇದಕ್ಕೆ ಪ್ರತಿಯಾಗಿ ಪುನೀತ್ ಕೆರೆಹಳ್ಳಿ ಅವರು ನ.11ರಂದು ಫೇಸ್‌ಬುಕ್‌ನಲ್ಲಿ ಸಚಿವರನ್ನು ನಿಂದಿಸಿದ್ದರು ಎನ್ನಲಾಗಿದೆ.

'ಜಮೀರ್ ಕುರಿತು ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ನಿಂದನೆ ಮಾಡಿದ್ದಾರೆ. ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಪದೇ ಪದೇ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ' ಎಂದು ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಅತ್ತೆ ಮಗನ ಕಿರುಕುಳ: ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಅತ್ತೆ ಮಗನ ಕಿರುಕುಳದಿಂದ ಮನನೊಂದು ವಿದ್ಯಾರ್ಥಿನಿಯೊಬ್ಬಳು ಶೆಟ್ಟಿಹಳ್ಳಿಯ ತಮ್ಮ ನಿವಾಸದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಖಾಸಗಿ ಕಾಲೇಜಿನಲ್ಲಿ ಪ್ರಥಮ ಪಿಯು ಓದುತ್ತಿದ್ದ 16 ವರ್ಷದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಕುಳ ನೀಡುತ್ತಿದ್ದ ಆರೋಪದಡಿ ಸ್ವಾಗತ್ (28) ಎಂಬಾತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಸ್ವಾಗತ್ ಹಾಗೂ ಆತ್ಮಹತ್ಯೆ ಮಾಡಿಕೊಂಡಿರುವ ವಿದ್ಯಾರ್ಥಿನಿ ಹಲವು ವರ್ಷಗಳಿಂದ ಅನ್ಯೋನ್ಯ ಆಗಿದ್ದರು. ಆದರೆ, ಇತ್ತೀಚೆಗೆ ಇಬ್ಬರ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ಗಲಾಟೆ ಮಾಡಿಕೊಳ್ಳುತ್ತಿದ್ದರು. ಅಲ್ಲದೇ ಅತ್ತೆಯ ಮಗ ಬೈಯ್ಯುತ್ತಿದ್ದ ಹಾಗೂ ಹೊಡೆಯುತ್ತಿದ್ದ. ಇದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಮೂಲಗಳು ತಿಳಿಸಿವೆ. ವಿದ್ಯಾರ್ಥಿನಿ ತಾಯಿ ಕೆಲಸಕ್ಕೆ ತೆರಳಿದ್ದರು. ಮನೆಗೆ ಬಂದು ನೋಡಿದಾಗ ಮಗಳು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಬೃಬೆಂಮಪಾ/ಮುಖ್ಯಆಯುಕ್ತರು/ಪಿಎಸ್‌ಆರ್(ಜಿ)/2318/2024–25 **ನಮೂನೆ–3** (ನಿಯಮ–3 ರ ಉಪ–ನಿಯಮ (3) ನೋಡಿ) ದಿನಾಂಕ: 12–11–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯ್ದೆ 1961 ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ 45.00 ಮೀಟರ್‌ಗಳ ಅಗಲದಂತೆ, ಅನುಮೋದಿತ ಮಹಾಯೋಜನೆ 2015 ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಗುಂಜೂರು ಪಾಳ್ಯ, ವರ್ತೂರು ಮಾರ್ಗವಾಗಿ ಗೇರ್ ಶಾಲೆ ರಸ್ತೆಯಿಂದ ಫೆರಿಫೆರಲ್ ವರ್ತುಲ ರಸ್ತೆಯವರೆಗೆ ರಸ್ತೆ ನಿರ್ಮಾಣ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶವು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013 ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು / ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ / ಒಪ್ಪಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ / ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು : **ಬೆಂಗಳೂರು ನಗರ** ತಾಲ್ಲೂಕಿನ ಹೆಸರು : **ಬೆಂಗಳೂರು ಪೂರ್ವ** ಗ್ರಾಮದ ಹೆಸರು : **ಪಣತೂರು**

Sl. No.	Sy.No/ Khatha No.	Type of Land		Nature of Land			Dimension of the Land/ Plot & Extent in Sq.m		Boundaries of the Land / Plot				Building Details			Present Activity on Land/Building (Specify Specific activity such as Shop, Office, Factory, Apartment, Individual House etc.,	Market (guide -lines) value of the land Per Sq.m	Name and address of the owner of the Plot/Land for which DRC is to be issued
		Vacant	Built up	Agriculture	Converted undeveloped	Approved Layout / Developed Land Building Site	Dimension	Extent	North	South	East	West	Extent in Sq.m	Type of Construction and No. of Floors	Floor Area Ratio			
1	Sy. No. 55/1 Khata Sl. No: 1122, Municipal No: 96	Vacant Land		Converted Land			3404.40 Sqm		Remaining portion of Sy. No: 55/1	Remaining portion of Sy. No: 55/1	Sy. No: 55/2C	Sy.No: 54 & Sy.No: 59	None	None	None	Vacant	53,900/-	M/s.Sumadhura Buildwell Private Limited., Having their registered Office at No.14 & 158, Pattanduru Agrahara Village, White Field, Bangalore - 560066. Represented by its Authorized Signatory Mr. G. Madhu Sudhan S/o Late. Mr. Sattaiah

ಸೂಚನೆ: ಈ ಆಸ್ತಿಯ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 137 ಎಂಎನ್‌ಯು 2024 (ಇ), ಬೆಂಗಳೂರು, ದಿನಾಂಕ: 09.09.2024 ರ ಪ್ರಕಾರ ಶುಲ್ಕ ಪಾವತಿಯ ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಪರಿಗಣಿಸಲಾಗುತ್ತದೆ. ಮತ್ತು ಸುತ್ತೋಲೆ ಪ್ರಕಾರ ಸಂಖ್ಯೆ: ಆಯುಕ್ತರು/ಪಿ.ಎಸ್.ಆರ್/ಜಿ/1802/2024–25, ದಿನಾಂಕ: 21.09.2024. ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

ವಿಭಾಗ / ಉಪ–ವಿಭಾಗ / ಶಾಖೆ ಕಛೇರಿ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ. 208, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ. ಪಾಲಿಕೆ, ಬೆಂಗಳೂರು – 560002

ಸಹಿ/–

ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಇಂದು 4 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ನಾಲ್ಕು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳು ಹಾಗೂ ಕರಾವಳಿಯ ಹಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಹೆಚ್ಚಿನ ಸ್ಥಳಗಳಲ್ಲಿ ಜಿಟಿಜಿಟಿ ಮಳೆ ಹಾಗೂ ಕೆಲ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಜತೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗೆ ಶುಕ್ರವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Walk-in

CHANGE OF NAME

I, K. MALLIKARJUN BABU S/o. K.V. Naidu R/a #45, 1st Floor, 10th Main, Hruja Layout, Kathriguppe 4th Phase, BSK 3rd Stage, Bengaluru- 560085, have changed my Name to K. MALLIKARJUNABABU for all my future purpose. Vide affidavit dated 13.11.2024 sworn before Notary Jayappa. A. Bangalore.

CHANGE OF NAME

I, ARUN SADANANDAM S/o.V. Sadanandam, R/a #65, 1st Cross, Ambabhavani Temple Road, Near Sambhram College, Jyothi Nagar, Bangalore North, Bangalore-560097 have Changed My Name to ARUN SADANAND vide affidavit dated: 12.11.2024 Sworn before Notary S.I. Balaguru, Bangalore.

Lost

I Renukesh Naveen Shetty S/o Late Naveen Maharudra Shetty have Lost my Original Sale Deed No 4021-2000-2001 Volume No. 2272 Page No. 198-207 Site number 281. Complaint has been Lodged with Local Police Station vide Lost Report No 1275004/2024 dated 06-10-2024. If Anyone finds Please Return to the address # 227 BDA layout Anjanapura 11th block, Bangalore- 560083.

TATA ADVANCED SYSTEMS

WALK IN DRIVE @ BANGALORE

We are hiring for H125 – Final Assembly Line

S No.	Job Role	Description
01	Technician (Assembly Mechanical)	Experience in mechanical assembly operations, installation tubing to tubing of fluid systems and dynamic components. Drilling, and riveting and torque application
02	Technician (Electric Assembler)	Experience in installations & removal of wiring harness along with crimping and soldering, Electrical bonding and Installation of electrical equipment's, torque tightening
03	Technician (Ground Test - Electrical & Avionics)	Functional testing of electrical & avionics systems, trouble shooting, Crimping, and soldering Ability to read interpret wiring diagrams/schematics
04	Technician (Ground Test - Mechanical systems)	Functional testing and adjustments of mechanical systems- flight control, hydraulics, and installation of dynamic components Good understanding of various Mechanical equipment's / LRU's used on helicopter.
05	Quality Inspector - Mechanical	Knowledge of AS9100 requirements, AS9102 FAI, conversant with component and assembly drawings, GD&T, Knowledge on JIG setting, calibration, Instruments, and gauges. Knowledge on fixed wing/rotary aircraft systems, Non-conformance reporting, experience of paint inspection
06	Quality Inspector - Electrical	Ability to inspect electrical and avionics systems at unit level and aircraft assemblies Knowledge on fixed wing/rotary aircraft systems, Non-conformance reporting,

Qualification: AME OR Diploma **Experience**: 3 -5 Years of Experience on Shopfloor with Aerospace Industry

Date of Interview & Timing: 16-11-2024 & 09.30 AM to 05.00 PM

Documents to Carry: CV, 2 Photographs, Last Three Months Pay Slip

VENUE: Hotel Citrus Cunningham: 34, Cunningham Rd, opp. Prestige Centre Point, Vasanth Nagar, Bengaluru, Karnataka 560052

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats,Converted& Agriculture Lands
Call:7204995189

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME

I, IQRA KHANUM .R.S, D/o Mr. Samiulla Khan G.R, aged 22 years, presently R/at No. 577/A, 12th Main, 2nd Cross, 4th Block, Koramangala, Bangalore South, Bangalore-560 034 do hereby declare that I have changed my name from IQRA KHANUM R.S. to IQRA KHANUM, henceforth I shall be known and called as IQRA KHANUM for all purposes, vide affidavit date 13.11.2024, sworn before Advocate and Notary A.S. NARAYANA REDDY at Bangalore.

I, BASAVARAJA S Joldapagi S/o Sangappa Joldapagi, aged 53 years, R/o Flat #104, 1st floor Sahasra Grandeur, 2nd Cross Amruthnagar, Bangalore-560092, have changed my son's name from Atharva Basavaraja Joldapagi to Atharva Basawaraj Patil vide Affidavit dated 13-11-2024 sworn before Notary Manohar Jeerige, Bengaluru

I, Smt. Ambika W/o Basawaraj aged 39 years, R/o Flat #104, 1st Floor, Sahasra Grandeur, 2nd Cross Amruthnagar, Bangalore-560092, have changed my name from Ambika Basavaraja Joldapagi to AMBIKA BASAWARAJ GARDSHETTY vide Affidavit dated 13-11-2024 sworn before Notary Manohar Jeerige, Bengaluru

EDUCATION

To Place your Classified Ads Contact: 9845114560

DH DECCAN HERALD Classifieds More value, more impact
NAME CHANGE ಪ್ರಜಾವಾಣಿ
@50/-* PER WORDS
Book your Name Change Ad in DH All Karnataka + Prajavani Bengaluru City All Days
www.dhclassifieds.com BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

30ನೇ ಸೆಪ್ಟೆಂಬರ್ 2024ರ ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಅಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2024 (ಅಪರಿಶೋಧಿತ)	ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ 30 ಸೆಪ್ಟೆಂಬರ್ 2024 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2023 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2024 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	2,613.02	5,081.20	2,491.62	10,976.34
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	28.97	(1.29)	(21.19)	127.57
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	28.97	(1.29)	(21.19)	78.78
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	(3.12)	(41.55)	(45.57)	(27.55)
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(18.90)	(51.10)	(18.78)	(5.20)
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)	128.97	128.97	128.85	128.88
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				1903.84
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ				
	ಎ) ಮೂಲಭೂತ:	(0.26)	(2.71)	(2.89)	1.38
	ಬಿ) ಡೈಲ್ಯೂಟೆಡ್:	(0.26)	(2.71)	(2.89)	1.36

ಸೂಚನೆ :

1. 30ನೇ ಸೆಪ್ಟೆಂಬರ್ 2024ರ ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಅಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2024 (ಅಪರಿಶೋಧಿತ)	ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ 30 ಸೆಪ್ಟೆಂಬರ್ 2024 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2023 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2024 (ಪರಿಶೋಧಿತ)
ನಿರ್ವಹಣೆಯಿಂದ ಬಂದ ಒಟ್ಟು ವರಮಾನ	1,678.78	3,023.69	1,610.49	6,395.20
ಲಾಭ ತೆರಿಗೆಯ ಮುಂಚೆ	128.84	189.65	129.55	489.98
ಲಾಭ ತೆರಿಗೆಯ ನಂತರ	96.03	140.99	95.82	362.52
ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	96.73	142.79	97.12	365.75

2. ಈ ಮೇಲಿನ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 11ನೇ ನವೆಂಬರ್, 2024 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 12ನೇ ನವೆಂಬರ್, 2024 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಮೇಲಿರುವ 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಅಪರಿಶೋಧಿತ, ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದೆ. ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಹಣಕಾಸಿನ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು
DIN : 00286308

ಸ್ಥಳ : ಬೆಂಗಳೂರು
ದಿನಾಂಕ: ನವೆಂಬರ್ 12, 2024

ಸಾಂದರ್ಭಿಕ ಚಿತ್ರ

ಹೊತ್ತಿ ಉರಿದ ಪ್ಲಾಸ್ಟಿಕ್ ಗೋದಾಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಾಯಂಡಹಳ್ಳಿಯ ಮುಕ್ತಚಾರಿ ಬಡಾವಣೆಯ ಕೈಗಾರಿಕಾ ಪ್ರದೇಶದಲ್ಲಿದ್ದ ಪ್ಲಾಸ್ಟಿಕ್ ಗೋದಾಮಿನಲ್ಲಿ ಸಂಭವಿಸಿದ ಬೆಂಕಿ ಆಕಸ್ಮಿಕದಿಂದ ಗೋದಾಮಿನಲ್ಲಿದ್ದ ವಸ್ತುಗಳು ಸುಟ್ಟು ಕರಕಲಾಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಕೈಗಾರಿಕಾ ಪ್ರದೇಶದಲ್ಲಿ ಪ್ಲಾಸ್ಟಿಕ್, ರಬ್ಬರ್ ಹಾಗೂ ಚೀಲದ ಗೋದಾಮಗಳಿವೆ. ಮಂಗಳವಾರ ತಡರಾತ್ರಿ ಪ್ಲಾಸ್ಟಿಕ್ ಗೋದಾಮಿನಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿತ್ತು. ನಂತರ, ಇತರೆ ಗೋದಾಮುಗಳಿಗೂ ಬೆಂಕಿ ವ್ಯಾಪಿಸಿತ್ತು ಎಂದು ಮೂಲಗಳು ತಿಳಿಸಿವೆ.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಅಗ್ನಿಶಾಮಕದಳದ ಸಿಬ್ಬಂದಿ ತಿಳಿಸಿದ್ದಾರೆ.

ಗೋದಾಮಿನಲ್ಲಿದ್ದ ವಸ್ತುಗಳು ಸುಟ್ಟು ಕರಕಲಾಗಿವೆ. ಸದ್ಯಕ್ಕೆ ನಷ್ಟದ ಅಂದಾಜು ತಿಳಿದಿಲ್ಲ. ಅಗ್ನಿಶಾಮಕದ ಆರು ವಾಹನಗಳು ಸ್ಥಳಕ್ಕೆ ತೆರಳಿ ಬೆಂಕಿ ನಂದಿಸಲು ಯಶಸ್ವಿಯಾಗಿವೆ.

ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾರಂಭದಲ್ಲಿ (ಎಡದಿಂದ) ಬಾನು ಮುಷ್ತಾಕ್, ಎಲ್‌.ಎನ್‌. ಮುಕುಂದರಾಜ್, ಟಿ.ಎನ್‌.ಸೀತಾರಾಂ, ಇಂದಿರಾ ಲಂಕೇಶ್, ಎಂ.ಎಸ್‌.ಆಶಾದೇವಿ ಮತ್ತು ಎಚ್‌.ಆರ್‌.ಸುಜಾತಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಭಯದ ವಾತಾವರಣದಲ್ಲಿ ಬದುಕುತ್ತಿದ್ದೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದಲಾದ ಪರಿಸ್ಥಿತಿಯಲ್ಲಿ ಭಯದ ವಾತಾವರಣದಲ್ಲಿ ಬದುಕುತ್ತಿದ್ದು, ಲೇಖಕರಿಗೆ ಮುಕ್ತವಾಗಿ ಬರೆಯಲು ಸಾಧ್ಯವಾಗುತ್ತಿಲ್ಲ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್ ಕಳವಳ ವ್ಯಕ್ತಪಡಿಸಿದರು.

ಅಕಾಡೆಮಿ ನಗರದಲ್ಲಿ ಬುಧವಾರ ಹಮ್ಮಿಕೊಂಡ ‘ಲಂಕೇಶ್ ಬಹುತ್ವಗಳ ಶೋಧ’ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಆ ಕಾಲದ ನಮ್ಮಂತಹ ತರುಣ ಬರಹಗಾರರಿಗೆ ನೈತಿಕ ಸ್ಥೈರ್ಯವಾಗಿ ಲಂಕೇಶ್ ನಿಂತಿದ್ದರು. ರಕ್ಷಿಸಲು ನಾನಿದ್ದೇನೆ ಎಂಬ ಸಮಾಧಾನದ ನೆಲೆಯನ್ನು ಒದಗಿಸಿಕೊಟ್ಟಿದ್ದರು. ಆ ವೇಳೆ ಬರವಣಿಗೆಗೆ ಸುರಕ್ಷಿತ ವಾತಾವರಣವಿತ್ತು. ಸಾಹಿತಿಗಳಿಗೂ ಭಯ ಇರಲಿಲ್ಲ. ಆದರೆ, ಈ ಕಾಲದ ಲೇಖಕರಾದ ನಾವು, ಇಂದಿನ ತರುಣರಿಗೆ ಆ ವಿಶ್ವಾಸ ಸೃಷ್ಟಿಸುವಲ್ಲಿ ಸೋತಿದ್ದೇವೆ’ ಎಂದು ಹೇಳಿದರು.

ಕಿರುತೆರೆ ನಿರ್ದೇಶಕ ಟಿ.ಎನ್‌. ಸೀತಾರಾಂ, ‘ನಾಟಕದ ಮೂಲಕವೇ ನಾನು ಲಂಕೇಶ್ ಅವರಿಗೆ ಪರಿಚಿತನಾಗಿದ್ದೆ. ಅವರ ನಾಟಕದ ಗದ್ಯವು ಕಾವ್ಯಾತ್ಮಕ ಶೈಲಿಯಲ್ಲಿದೆ. ತಮ್ಮ ಒಂದು ಮನೆಯನ್ನು ಮಾರಿ ಅವರು ‘ಪಲ್ಲವಿ’ ಸಿನಿಮಾ ಮಾಡಿದ್ದರು. ಹೇಳಬೇಕಾದ್ದನ್ನು ಹೆಚ್ಚು ಜನರಿಗೆ ತಲುಪಿಸಲು ಸಿನಿಮಾ ಮಾಧ್ಯಮವಾಗುತ್ತದೆ ಎಂದು ನಂಬಿದ್ದರು. ಸಿನಿಮಾ, ನಾಟಕ ಏನೇ ಇರಲಿ ಅಸಹಾಯಕರ ಪರವಾಗಿ ಹೋರಾಟ ಮಾಡಬೇಕು ಎಂದು ಅವರು ಹೇಳಿದ್ದರು. ಅವರ ಈ ಮಾತನ್ನು ಇವತ್ತಿಗೂ ನಾನು ನನ್ನ ಧಾರಾವಾಹಿಗಳಲ್ಲಿ ಅನುಸರಿಸುತ್ತಿದ್ದೇನೆ’ ಎಂದು ಹೇಳಿದರು.

ಲೇಖಕಿ ಬಾನು ಮುಷ್ತಾಕ್, ‘ಲಂಕೇಶ್ ಅವರು ಚಲನಚಿತ್ರ, ಪತ್ರಿಕೆ, ನಾಟಕ, ಕತೆ, ಕಾದಂಬರಿಗಳಲ್ಲಿ ಸಾಮಾಜಿಕ ಜನಜೀವನ ಹಾಗೂ ಚಿಂತನಾಕ್ರಮವನ್ನು ಕ್ರೋಢೀಕರಿಸುತ್ತಾ ಹೋದರು. ಸ್ವ ಪ್ರಶಂಸೆಯನ್ನು ಅವರು ಎಂದಿಗೂ ಒಪ್ಪಿಕೊಳ್ಳುತ್ತಿರಲಿಲ್ಲ. ಪತ್ರಿಕೆಯ ಭಾಷೆಯನ್ನು ಗ್ರಾಂಥಿಕದಿಂದ ಜನಸಾಮಾನ್ಯರ ಆಡುಭಾಷೆಗೆ ಬದಲಿಸಿದರು. ಕರ್ನಾಟಕದ ರಾಜಕೀಯವನ್ನು ನಿರ್ದೇಶಿಸುವ ಮಟ್ಟಕ್ಕೆ ಅವರ ಪತ್ರಿಕೆ ಬೆಳೆದಿತ್ತು. ಲಂಕೇಶರನ್ನು ನಾವು ಸಮಗ್ರವಾಗಿ ನೋಡಲಾಗದು. ನಮ್ಮ ನಮ್ಮ ಅರಿವಿಗೆ ನಿಲುಕಿದಷ್ಟು ಪಾರ್ಶ್ವ ನೋಟವಷ್ಟೇ ಸಾಧ್ಯ’ ಎಂದರು.

ಶಿಬಿರದ ನಿರ್ದೇಶಕಿಯೂ ಆದ ಲೇಖಕಿ ಎಂ.ಎಸ್‌. ಆಶಾದೇವಿ, ಲಂಕೇಶ್ ಅವರ ಪತ್ನಿ ಇಂದಿರಾ ಲಂಕೇಶ್, ಶಿಬಿರದ ಸಹ ನಿರ್ದೇಶಕ ವಿಜಯ್ ಹನಕೆರೆ, ರಿಜಿಸ್ಟ್ರಾರ್ ಎನ್‌.ಕರಿಯಪ್ಪ, ಸದಸ್ಯ ಸಂಚಾಲಕರಾದ ಎಚ್‌.ಆರ್‌. ಸುಜಾತ, ಕಾ.ವೆಂ. ಶ್ರೀನಿವಾಸಮೂರ್ತಿ ಹಾಗೂ ಸುಮಾ ಸತೀಶ್ ಉಪಸ್ಥಿತರಿದ್ದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಅಭಿವೃದ್ಧಿ: ₹50 ಸಾವಿರಕ್ಕೆ ಮಾರಾಟ

ರೈತಸ್ನೇಹಿ ‘ಬಹುಬೆಳೆ ಸಂಸ್ಕರಣಾ’ ಯಂತ್ರ

• ಖಲೀಲಅಹ್ಮದ ಶೇಖ

ಬೆಂಗಳೂರು: ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಅನುಕೂಲವಾಗುವ ಉದ್ದೇಶದಿಂದ ಕಡಲೆಕಾಯಿ, ಸೂರ್ಯಕಾಂತಿ, ಮೆಕ್ಕೆಜೋಳ ಹಾಗೂ ಹರಳು ಬೀಜಗಳನ್ನು ಸಂಸ್ಕರಿಸುವ ‘ಬಹು–ಬೆಳೆ ಸಂಸ್ಕರಣಾ’ ಯಂತ್ರವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೊಯ್ಲೋತ್ತರ ತಾಂತ್ರಿಕ ವಿಭಾಗದ ವಿಜ್ಞಾನಿಗಳು ಎರಡು ವರ್ಷಗಳ ಸಂಶೋಧನೆ ನಡೆಸಿ ಈ ಯಂತ್ರವನ್ನು ಅಭಿವೃದ್ಧಿಪಡಿಸಿದ್ದಾರೆ.

ರೈತರಿಗಲ್ಲದೇ, ಸಂಸ್ಕರಣೆದಾರರು, ಗುಡಿ ಕೈಗಾರಿಕೋದ್ಯಮಿಗಳು, ಹೋಟೆಲ್ ಉದ್ಯಮ ನಡೆಸುವವರಿಗೂ ಈ ಯಂತ್ರ ಉಪಯುಕ್ತವಾಗಲಿದೆ. ಇದು ದೇಶಿಯ ಸಂಸ್ಕರಣಾ ಉದ್ಯಮಕ್ಕೆ ನೆಲಗಡಲೆ, ಸೂರ್ಯಕಾಂತಿ ಮತ್ತು ಮೆಕ್ಕೆಜೋಳದ ಕಚ್ಚಾ ವಸ್ತುಗಳ ಲಭ್ಯತೆಯನ್ನು ಹೆಚ್ಚಿಸಲಿದೆ.

‘ಕಡಲೆಕಾಯಿ, ಸೂರ್ಯಕಾಂತಿ, ಮೆಕ್ಕೆಜೋಳ ಹಾಗೂ ಹರಳನ್ನು ರೈತರು ಸದ್ಯ ಕೈಗಳಿಂದ ಸಂಸ್ಕರಣೆ ಮಾಡುತ್ತಿದ್ದಾರೆ. ಇದು ಹೆಚ್ಚು ಸಮಯ ತೆಗೆದುಕೊಳ್ಳುವುದರ ಜೊತೆಗೆ ಶ್ರಮದಾಯಕವೂ ಆಗಿದೆ. ಕಾರ್ಮಿಕ ವೆಚ್ಚವೂ ರೈತರಿಗೆ ಹೊರೆಯಾಗಲಿದೆ. ಸದ್ಯ ನಗರ ಪ್ರದೇಶಗಳಲ್ಲಿ ಒಂದೊಂದು ಬೆಳೆಗೆ ಒಂದೊಂದು ಯಂತ್ರಗಳಿದ್ದು, ಇವುಗಳಲ್ಲಿ ದೊಡ್ಡ ಪ್ರಮಾಣದಲ್ಲಷ್ಟೇ ಧಾನ್ಯಗಳನ್ನು ಸಂಸ್ಕರಿಸಬಹುದಾಗಿದೆ. ಆದ್ದರಿಂದ, ನಾವು ಸಣ್ಣ ಮತ್ತು ಮಧ್ಯಮ ವರ್ಗದ ರೈತರನ್ನು ಗಮನದಲ್ಲಿಟ್ಟುಕೊಂಡು ಕಡಿಮೆ ಪ್ರಮಾಣದಲ್ಲಿ, ನಾಲ್ಕು ಬೆಳೆಗಳನ್ನು ಸಂಸ್ಕರಿಸುವಂತಹ ಈ ಯಂತ್ರವನ್ನು ಅಭಿವೃದ್ಧಿಪಡಿಸಿದ್ದೇವೆ. ಕಡಿಮೆ ಸಮಯದಲ್ಲಿ ರೈತರು ತಮ್ಮ ಉತ್ಪನ್ನಗಳಿಂದ ಹೆಚ್ಚು ಲಾಭ ಪಡೆದುಕೊಳ್ಳಬಹುದು’ ಎಂದು ಕೊಯ್ಲೋತ್ತರ ತಾಂತ್ರಿಕ ವಿಭಾಗದ ಪ್ರಾಧ್ಯಾಪಕ ಎಂ. ಮಂಜುನಾಥ್ ತಿಳಿಸಿದರು.

ಕಾರ್ಯಾಚರಣೆ ವಿಧಾನ: ಬಹುಬೆಳೆ ಸಂಸ್ಕರಣಾ ಯಂತ್ರವು (4–ಇನ್–1) 0.5 ಎಚ್‌.ಪಿಯಿಂದ 1 ಎಚ್‌.ಪಿವರೆಗಿನ ಸಿಂಗಲ್‌ಫೇಸ್ ಎಲೆಕ್ಟ್ರಿಕ್ ಮೋಟಾರ್‌ನೊಂದಿಗೆ ಕಾರ್ಯನಿರ್ವಹಿಸುತ್ತದೆ. ಈ ಯಂತ್ರವು ಪ್ರತಿ ಗಂಟೆಗೆ ನೆಲಗಡಲೆ ಗಿಡದಿಂದ 50 ಕೆ.ಜಿ. ಕಾಯಿಗಳನ್ನು ಬೇರ್ಪಡಿಸುತ್ತದೆ. 120 ಕೆ.ಜಿ. ಕಡಲೆಕಾಯಿಯನ್ನು ಸುಲಿಯುತ್ತದೆ. 250 ಸೂರ್ಯಕಾಂತಿ ಮತ್ತು ಮೆಕ್ಕೆಜೋಳದ ತೆನೆಗಳಿಂದ ಬೀಜಗಳನ್ನು ಬೇರ್ಪಡಿಸಲಿದೆ. ಸಂಸ್ಕರಣೆ ಸಂದರ್ಭದಲ್ಲಿ ಬೀಜಗಳಿಗೆ ಹೆಚ್ಚು ಹಾನಿ ಆಗುವುದಿಲ್ಲ’ ಎಂದು ಅವರು ವಿವರಿಸಿದರು.

ಬಹುಬೆಳೆ ಸಂಸ್ಕರಣಾ ಯಂತ್ರ

‘ಶೇಕಡ 98ರಷ್ಟು ನಿಖರತೆ’

‘ಈ ಬಹುಬೆಳೆ ಸಂಸ್ಕರಣಾ ಯಂತ್ರವು ತೆನೆ ಅಥವಾ ಗಿಡಗಳಿಂದ ಬೀಜಗಳನ್ನು ಬೇರ್ಪಡಿಸುವ ಸಂದರ್ಭದಲ್ಲಿ ಶೇ 98ರಷ್ಟು ನಿಖರತೆ ಒಳಗೊಂಡಿದೆ. ಈ ಯಂತ್ರದಿಂದ ಸಂಸ್ಕರಿಸಿದ ಶೇ 95ರಷ್ಟು ಬೀಜಗಳು ಮೊಳಕೆಯೊಡೆಯುತ್ತವೆ ಎಂದು ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಯಂತ್ರಕ್ಕೆ ₹50 ಸಾವಿರ ದರ ನಿಗದಿಪಡಿಸಲಾಗಿದ್ದು, ರೈತರು ನೇರವಾಗಿ ಕೃಷಿ ವಿಶ್ವವಿದ್ಯಾಲಯದಿಂದ ಖರೀದಿಸಬಹುದು’ ಎಂದರು.

ಕೃಷಿ ಮೇಳಕ್ಕೆ ಚಾಲನೆ ಇಂದು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನವೆಂಬರ್ 14ರಿಂದ 17ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ‘ಹವಾಮಾನ ಚತುರ ಡಿಜಿಟಲ್ ಕೃಷಿ’ ಎಂಬ ಘೋಷವಾಕ್ಯದಡಿ ಕೃಷಿ ಮೇಳಕ್ಕೆ ಬೆಳಿಗ್ಗೆ 10ಕ್ಕೆ ಕೃಷಿ ಸಚಿವ ಎನ್‌. ಚಲುವರಾಯ ಸ್ವಾಮಿ ಚಾಲನೆ ನೀಡಲಿದ್ದಾರೆ.

ವೇತನ ಬಾಕಿ ಆರೋಗ್ಯ ಕವಚ ಸಿಬ್ಬಂದಿ ಗಡುವು

ಬೆಂಗಳೂರು: ಬಾಕಿ ಉಳಿಸಿಕೊಂಡಿರುವ ಮೂರು ತಿಂಗಳ ವೇತನವನ್ನು ಇದೇ 16ರ ಸಂಜೆಯೊಳಗೆ ಪಾವತಿಸಬೇಕು. ಇಲ್ಲವಾದಲ್ಲಿ ಸೇವೆ ಸ್ಥಗಿತಗೊಳಿಸಿ, ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ‘108-ಆರೋಗ್ಯ ಕವಚ’ ಯೋಜನೆಯಡಿಯ ಆಂಬುಲೆನ್ಸ್ ಸಿಬ್ಬಂದಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಯೋಜನೆಯನ್ನು ಜಿವಿಕೆ–ಇಎಂಆರ್‌ಐ ಸಂಸ್ಥೆ ನಿರ್ವಹಿಸುತ್ತಿದ್ದು, 2,500 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ‘ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ವೇತನವನ್ನು ಸಂಸ್ಥೆ ಪಾವತಿಸಿಲ್ಲ’ ಎಂದು ಆರೋಪಿಸಿರುವ ಸಿಬ್ಬಂದಿ, ನಿಗದಿತ ಗಡುವಿನೊಳಗೆ ವೇತನ ಪಾವತಿಯಾಗದಿದ್ದಲ್ಲಿ ನ.16ರ ರಾತ್ರಿ 8 ಗಂಟೆಯಿಂದ ಸೇವೆ ಸ್ಥಗಿತಗೊಳಿಸಿ, ಮುಷ್ಕರ ನಡೆಸಲಾಗುವುದು ಎಚ್ಚರಿಸಿದ್ದಾರೆ.

‘ನಿಯಮಿತವಾಗಿ ವೇತನ ನೀಡದಿದ್ದರಿಂದ ಜೀವನ ನಡೆಸುವುದು ಕಷ್ಟವಾಗಿದೆ. ಆದ್ದರಿಂದ ಮುಷ್ಕರ ಅನಿವಾರ್ಯವಾಗಿದೆ’ ಎಂದು 108 ನೌಕರರ ಸಂಘದ ಸದಸ್ಯರು ತಿಳಿಸಿದ್ದಾರೆ.

‘ಸೇಫ್‌ಕ್ಲಾಕ್’ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ‘ನಮ್ಮ ಮೆಟ್ರೊ’ ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ಬುಧವಾರ ‘ಸೇಫ್‌ಕ್ಲಾಕ್’ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್ ವ್ಯವಸ್ಥೆ ಆರಂಭಗೊಂಡಿದೆ.

ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದ ‘ಡಿ’ ನಿರ್ಗಮನದಲ್ಲಿ ಸ್ಥಾಪಿಸಲಾಗಿರುವ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್‌ಗೆ ಬಿಎಂಆರ್‌ಸಿಎಲ್ ಕಾರ್ಯನಿರ್ವಾಹಕ ನಿರ್ದೇಶಕಿ ಕಲ್ಪನಾ ಕೊಟಾರಿಯಾ ಚಾಲನೆ ನೀಡಿದರು.

‘ಲಗೇಜ್‌ಗಳನ್ನು ಹಿಡಿದುಕೊಂಡು ನಗರದಲ್ಲಿ ಸುತ್ತಾಡಲು ಕಷ್ಟ ಪಡುವ ಪ್ರಯಾಣಿಕರು ಡಿಜಿಟಲ್ ಲಾಕರ್‌ನಲ್ಲಿ ಇಟ್ಟು ಹೋಗಿ ತಮ್ಮ ಕೆಲಸ ಮುಗಿಸಿ ಬಂದು ಲಗೇಜ್ ಒಯ್ಯಲು ಈ ವ್ಯವಸ್ಥೆ ಉಪಯೋಗವಾಗಲಿದೆ’ ಎಂದು ಕಲ್ಪನಾ ಕೊಟಾರಿಯಾ ತಿಳಿಸಿದರು.

‘6 ಗಂಟೆಯ ಅವಧಿಗೆ 2 ರಿಂದ 3 ಬ್ಯಾಗ್‌ಗಳನ್ನು ಇಡಬಹುದಾದ ಮಧ್ಯಮ ಗಾತ್ರದ ಬಾಕ್ಸ್‌ಗೆ ₹70 ಹಾಗೂ 5 ಬ್ಯಾಗ್‌ಗಳವರೆಗೆ ಇರಿಸಬಹುದಾದ ದೊಡ್ಡ ಗಾತ್ರದ ಬಾಕ್ಸ್‌ಗೆ ₹100 ನಿಗದಿಪಡಿಸಲಾಗಿದೆ’ ಎಂದು ವಿವರಿಸಿದರು.

ಸೇಫ್‌ಕ್ಲಾಕ್ ವ್ಯವಸ್ಥಾಪಕ ನಿರ್ದೇಶಕ ಮಂಜುನಾಥ್ ಮಾತನಾಡಿ, ‘ಡಿಜಿಟಲ್ ಲಾಕರ್ ಅಧಿಕ ಸುರಕ್ಷತೆಯನ್ನು ಹೊಂದಿದೆ. ಮೆಟ್ರೊ ನಿಲ್ದಾಣದ ಒಳಗೆ ಬರುವಾಗಲೇ ಬ್ಯಾಗ್‌ಗಳು ಸ್ಕ್ಯಾನ್ ಆಗುವುದರಿಂದ ಮತ್ತೆ ಸ್ಕ್ಯಾನ್ ಮಾಡುವುದಿಲ್ಲ. ಆದರೆ ಸಿಸಿಟಿವಿ ಕ್ಯಾಮೆರಾದ ಕಣ್ಗಾವಲು ಇರುತ್ತದೆ. ಯುನಿಟ್ ಬೇಕಿದ್ದರೆ ಫೋನ್ ನಂಬರ್ ದಾಖಲಿಸಿ ಡಿಜಿಟಲ್ ಪಾವತಿ ಮಾಡಬೇಕು. ಆನಂತರ ಬಾಕ್ಸ್ ಒಳಗೆ ಬ್ಯಾಗ್‌ಗಳನ್ನು ಇಟ್ಟು ಲಾಕ್ ಮಾಡಲಾಗುತ್ತದೆ. ಆನಂತರ ತೆರೆಯಬೇಕಿದ್ದರೆ ಅವರೇ ಬಂದು ಒಟಿಪಿ ಹಾಕಬೇಕಾಗುತ್ತದೆ. ಹಾಗಾಗಿ ಬೇರೆಯವರು ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವಿಲ್ಲ’ ಎಂದು ವಿವರ ನೀಡಿದರು.

ಯುರೋಪ್, ಅಮೆರಿಕಗಳಲ್ಲಿ ರೈಲು ನಿಲ್ದಾಣಗಳಲ್ಲಿ ಡಿಜಿಟಲ್ ಲಾಕರ್ ಸೌಲಭ್ಯಗಳಿವೆ. ಈ ಸೌಲಭ್ಯವನ್ನು ಇಂಡಿಯನ್ ರೈಲ್ವೆ ಮೂಲಕ ಭಾರತದಲ್ಲಿ ಮೊದಲ ಬಾರಿ ಆರಂಭಿಸಲಾಯಿತು. ಪ್ರಯಾಣಿಕರಿಂದ ಉತ್ತಮ ಸ್ಪಂದನೆ ದೊರೆತಿದೆ. ಇದೀಗ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿ ಆರಂಭಿಸಲಾಗಿದ್ದು, ಮುಂದೆ ಯಶವಂತಪುರ, ಕೆಂಗೇರಿ, ಎಂ.ಜಿ ರೋಡ್, ಕೆ.ಆರ್‌. ಪುರ ಸಹಿತ ವಿವಿಧ ಮೆಟ್ರೊ ನಿಲ್ದಾಣಗಳಿಗೆ ವಿಸ್ತರಿಸಲಾಗುವುದು ಎಂದು ಮಾಹಿತಿ ನೀಡಿದರು.

‘ನಮ್ಮ ಮೆಟ್ರೊ’ ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ಬುಧವಾರ ಆರಂಭವಾದ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್‌ನಲ್ಲಿ ಬ್ಯಾಗ್ ಇಡುವ ಪ್ರಕ್ರಿಯೆಯಲ್ಲಿ ಪ್ರಯಾಣಿಕರು ತೊಡಗಿರುವುದು ಪ್ರಜಾವಾಣಿ ಚಿತ್ರ

ಇ–ಕಾಮರ್ಸ್ ವಿತರಕರಿಗೆ ₹22 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವ ಇ–ಕಾಮರ್ಸ್ ವಿತರಕರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ನಗರ ಸಂಚಾರ ಪೊಲೀಸರು, ಮಂಗಳವಾರ ಒಂದೇ ದಿನ 4,276 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಒಟ್ಟು ₹22 ಲಕ್ಷ ದಂಡ ಸಂಗ್ರಹಿಸಿದ್ದಾರೆ. ಎರಡು ದಿನಗಳ ಹಿಂದೆಯೂ 2,670 ಚಾಲಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಮಂಗಳವಾರ ನಡೆದ ಕಾರ್ಯಾಚರಣೆಯಲ್ಲಿ ಹೆಲ್ಮೆಟ್ ರಹಿತ ಚಾಲನೆ ಮಾಡಿದ್ದವರ ವಿರುದ್ಧ 1,552 ಪ್ರಕರಣ ದಾಖಲಿಸಿಕೊಂಡು, ₹7.47 ಲಕ್ಷ ದಂಡ ಸಂಗ್ರಹಿಸಿದ್ದಾರೆ. ಚಾಲನೆಯ ಸಮಯದಲ್ಲಿ ಮೊಬೈಲ್ ಬಳಕೆ ಮಾಡುತ್ತಿದ್ದ 58 ಮಂದಿಯಿಂದ ₹68 ಸಾವಿರ ದಂಡ ಸಂಗ್ರಹಿಸಲಾಗಿದೆ.

ಸಿಗ್ನಲ್ ದಾಟುವಿಕೆ, ಪ್ರವೇಶ ನಿರ್ಬಂಧಿತ ರಸ್ತೆಗಳಲ್ಲಿ ತೆರಳಿ ಸಂಚಾರ ನಿಯಮ ಉಲ್ಲಂಘಿಸಿದ್ದ 754 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ₹3.60 ಲಕ್ಷ ದಂಡ ಸಂಗ್ರಹಿಸಲಾಗಿದೆ. ದೋಷಪೂರಿತ ನೋಂದಣಿ ಸಂಖ್ಯೆ ಫಲಕ, ಏಕಮುಖ ಸಂಚಾರ ಚಾಲನೆ, ಹಿಂಬದಿ ಸವಾರನ ಹೆಲ್ಮೆಟ್ ರಹಿತ ಚಾಲನೆ, ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ, ಪಾದಚಾರಿ ಮಾರ್ಗದಲ್ಲಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

‘ಸೀಟ್ ಬ್ಲಾಕಿಂಗ್’: ಸೈಬರ್ ಠಾಣೆಯಲ್ಲಿ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ‘ಸೀಟ್ ಬ್ಲಾಕಿಂಗ್’ ದಂಧೆ ನಡೆಸುತ್ತಿದ್ದವರ ವಿರುದ್ಧ ಮಲ್ಲೇಶ್ವರದ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆ(ಸೈಬರ್)ಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ನೀಡಿದ ದೂರು ಆಧರಿಸಿ, ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ.

‘ಅಭ್ಯರ್ಥಿಗಳ ಲಾಗಿನ್, ಪಾಸ್ ವರ್ಡ್, ಗೋಪ್ಯ ಕೀ ಅನ್ನು ಅನಧಿಕೃತವಾಗಿ ಪಡೆದುಕೊಂಡು ಅವರ ಪರವಾಗಿ ಆಯ್ಕೆ ನಮೂದಿಸಿ ಕೆಲವು ಕಾಲೇಜುಗಳಾದ ಬಿಎಂಎಸ್, ಆಕಾಶ್, ನ್ಯೂ ಹೊರೈಜಾನ್ ಎಂಜಿನಿಯರಿಂಗ್ ಕಾಲೇಜುಗಳಿಗೆ ಲಾಭ ಮಾಡಿಕೊಡಲಾಗಿದೆ. ಇತರೆ ಅರ್ಹ ಅಭ್ಯರ್ಥಿಗಳು ವಂಚಿತರಾಗುವಂತೆ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಂಚಿಸಲಾಗಿದೆ’ ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಹಲವು ಅಭ್ಯರ್ಥಿಗಳ ದಾಖಲೆಗಳನ್ನು ಅಪ್‌ಲೋಡ್ ಮಾಡಿದ, ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ತೊಡಗಿದ್ದ ಒಂದೇ ಐಪಿ ವಿಳಾಸ ಹಾಗೂ ಅಂತಹ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳ ಖರೀದಿಸಿದವರ ವಿವರಗಳನ್ನು ಪತ್ತೆ ಮಾಡಿಕೊಡಬೇಕು. ಒಂದೇ ಐ.ಪಿ ವಿಳಾಸದಿಂದ ಸೀಟು ಪಡೆದ ವಿದ್ಯಾರ್ಥಿಗಳು, ಕಾಲೇಜುಗಳು ಹಾಗೂ ಸೈಬರ್ ಕೇಂದ್ರಗಳವರನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸೀಟು ಹಂಚಿಕೆಯಾಗಿದ್ದರೂ, ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯದ 2,348 ವಿದ್ಯಾರ್ಥಿಗಳಿಗೆ ಕೆಇಎ ನೋಟಿಸ್ ನೀಡಿತ್ತು. ನೋಟಿಸ್‌ಗೆ ವಿದ್ಯಾರ್ಥಿಗಳು ನೀಡಿದ ಉತ್ತರದ ಮೂಲಕ ಬಹು ನೋಂದಣಿಯಾಗಿದ್ದ ಐ.ಪಿ ವಿಳಾಸಗಳನ್ನು ಗುರುತಿಸಲಾಗಿತ್ತು. ಸುಮಾರು 50 ಐ.ಪಿ ವಿಳಾಸದಿಂದ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಬಹು ಬೇಡಿಕೆ ಇರುವ ಕೋರ್ಸ್‌ಗಳ ಸೀಟು ಪಡೆದಿರುವುದು ಮೇಲ್ನೋಟಕ್ಕೆ ಪತ್ತೆಯಾಗಿತ್ತು. ಇದನ್ನು ಆಧರಿಸಿ ದೂರು ನೀಡಲಾಗಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ 2024–25ನೇ ಸಾಲಿಗೆ ನಡೆದಿದ್ದ ಸಿಇಟಿಯಲ್ಲಿ ಉನ್ನತ ರ್‍ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಎರಡನೇ ಸುತ್ತು ಪೂರ್ಣಗೊಳ್ಳುವವರೆಗೂ ಸೀಟು ಹಿಡಿದಿಟ್ಟುಕೊಂಡು ಕೊನೆಯ ಸುತ್ತಿನ ನಂತರ ತಮಗೆ ಹಂಚಿಕೆಯಾದ ಕಾಲೇಜಿಗಳಿಗೆ ಪ್ರವೇಶ ಪಡೆಯದೇ ಇತರೆ ವಿದ್ಯಾರ್ಥಿಗಳಿಗೆ ನಷ್ಟ ಮಾಡಿದ್ದರು.

‘ರೀಲ್ಸ್’ಗಾಗಿ ಮತಯಂತ್ರ ಚಿತ್ರೀಕರಣ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ತಡಸ ಗ್ರಾಮದಲ್ಲಿರುವ ಮತಗಟ್ಟೆ–9 ರಲ್ಲಿ ಮತಯಂತ್ರದ ಚಿತ್ರೀಕರಣ ಮಾಡಲು ಮುಂದಾಗಿದ್ದ ಇಬ್ಬರು ಯುವಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮೊದಲ ಬಾರಿ ಮತದಾನದ ಅರ್ಹತೆ ಪಡೆದಿದ್ದ ಯುವಕರು, ಮತದಾನದ ಮೊದಲ ಕ್ಷಣವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು, ‘ರೀಲ್ಸ್’ ವಿಡಿಯೊ ಮಾಡಲು ಮುಂದಾಗಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.com ಗೆ ಭೇಟಿ ಕೊಡಿ

ರಾಮಾಯಣ: ಜಗತ್ತಿನಾದ್ಯಂತ ಪಸರಿಸಿದ ಸಾಂಸ್ಕೃತಿಕ ಪರಂಪರೆ

ಯು.ಟಿ. ಆಯಿಷಾ ಫರ್ಝಾನ

ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಲುವಾಂಗ್ ಪ್ರಬಾಂಗ್‌ನ ರಾಯಲ್ ಥಿಯೇಟರ್ ಪ್ರದರ್ಶಿಸಿದ ಫಲಕ್ ಫಲಮ್ ಅಥವಾ ಫ್ರಾ ಲಕ್ ಫ್ರಾ ರಾಮ್ ಎಂದು ಕರೆಲಾಗುವ ಲಾವೋ ರಾಮಾಯಣದ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಈ ವಿಚಾರ ಬಂದಾಗ ಕುಮಾರವ್ಯಾಸನ ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲ್ಲಿ ಕಾಲಿಡಲು ತೆರಪಿಲ್ಲ ಎಂದು ಉದ್ಗಾರ ಮಾಡಿ ಮಹಾಭಾರತದ ಕಡೆ ವಾಲಿಕೊಂಡ ರೋಚಕ ಮಾಹಿತಿ ನೆನಪಾಗುತ್ತದೆ. ಹಾಗಂತ ಅನಂತರ ಬಂದವರಾರೂ ರಾಮಾಯಣ ಬರೆಯದೇ ಬಿಟ್ಟಿಲ್ಲ. 12 ನೇ ಶತಮಾನದಲ್ಲಿ ಬಂದ ತೊರವೆ ನರಹರಿಯ ತೊರವೆ ರಾಮಾಯಣ, ನಾಗಚಂದ್ರನ ರಾಮಚಂದ್ರಚರಿತ ಪುರಾಣಗಳು ಬಂದವು. ಮುಂದೆ 17ನೇ ಶತಮಾನದಲ್ಲಿ ಪಾರ್ತಿ ಸುಬ್ಬ ಬರೆದ ಯಕ್ಷಗಾನ ಪ್ರಸಂಗಗಳಲ್ಲಿ ರಾಮಾಯಣದ ಎಲ್ಲಾ ಪಾತ್ರಗಳು ಗೆಜ್ಜೆ ಕಟ್ಟಿದವು. ಹಾಗೆಯೇ ಕೇರಳದ ಮಲಬಾರ್ ಪ್ರಾಂತ್ಯದಲ್ಲಿ ಬ್ಯಾರಿ ಭಾಷೆಯಲ್ಲಿ ಮಾಪಿಳ್ಳೆ ರಾಮಾಯಣವು ಇದೆ. ಕನ್ನಡ ಜನಪದದಲ್ಲಿ ಇರುವ ಗೊಂಡ ರಾಮಾಯಣವು ಆದಿವಾಸಗಳ ಕಣ್ಣಿನಲ್ಲಿ ಕಂಡ ರಾಮನ ವಿಶೇಷ ಕಥನ. ತುಳುವಿನಲ್ಲಿ ಮಂದಾರ ರಾಮಾಯಣವಿದೆ.

> ವಿಶ್ವದ ನಾನಾ ಭಾಗಗಳಲ್ಲಿ ರಾಮಾಯಣದ ಹಲವು ಆವೃತ್ತಿಗಳಿವೆ. ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಹಲವು ಮಜಲುಗಳಲ್ಲಿ ಬೇರೂರಿರುವ ರಾಮಾಯಣದ ಕಥೆಯು ಹೊಸ ಹೊಳಹುಗಳನ್ನು ನೀಡುತ್ತಲೇ ಬಂದಿದೆ. ಯುಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ - 1, ಕೆಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ -1, ಸೇರಿ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೇಳಬಹುದಾದ ಪೂರಕ ಮಾಹಿತಿಯಿದು.

ಹಲವು ರಾಮಾಯಣದ ಆವೃತ್ತಿಗಳು

ಹೀಗೆ ಅದ್ಭುತ ರಾಮಾಯಣ, ಆಧ್ಯಾತ್ಮ ರಾಮಾಯಣ, ಆನಂದ ರಾಮಾಯಣ, ಪಉಮ ಚರಿಯ, ಪದ್ಮಚರಿತ, ರಾಮಾಯಣ ದರ್ಶನಂ ಹೀಗೆ ರಾಮಾಯಣದ್ದೊಂದು ಕೊನೆಯಿಲ್ಲದ ಲೋಕ. ಈ ನಿಟ್ಟಿನಲ್ಲಿ ಏಷ್ಯಾ ಖಂಡದಲ್ಲಿ ಪ್ರಚಲಿತದಲ್ಲಿರುವ ಕೆಲವು ಪ್ರಮುಖ ರಾಮಾಯಣದ ಆವೃತ್ತಿಗಳನ್ನು ನೋಡೋಣ.



- ರಾಮಾಯಣವು ಲಾವೋಸ್‌ನಲ್ಲಿ ಪ್ರಸಿದ್ಧವಾದ ಮಹಾಕಾವ್ಯವಾಗಿ ಪರಿಗಣಿಸಲ್ಪಟ್ಟಿದ್ದು ಇದು ಭಾರತ ಮತ್ತು ಲಾವೋಸ್ ನಡುವಿನ ಆಳವಾದ ಬೇರೂರಿರುವ ಸಾಂಸ್ಕೃತಿಕ ಮತ್ತು ನಾಗರಿಕ ಸಂಬಂಧಗಳನ್ನು ಸಂಕೇತಿಸುತ್ತದೆ.
- ಶತಮಾನಗಳಿಂದ, ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳ ವಿವಿಧ ಅಂಶಗಳನ್ನು ಲಾವೋಸ್‌ನ ಜನರು ನಿರಂತರ ಆಚರಣೆಯ ಮೂಲಕ ಸಂರಕ್ಷಿಸಿಕೊಂಡು ಬಂದಿದ್ದಾರೆ.
- ಲಾವೋಸ್‌ನಲ್ಲಿರುವ ವ್ಯಾಟ್ ಫೌ ದೇವಾಲಯ ಮತ್ತು ಸಂಬಂಧಿತ ಸ್ಮಾರಕಗಳ ಮರುಸ್ಥಾಪನೆಯಲ್ಲಿ ಭಾರತದ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಹೆಚ್ಚಿನ ಮುತುವರ್ಜಿ ವಹಿಸಿವೆ. ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿ ಗೃಹ ವ್ಯವಹಾರಗಳ ಸಚಿವರು, ಶಿಕ್ಷಣ ಮತ್ತು ಕ್ರೀಡಾ ಸಚಿವರು, ಬ್ಯಾಂಕ್ ಆಫ್ ಲಾವೊ ಪಿಡಿಆರ್ ಗವರ್ನರ್ ಮತ್ತು ವಿಯೆಂಟಿಯಾನ್ ಮೇಯರ್ ಮುಂತಾದ ಗಣ್ಯರು ಭಾಗವಹಿಸಿದ್ದರು.
ಬೌದ್ಧ ಪರಂಪರೆ ಕೂಡಾ ಭಾರತ ಮತ್ತು ಲಾವೋಸ್ ನಡುವಿನ ಪ್ರಾಚೀನ ನಾಗರಿಕ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುತ್ತದೆ.

ಪ್ರಪಂಚದಾದ್ಯಂತ ಇರುವ ವಿವಿಧ ರಾಮಾಯಣಗಳು

1. **ಭಾರತ:** ವಾಲ್ಮೀಕಿ ಋಷಿಯಿಂದ ರಚಿಸಲಾದ ಮೂಲ ಸಂಸ್ಕೃತ ಆವೃತ್ತಿಯನ್ನು ರಾಮಾಯಣದ ಮೊದಲ ಮತ್ತು ಅತ್ಯಂತ ಅಧಿಕೃತ ಆವೃತ್ತಿ ಎಂದು ಪರಿಗಣಿಸಲಾಗಿದೆ. ಅದರ ಜತೆಗೆ ಹಿಂದಿಯಲ್ಲಿ ತುಳಸಿದಾಸರ ರಾಮಚರಿತಮಾನಸ, ತಮಿಳಿನಲ್ಲಿ ಕಂಬ ರಾಮಾಯಣ ಮತ್ತು ಮಲಯಾಳಂನಲ್ಲಿ ಅಧ್ಯಾತ್ಮ ರಾಮಾಯಣಗಳಂಥ ಹಲವು ಪ್ರಾದೇಶಿಕ ರೂಪಾಂತರಗಳು ಅಸ್ತಿತ್ವದಲ್ಲಿವೆ.
2. **ಲಾವೋಸ್ :** ಫ್ರಾ ಲಕ್ ಫ್ರಾ ರಾಮ್, ರಾಮಾಯಣದ ಲಾವೊ ಆವೃತ್ತಿಯಾಗಿದ್ದು ಇದು ಸ್ಥಳೀಯ ಸಂಪ್ರದಾಯದಲ್ಲಿ ಆಳವಾಗಿ ಬೇರೂರಿದ ಕಥಾನಕವಾಗಿದೆ. ಭಾರತ ಮತ್ತು ಆಗ್ನೇಯ ಏಷ್ಯಾದ ನಡುವಿನ ನಿರಂತರ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಪರ್ಕಗಳನ್ನು ಪ್ರತಿಬಿಂಬಿಸುತ್ತದೆ.
3. **ಥಾಯ್ಲೆಂಡ್ :** ರಾಮಾಯಣದ ಥಾಯ್ ಆವೃತ್ತಿಯನ್ನು ರಾಮಾಕೀನ್ ಎಂದು ಕರೆಯಲಾಗುತ್ತದೆ. ಇದು ರಾಮಾಯಣದ ಜತೆಗೆ ಸ್ಥಳೀಯ ನಂಬಿಕೆಗಳು, ಕಲೆ ಮತ್ತು ಸಂಸ್ಕೃತಿಯನ್ನು ಸಂಯೋಜಿಸುತ್ತದೆ. ಇದನ್ನು ಸಾಂಪ್ರದಾಯಿಕ ನೃತ್ಯಪ್ರಕಾರಗಳಲ್ಲಿ ಮತ್ತು ರಂಗಭೂಮಿಯಲ್ಲಿ ಪ್ರದರ್ಶಿಸಲಾಗುತ್ತದೆ.
4. **ಕಾಂಬೋಡಿಯಾ :** ರೀಮ್ಕರ್ ಎನ್ನುವುದು ರಾಮಾಯಣದ ಕಾಂಬೋಡಿಯನ್ ಆವೃತ್ತಿಯಾಗಿದೆ. ಇದು ದೇಶದಲ್ಲಿ ಸಾಂಪ್ರದಾಯಿಕ ನೃತ್ಯ, ರಂಗಭೂಮಿ ಮತ್ತು ಮ್ಯೂರಲ್ ಕಲೆಯ ಮೇಲೆ ತನ್ನ ಆಳವಾದ ಪ್ರಭಾವವನ್ನು ಬೀರಿದೆ.
5. **ಇಂಡೋನೇಷ್ಯಾ :** ರಾಮಾಯಣ ಕಕಾವಿನ್ , ರಾಮಾಯಣದ ಜಾವಾನೀಸ್ ರೂಪಾಂತರವಾಗಿದ್ದು, ಭಾರತೀಯ ನಿರೂಪಣಾ ಸಂಪ್ರದಾಯಗಳನ್ನು ಜಾವಾನೀಸ್ ಸಂಸ್ಕೃತಿಯೊಂದಿಗೆ ಸಂಯೋಜಿಸುತ್ತದೆ. ಇಂಡೋನೇಷ್ಯಾದಲ್ಲಿ ಇದನ್ನು ಸಾಂಪ್ರದಾಯಿಕ ನೆರಳು ಬೊಂಬೆ ರಂಗಪ್ರದರ್ಶನವಾದ ವಯಾಂಗ್ ಕುಲಿಟ್ ಮೂಲಕ ಪ್ರದರ್ಶಿಸಲಾಗುತ್ತದೆ.
6. **ಮ್ಯಾನ್ಮಾರ್ (ಬರ್ಮಾ) :** ಯಮ ಜಟ್ಡಾವ್ ಎಂದು ಕರೆಯಲಾಗುವ ಬರ್ಮೀಸ್ ರಾಮಾಯಣವು ಮ್ಯಾನ್ಮಾರ್‌ನ ಸ್ಥಳೀಯ ಸಂಪ್ರದಾಯಗಳೊಂದಿಗೆ ಭಾರತೀಯ ಸಾಂಸ್ಕೃತಿಕ ಪರಂಪರೆಯ ಏಕೀಕರಣವನ್ನು ಪ್ರತಿಬಿಂಬಿಸುತ್ತದೆ. ವಿಶೇಷವಾಗಿ ಅದರ ಶಾಸ್ತ್ರೀಯ ಪ್ರದರ್ಶನಗಳ ಮೂಲಕ ರಾಮಾಯಣ ಪರಂಪರೆಯನ್ನು ಜೀವಂತವಾಗಿ ಇಡಲಾಗಿದೆ.
7. **ನೇಪಾಳ:** ನೇಪಾಳ ಭಾಸ ರಾಮಾಯಣವು ರಾಮಾಯಣದ ಪ್ರಮುಖ ರೂಪಾಂತರಗಳಲ್ಲಿ ಒಂದಾಗಿದೆ. ರಾಮಾಯಣವನ್ನು ಮೈಥಿಲಿ ಆವೃತ್ತಿಯಲ್ಲಿರುವಂತೆ ಇತರ ರೂಪಗಳಲ್ಲಿ ಕೂಡಾ ವ್ಯಾಪಕವಾಗಿ ಆಚರಿಸಲಾಗುತ್ತದೆ.
8. **ಶ್ರೀಲಂಕಾ :** ಶ್ರೀಲಂಕಾದಲ್ಲಿ ರಾಮಾಯಣವು ಅತ್ಯಂತ ಪ್ರಮುಖವಾದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪ್ರಾಮುಖ್ಯವನ್ನು ಹೊಂದಿದೆ. ಮಹಾಕಾವ್ಯವು ಸಾಮಾನ್ಯವಾಗಿ ಶ್ರೀಲಂಕಾದ ಪುರಾಣ ಕತೆಗಳಿಗೆ ಸಂಬಂಧಿಸಿದೆ. ವಿಶೇಷವಾಗಿ ರಾವಣನನ್ನು ಶ್ರೀಲಂಕಾದ ಜಾನಪದದಲ್ಲಿ ಪ್ರಮುಖ ಪಾತ್ರವಾಗಿ ಚಿತ್ರಿಸಲಾಗಿದೆ.
9. **ಮಲೇಷ್ಯಾ :** ರಾಮಾಯಣವು ಮಲೇಷ್ಯಾದ ಸಾಂಸ್ಕೃತಿಕ ಪರಂಪರೆಯ ಭಾಗವಾಗಿದೆ. ವಿಶೇಷವಾಗಿ ಭಾರತೀಯ ವಲಸೆಗಾರರು ಅಲ್ಲಿ ಹೆಚ್ಚಾಗಿದ್ದು, ಮಹಾಕಾವ್ಯದ ಪ್ರದರ್ಶನಗಳನ್ನು ಸ್ಥಳೀಯ ಭಾಷೆಗಳಲ್ಲಿಯೇ ಪ್ರದರ್ಶಿಸಲಾಗುತ್ತದೆ.
10. **ಪಿಲಿಫೈನ್ಸ್ :** ಮಹಾರಾಡಿಯಾ ಲವಾನಾ ಎಂಬುದು ಫಿಲಿಪೈನ್ಸ್‌ನ ಮರನಾವೊ ಜನರಿಂದ ನಿರೂಪಿಸಲಾದ ರಾಮಾಯಣದ ಸ್ಥಳೀಯ ಆವೃತ್ತಿಯಾಗಿದ್ದು, ಇದು ರಾವಣನ ಪಾತ್ರವನ್ನು ಕೇಂದ್ರೀಕರಿಸುತ್ತದೆ.

❖

ಥಾಯ್ಲೆಂಡ್‌ನಲ್ಲಿ ರಾಮಾಯಣದ ಪ್ರದರ್ಶನ

ರಾಮಾಯಣವು ತನ್ನ ಆಳವಾದ ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಪ್ರಭಾವದಿಂದ ಜನಮಾನಸದಲ್ಲಿ ಬೇರೂರಿದೆ. ಬದುಕಿನ ಒಳನೋಟಗಳು ರೂಪುಗೊಳ್ಳಲು ವಿಶೇಷ ಪ್ರಭಾವವನ್ನು ಬೀರಿದೆ. ಅವುಗಳಲ್ಲಿ ಕೆಲವು ಹೀಗಿವೆ.

ನೈತಿಕ ಮೌಲ್ಯಗಳು: ರಾಮಾಯಣ, ಅದರ ಕೇಂದ್ರ ವಿಷಯಗಳಾದ ಸದಾಚಾರ (ಧರ್ಮ), ಕರ್ತವ್ಯ, ನಿಷ್ಠೆ ಮತ್ತು ನ್ಯಾಯದ ಮೂಲಕ ಲಕ್ಷಾಂತರ ಜನರಿಗೆ ನೈತಿಕ ದಿಕ್ಸೂಚಿಯನ್ನು ಒದಗಿಸುತ್ತದೆ. ಇದು ಸತ್ಯಗುಣ, ಕೊಟ್ಟಮಾತಿನಂತೆ ನುಡಿಯುವ ಮಹತ್ವ, ತ್ಯಾಗ ಮತ್ತು ಸಂಬಂಧಗಳಿಗೆ ಗೌರವ ನೀಡುವಂತ ಮೌಲ್ಯಗಳನ್ನು ಕಲಿಸುತ್ತದೆ. ಸಾಮಾಜಿಕ ರೂಢಿಗಳು ಮತ್ತು ವೈಯಕ್ತಿಕ ನಡವಳಿಕೆಯನ್ನು ರೂಪಿಸುತ್ತದೆ.

ಸಾಂಸ್ಕೃತಿಕ ಗುರುತು ಮತ್ತು ಸಂಪ್ರದಾಯಗಳು : ಭಾರತ, ನೇಪಾಳ, ಶ್ರೀಲಂಕಾ, ಥಾಯ್ಲೆಂಡ್, ಇಂಡೋನೇಷಿಯಾ ಮತ್ತು ಲಾವೋಸ್‌ನಂಥ ದೇಶಗಳ ಸಾಂಸ್ಕೃತಿಕ ರಚನೆಯಲ್ಲಿ ರಾಮಾಯಣವು ಆಳವಾಗಿ ಹೆಣೆಯಲಾಗಿದೆ. ರಾಮಾಯಣವು ಅಲ್ಲಿಯೂ ರಾಷ್ಟ್ರೀಯ ಹೆಮ್ಮೆ ಮತ್ತು ಸಾಂಸ್ಕೃತಿಕ ಗುರುತಿನ ಮೂಲವಾಗಿದೆ. ಅದರ ಪಾತ್ರಗಳು ಮತ್ತು ಘಟನೆಗಳಿಗೆ ಮೀಸಲಾದ ಹಬ್ಬಗಳು, ಕಲಾ ಪ್ರಕಾರಗಳು ಮತ್ತು ಆಚರಣೆಗಳು ಈ ಮಹಾಕಾವ್ಯದ ವ್ಯಾಪಕತೆಯನ್ನು ಹೆಚ್ಚಿಸಿವೆ. ಉದಾಹರಣೆಗೆ ಭಾರತದಲ್ಲಿ ರಾಮಲೀಲಾ ಪ್ರದರ್ಶನಗಳು ಮತ್ತು ಥಾಯ್ಲೆಂಡ್‌ನಲ್ಲಿ ರಾಮಾಕೀನ್ ಅನ್ನು ರಾಷ್ಟ್ರೀಯ ಸಂಪ್ರದಾಯಗಳಾಗಿ ಆಚರಿಸಲಾಗುತ್ತದೆ.

ಆಧ್ಯಾತ್ಮಿಕ ಪ್ರಭಾವ : ರಾಮಾಯಣವನ್ನು ಆಧ್ಯಾತ್ಮಿಕ ಪಠ್ಯವಾಗಿ ಪೂಜಿಸಲಾಗುತ್ತದೆ. ವಿಶೇಷವಾಗಿ ಹಿಂದೂ ಧರ್ಮ, ಬೌದ್ಧ ಧರ್ಮ ಮತ್ತು ಜೈನ ಧರ್ಮಗಳಲ್ಲಿ . ಇದು ಭಕ್ತಿ, ದೇವರ ಸ್ವರೂಪ ಮತ್ತು ಮೋಕ್ಷದ ಮಾರ್ಗದ ಬಗ್ಗೆ ಮಾರ್ಗದರ್ಶನ ನೀಡುತ್ತದೆ. ಪ್ರಪಂಚದಾದ್ಯಂತ ಜನರು ರಾಮನ ಸಚ್ಚಾರಿತ್ರ್ಯ, ಲಕ್ಷ್ಮಣನ ಸೋದರಪ್ರೇಮ, ಸೀತೆಯ ಪಾವಿತ್ರ್ಯ ಮತ್ತು ಹನುಮಂತನ ಸ್ವಾಮಿಭಕ್ತಿಯಂಥ ಸದ್ಗುಣಗಳಿಂದ ಸ್ಫೂರ್ತಿ ಪಡೆಯುತ್ತಿದ್ದಾರೆ. ಇದು ಭಕ್ತಿ ಮತ್ತು ನೈತಿಕ ಜೀವನವನ್ನು ಪ್ರೋತ್ಸಾಹಿಸುತ್ತದೆ.

ಸಾಹಿತ್ಯ ಮತ್ತು ಕಲಾತ್ಮಕ ಸ್ಫೂರ್ತಿ : ರಾಮಾಯಣವು ಕವಿತೆ ಮತ್ತು ರಂಗಭೂಮಿಯಿಂದ ಹಿಡಿದು ಚಿತ್ರಕಲೆ ಮತ್ತು ಶಿಲ್ಪಕಲೆಯಂತಹಾ ಅಸಂಖ್ಯಾತ ಸಾಹಿತ್ಯ ಮತ್ತು ಕಲಾತ್ಮಕ ಸೃಷ್ಟಿಗಳಿಗೆ ವಿಶೇಷ ಸ್ಫೂರ್ತಿಯನ್ನು ನೀಡಿದೆ. ಆಗ್ನೇಯ ಏಷ್ಯಾದಲ್ಲಿ, ರಾಮಾಯಣವು ಇಂಡೋನೇಷ್ಯಾದ ವಯಾಂಗ್ ಕುಲಿತ್ (ನೆರಳು ಬೊಂಬೆಯಾಟ) ಮತ್ತು ಥಾಯ್ಲೆಂಡ್‌ನ ಖೋನ್ ನೃತ್ಯದಂತಹ ಸಾಂಪ್ರದಾಯಿಕ ನೃತ್ಯ ಪ್ರಕಾರಗಳನ್ನು ಕೂಡಾ ಗಾಢವಾಗಿ ಪ್ರಭಾವಿಸಿದೆ. ಕಾಂಬೋಡಿಯಾದಲ್ಲಿನ ಅಂಕೋರ್ ವಾಟ್ ಮತ್ತು ಲಾವೋಸ್‌ನ ವ್ಯಾಟ್ ಫೌ ದೇವಾಲಯದಂತಹ ದೇವಾಲಯಗಳು ಮತ್ತು ಸ್ಮಾರಕಗಳಲ್ಲಿನ ಪ್ರಾಚೀನ ವಾಸ್ತುಶಿಲ್ಪದ ವಿನ್ಯಾಸಗಳನ್ನು ಈ ಕತೆಯು ಪ್ರೇರೇಪಿಸಿದೆ.

ಸಾಮಾಜಿಕ ಒಗ್ಗಟ್ಟು ಮತ್ತು ಹಬ್ಬಗಳು : ಭಾರತದಲ್ಲಿ ದೀಪಾವಳಿಯಂತಹ ಹಬ್ಬಗಳ ಸಂದರ್ಭದಲ್ಲಿ ಜನರು ರಾಮನು ಅಯೋಧ್ಯೆಗೆ ಹಿಂದಿರುಗಿ ಬರುವ ಪ್ರಸಂಗದ ಸ್ಮರಣಾರ್ಥ ಆಚರಿಸುವ ಸಂಭ್ರಮ ಮತ್ತು ರಾಮಲೀಲಾದಂತಹ ಘಟನೆಗಳು ಸಾಮಾಜಿಕ ಐಕ್ಯತೆ ಮತ್ತು ಒಗ್ಗಟ್ಟನ್ನು ಉತ್ತೇಜಿಸುತ್ತವೆ. ಪ್ರಪಂಚದಾದ್ಯಂತ ಲಕ್ಷಾಂತರ ಜನರು ಆಚರಿಸುವ ಈ ಆಚರಣೆಗಳು ಧಾರ್ಮಿಕ ಗಡಿಗಳನ್ನು ಮೀರಿ ಹಲವು ಸಮುದಾಯಗಳನ್ನು ಕೂಡಾ ಒಟ್ಟಿಗೆ ತರುತ್ತವೆ.

ರಾಜತಾಂತ್ರಿಕ ಮತ್ತು ಸಾಂಸ್ಕೃತಿಕ ಸಂಬಂಧಗಳು : ರಾಮಾಯಣದ ಹಂಚಿಕೆಯ ಪರಂಪರೆಯು ದೇಶಗಳ ನಡುವೆ, ವಿಶೇಷವಾಗಿ ದಕ್ಷಿಣ ಮತ್ತು ಆಗ್ನೇಯ ಏಷ್ಯಾದಲ್ಲಿ ರಾಜತಾಂತ್ರಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸುತ್ತದೆ. ಇದು ಈ ವಲಯದಲ್ಲಿನ ಸಾಮಾನ್ಯ ಇತಿಹಾಸವನ್ನು ಪ್ರತಿಬಿಂಬಿಸುತ್ತದೆ. ಮಹಾಕಾವ್ಯದ ಜತೆಗೆ ಹಂಚಿಕೊಳ್ಳುವ ಸಂಬಂಧವು ಸಾಂಸ್ಕೃತಿಕ ತಂತುವಿನೊಂದಿಗೆ ಹೆಣೆದುಕೊಂಡು ರಾಷ್ಟ್ರಗಳ ನಡುವೆ ತಿಳಿವಳಿಕೆ ಮತ್ತು ಸಹಕಾರವನ್ನು ಹೆಚ್ಚಿಸುತ್ತದೆ.

ಶೈಕ್ಷಣಿಕ ಚೌಕಟ್ಟು : ರಾಮಾಯಣವು ಶೈಕ್ಷಣಿಕ ಸಾಧನವಾಗಿ ಮಾರ್ಪಟ್ಟಿದೆ. ವಿದ್ಯಾರ್ಥಿಗಳಿಗೆ ಸದ್ಗುಣಗಳ ಪ್ರಾಮುಖ್ಯತೆ, ನಾಯಕತ್ವದ ಪಾಠಗಳನ್ನು ಕಲಿಸುತ್ತದೆ. ಶಾಲೆಗಳು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ನೈತಿಕತೆ ಮತ್ತು ನೈತಿಕತೆಯ ಪಾಠಗಳನ್ನು ನೀಡಲು ಈ ಮಹಾಕಾವ್ಯವನ್ನು ಬಳಸಲಾಗುತ್ತದೆ. ರಾಮಾಯಣದ ಪ್ರಭಾವವು ಸಾಹಿತ್ಯ ಮತ್ತು ಧರ್ಮವನ್ನು ಮೀರಿ ವಿಸ್ತರಿಸಿದೆ.

ಇದು ಪ್ರಪಂಚದಾದ್ಯಂತದ ಜನರ ಜೀವನ, ಸಾಮಾಜಿಕ ಪದ್ಧತಿಗಳು, ಹಬ್ಬಗಳು ಮತ್ತು ಸಾಂಸ್ಕೃತಿಕ ಗುರುತುಗಳನ್ನು ಪ್ರಭಾವಿಸಿದೆ. ಹಾಗೂ ನಾಗರಿಕರಿಗೆ ವಿಶ್ವ ದೃಷ್ಟಿಕೋನ ಮತ್ತು ಮೌಲ್ಯಗಳನ್ನು ರೂಪಿಸುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose The Concert

4.'They had come with high hopes'

Ans(a) They had come with hopes in the miracles of modern science. They hoped that An ant would be cured in the hospital and bounce back to normal life, and even take part in the tabletennis tournament.

b) If we were to go by the medical records, we have to say that their hopes wouldn't be fulfilled because doctors had given up their hope of curing the boy. They had asked the parents to take the boy home as they were under the impression that no treatment wouldhelp the boy. However, we cannot rule out the possibilities of a miraculous recovery which might fulfill the hopes of the parents.

c) The doctors told the parents to take the boy home and give him all that he liked. These are certainly words of despair because the doctors will come up with such advice only when they know that the patient cannot be cured and it is better to indulge him and make him happy rather than follow a strict regimen.

d) iii) family members.The Concert Lesson Extracts

5.'Her eyes filled with tears'. Were they tears of happiness or sorrow ? Give reasons.

Ans: They are definitely tears of sorrow. When her brother says that the opportunity of hearing Pandit Ravi Shankar is the chance of a lifetime it's ironic because the boy is not left with much of his life time. The sister who knows that the days of her brother are numbered can not overcome her sorrow and her eyes are filled with tears.

6.'Suddenly a daring thought came to her'. Can you guess what thought Smita had?

Ans:The daring thought must be to fulfill the desire of her brother of listening to Pandit Ravi Shankar. The sister must have decided to give her brother what the brother thought was the chance of a life time. How exactly she planned to do it is not known to the readers at this point in time.

Share your Responses

1.The word 'gasp', according to the dictionary, suggests – surprise or pain. Which meaning isrelevant in this context? (Para.10)

Ans: The meaning of the 'gasp' in this context is a pain.

2.As Smita sat listening to the music, she was spellbound. But all the while, her mind was echoing something else. What was that?

Ans: As Smita sat listening to the music, she was spellbound. But all the while, her mind was echoing the plan she had decided on the evening remained firmly in her mind.

3. Why does the writer use the word 'wriggled' to describe Smita's movement?

Ans: There was a great crowd and she was more anxious. Her heart beat was loud and she felt her knees were weak. So she cannot walk straight but she moved in a wriggled way.

4. Smita's nervousness is suggested by the phrase 'her heart beating loudly' in paragraph 12. Identify two more phrases that describe a similar state in the next paragraph

Ans: The two more phrases that describe Smita's nervousness are(i) her knees felt weak(ii) her tongue dried.

5.Did Smita tell what she had in her mind to the musicians? Who responded to her requestimmediately. What was the response?

Ans: Yes, Smita told completely what she had in her mind to the musicians were Immediately Ustad Allah Rakha responded to her request. The response was the next morning they would perform for the boy (her brother).

6. Do you think the response of the artists was unusual. If not, why?

Ans: Yes, the response of the artists was unusual. Generally, great artists are always busy and they had no time to listen or attend these types of requests. But his was a special case and these artists were very generous, they showed their humanity. Really it was appreciable.

7. The neighbours could not believe their eyes. Why do you think they felt like this?

Ans: The neighbours could not believe their eyes, because Pandit Ravi Shankar was very famous artist and very busy. It was very difficult to take his call-sheet. How can they believe such agreat person could come to this poor dwelling and gave a concert.

8. Read the last paragraph, which very effectively but briefly describes the end. Exchange your feedings with your partner.

Ans: The last paragraph evokes in the readers a mixed response. On the one hand it's heartening to know that the wish of the ailing boy is fulfilled. On the other, it's heart breaking to know that the boy died while listening to his favourite Sitar music. However, Smita, her parents, the musicians and all the dear ones of the boy would have moments of satisfaction of fulfilling what can be termed the last desire of the boy.

(Contd…….)

II PUC - CHEMISTRY

Coordination Compound

Multiple Choice Questions

1.Fac-mer isomerism is associated with which one of the following complexes?

a) $[M(AA)_2]$ (b) $[MA_3B_3]$
c) $[M(AA)_3]$ (d) $[MA_4B_2]$

Ans:(b) $[MA_3B_3]$

2. A coordination complex's core atom/ion is also known as ________

a) Bronsted-Lowry acid b) Lewis base
c) Lewis acid d) Bronsted-Lowry base

Answer: c

3.The IUPAC name of complex ion $[Fe(CN)_6]^{3-}$ is

a) Hexacyanidoiron(III)ion
b) Hexacyanatoferrate (III)ion
c) Hexacyanidoferrate (III)ion
d) Tricyanoiron(III)ion

Ans:- (c) Hexacyanidoferrate (III)ion

4.The geometry and magnetic behaviour of the complex $[Ni(CO)_4]$ are

a) Square planar and paramagnetic
b) Tetrahedral and diamagnetic
c) Square planar and diamagnetic
d) Tetrahedral and paramagnetic

Ans:- (b) Tetrahedral and diamagnetic

5. Which of the following has a coordination number as a feature?

a) Coordination entity b) Ligand
c) Central atom d) Coordination compound

Answer: c

6.Which type of isomerism is shown by the complex compounds $[Co(NH_3)_5Br]SO_4$ and $[Co(NH_3)_5SO_4]Br$

(a) Ionisation (b) Optical
(c) Linkage (d) Coordination

Answer:(a) Ionisation

7.Which of the following is a hexadentate ligand?

(a) $EDTA^{4-}$ (b) $(COO)_2^{2-}$
(c) en (d) NH_3

Ans:(a) $EDTA^{4-}$

Answer the following

11) Aqueous copper sulphate solution (blue in colour) gives:
(i) a green precipitate with aqueous potassium fluoride and
(ii) a bright green solution with aqueous potassium chloride. Explain these experimental results.

Ans: The blue colour of the aqueous $CuSO_4$ solution is because of the presence of $[Cu(H_2O)_4]^{2+}$ ions.

(i) So when KF is added, H_2O ligands are replaced by F^- ligands which yield green-coloured $[CuF_4]^{2+}$ ions.

[Cu(H2O)4]2++4F−→[CuF4]2−+4H2O

(ii) So when KCL is added, H_2O ligands are replaced by Cl^- ligands which yield bright green coloured $[CuCl_4]^{2+}$ ions.

[Cu(H2O)4]2++4Cl−→[CuCl4]2−+4H2O

12. What is the coordination entity formed when an excess of aqueous KCN is added to an aqueous solution of copper sulphate? Why is it that no precipitate of copper sulphide is obtained when $H_2S(g)$ is passed through this solution?

Ans:

2[CuSO4](aq)+10KCN(aq)→2K2[Cu(CN)4](aq)+2 K2SO4(aq)+(CN)2

Therefore, the coordination entity obtained in the above process is $K_2[Cu(CN)_4]$. As the above coordination entity is highly stable, it does not ionise to yield Cu^{2+} ions. Thus, no precipitate is obtained when hydrogen sulphide gas is bubbled through it.

13. Discuss the nature of bonding in the following coordination entities on the basis of valence bond theory:

(i) $[Fe(CN)_6]^{4-}$ (ii) $[FeF_6]^{3-}$
(iii) $[Co(C_2O_4)_3]^{3-}$ (iv) $[CoF_6]^{3-}$

Ans:

(i) $[Fe(CN)_6]^{4-}$

In this coordination complex, the oxidation state of Fe is +3.

Fe^{2+}: Electronic configuration is $3d^6$

Orbitals of Fe^{2+} ion:



Since CN^- is a strong field ligand, it causes the unpaired 3d electrons to pair up:



As there are six ligands around the central metal ion, the most practical hybridisation is d^2sp^3; d^2sp^3 hybridised orbitals of Fe^{2+} are:

6 electron pairs from CN^- ions take the place of the six hybrid d^2sp^3 orbitals.

Then,



6 pairs of electrons from 6 CN- ions

(Contd….)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

'ನಿವೇಶನ ಅರ್ಜಿಗೆ ಮೊದಲೇ ಶುಲ್ಕ ಪಾವತಿಸಿದ ಸಿ.ಎಂ ಪತ್ನಿ'

ಮೈಸೂರು: 'ಮುಡಾ 14 ನಿವೇಶನಗಳ ನೋಂದಣಿಗೆ ಖಾಸಗಿ ಹಾಜರಾತಿ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಜಿಲ್ಲಾ ನೋಂದಣಾಧಿಕಾರಿಗೆ ಅರ್ಜಿ ಸಲ್ಲಿಸುವ ಒಂದು ದಿನ ಮುನ್ನವೇ, ಖಾಸಗಿ ನೋಂದಣಿಗೆ ಶುಲ್ಕ ಪಾವತಿಸಲಾಗಿದೆ. ಇದು ಸಿದ್ದರಾಮಯ್ಯ ಪ್ರಭಾವದ ಮತ್ತೊಂದು ದಾಖಲೆ' ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಈ ಬಗ್ಗೆ ಫೇಸ್‌ಬುಕ್ ಖಾತೆಯಲ್ಲಿ ಬುಧವಾರ ಪೋಸ್ಟ್ ಹಾಕಿರುವ ಅವರು, '2022ರ ಜ. 12ರಂದು ಪಾರ್ವತಿ ಅವರು ಖಾಸಗಿ ಹಾಜರಾತಿ ಪಡೆದು ನೋಂದಣಿ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದಾರೆ. ಆದರೆ ಜ.11ರಂದೇ ಶುಲ್ಕ ಪಾವತಿಯಾಗಿದೆ. ಈ ರೀತಿ ಮಾಡಲು ಕಾನೂನಿನಲ್ಲಿ ಅವಕಾಶ ಇದೆಯೇ' ಎಂದು ಪ್ರಶ್ನಿಸಿದ್ದಾರೆ.

ಕೇಂದ್ರಕ್ಕೆ ವಿಶ್ವೇಶ್ವರಯ್ಯ ಜಲ ನಿಗಮ ಪ್ರಸ್ತಾವನೆ

ಎತ್ತಿನಹೊಳೆ: ಮತ್ತೆ 500 ಎಕರೆ ಅರಣ್ಯ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬರಪೀಡಿತ ಬಯಲುಸೀಮೆಯ ಜಿಲ್ಲೆಗಳಿಗೆ ನೀರುಣಿಸುವ ಉದ್ದೇಶ ಹೊಂದಿರುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗೆ ಮತ್ತೆ 500 ಎಕರೆ (199 ಹೆಕ್ಟೇರ್) ಅರಣ್ಯ ಬಳಸಿಕೊಳ್ಳಲು ವಿಶ್ವೇಶ್ವರಯ್ಯ ಜಲ ನಿಗಮ ತೀರ್ಮಾನಿಸಿದೆ. ಗುರುತ್ವಾಕರ್ಷಣ ಕಾಲುವೆ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ ಅರಣ್ಯ ಬಳಸಿಕೊಳ್ಳಲು ಅನುಮೋದನೆ ನೀಡುವಂತೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ನಿಗಮ ಪ್ರಸ್ತಾವನೆ ಸಲ್ಲಿಸಿದೆ.

ಯೋಜನೆಯ ಮೊದಲನೇ ಹಂತ ಎರಡು ತಿಂಗಳ ಹಿಂದೆಯಷ್ಟೇ ಸಾಕಾರಗೊಂಡಿತ್ತು. ಅದೇ ಸಮಯದಲ್ಲಿ, ಇಡೀ ಯೋಜನೆಯ ಕಾರ್ಯಸಾಧ್ಯತಾ ವರದಿ ಸಲ್ಲಿಸಬೇಕು ಎಂದು ಅರಣ್ಯ ಸಚಿವಾಲಯ ತಾಕೀತು ಮಾಡಿತ್ತು.

'ಈ ಯೋಜನೆಗಾಗಿ 3 ಸಾವಿರ ಎಕರೆ ಜಾಗ ಬಳಸಿಕೊಳ್ಳಲಾಗುತ್ತಿದೆ. ಅದರಲ್ಲಿ ಅರಣ್ಯ ಪ್ರದೇಶದ ಪಾಲು ಶೇ 50ರಷ್ಟಿದೆ. ಈ ಅರಣ್ಯ ಬಳಕೆಗೆ ರಾಜ್ಯ ಸರ್ಕಾರ ಒಂದೇ ಹಂತದಲ್ಲಿ ಪ್ರಸ್ತಾವನೆ ಸಲ್ಲಿಸುತ್ತಿಲ್ಲ. ಪ್ರತ್ಯೇಕ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸುತ್ತಿದೆ. ಇಂತಹ ಧೋರಣೆ ಸರಿಯಲ್ಲ' ಎಂದು ಸಚಿವಾಲಯವು ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಇದೀಗ, ನಿಗಮವು ಮತ್ತೊಂದು ಪ್ರಸ್ತಾವನೆ ಸಲ್ಲಿಸಿದೆ.

ಗುರುತ್ವಾಕರ್ಷಣೆಯ ಕಾಲುವೆ ನಿರ್ಮಾಣಕ್ಕೆ ಹಾಸನ ಜಿಲ್ಲೆಯ ಏಳು ಗ್ರಾಮಗಳು ಹಾಗೂ ತುಮಕೂರು ಜಿಲ್ಲೆಯ ಕಂಚೀನಹಳ್ಳಿ ಹಾಗೂ ಇತರ ಆರು ಗ್ರಾಮಗಳ ಮೀಸಲು ಅರಣ್ಯ ಪ್ರದೇಶ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಯೋಜನೆಗಾಗಿ ಕನಿಷ್ಠ ಪ್ರಮಾಣದ ಅರಣ್ಯ ಬಳಸಿಕೊಳ್ಳಲಾಗುತ್ತಿದೆ ಎಂದು ನಿಗಮವು ಸಮಜಾಯಿಷಿ ನೀಡಿದೆ.

ಯೋಜನೆಗಾಗಿ ಹಾಸನ ಜಿಲ್ಲೆಯಲ್ಲಿ 819 ಹೆಕ್ಟೇರ್ ಅರಣ್ಯೇತರ ಹಾಗೂ 159 ಹೆಕ್ಟೇರ್ ಅರಣ್ಯ, ತುಮಕೂರು ಜಿಲ್ಲೆಯಲ್ಲಿ 1,215 ಹೆಕ್ಟೇರ್ ಅರಣ್ಯೇತರ ಹಾಗೂ 33 ಹೆಕ್ಟೇರ್ ಅರಣ್ಯ ಭೂಮಿ ಬಳಸಿಕೊಳ್ಳಲಾಗುತ್ತದೆ.

ಅರಣ್ಯ ಇಲಾಖೆಯು ಪರಿಹಾರಾತ್ಮಕ ಅರಣ್ಯೀಕರಣದ ಯೋಜನೆಯನ್ನು ಸಲ್ಲಿಸಿಲ್ಲ ಎಂದು ಸಚಿವಾಲಯವು ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿತ್ತು. ಪರಿಹಾರಾತ್ಮಕ ಅರಣ್ಯೀಕರಣಕ್ಕೆ 159 ಹೆಕ್ಟೇರ್ ಗುರುತಿಸಲಾಗಿದೆ ಎಂದು ನಿಗಮವು ಪ್ರಸ್ತಾವನೆಯಲ್ಲಿ ತಿಳಿಸಿದೆ.

ಅಂಕಿ ಅಂಶಗಳು

₹23,251 ಕೋಟಿ — ಯೋಜನೆಯ ಪರಿಷ್ಕೃತ ಮೊತ್ತ

24 ಟಿಎಂಸಿ ಅಡಿ — ಯೋಜನೆಯಿಂದ ನೀರಿನ ಲಭ್ಯತೆ ನಿರೀಕ್ಷೆ

17,674 ಹೆಕ್ಟೇರ್ — ಜಲಾನಯನ ಪ್ರದೇಶ

512 ಮಿ.ಮೀ. — ಯೋಜನಾ ಪ್ರದೇಶದಲ್ಲಿ ಸರಾಸರಿ ಮಳೆ

'ಅನುಕಂಪದ ನೇಮಕ ಸ್ಥಾಪಿತ ಹಕ್ಕಲ್ಲ'

ನವದೆಹಲಿ (ಪಿಟಿಐ): ಅನುಕಂಪ ಆಧಾರಿತ ನೇಮಕಾತಿಯನ್ನು ಸರ್ಕಾರಿ ಉದ್ಯೋಗ ಪಡೆಯುವ ಸ್ಥಾಪಿತ ಹಕ್ಕು ಎಂದು ಪರಿಗಣಿಸುವಂತಿಲ್ಲ. ಅದು, ಸೇವೆಯಲ್ಲಿ ಇರುವಾಗಲೇ ಮೃತಪಡುವ ನೌಕರನೊಬ್ಬ ಹೊಂದಿರುವ ಸೇವಾ ಷರತ್ತು ಅಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

1997ರಲ್ಲಿ ನಿಧನರಾದ ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರ ಪುತ್ರನಿಗೆ ಅನುಕಂಪ ಆಧಾರಿತ ಉದ್ಯೋಗ ನೀಡಲು ನಿರ್ದೇಶಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ, ಅಹಸಾನುದ್ದೀನ್ ಅಮಾನುಲ್ಲಾ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠ, ಈ ಕುರಿತ ಅರ್ಜಿಯ ವಿಚಾರಣೆ ನಡೆಸಿತು.

'ಸಂಬಂಧಪಟ್ಟ ನೀತಿಗೆ ವಿರುದ್ಧವಾಗಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿಗೆ ಅನುಕೂಲವಾಗುವಂತೆ ಯಾವುದೇ ಕಾನೂನುಬಾಹಿರ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದು ಹೇಳಿದೆ.

ಕುಟುಂಬಕ್ಕೆಆಧಾರವಾಗಿದ್ದವ್ಯಕ್ತಿಯ ಮರಣದಿಂದ ಎದುರಾಗಬಹುದಾದ ತಕ್ಷಣದ ಆರ್ಥಿಕ ಸಂಕಷ್ಟವನ್ನು ಎದುರಿಸಲೆಂದು ಅನುಕಂಪ ಆಧಾರಿತ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಇದೇ ಕಾರಣಕ್ಕೆ ಇದನ್ನು ಸ್ಥಾಪಿತ ಹಕ್ಕು ಎಂದು ಪರಿಗಣಿಸುವಂತಿಲ್ಲ. ಅಲ್ಲದೇ, ಸಾಕಷ್ಟು ಸಮಯ ಕಳೆದ ನಂತರ ಉದ್ಯೋಗ ಪಡೆಯುವುದಾಗಿ ಪ್ರತಿಪಾದಿಸುವ ಹಕ್ಕು ಕೂಡ ಇರಲ್ಲ' ಎಂದೂ ಪೀಠ ಹೇಳಿತು.

ಏನಿದು ಪ್ರಕರಣ?: ಅರ್ಜಿದಾರ ಟಿಂಕು ಅವರ ತಂದೆ ಕಾನ್‌ಸ್ಟೆಬಲ್ ಜೈ ಪ್ರಕಾಶ್ ಅವರು ಸೇವೆಯಲ್ಲಿದ್ದಾಗ 1997ರಲ್ಲಿ ನಿಧನರಾದರು. ಆ ಸಮಯದಲ್ಲಿ ಟಿಂಕು ಏಳು ವರ್ಷದ ಬಾಲಕ. ಜೈ ಪ್ರಕಾಶ್ ಅವರ ಪತ್ನಿ ಅನಕ್ಷರಸ್ಥರಾಗಿದ್ದು, ಅನುಕಂಪ ಆಧಾರಿತ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿರಲಿಲ್ಲ.

ಬದಲಿಗೆ ಅವರು ತನ್ನ ಅಪ್ರಾಪ್ತ ವಯಸ್ಸಿನ ಮಗನ ಹೆಸರನ್ನು 'ಮೈನರ್ ರಿಜಿಸ್ಟರ್'ನಲ್ಲಿ ಸೇರಿಸುವಂತೆ ಕೋರಿದ್ದರು. ಮಗ ಪ್ರಾಪ್ತ ವಯಸ್ಸಿಗೆ ಬಂದಾಗ ಆತನಿಗೆ ಉದ್ಯೋಗ ದೊರೆಯಲಿ ಎಂಬುದು ಅವರ ಉದ್ದೇಶವಾಗಿತ್ತು.

1998ರಲ್ಲಿ ಹರಿಯಾಣ ಪೊಲೀಸ್ ಮಹಾ ನಿರ್ದೇಶಕರು ಟಿಂಕು ಹೆಸರನ್ನು ದಾಖಲಿಸಲು ಸೂಚನೆ ನೀಡಿದ್ದರು. ಇದು ಭವಿಷ್ಯದಲ್ಲಿ ಉದ್ಯೋಗ ದೊರೆಯುವ ಸಾಧ್ಯತೆಯನ್ನು ಸೂಚಿಸುತ್ತದೆ. ಟಿಂಕು ಪ್ರಾಪ್ತ ವಯಸ್ಸಿಗೆ ಬಂದ ಬಳಿಕ, 2008ರಲ್ಲಿ ಅನುಕಂಪ ಆಧಾರಿತ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದರು. ಆ ವೇಳೆಗೆ ಅವರ ತಂದೆ ಮೃತಪಟ್ಟು 11 ವರ್ಷಗಳಾಗಿದ್ದವು.

ಉದ್ಯೋಗಿಯ ಮರಣದ ಬಳಿಕ ಅನುಕಂಪ ಆಧಾರಿತ ಉದ್ಯೋಗ ಪಡೆಯಲು ಮೂರು ವರ್ಷಗಳ ಕಾಲ ಮಿತಿಯನ್ನು 1999ರಲ್ಲಿ ನಿಗದಿಪಡಿಸಲಾಗಿದೆ ಎಂದು ಹೇಳುವ ಮೂಲಕ ಹರಿಯಾಣದ ಸಕ್ಷಮ ಪ್ರಾಧಿಕಾರ, ಟಿಂಕು ಅವರ ಅರ್ಜಿಯನ್ನು ತಿರಸ್ಕರಿಸಿತ್ತು.

ಪ್ರಾಧಿಕಾರದ ಆದೇಶ ಪ್ರಶ್ನಿಸಿ ಟಿಂಕು ಸಲ್ಲಿಸಿದ್ದ ಅರ್ಜಿಯನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ, ಟಿಂಕು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಪ್ರಾಧಿಕಾರದ ನಿರ್ಧಾರವನ್ನು ಎತ್ತಿ ಹಿಡಿದಿದೆ.

ಅವಕಾಶ: ಅರ್ಜಿದಾರರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸುವಂತೆ ಸೂಚಿಸಿದ ಸುಪ್ರೀಂ ಕೋರ್ಟ್, ಆರು ವಾರಗಳಲ್ಲಿ ಪರಿಹಾರ ನೀಡುವಂತೆ ಸೂಚಿಸಿದೆ. ಪರಿಹಾರ ನೀಡುವುದು ವಿಳಂಬವಾದರೆ, ಅರ್ಜಿ ಸಲ್ಲಿಸಿದ ದಿನದಿಂದ ಬಡ್ಡಿ ಅನ್ವಯವಾಗುತ್ತದೆ ಎಂದು ಹೇಳಿತು.

ನೃತ್ಯ– ಚಿತ್ರ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಬುಧವಾರ ನಡೆದ ಕೆ.ಎ. ಶೇಖ್ ಅವರ 124ನೇ ಜಯಂತಿ ಕಾರ್ಯಕ್ರಮದಲ್ಲಿ ಕಲಾವಿದರು ನೃತ್ಯ ಪ್ರದರ್ಶನ ನೀಡಿದರು

ಪ್ರಜಾವಾಣಿ ಚಿತ್ರ

ಮರಕುಂಬಿ: 99 ಮಂದಿಗೆ ಜಾಮೀನು ಮಂಜೂರು

ಧಾರವಾಡ: ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಮರಕುಂಬಿ ಗ್ರಾಮದಲ್ಲಿ ದಶಕದ ಹಿಂದೆ ನಡೆದಿದ್ದ ಜಾತಿ ಸಂಘರ್ಷ, ಹಲ್ಲೆ, ಹಿಂಸಾಚಾರ ಪ್ರಕರಣದಲ್ಲಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಶಿಕ್ಷೆ ವಿಧಿಸಿದ್ದ 101 ಅಪರಾಧಿಗಳಲ್ಲಿ 99 ಮಂದಿಗೆ ಹೈಕೋರ್ಟ್ ಧಾರವಾಡ ಪೀಠ ಜಾಮೀನು ನೀಡಿದೆ.

ನ್ಯಾಯಮೂರ್ತಿಗಳಾದ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಒಟ್ಟು 101 ಮಂದಿಗೆ (98 ಮಂದಿಗೆ ಜೀವಾವಧಿ ಶಿಕ್ಷೆ ಹಾಗೂ ಮೂವರಿಗೆ ಐದು ವರ್ಷ ಜೈಲು) ಶಿಕ್ಷೆ ವಿಧಿಸಿತ್ತು. ಪ್ರಕರಣದ ಎ–1 ಅಪರಾಧಿ ಮಂಜುನಾಥ ಜಾಮೀನು ಕೋರಿ ಅರ್ಜಿ ಸಲ್ಲಿಸಿಲ್ಲ. ಮತ್ತೊಬ್ಬ ಅಪರಾಧಿ ರಾಮಣ್ಣ ಭೋವಿ ಶಿಕ್ಷೆಯ ಆದೇಶ ಪ್ರಕಟವಾದ ಬಳಿಕ ಮೃತಪಟ್ಟಿದ್ದರು.

ವಕೀಲ ಆನಂದ ಕೊಳ್ಳಿ ಸುದ್ದಿಗಾರರೊಂದಿಗೆ ಮಾತನಾಡಿ, 'ವಿಭಾಗೀಯ ಪೀಠವು ಹಲವಾರು ವಿಷಯಗಳನ್ನು (ದೂರು ದಾಖಲು ವಿಳಂಬ, ಗುರುತು ಪತ್ತೆ ಪರೇಡ್, ಜಾಮೀನು ಷರತ್ತು ಪಾಲನೆ...) ಪರಿಗಣಿಸಿ ಜಾಮೀನು ನೀಡಿದೆ. ಜಾಮೀನಿಗೆ ಒಬ್ಬರ ಭದ್ರತೆ ಮತ್ತು ₹50 ಸಾವಿರ ಬಾಂಡ್ ನೀಡಬೇಕೆಂದು ಷರತ್ತು ವಿಧಿಸಿದೆ' ಎಂದರು.

'ಒಟ್ಟು ಎಂಟು ವಕೀಲರು ವಕಾಲತ್ತು ಹಾಕಿದ್ದೇವೆ. ಮಂಜುನಾಥ (ಎ1 ಅಪರಾಧಿ) ಅವರಿಗೆ ಜಾಮೀನು ಕೋರಿ ಅರ್ಜಿಯನ್ನು ಸಲ್ಲಿಸಲಾಗುವುದು' ಎಂದು ಅವರು ತಿಳಿಸಿದರು.

ಮರಕುಂಬಿಯಲ್ಲಿ ದಶಕದ ಹಿಂದೆ (2014ರ ಆಗಸ್ಟ್ 28) ನಡೆದ ದಲಿತರು ಹಾಗೂ ಪ್ರಬಲ ಜಾತಿಯ ಜನರ ನಡುವಣ ಸಂಘರ್ಷ, ಹಲ್ಲೆ, ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಒಟ್ಟು 101 ಜನ ಅಪರಾಧಿಗಳ ಪೈಕಿ 98 ಜನರಿಗೆ ಕೊಪ್ಪಳದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ವಿಧಿಸಿತ್ತು.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವದ ಸುವರ್ಣ ಸಂಭ್ರಮ: ಅತಿಥಿ: ಬಿ.ಆರ್. ಲಕ್ಷ್ಮಣರಾವ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30

ಬಿ.ಆರ್. ಲಕ್ಷ್ಮಣರಾವ್

'ನವೀಕರಿಸಲಾದ ಟಿ.ವಿ. ತಿಮ್ಮೇಗೌಡ ಸಭಾಂಗಣದ ಉದ್ಘಾಟನೆ: ಪುಟ್ಟಣ್ಣ, ಅಧ್ಯಕ್ಷತೆ: ಬಿ. ನರಸಿಂಹಮೂರ್ತಿ, ಅತಿಥಿಗಳು: ಎ.ಎಚ್. ಬಸವರಾಜು, ನೆ.ಲ. ನರೇಂದ್ರಬಾಬು, ಎಸ್.ಕೆ. ಸಿದ್ದಯ್ಯ, ರೇವಣಸಿದ್ದಯ್ಯ, ಆಯೋಜನೆ: ಕೆ.ಟಿ.ಎಸ್. ವಿ. ಸಂಘ, ಸ್ಥಳ: ರಾಜಾಜಿನಗರ ಶಿಕ್ಷಣ ಮಹಾವಿದ್ಯಾಲಯ, ಐದನೇ ಬ್ಲಾಕ್, ರಾಜಾಜಿನಗರ, ಬೆಳಿಗ್ಗೆ 10.30

'71ನೇ ಅಖಿಲ ಭಾರತ ಸಹಕಾರ ಸಪ್ತಾಹ'ದ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಪ್ರಲ್ಹಾದ ಜೋಶಿ, ಎಚ್.ಡಿ. ಕುಮಾರಸ್ವಾಮಿ, ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಕೆ.ಎನ್. ರಾಜಣ್ಣ, ಕೆ. ವೆಂಕಟೇಶ್, ಜಿ.ಟಿ. ದೇವೇಗೌಡ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಹಕಾರ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

ಸಾಹಿತ್ಯಕ ಕಾರ್ಯಕ್ರಮಗಳು, ಪುಸ್ತಕ ಪ್ರದರ್ಶನ ಮತ್ತು ರಿಯಾಯಿತಿ ದರದಲ್ಲಿ ಮಾರಾಟ: ಉದ್ಘಾಟನೆ: ವೆಂಕಟೇಶ್ ನೆಲ್ಲುಕುಂಟೆ, ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಸಾಹಿತ್ಯ ಅಕಾಡೆಮಿ, ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 11

'ಕನ್ನಡ ಹಬ್ಬ' ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಸಾಂಸ್ಕೃತಿಕ ಶೋಭಾಯಾತ್ರೆ: ಅತಿಥಿಗಳು: ತೇಜಸ್ವಿ ಸೂರ್ಯ, ಸಿ.ಕೆ. ರಾಮಮೂರ್ತಿ, ಆಯೋಜನೆ: ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್, ಸ್ಥಳ: ಮಂಗಳ ಮಂಟಪ, ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು, ಮಧ್ಯಾಹ್ನ 2

ಕನ್ನಡ ರಾಜ್ಯೋತ್ಸವ, ನಾಟಕೋತ್ಸವ: 'ಶ್ರೀಮನ್ಮೂಕವಾಗಿತ್ತು' ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಗಣಪತಿಗೌಡ, ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಬಂಡೇಮಠ ವಿದ್ಯಾಸಂಸ್ಥೆ, ಕೆಂಗೇರಿ ಸ್ಯಾಟ್‌ಲೈಟ್ ಟೌನ್, ಕೊಮ್ಮಘಟ್ಟ ರಸ್ತೆ, ಮಧ್ಯಾಹ್ನ 2.30

ಜ್ಯೋತಿಬಾಫುಲೆ ಅವರ 'ಗುಲಾಮಗಿರಿ'ಗೆ 150 ವರ್ಷಗಳು 'ಸಬ್‌ವರ್ಷನ್ ಆ್ಯಂಡ್ ಫ್ರೀಡಂ–ಎ ರೀಡಿಂಗ್ ಆಫ್ ಜ್ಯೋತಿಬಾಫುಲೇಸ್ ಗುಲಾಮಗಿರಿ' ಕುರಿತು ಉಪನ್ಯಾಸ: ವಲೇರಿಯನ್ ರಾಡ್ರಿಗಸ್, ಪ್ರತಿಕ್ರಿಯೆ: ಶಿಲ್ಪ ಮುಡುಬಿ, ಪ್ರವೀಣ್ ತಲ್ಲೆಪಲ್ಲಿ, ಕೆ.ಪಿ. ಲಕ್ಷ್ಮಣ್, ಉಪಸ್ಥಿತಿ: ವಿ.ಎಲ್. ನರಸಿಂಹಮೂರ್ತಿ, ಸ್ಥಳ: ದೇವರಾಜ ಅರಸು ಗ್ಯಾಲರಿ ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

'ಆಡಳಿತದಲ್ಲಿ ಕನ್ನಡ–ಅಧಿಕಾರಿಗಳ ಪಾತ್ರ' ಕುರಿತು ಉಪನ್ಯಾಸ: ಬಿ.ಆರ್. ಜಯರಾಮರಾಜೇ ಅರಸು, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸವಾಣಿ: ಗಾಯನ: ವಾಣಿಶ್ರೀ ರಾಮಕೃಷ್ಣ, ಪಿಟೀಲು: ಅಭಯ್ ಸಂಪಿಗೆತಯ, ಮೃದಂಗ: ಆರ್. ಸುಧನ್ವ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಮಕ್ಕಳ ದಿನಾಚರಣೆ: ಬಹುಮಾನ ವಿತರಣೆ: ಕೆ. ಕುಮಾರ್, ಅತಿಥಿ: ಚೇತನ್ ಜಯಸಿಂಗ್ ಪಾಟೀಲ್ ಔಟಿ, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಭಾರತ್‌ಎಲೆಕ್ಟ್ರಾನಿಕ್ಸ್, ಜಾಲಹಳ್ಳಿ, ಸಂಜೆ 6

ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಸ್ತ್ರ ಸಂಹಿತೆ ಜಾರಿ

ಪ್ರಜಾವಾಣಿ ವಾರ್ತೆ

ಪುತ್ತೂರು: ಇಲ್ಲಿನ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಬರುವ ಭಕ್ತರು ವಸ್ತ್ರ ಸಂಹಿತೆ ಪಾಲಿಸುವಂತೆ ದೇವಸ್ಥಾನದ ಪ್ರವೇಶ ದ್ವಾರದ ಬಳಿ ಸೂಚನಾ ಫಲಕ ಅಳವಡಿಸಲಾಗಿದೆ.

'ಭಕ್ತಾದಿಗಳ ಗಮನಕ್ಕೆ, ದೇವರ ದರ್ಶನಕ್ಕೆ ಬರುವಾಗ ಸ್ವಚ್ಛವಾದ, ಶುಭ್ರವಾದ ಮತ್ತು ಸಭ್ಯವಾದ ಉಡುಪುಗಳನ್ನು ಧರಿಸಿಯೇ ಬನ್ನಿ' ಎಂದು ಫಲಕದಲ್ಲಿ ಬರೆಯಲಾಗಿದೆ. ಪುರುಷರು ಪ್ಯಾಂಟ್, ಅಂಗಿ ಅಥವಾ ಲುಂಗಿ ಮತ್ತು ಅಂಗಿ, ಮಹಿಳೆಯರು ಸೀರೆ ಅಥವಾ ಚೂಡಿದಾರ್ ಧರಿಸಿ ದೇವರ ದರ್ಶನ ಪಡೆಯುವಂತೆ ಸೂಚಿಸಲಾಗಿದೆ. ದೇವಸ್ಥಾನಕ್ಕೆ ಬರುವಾಗ ಧರಿಸಬಹುದಾದ ವಸ್ತ್ರಗಳ ಮಾದರಿಯನ್ನು ಚಿತ್ರಗಳ ಮೂಲಕ ಫಲಕದಲ್ಲಿ ಹಾಕಲಾಗಿದೆ.

ಹಲವು ವರ್ಷಗಳಿಂದ ಭಕ್ತರು ಮತ್ತು ಹಿಂದುತ್ವಪರ ಸಂಘಟನೆಗಳು ದೇವಸ್ಥಾನದಲ್ಲಿ ವಸ್ತ್ರ ಸಂಹಿತೆ ಜಾರಿಗೊಳಿಸುವಂತೆ ಆಗ್ರಹಿಸುತ್ತಾ ಬಂದಿದ್ದರು. ಈ ಹಿಂದಿನ ವ್ಯವಸ್ಥಾಪನಾ ಸಮಿತಿಯವರು ದೇವಳದ ಪ್ರವೇಶ ದ್ವಾರದ ಬಳಿ ವಸ್ತ್ರ ಸಂಹಿತೆ ಪಾಲಿಸುವಂತೆ ಸೂಚನಾ ಫಲಕ ಅಳವಡಿಸಿದ್ದರೂ, ಅದು ಜಾರಿಗೆ ಬಂದಿರಲಿಲ್ಲ. ಈಗ ಮುಖ್ಯ ದ್ವಾರದ ಬಳಿಯೇ ದೊಡ್ಡ ಫಲಕ ಅಳವಡಿಸಲಾಗಿದೆ. ಈ ಸೂಚನೆಯನ್ನು ಭಕ್ತರು ಪಾಲಿಸುವಂತೆ ದೇವಳದ ಆಡಳಿತಾಧಿಕಾರಿ ನವೀನ್‌ಕುಮಾರ್ ಭಂಡಾರಿ ಮನವಿ ಮಾಡಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಅಪರಾಧಿಗೆ ಇಪ್ಪತ್ತು ವರ್ಷ ಕಠಿಣ ಶಿಕ್ಷೆ

ಕೆ.ಆರ್.ಪುರ: ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಅಪರಾಧಿಗೆ 5ನೇ ಎಫ್‌ಟಿಎಸ್‌ಸಿ (ಪೋಕ್ಸೊ) ನ್ಯಾಯಾಲಯವು 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು ದಂಡ ವಿಧಿಸಿ ಆದೇಶಿಸಿದೆ.

ಕೆ.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ರಾಮಮೂರ್ತಿನಗರದ ಚಲುವಯ್ಯ ರಸ್ತೆಯ 9ನೇ ಕ್ರಾಸ್ ನಿವಾಸಿ ಗಣೇಶ್ (30) ಶಿಕ್ಷೆಗೆ ಒಳಗಾದ ಅಪರಾಧಿ.

ಶಾಲೆಯ ರಜಾ ದಿನಗಳಲ್ಲಿ ಮನೆಗೆ ಬರುತ್ತಿದ್ದ ಬಾಲಕಿ ಮೇಲೆ ಪದೇ ಪದೇ ಲೈಂಗಿಕ ಅತ್ಯಾಚಾರ ಎಸಗಿದ್ದ. ಅಲ್ಲದೇ ಈ ವಿಚಾರವನ್ನು ಯಾರಿಗೂ ಹೇಳದಂತೆ ಬೆದರಿಕೆ ಹಾಕಿದ್ದ. ಈ ಸಂಬಂಧ ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖೆ ಪೂರ್ಣಗೊಳಿಸಿ ಇನ್‌ಸ್ಪೆಕ್ಟರ್ ಎಸ್.ಆರ್.ಮಂಜುನಾಥ್ ಅವರು ಆರೋಪಿ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸಿದ್ದರು. ಸರ್ಕಾರಿ ವಕೀಲ ಅನುರೇವು ಅವರು ವಾದ ಮಂಡಿಸಿದ್ದರು. ವಾದ ಪ್ರತಿವಾದ ಆಲಿಸಿದ ನ್ಯಾಯಾಧೀಶರಾದ ಎನ್.ನರಸಮ್ಮ ಅವರು ಅಪರಾಧಿಗೆ ಶಿಕ್ಷೆ ಮತ್ತು ದಂಡ ವಿಧಿಸಿ ಅದೇಶ ನೀಡಿದ್ದಾರೆ. ಅಲ್ಲದೇ ಬಾಲಕಿಗೆ ₹10 ಲಕ್ಷ ಪರಿಹಾರ ನೀಡುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಅದೇಶಿಸಿದ್ದಾರೆ.

ವೈಷ್ಣೋದೇವಿ ಯಾತ್ರಿಗಳಿಗೆ ₹5,000 ಸಹಾಯಧನ

ಬೆಂಗಳೂರು: ಜಮ್ಮು ಕಾಶ್ಮೀರದಲ್ಲಿರುವ ವೈಷ್ಣೋದೇವಿ ದೇವಸ್ಥಾನಕ್ಕೆ ಭೇಟಿ ನೀಡುವ ಕರ್ನಾಟಕದ ಯಾತ್ರಿಗಳಿಗೆ ತಲಾ ₹ 5,000 ಸಹಾಯಧನ ನೀಡಲು ರಾಜ್ಯ ಧಾರ್ಮಿಕ ಪರಿಷತ್ತು ನಿರ್ಧರಿಸಿದೆ.

ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

120 ವರ್ಷ ಹಳೆಯದಾಗಿರುವ ಮೈಸೂರಿನ ಸಂಸ್ಕೃತ ಮಹಾರಾಜ ಕಾಲೇಜಿನ ಸಂಸ್ಥೆಯ ಜೀರ್ಣೋದ್ಧಾರಕ್ಕೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡಲು, ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳ ಆಸ್ತಿಯನ್ನು ಸರ್ವೆ ಮಾಡಿ, ಒತ್ತುವರಿ ತೆರವು ಮಾಡಿ ದಾಖಲೆ ಮಾಡಲು ಹಾಗೂ ಆಸ್ತಿಗಳನ್ನು ರಕ್ಷಿಸಲು ತೀರ್ಮಾನಿಸಲಾಯಿತು.

ಅರ್ಚಕರ ಮಕ್ಕಳಿಗೆ ನೀಡುತ್ತಿರುವ ವಿದ್ಯಾ ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ಡಿಸೆಂಬರ್ 31 ರವರೆಗೂ ಕಾಲಾವಕಾಶ ನೀಡಲು ಸಭೆ ನಿರ್ಣಯ ಕೈಗೊಂಡಿತು.

ನೀರು ಪೂರೈಕೆಯಲ್ಲಿ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 110 ಹಳ್ಳಿಗಳಿಗೆ ಕಾವೇರಿ ಕುಡಿಯುವ ನೀರು ಪೂರೈಕೆಗಾಗಿ ಜಿಕೆವಿಕೆ ಆವರಣದಲ್ಲಿರುವ ಜಲರೇಚಕ ಯಂತ್ರಾಗಾರದಿಂದ ಅಮೃತ್ ಕೊಳವೆ ಮಾರ್ಗಕ್ಕೆ ಜೋಡಣೆ ಕೆಲಸಗಳು ನಡೆಯುತ್ತಿರುವ ಕಾರಣ, ಬುಧವಾರ ರಾತ್ರಿ 9 ರಿಂದ ಗುರುವಾರ ರಾತ್ರಿ 9 ಗಂಟೆವರೆಗೆ ಈ ಕೆಳಗೆ ತಿಳಿಸಿರುವ ಪ್ರದೇಶಗಳಲ್ಲಿ ಕಾವೇರಿ ನೀರುಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ರಾಜು ಕಾಲೊನಿ, ಇಬ್ರಾಹಿಮ್ ಸ್ಟ್ರೀಟ್-1 ರಿಂದ 9ನೇ ರಸ್ತೆ, ನೋಬಲ್ ಸ್ಕೂಲ್ -1 ಮತ್ತು 2ನೇ ಅಡ್ಡರಸ್ತೆ, ನೂರ್ ಲೇಔಟ್, ಶಾಂಪುರ ರೈಲ್ವೆಗೇಟ್-1 ಮತ್ತು 2ನೇ ಅಡ್ಡರಸ್ತೆ, ವಯಾಲಿಕಾವಲ್ ಲೇಔಟ್-1ರಿಂದ 9ನೇ ಮುಖ್ಯ ರಸ್ತೆ, ಸಂದ್ಯಗಪ್ಪ ಲೇಔಟ್-1ರಿಂದ 3ನೇ ಅಡ್ಡರಸ್ತೆ, ವೀರಣ್ಣ ಪಾಳ್ಯ, ನಾರಾಯಣಸ್ವಾಮಿ ಲೇಔಟ್, ವಯಾಲಿ ಕಾವಲ್ ಲೇಔಟ್ -10 ರಿಂದ 16ನೇ ಅಡ್ಡರಸ್ತೆ, ಪ್ರಕೃತಿ ಲೇಔಟ್, ಆಯಿಲ್ ಮಿಲ್ ರಸ್ತೆ(1 ರಿಂದ 15ನೇ ಕ್ರಾಸ್ ತಗ್ಗು ಪ್ರದೇಶ), 16ರಿಂದ 18ನೇ ಅಡ್ಡರಸ್ತೆ(1 ರಿಂದ 15ನೇ ತಿರುವಿನವರೆಗಿನ ಎತ್ತರದ ಪ್ರದೇಶ), 3ನೇ ಬ್ಲಾಕ್ ಸರ್ವೀಸ್ ರಸ್ತೆ, ಎಚ್.ಆರ್.ಬಿ.ಆರ್ ಲೇಔಟ್, ಹೆಣ್ಣೂರು, ರಾಮಸ್ವಾಮಿ ಪಾಳ್ಯ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
Ph. No: 0821-2979772 E-mail:-khsdrp.divmys@gmail.com
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–4/ಟೆಂಡರ್–15/2024–25
ದಿ: 14.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ Construction of Endosulphan Center at Kokkada in Belthangady Taluk, D.K.District ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. (ತಲಾ ಅಂದಾಜು ಮೊತ್ತ ರೂ.80.00 ಲಕ್ಷಗಳು). **ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 19.11.2024 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 20.11.2024 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ಸೂಚನೆ:** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/DDMYS-780/KSMCA-534/2024-25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2024–25/3803 ದಿನಾಂಕ:12/11/2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2022–23 ನೇ ಸಾಲಿನ ಲೆಕ್ಕ ಶಿರ್ಷಿಕೆ 8443–ವಿವೇಕ ಯೋಜನೆ 6 ಕಾಮಗಾರಿಗಳು ಹಾಗೂ 2059–ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 7 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 20.83 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 51.66 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು 1)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:20–11–2024 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:22–11–2024 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 25–11–2024 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1126/KSMCA/2024-25

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560 052.
ಸಂಖ್ಯೆ: ಉಪ್ರವ್ಯ–3/(ಬಿಎಸ್‌ಡಬ್ಲ್ಯೂಎಂಎಲ್/ತಿದ್ದುಪಡಿ–06/24–25 ದಿನಾಂಕ: 13.11.2024

ತಿದ್ದುಪಡಿ–02

ವಿಷಯ: ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿ ವಿಸ್ತರಣೆ
ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಉಪ್ರವ್ಯ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/06/24–25, ದಿನಾಂಕ: 21.10.2024 ಮತ್ತು ತಿದ್ದುಪಡಿ–1 ಸಂಖ್ಯೆ: ಉಪ್ರವ್ಯ–3/(ಬಿಎಸ್‌ಡಬ್ಲ್ಯೂಎಂಎಲ್)/ಟೆಂಡರ್–06/ತಿದ್ದುಪಡಿ–01/2024–25 ದಿನಾಂಕ: 30.10.2024

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೇಲಿನ ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿಯನ್ನು ಆಡಳಿತ ಹಾಗೂ ತಾಂತ್ರಿಕ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ

ನಿಗಧಿತ ಅವಧಿ / ವೇಳಾ ಪಟ್ಟಿ

ಕ್ರಮ ಸಂಖ್ಯೆ	ವಿವರ	ಟೆಂಡರ್ ಪ್ರಕಟಣೆ ಪ್ರಕಾರ/ ತಿದ್ದುಪಡಿ	ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು
1	ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	19.11.2024 ರಂದು 16:00 ಗಂಟೆಗೆ ಮುಂಚಿತವಾಗಿ.	26.11.2024 ರಂದು 16:00 ಗಂಟೆಗೆ ಮುಂಚಿತವಾಗಿ
2	ತಾಂತ್ರಿಕ ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ತೆರೆಯುವ ದಿನಂಕ	20.11.2024 ರಂದು 16:30 ಗಂಟೆಯ ನಂತರ	27.11.2024 ರಂದು 16:30 ಗಂಟೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಗೆ ಭೇಟಿ ನೀಡಿ

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3,
ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾಪ್ರ/3170/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗಾಂಧಿನಗರ ವಿಭಾಗ, ಬಿಬಿಎಂಪಿ ಕಾಂಪ್ಲೆಕ್ಸ್, 2ನೇ ಮಹಡಿ, ಧನ್ವಂತರಿ ರಸ್ತೆ, ಬೆಂಗಳೂರು–560009
ನಂ.: ಕಾಪಾಅ/ಗಾನ/ಟೆಂಡರ್/ಇ–ಪ್ರೊಕ್/06/2024–25 ದಿನಾಂಕ: 13.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)
ಕೆಳ ಸಹಿದಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಐಟಂ ದರದ ಆಧಾರದ ಮೇಲೆ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ ಲಕೋಟೆ ಕಾಮಗಾರಿಗಳು
1	ಗಾಂಧಿನಗರ, ವಾರ್ಡ್–123ರಲ್ಲಿ ಬಿಬಿಎಂಪಿ ವಿಭಾಗೀಯ ನಿರ್ಮಾಣ ಮತ್ತು ವಲಯ ಕಛೇರಿಯ ಸುಧಾರಣೆ. (ಪ್ಯಾಕೇಜ್–1). **ಅಂದಾಜು ವೆಚ್ಚ ರೂ. ಲಕ್ಷಗಳಲ್ಲಿ:** 500.00, **ಇಎಂಡಿ ರೂಪಾಯಿಗಳಲ್ಲಿ:** 1,00,000 + (4,00,000 ಬ್ಯಾಂಕ್ ಗ್ಯಾರಂಟಿ).
2	ಗಾಂಧಿನಗರ ಉಪವಿಭಾಗದ ಬಿಬಿಎಂಪಿ ಉದ್ಯಾನವನಗಳು, ಸಮುದಾಯ ಭವನದ ಶೌಚಾಲಯಗಳು ಮತ್ತು ರುದ್ರಭೂಮಿಯ ದುರಸ್ತಿ ಮತ್ತು ಸುಧಾರಣೆ. (ಪ್ಯಾಕೇಜ್–4). **ಅಂದಾಜು ವೆಚ್ಚ ರೂ. ಲಕ್ಷಗಳಲ್ಲಿ:** 500.00, **ಇಎಂಡಿ ರೂಪಾಯಿಗಳಲ್ಲಿ:** 1,00,000 + (4,00,000 ಬ್ಯಾಂಕ್ ಗ್ಯಾರಂಟಿ).

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆ: **02.12.2024ರ ಮಧ್ಯಾಹ್ನ 12:30 ಗಂಟೆಗೆ.** (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **05.12.2024ರ ಸಂಜೆ 4:00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **07.12.2024ರ ಮಧ್ಯಾಹ್ನ 12:30 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **(ಕೆಪಿಪಿಪಿ ಮೂಲಕ ತಿಳಿಸಲಾಗುವುದು).** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬಿಬಿಎಂಪಿ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in
ಸಂಖ್ಯೆ: ಕರಅನಿನಿ/ಐಎಫ್‌ಬಿ/ಆರ್‌ಎಫ್‌ಪಿ/2024–25/13 ದಿನಾಂಕ: 13–11–2024

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ)
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಈ ಕೆಳಕಂಡ ಸೇತುವೆ ಕಾಮಗಾರಿಯನ್ನು ಟೆಂಡರ್‌ದಾರರ ಸ್ವಂತ ವಿನ್ಯಾಸದ ಟರ್ನ್‌ಕೀ ಆಧಾರದ ಮೇಲೆ ದ್ವಿಲಕೋಟೆ ಪದ್ಧತಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ಉದ್ದೇಶಿತ ಸೇತುವೆ ಕಾಮಗಾರಿಯ ಅನುಷ್ಠಾನವನ್ನು ಕೈಗೆತ್ತಿಕೊಳ್ಳುವ ವಿವರಗಳು ಈ ಕೆಳಗಿನಂತಿದೆ.
ಕಾಮಗಾರಿಯ ಹೆಸರು : ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲ್ಲೂಕಿನಲ್ಲಿ ಮನಗೂಳಿ ಮತ್ತು ಬಿಜ್ಜಲ್ ನಡುವಿನ ಡೋಣಿ ನದಿಗೆ ಅಡ್ಡಲಾಗಿ ರಾ.ಹೆ.–61ರ ಚೈ. 58.00 ಮತ್ತು 58.10 ಕಿಮೀ ರಲ್ಲಿ ಸೇತುವೆಯ ಮರು–ನಿರ್ಮಾಣ (**2ನೇ ಕರೆ**). ಕಾಮಗಾರಿಯ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : **ರೂ. 20.50 ಕೋಟಿ.** ಅರ್ನೆಸ್ಟ್ ಠೇವಣಿ ಹಣ (ಇಎಂಡಿ): **ರೂ. 20.50 ಲಕ್ಷಗಳು (ಕೆಪಿಪಿ ಪೋರ್ಟಲ್ ಮೂಲಕ ರೂ. 1.00 ಲಕ್ಷ ಮತ್ತು ಉಳಿಕೆ ಮೊತ್ತ ಬ್ಯಾಂಕ್ ಗ್ಯಾರಂಟಿ ಮೂಲಕ).** ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ): **18 ತಿಂಗಳು.**
ಆಸಕ್ತ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಬಿಡ್‌ಗಳು ಮತ್ತು ಇಎಂಡಿ ಗಳನ್ನು ಪೋರ್ಟಲ್ ಮೂಲಕ ಸಲ್ಲಿಸಬೇಕು.
ಬಿಡ್ ಭದ್ರತೆಯನ್ನು (ಇಎಂಡಿ) ದಾಖಲೆಯಲ್ಲಿ ತಿಳಿಸಿರುವಂತೆ ಪಾವತಿಸಬೇಕು.
ವಿವಿಧ ಚಟುವಟಿಕೆಗಳಿಗೆ ಟೆಂಡರ್ ದಿನಾಂಕಗಳು: (ಎ) ಪೂರ್ವ ಬಿಡ್ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **20.11.2024ರಂದು ಸಂಜೆ 5.00 ಗಂಟೆವರೆಗೆ – ಕೆಪಿಪಿ ಪೋರ್ಟಲ್ / ಇಮೇಲ್ : cekrdcl@gmail.com** ಮೂಲಕ. (ಬಿ) ಬಿಡ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **26.11.2024ರ ಸಂಜೆ 5.30 ಗಂಟೆವರೆಗೆ.** (ಸಿ) ಬಿಡ್‌ಗಳನ್ನು ತೆರೆಯುವ ದಿನಾಂಕ: **28.11.2024ರಂದು 11.30 ಗಂಟೆಗೆ.**
* ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು. ಭೇಟಿ ನೀಡಿ: **https://www.krdcl.in**

ಸಹಿ/–
ಮುಖ್ಯ ಅಭಿಯಂತರರು
ಕರಅನಿನಿ ಬೆಂಗಳೂರು
DIPR/CP/YC/3187/2024-25

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ನಂ 55, 3ನೇ ಮಹಡಿ, ಅಭಯ ಸಂಕೀರ್ಣ ಭವನ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560020. ದೂರವಾಣಿ : 080 23460085,
ಇಮೇಲ್ : ksdb.ho@gmail.com website: https://ksdb.karnataka.gov.in/
ಸಂಖ್ಯೆ: ಕಕೊಅಮ/ಆಡಳಿತ/14/2024–25 ದಿನಾಂಕ : 12/11/2024

ಕಾನೂನು ಸಲಹೆಗಾರರು /ಅಧಿಕಾರಿಯ ನೇಮಕಾತಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ಕಾನೂನು ಸಲಹೆಗಾರರನ್ನಾಗಿ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಉದ್ದೇಶಿಸಿದೆ. ನೇಮಕಾತಿ ಪ್ರಕಟಣೆಯ ವಿವರ ಈ ಕೆಳಗೆ ನೀಡಲಾಗಿದೆ

ಹುದ್ದೆ	ಜವಾಬ್ದಾರಿಗಳು	ಅರ್ಹತೆ	ಗುತ್ತಿಗೆ ಅವಧಿ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಕಾನೂನು ಸಲಹೆಗಾರರ ನೇಮಕಾತಿ	ಈ ಕೆಲಸದ ಉದ್ದೇಶವು ಕಾನೂನಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಹಾಯ ಮಾಡುವುದು ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಪರವಾಗಿ ಅರ್ಜಿದಾರರು / ಪ್ರತಿವಾದಿಯಾಗಿ ಪ್ರತಿನಿಧಿಸುವ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ನಿರ್ವಹಿಸುವುದು ಮತ್ತು ಕಾನೂನು ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಲಹೆ ಹಾಗೂ ಅಭಿಪ್ರಾಯಗಳನ್ನು ಒದಗಿಸುವುದು ಮತ್ತು ವಿವಿಧ ನ್ಯಾಯಾಲಯಗಳಲ್ಲಿನ ಪ್ರಕರಣಗಳಿಗೆ ಕಂಡಿಕೆವಾರು ಉತ್ತರಗಳನ್ನು, ಪ್ಯಾರಾವೈಸ್ ಉತ್ತರಗಳು, ಲಿಖಿತ ಹೇಳಿಕೆಗಳು ಮತ್ತು ಆಕ್ಷೇಪಣೆಗಳನ್ನು ಸಿದ್ಧಪಡಿಸುವುದು. ಸದರಿ ಹುದ್ದೆಯ ವಿವರಣೆ ಹಾಗೂ ಜವಾಬ್ದಾರಿ ಮತ್ತು ಕರ್ತವ್ಯಗಳ ವಿವರಗಳನ್ನು https://ksdb.karnataka.gov.in/ ವೆಬ್ ಸೈಟನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.	ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು	12 ತಿಂಗಳು.

1) ಹುದ್ದೆಯ ಹೆಸರು : ಕಾನೂನು ಸಲಹೆಗಾರರು / ಅಧಿಕಾರಿ, 2) ಗುತ್ತಿಗೆ ಅವಧಿ : 12 ತಿಂಗಳು, 3) ಹುದ್ದೆಯ ಸಂಖ್ಯೆ : 01 (ಒಂದು), 4) ಸಂಭಾವನೆಯು ನಿಶ್ಚಿತ ಆಧಾರದ ಮೇಲೆ ಇರುತ್ತದೆ (ಮಾಸಿಕ ರೂ. 75,000/– ಗಳ ವರೆಗೆ).
ಸಂಪೂರ್ಣ ಉದ್ಯೋಗ ವಿವರಣೆಯನ್ನು ವೆಬ್‌ಸೈಟ್ https://ksdb.karnataka.gov.in/ ನಲ್ಲಿ ವೀಕ್ಷಿಸಬಹುದು. ಅರ್ಹ ವ್ಯಕ್ತಿಗಳು ತಮ್ಮ ಸಂಪೂರ್ಣ ಸವಿವರಗಳೊಂದಿಗೆ (ಸಂಪರ್ಕ ಸಂಖ್ಯೆ, ಇಮೇಲ್ ಐಡಿ, ಇತ್ತೀಚಿನ ಪಾಸ್ಪೋರ್ಟ್ ಗಾತ್ರದ ಭಾವಚಿತ್ರ ಮತ್ತು ಇತರೆ ಅಗತ್ಯ ದಾಖಲೆಗಳನ್ನು ಒದಗಿಸಿ) ನಿಗಧಿತ ನಮೂನೆಯಲ್ಲಿ ದಿನಾಂಕ: 28.11.2024ರ ಸಂಜೆ: 5.00 ಗಂಟೆಯ ಒಳಗೆ "ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ" ಇವರಿಗೆ ಈ ಮೇಲೆ ನಮೂದಿಸಿರುವ ವಿಳಾಸಕ್ಕೆ ಸಲ್ಲಿಸಬೇಕು. ಮುದ್ರಿತ ಪ್ರತಿಯ ಜೊತೆಗೆ ವಿದ್ಯುನ್ಮಾನ ಪ್ರತಿಯನ್ನು ಸಹ ksdb.ho@gmail.com ಗೆ ಕಳುಹಿಸಬೇಕು.

ಸಹಿ/–
ಆಯುಕ್ತರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,
ಬೆಂಗಳೂರು.
DIPR/CP/3172/Zen/2024-25

ಉಪಚುನಾವಣೆ: ಚನ್ನಪಟ್ಟಣ, ಸಂಡೂರು, ಶಿಗ್ಗಾವಿ ಕ್ಷೇತ್ರಗಳಲ್ಲಿ ದಾಖಲೆ ಪ್ರಮಾಣದ ಮತದಾನ • ಅಲ್ಲಲ್ಲಿ ಮಾತಿನ ಚಕಮಕಿ • ಕೆಲವೆಡೆ ಕೈಕೊಟ್ಟ ಯಂತ್ರ

ಹಕ್ಕು ಚಲಾವಣೆಗೆ ಮತದಾರರ ಮೇರೆ ಮೀರಿದ ಉತ್ಸಾಹ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ತೀವ್ರ ಹಣಾಹಣಿಗೆ ಸಾಕ್ಷಿಯಾಗಿದ್ದ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಮತದಾನ ಬುಧವಾರ ಶಾಂತಿಯುತವಾಗಿ ನಡೆಯಿತು. ಕ್ಷೇತ್ರದ 276 ಮತಗಟ್ಟೆಗಳಲ್ಲಿ ಬೆಳಗ್ಗೆ 7ರಿಂದ ಸಂಜೆ 6ರವರೆಗೆ ನಡೆದ 'ಪ್ರಜಾ ಪ್ರಭುತ್ವದ ಹಬ್ಬ'ದಲ್ಲಿ ಕಣದಲ್ಲಿರುವ 31 ಅಭ್ಯರ್ಥಿಗಳ ಭವಿಷ್ಯವನ್ನು ಮತದಾರರು ಯಶಸ್ವಿಯಾಗಿ ಬರೆದರು.

ಕಳೆದ 2023ರ ಚುನಾವಣೆಯಲ್ಲಿ ನಡೆದಿದ್ದ ಶೇ 85.27ಕ್ಕೆ ಪ್ರಮಾಣಕ್ಕೆ ಹೋಲಿಸಿದರೆ, ಉಪ ಚುನಾವಣೆಯಲ್ಲಿ ಶೇ3.54ರಷ್ಟು ಏರಿಕೆಯಾಗಿರುವುದು ಮತದಾರರ ಉತ್ಸಾಹಕ್ಕೆ ಸಾಕ್ಷಿಯಾಗಿದೆ. ಕ್ಷೇತ್ರದಲ್ಲಿ 31 ಒಟ್ಟು ಅಭ್ಯರ್ಥಿಗಳು ಕಣದಲ್ಲಿದ್ದರು. 1,12,324: ಪುರುಷ ಮತದಾರರು, 1,20,617: ಮಹಿಳೆ ಮತದಾರರು ಮತ್ತು 8 ಮಂದಿ ಲೈಂಗಿಕ ಅಲ್ಪಸಂಖ್ಯಾತರು ಸೇರಿ ಒಟ್ಟು 2,32,949 ಮತದಾರರಿದ್ದಾರೆ.

ಆರು ಕಡೆ ಮತಯಂತ್ರದಲ್ಲಿ ದೋಷ ಕಾಣಿಸಿಕೊಂಡಿದ್ದರಿಂದ ಮತಯಂತ್ರಗಳನ್ನು ಬದಲಿಸಲಾಯಿತು. ಕೆಲವೆಡೆ ಸಣ್ಣಪುಟ್ಟ ಮಾತಿನ ಚಕಮಕಿ ಬಿಟ್ಟರೆ, ಯಾವುದೇ ಅಹಿಕರ ಘಟನೆಗಳಿಲ್ಲದೆ ಸುಸೂತ್ರವಾಗಿ ಮತದಾನ ನಡೆಯಿತು. ಮತಗಟ್ಟೆಗಳಲ್ಲಿ ಯಾವುದೇ ಅಕ್ರಮಕ್ಕೆ ಆಸ್ಪದವಿಲ್ಲದಂತೆ ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ ಮಾಡಲಾಗಿತ್ತು. ಚುನಾವಣಾಧಿಕಾರಿ ಬಿನೋಯ್ ಪಿ.ಕೆ ಹಾಗೂ ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ನಿಗಾ ವಹಿಸಿದ್ದರು. ಪೊಲೀಸ್ ಮತ್ತು ಅರೆ ಸೇನಾಪಡೆಯ ಬಂದೋಬಸ್ತ್ ಮಾಡಲಾಗಿತ್ತು.

ಚಕ್ಕರೆಯಲ್ಲಿ ಸಿಪಿವೈ ಮತದಾನ: ಕಾಂಗ್ರೆಸ್‌ನ ಸಿ.ಪಿ.ಯೋಗೇಶ್ವರ್ ತಮ್ಮ ಊರಾದ ತಾಲ್ಲೂಕಿನ ಚಕ್ಕೆರೆಯಲ್ಲಿ ಪತ್ನಿ ಶೀಲಾ ಅವರೊಂದಿಗೆ ಮತದಾನ ಮಾಡಿದರು. ಕ್ಷೇತ್ರದ ಮತದಾರರಲ್ಲದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ, ಕೆಂಗಲ್‌ನಲ್ಲಿರುವ ಆಂಜನೇಯ ದೇವಸ್ಥಾನದಲ್ಲಿ ಬೆಳಗ್ಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಇಬ್ಬರೂ ಮತಗಟ್ಟೆಗಳಿಗೆ ಭೇಟಿ ನೀಡಿದರು.

ಮಾತಿನ ಚಕಮಕಿ: ತಾಲ್ಲೂಕಿನ ಕೋಂಡಬಳ್ಳಿ ಮತಗಟ್ಟೆಗೆ ಆಟೊದಲ್ಲಿ ಬಂದ ಮತದಾರರೊಬ್ಬರನ್ನು ಪಕ್ಷವೊಂದರ ಕಾರ್ಯಕರ್ತರು 'ನಮ್ಮ ಪಕ್ಷಕ್ಕೆ ಮತ ಹಾಕಬೇಕು' ಎಂದು ಎಳೆದಾಡಿದರು. ಮತದಾರ ಅವರನ್ನು ಲೆಕ್ಕಿಸದೆ ಮತಗಟ್ಟೆಯತ್ತ ನಡೆದರು.

ದೊಡ್ಡಮಳೂರು, ಮಂಗಳವಾರ ಪೇಟೆ ಸೇರಿದಂತೆ ಆರೇಳು ಕಡೆ ಮತದಾರರನ್ನು ಓಲೈಸುವ ಭರದಲ್ಲಿ ಜೆಡಿಎಸ್ ಹಾಗೂ 'ಕೈ' ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದಿರುವ ವರದಿಯಾಗಿದೆ. ಕ್ಷೇತ್ರದ ಮತದಾರರೂ ಆಗಿರುವ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಕೋಡಂಬಳ್ಳಿ ಸೇರಿ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿದರು.

ಸಂಕಲಗೆರೆ ಮತಗಟ್ಟೆಯಲ್ಲಿ ನಿಂತಿದ್ದ ಮಹಿಳೆಯರು ಮತದಾನದ ಗುರುತಿನ ಚೀಟಿ ಪ್ರದರ್ಶಿಸಿದರು

ಪ್ರಜಾ ಮತ
ಜನತಂತ್ರದ ಹಬ್ಬ

ಕ್ರಮಸಂಖ್ಯೆ ಪಟ್ಟಿಯಲ್ಲಿ ವ್ಯತ್ಯಾಸಕ್ಕೆ ಆಕ್ಷೇಪ

ತಾಲ್ಲೂಕಿನ ಹೊಂಗನೂರಿನ ಮತಗಟ್ಟೆ 4ರಲ್ಲಿ ವಿದ್ಯುನ್ಮಾನ ಮತಯಂತ್ರಕ್ಕೆ ಅಭ್ಯರ್ಥಿಗಳ ಕ್ರಮಸಂಖ್ಯೆ ಪಟ್ಟಿಯನ್ನು ಉಲ್ಟಾ ಆಗಿ ಅಂಟಿಸಿರುವುದರ ಕುರಿತು ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು. 'ಅಧಿಕಾರಿಗಳು ಯಾವುದೇ ಗೊಂದಲವಾಗಿಲ್ಲ. ಸರಿಯಾಗಿಯೇ ಇದೆ' ಎಂದು ಸ್ಪಷ್ಟನೆ ನೀಡಿದರು. ಈ ಕುರಿತು ಮೇಲ್ಮನವಿ ಸಲ್ಲಿಸುವ ಆಯ್ಕೆ ಬಗ್ಗೆಯೂ ಗಮನ ಸೆಳೆದರು.

ನಂತರ ಕ್ರಮ ಸಂಖ್ಯೆ ವ್ಯತ್ಯಾಸ ಕುರಿತ ಚಿತ್ರವನ್ನು ಮೊಬೈಲ್‌ನಲ್ಲಿ ಸುದ್ದಿಗಾರರಿಗೆ ಪ್ರದರ್ಶಿಸಿದ ನಿಖಿಲ್, 'ಬೆಳಗ್ಗೆ 8ಗಂಟೆ ಸುಮಾರಿಗೆ ಈ ವಿಷಯ ಗಮನಕ್ಕೆ ಬಂದಿದೆ. ಮತದಾರರು ಗೊಂದಲಕ್ಕೀಡಾಗಿ ಕ್ರಮ ಸಂಖ್ಯೆ 1ರಿಂದ ಶುರುವಾಗುವ ಅಭ್ಯರ್ಥಿಗಳ ಬದಲು, ಕಡೆಗೆ ಇರುವ ಅಭ್ಯರ್ಥಿಗಳಿಗೆ ಮತ ಹಾಕಿರುವ ಸಾಧ್ಯತೆ ಇದೆ. ಈ ಕುರಿತು, ಚುನಾವಣಾಧಿಕಾರಿಗೆ ದೂರು ನೀಡುವ ಕುರಿತು ಚರ್ಚಿಸಿ ತೀರ್ಮಾನಿಸುವೆ' ಎಂದು ಹೇಳಿದರು.

ದೂರು ಬಂದಿಲ್ಲ: ಘಟನೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಚುನಾವಣಾಧಿಕಾರಿ ಬಿನೋಯ್ ಪಿ.ಕೆ ಅವರು, 'ಇವಿಎಂ ಯಂತ್ರದಲ್ಲಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ ಎಂಬುದನ್ನು ಅಭ್ಯರ್ಥಿಗೆ ಮನವರಿಕೆ ಮಾಡಲಾಗಿದೆ. ಆ ಕುರಿತು ಯಾವುದೇ ದೂರು ಬಂದಿಲ್ಲ' ಎಂದರು.

ಹಣ ಹಂಚಿಕೆ ಆರೋಪ:ಎಫ್‌ಐಆರ್

ಚನ್ನಪಟ್ಟಣದ ಬಡಮಖಾನ್‌ನಲ್ಲಿ ಕಾಂಗ್ರೆಸ್‌ಗೆ ಮತ ಹಾಕುವಂತೆ ಹಣ ಹಂಚುತ್ತಿದ್ದ ಕನಕಪುರ ತಾಲ್ಲೂಕಿನ ಮೇಳೆಕೋಟೆ ಮಹಮದ್ ಜಬ್ಬೀರ್ ಎಂಬಾತನನ್ನು ಎಫ್‌ಎಸ್‌ಟಿ ತಂಡ ಸೆರೆ ಹಿಡಿದಿದೆ. ಆತನಿಂದ ₹1.16ಲಕ್ಷ ನಗದು ವಶಪಡಿಸಿಕೊಂಡಿದ್ದು, ಚನ್ನಪಟ್ಟಣ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಕ್ಕೂರಿನಲ್ಲೂ 'ಕೈ' ಪರವಾಗಿ ಮಂಗಳವಾರ ರಾತ್ರಿ ಹಣ ಹಂಚಿಕೆ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದರು. ಬುಧವಾರ ಅಕ್ಕೂರು ಮತಗಟ್ಟೆ ಬಳಿಯೇ ಗ್ರಾಮ ಪಂಚಾಯಿತಿ ಸದಸ್ಯನೊಬ್ಬ ಜೆಡಿಎಸ್‌ಗೆ ಮತ ಹಾಕುವಂತೆ ಮತದಾರರಿಗೆ ₹500 ನೋಟು ಹಂಚುತ್ತಿದ್ದ ಆರೋಪ ಕೇಳಿ ಬಂದಿದ್ದು, ಈ ವಿಡಿಯೊ ಮೊಬೈಲ್‌ಗಳಲ್ಲಿ ಹರಿದಾಡುತ್ತಿದೆ.

ಹುಮ್ಮಸ್ಸಿನಿಂದ ಮತದಾನ ಮಾಡಿದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಸಂಡೂರು/ಶಿಗ್ಗಾವಿ: ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಹಾವೇರಿ ಜಿಲ್ಲೆಯ ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬುಧವಾರ ಶಾಂತಿಯುತ ಮತದಾನ ನಡೆಯಿತು.

ಒಟ್ಟು 2,36,402 ಮತದಾರರ ಪೈಕಿ 1,80,189 ಮತದಾನ ಮಾಡಿದ್ದಾರೆ. ಇದರಲ್ಲಿ 90,922 ಮಂದಿ ಪುರುಷ ಮತ್ತು 89,252 ಮಂದಿ ಮಹಿಳಾ ಮತದಾರರು, 12 ಲೈಂಗಿಕ ಅಲ್ಪಸಂಖ್ಯಾತರು ಇದ್ದಾರೆ.

ಇದೇ ಕ್ಷೇತ್ರದಲ್ಲಿ, 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆ ವೇಳೆ ಶೇ 77.07ರಷ್ಟು ಮತದಾನವಾಗಿತ್ತು. ಕಳೆದ ಲೋಕಸಭಾ ಚುನಾವಣೆ ವೇಳೆ ಶೇ.75.16 ರಷ್ಟು ಮತದಾನವಾಗಿತ್ತು.

ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ, ಸಂಸದ ಇ.ತುಕಾರಾಂ ಕುಟುಂಬ ಸಮೇತರಾಗಿ ಪಟ್ಟಣದ ಜಿಲ್ಲಾ ಪಂಚಾಯಿತಿ ಎಂಜಿನಿಯರಿಂಗ್ ಕಚೇರಿಯಲ್ಲಿ ಮತದಾನ ಮಾಡಿದರು. ಕಾರ್ಮಿಕ ಸಚಿವ ಸಂತೋಷ್ ಲಾಡ್ ತಾಯಿ ಶೈಲಜಾ ಎಸ್.ಲಾಡ್ ಹಾಗೂ ಸಹೋದರಿ ಸುಜಾತಾ ಲಾಡ್ ಕೂಡ ಇದೇ ಮತಗಟ್ಟೆಯಲ್ಲಿ ಹಕ್ಕು ಚಲಾಯಿಸಿದರು. ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಅವರು ಮತಗಟ್ಟೆಗಳನ್ನು ಪರಿಶೀಲಿಸಿದರು.

ಹಾವೇರಿ ಜಿಲ್ಲೆಯ ಶಿಗ್ಗಾವಿ ಕ್ಷೇತ್ರದ ಹುಲಗೂರಿನಲ್ಲಿ ವೃದ್ಧೆಯೊಬ್ಬರು ಗಾಲಿಕುರ್ಚಿಯಲ್ಲಿ ಮತಗಟ್ಟೆಗೆ ಬಂದು, ಮತ ಚಲಾಯಿಸಿದರು

ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಶಿಗ್ಗಾವಿಯಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಮತ ಚಲಾಯಿಸುವವರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಿತ್ತು. ಸವಣೂರು ಪಟ್ಟಣದ ದಂಡಿನಪೇಟೆಯ 50ಕ್ಕೂ ಹೆಚ್ಚು ಮತದಾರರು, 'ನಮಗೆ ಮನೆಯ ಹಕ್ಕುಪತ್ರ ನೀಡಿಲ್ಲ' ಎಂದು ಆರೋಪಿಸಿ ಮತದಾನ ಬಹಿಷ್ಕರಿಸಿದರು. ಇದನ್ನು ತಿಳಿದ ತಹಶೀಲ್ದಾರ್, ಸ್ಥಳಕ್ಕೆ ಬಂದು ಮತದಾರರ ಮನವೊಲಿಸಿದರು. ಆಗ ಕೆಲವರು ಮತ ಚಲಾಯಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹಮದ್ ಖಾನ್ ಪಠಾಣ, ಶಿಗ್ಗಾವಿ ಪಟ್ಟಣದಲ್ಲಿರುವ ಮತಗಟ್ಟೆ ಸಂಖ್ಯೆ-104ರಲ್ಲಿ ಮತದಾನ ಮಾಡಿದರು. ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರು ತಮ್ಮ ತಂದೆ ಸಂಸದ ಬಸವರಾಜ ಬೊಮ್ಮಾಯಿ ಜೊತೆ ಶಿಗ್ಗಾವಿಯ ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ-1ರ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ತೆಪ್ಪ ಮಗುಚಿ ಮೂವರು ಯುವಕರು ನಾಪತ್ತೆ

ತುಮರಿ (ಶಿವಮೊಗ್ಗ ಜಿಲ್ಲೆ): ಸಮೀಪದ ಕಳಸವಳ್ಳಿ ಗ್ರಾಮದ ಬಳಿಯ ಲಿಂಗನಮಕ್ಕಿ ಜಲಾಶಯದ ಶರಾವತಿ ಹಿನ್ನೀರಿನ ನಡುಗಡ್ಡೆಗೆ ಬುಧವಾರ ಊಟಕ್ಕೆ (ಹೊಳೆ ಊಟ) ಹೋಗಿದ್ದ ಮೂವರು ಯುವಕರು ತೆಪ್ಪ ಮುಗುಚಿ ನೀರು ಪಾಲಾಗಿದ್ದಾರೆ.

ಮಧ್ಯಾಹ್ನ ಐವರು ಯುವಕರು ನಡುಗಡ್ಡೆಗೆ ಊಟಕ್ಕೆ ತೆರಳಿದ್ದರು. ಸಂಜೆ ಮರಳಿ ಬರುವಾಗ ಸಮತೋಲನ ತಪ್ಪಿ ತೆಪ್ಪ ಶರಾವತಿ ಹಿನ್ನೀರಿನಲ್ಲಿ ಮುಳುಗಿದೆ. ಈ ವೇಳೆ ಇಬ್ಬರು ಈಜಿ ದಡ ಸೇರಿದ್ದಾರೆ ಎಂದು ತಿಳಿದುಬಂದಿದೆ.

ಕಳಸವಳ್ಳಿ ಗ್ರಾಮದ ಚೇತನ್ ಜೈನ್ ಸಿಗಂದೂರು (28), ಸಂದೀಪ್ ಹುಲಿದೇವರಬನ (31) ಹಾಗೂ ರಾಜು ಗಿಣಿವಾರ (27) ನೀರಿನಲ್ಲಿ ಮುಳುಗಿದವರು.

ತೆಪ್ಪದಲ್ಲಿದ್ದ ಯಶವಂತ ಹಾಗೂ ವಿನಯ್ ಈಜಿ ದಡ ಸೇರಿದ್ದಾರೆ. ಸಾಗರದ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಗ್ರಾಮಾಂತರ ಠಾಣೆ ಪೊಲೀಸರು ನೀರು ಪಾಲಾಗಿರುವ ಮೂವರ ರಕ್ಷಣಾ ಕಾರ್ಯ ಆರಂಭಿಸಿದ್ದಾರೆ.

ರಘುಪತಿ ಭಟ್ಟರಿಗೆ 'ಕಾಳಿದಾಸ ಸಮ್ಮಾನ್' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಂಸ್ಕೃತಿ ಮತ್ತು ಕಲೆಯಲ್ಲಿ ಜೀವಮಾನ ಸಾಧನೆಗಾಗಿ ಮಧ್ಯಪ್ರದೇಶ ಸರ್ಕಾರ ಕೊಡಮಾಡುವ 2023ನೇ ಸಾಲಿನ 'ಕಾಳಿದಾಸ ಸಮ್ಮಾನ್' ಪ್ರಶಸ್ತಿಯನ್ನು ಮೈಸೂರಿನ ವರ್ಣಚಿತ್ರಕಾರ ಗಂಜೀಫಾ ರಘುಪತಿ ಭಟ್ಟ ಅವರಿಗೆ ಮಧ್ಯಪ್ರದೇಶದ ಉಜ್ಜಯಿನಿಯ ಕಾಳಿದಾಸ ಸಂಸ್ಕೃತ ಅಕಾಡೆಮಿಯಲ್ಲಿ ಮಂಗಳವಾರ ಉಪರಾಷ್ಟ್ರಪತಿ ಜಗದೀಪ್ ಧನಕರ್ ಪ್ರದಾನ ಮಾಡಿದರು.

66ನೇ ಅಖಿಲ ಭಾರತ ಕಾಳಿದಾಸ ದಿನಾಚರಣೆ ಅಂಗವಾಗಿ ಕಲೆ, ಸಂಗೀತ, ನೃತ್ಯ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ಅನನ್ಯ ಕೊಡುಗೆ ನೀಡಿದ ಕಲಾವಿದರನ್ನು ಸಮಾರಂಭದಲ್ಲಿ ಗೌರವಿಸಲಾಯಿತು. ರಘುಪತಿ ಭಟ್ (2023) ಅವರಿಗೆ ರಾಷ್ಟ್ರೀಯ ಕಾಳಿದಾಸ್ ಪ್ರಶಸ್ತಿ (ಕಲೆ) ನೀಡಲಾಯಿತು. ಪ್ರಶಸ್ತಿಯು ₹5 ಲಕ್ಷ ನಗದು, ಶಾಲು ಹಾಗೂ ಫಲಕವನ್ನು ಒಳಗೊಂಡಿದೆ.

ಮೈಸೂರಿನ ಲಕ್ಷಣ ಶಾಸ್ತ್ರದ ಅನ್ವಯ ಚಿತ್ರ ರಚಿಸುವಲ್ಲಿ ಪರಿಣತರಾಗಿರುವ ಗಂಜೀಫಾ ರಘುಪತಿ ಭಟ್ಟ ಅವರು, ಅಳಿವಿನಂಚಿನಲ್ಲಿದ್ದ ಗಂಜೀಫಾ ಚಿತ್ರಕಲೆ ಹಾಗೂ ಕರಾವಳಿ ಭಾಗದ ಕಾವಿ ಕಲೆಯನ್ನು ಪುನರುಜ್ಜೀವನಗೊಳಿಸುವ ಮೂಲಕ ಹೆಚ್ಚು ಪ್ರಸಿದ್ಧರು. ಭಟ್ಟರು, ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮ ಅವರಿಂದ 1993ರಲ್ಲಿ ರಾಷ್ಟ್ರ ಪ್ರಶಸ್ತಿ ಸ್ವೀಕರಿಸಿದ್ದರು.

ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆಯನ್ನು ಮಧ್ಯಪ್ರದೇಶದ ರಾಜ್ಯಪಾಲ ಮಂಗುಭಾಯಿ ಪಟೇಲ್ ವಹಿಸಿದ್ದರು. ಮಧ್ಯಪ್ರದೇಶದ ಮುಖ್ಯಮಂತ್ರಿ ಡಾ. ಮೋಹನ್ ಯಾದವ್, ಸಂಸ್ಕೃತಿ, ಪ್ರವಾಸೋದ್ಯಮ ಸಚಿವ ಧರ್ಮೇಂದ್ರ ಸಿಂಗ್ ಲೋಧಿ, ಉದ್ಯೋಗ ಸಚಿವ ಗೌತಮ್ ಟೆಟ್ವಾಲ್ ಇದ್ದರು.

ಮಧ್ಯಪ್ರದೇಶದ ಉಜ್ಜಯಿನಿಯ ಕಾಳಿದಾಸ ಸಂಸ್ಕೃತ ಅಕಾಡೆಮಿಯಲ್ಲಿ ಮಂಗಳವಾರ ನಡೆದ 66ನೇ ಅಖಿಲ ಭಾರತ ಕಾಳಿದಾಸ ದಿನಾಚರಣೆ ಸಮಾರಂಭದಲ್ಲಿ ಮೈಸೂರಿನ ವರ್ಣಚಿತ್ರಕಾರ ಗಂಜೀಫಾ ರಘುಪತಿ ಭಟ್ಟ ಅವರಿಗೆ ಪ್ರತಿಷ್ಠಿತ ಕಾಳಿದಾಸ ಸಮ್ಮಾನ್ ಪ್ರಶಸ್ತಿಯನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಪ್ರದಾನ ಮಾಡಿದರು

'ಓಲೈಕೆ ರಾಜಕಾರಣ ನಿಲ್ಲಿಸಿ, ಇಲ್ಲವೇ ಹುಡುಕಿ ಕೊಲ್ಲುವ ದಿನಗಳು ಬರಲಿವೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಮತ ಬ್ಯಾಂಕ್ ರಾಜಕಾರಣಕ್ಕಾಗಿ ಅಲ್ಪಸಂಖ್ಯಾತರ ಓಲೈಕೆ ಮಾಡುವುದನ್ನು ಹೀಗೆಯೇ ಮುಂದುವರಿಸಿದರೆ ಕಾಂಗ್ರೆಸ್‌ನವರನ್ನು ಹುಡುಕಿ ಕೊಲ್ಲುವ ದಿನಗಳು ಬಂದರೂ ಆಶ್ಚರ್ಯವಿಲ್ಲ' ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ಕೆ.ಎಸ್. ಈಶ್ವರಪ್ಪ

'ಕಾಂಗ್ರೆಸ್ ಮಿತ್ರರೇ, ಮುಸ್ಲಿಮರ ತುಷ್ಟೀಕರಣ ನೀತಿಯನ್ನು ಇನ್ನಾದರೂ ಬಿಡಿ. ಇಲ್ಲದಿದ್ದರೆ ಹಿಂದೂಗಳು ದಂಗೆ ಏಳಲಿದ್ದಾರೆ. ಓಟಿನ ಆಸೆಗಾಗಿ ರಾಜ್ಯವನ್ನು ಇಸ್ಲಾಮೀಕರಣ ಮಾಡಬೇಡಿ' ಎಂದು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

'ರಾಜ್ಯದಲ್ಲಿ ದಿನೇದಿನೇ ವಕ್ಫ್ ಆಸ್ತಿ ನಮೂದು ಪ್ರಕರಣ ಹೆಚ್ಚಾಗುತ್ತಲೇ ಇವೆ. ಈ ಅಚಾತುರ್ಯಗಳನ್ನು ಕಂಡರೂ ರಾಜ್ಯ ಸರ್ಕಾರ ಸುಮ್ಮನಿದೆ. ರೈತರ ಭೂಮಿ, ದೇವಸ್ಥಾನ, ಮಠಗಳು ಅಷ್ಟೇ ಏಕೆ ಶಾಲೆ- ಕಾಲೇಜುಗಳು, ಪುರಾತತ್ವ ಇಲಾಖೆಯ ಆಸ್ತಿಗಳನ್ನೂ ವಕ್ಫ್ ಆಸ್ತಿ ಎಂದು ಬದಲಾಯಿಸಲಾಗಿದೆ. ವಿಶ್ವೇಶ್ವರಯ್ಯನವರು ಹುಟ್ಟಿದ ಗ್ರಾಮವನ್ನೂ ಇವರು ಬಿಟ್ಟಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಡಾ.ಬಿ.ಆರ್. ಅಂಬೇಡ್ಕರ್ ಅವರು ಇಸ್ಲಾಂ ಧರ್ಮ ಸೇರಲು ಸಿದ್ಧತೆ ಮಾಡಿಕೊಂಡಿದ್ದರು ಎಂದು ಹೇಳುವ ಮೂಲಕ ಅವರಿಗೂ ಅಪಮಾನ ಮಾಡಲಾಗುತ್ತಿದೆ. ಕಾಂಗ್ರೆಸ್‌ನ ಒಬ್ಬ ನಾಯಕನೂ ಇದರ ವಿರುದ್ಧ ತುಟಿ ಬಿಚ್ಚುತ್ತಿಲ್ಲ ಏಕೆ? ಎಂದು ಅವರು ಪ್ರಶ್ನಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಘೋಷಣೆ ಮಾಡಲು ಹೊರಟಿದ್ದಾರೆ. ಕೇಳಿದರೆ ಹಾರಿಕೆ ಉತ್ತರ ಕೊಡುತ್ತಿದ್ದಾರೆ. ಇವರೇನು ಹಿಂದೂಸ್ತಾನವನ್ನು ಪಾಕಿಸ್ತಾನ ಮಾಡಲು ಹೊರಟಿದ್ದಾರಾ? ಶೇ 4ರಷ್ಟು ಮೀಸಲಾತಿ ನೀಡಬೇಕೇ? ಇದು ಓಲೈಕೆ ರಾಜಕಾರಣವಲ್ಲವೇ?' ಎಂದು ಪ್ರಶ್ನಿಸಿದರು.

'ಧರ್ಮರಕ್ಷಣೆಗೆ ಮಠ ಬಿಟ್ಟು ಬನ್ನಿ'

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): 'ಸಾವಿರಾರು ವರ್ಷಗಳ ಇತಿಹಾಸವಿರುವ ಮಠ ಮಂದಿರಗಳನ್ನು ವಕ್ಫ್ ಕಬಳಿಸಲು ನಿಂತಿದೆ. 33 ಲಕ್ಷ ಎಕರೆ ತನ್ನದೆಂದು ವಕ್ಫ್ ಬೇಡಿಕೆ ಇಟ್ಟಿದೆ. ಹೀಗಾದರೆ ದೇಶದಲ್ಲಿ ಹಿಂದೂಗಳು ಉಳಿಯಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಎಚ್ಚರಿಸಿದರು.

ಬಸನಗೌಡ ಪಾಟೀಲ ಯತ್ನಾಳ

ಸೈದಾಪುರ ಗ್ರಾಮದಲ್ಲಿ ಬುಧವಾರ ಶಿವಲಿಂಗೇಶ್ವರ ದೇವಸ್ಥಾನ ಉದ್ಘಾಟನೆ ಬಳಿಕ ನಡೆದ ಧರ್ಮಸಭೆಯಲ್ಲಿ ಮಾತನಾಡಿದ ಅವರು,'ದೇಶದಲ್ಲಿ ದೊಡ್ಡ ಷಡ್ಯಂತ್ರ ನಡೆದಿದೆ. ಧರ್ಮ ಮತ್ತು ದೇಶ ರಕ್ಷಣೆಗಾಗಿ ಎಲ್ಲ ಮಠಾಧೀಶರು ಮಠ ಬಿಟ್ಟು ಹೊರಬಂದು ಮಾತನಾಡಬೇಕು. ಈಗ ಮಠಾಧೀಶ ರನ್ನು ಹೆದರಿಸಲಾಗುತ್ತಿದೆ. ಈಗಲೂ ಮಾತನಾಡದಿದ್ದರೆ ಮುಂದೆಂದೂ ಮಾತನಾಡದ ಸ್ಥಿತಿ ಬರುತ್ತದೆ' ಎಂದರು.

ನಗನಾಣ್ಯ ಪತ್ತೆ

ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಇರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ್ ಯಲ್ಲಪ್ಪ ಆಲದರ್ತಿ ಅವರ ಮನೆಯಲ್ಲಿ ಲೋಕಾಯುಕ್ತ ಪೊಲೀಸರು ಬುಧವಾರ ಪರಿಶೀಲನೆ ನಡೆಸಿದ್ದು, ₹15 ಲಕ್ಷ ನಗದು ಸೇರಿ ಹಲವು ಸಾಮಗ್ರಿಗಳನ್ನು ವಶಪಡಿಸಿಕೊಂಡರು

ಜೆಎನ್‌ಯು ಕನ್ನಡ ಪೀಠ: ಮುಖ್ಯಸ್ಥರ ನೇಮಕಕ್ಕೆ ಶೋಧನಾ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಲ್ಲಿನ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕನ್ನಡ ಪೀಠಕ್ಕೆ ಮುಖ್ಯಸ್ಥರ ನೇಮಿಸಲು ಶೋಧನಾ ಸಮಿತಿ ರಚಿಸಲಾಗಿದೆ.

ಶೋಧನಾ ಸಮಿತಿಯಲ್ಲಿ ಪ್ರಾಧ್ಯಾಪಕರಾದ ಶೋಭಾ ಶಿವಶಂಕರನ್, ರಮೇಶ್ ಸಾಲ್ಯಾನ್, ರೀಟಾ ಸೋನಿ ಹಾಗೂ ಸಂಗಮೇಶ್ ಇದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಶ್ವವಿದ್ಯಾಲಯ ಪರಸ್ಪರ ಮಾಡಿಕೊಂಡ ಒಪ್ಪಂದದ ಪ್ರಕಾರ ಕನ್ನಡ ಪೀಠವು 2015ರಲ್ಲಿ ಕಾರ್ಯಾರಂಭ ಮಾಡಿತ್ತು. ಪ್ರೊ. ಪುರುಷೋತ್ತಮ ಬಿಳಿಮಲೆ ಅವರನ್ನು ಕನ್ನಡ ಪೀಠದ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿತ್ತು.

ಅವರ ಬಳಿಕ ಪ್ರೊ. ವಿಶ್ವನಾಥ್ ಅವರನ್ನು ನೇಮಿಸಲಾಗಿತ್ತು. ವಿಶ್ವನಾಥ್ ಅವರ ಅವಧಿ ಸೆಪ್ಟೆಂಬರ್‌ನಲ್ಲಿ ಮುಗಿದಿತ್ತು. ಕನ್ನಡ ಪೀಠವು ಸ್ಥಗಿತಗೊಳ್ಳುವ ಆತಂಕ ಎದುರಾಗಿತ್ತು. ಕನ್ನಡ ಪೀಠಕ್ಕೆ ಮುಖ್ಯಸ್ಥರನ್ನು ನೇಮಿಸುವಂತೆ ಆಗ್ರಹಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ವಿವಿಯ ಕುಲಪತಿ ಅವರಿಗೆ ಇತ್ತೀಚೆಗೆ ಪತ್ರ ಬರೆದಿದ್ದರು.

ಪೀಠಕ್ಕೆ ಕರ್ನಾಟಕ ಸರ್ಕಾರವು ₹5 ಕೋಟಿ ಆರ್ಥಿಕ ನೆರವು ನೀಡಿದೆ. ಇದರಿಂದ ಲಭಿಸುವ ಬಡ್ಡಿಯಿಂದ ಕನ್ನಡ ಪೀಠ ಕಾರ್ಯನಿರ್ವಹಿಸುತ್ತಿದೆ. ವಾರ್ಷಿಕ ಬಡ್ಡಿ ₹30 ಲಕ್ಷದಷ್ಟು ಬರುತ್ತದೆ. ಈ ಮೊತ್ತವು ಪೀಠದ ಮುಖ್ಯಸ್ಥರ ವೇತನ ಪಾವತಿಗೆ ಸಾಕಾಗುತ್ತದೆ. ಕನ್ನಡ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಅನುದಾನದ ಕೊರತೆ ಉಂಟಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹೆಚ್ಚುವರಿ ಅನುದಾನ ನೀಡಬೇಕು ಎಂದು ಜೆಎನ್‌ಯು ಪ್ರಾಧ್ಯಾಪಕರೊಬ್ಬರು ಒತ್ತಾಯಿಸಿದರು.

'ಕನ್ನಡ ಪೀಠ ಬಲಪಡಿಸಲು ವಿಶ್ವವಿದ್ಯಾಲಯದ ಸಹಕಾರ ಅಗತ್ಯ. ಪೀಠದ ಮುಖ್ಯಸ್ಥರಿಗೆ ಯುಜಿಸಿಯಿಂದಲೇ ವೇತನ ಸಿಗಬೇಕು. ಈ ಸಂಬಂಧ ಪ್ರಾಧಿಕಾರದ ನಿಯೋಗವು ಕುಲಪತಿಯವರನ್ನು ಭೇಟಿ ಮಾಡಿ ಒತ್ತಡ ಹೇರಿದೆ' ಎಂದು ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಬಿ.ಎಸ್ಸಿ, ಪಶುವೈದ್ಯಕೀಯ, ಆಯುಷ್: ಸೀಟು ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಸ್ಸಿ (ಅಗ್ರಿ), ಪಶು ವೈದ್ಯಕೀಯ ಕೋರ್ಸ್‌ಗಳ ಮತ್ತು ಆಯುಷ್ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಪ್ರಕಟಿಸಿದೆ.

ನವೆಂಬರ್ 14ರೊಳಗೆ ಶುಲ್ಕ ಪಾವತಿಸಿ, ನ.15ರೊಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಪಶು ವೈದ್ಯಕೀಯ ಕೋರ್ಸ್‌ನ 58 ಸೀಟು ಸೇರಿದಂತೆ ಒಟ್ಟು 338 ಸೀಟು ಹಂಚಿಕೆ ಮಾಡಲಾಗಿದೆ. 1,800 ಅಭ್ಯರ್ಥಿಗಳು ಆಪ್ಷನ್ ದಾಖಲು ಮಾಡಿದ್ದರು ಎಂದು ತಿಳಿಸಿದ್ದಾರೆ.

ಆಪ್ಷನ್ ದಾಖಲಿಸಲು ಅವಕಾಶ: ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್ ಪ್ರವೇಶ ಸಲುವಾಗಿ ನಡೆಸುವ ವಿಶೇಷ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಇಚ್ಛಿಸುವವರು, ನ.14ರ ಸಂಜೆ 6ರವರೆಗೆ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗಿದೆ.

ಹೊಸ ನರ್ಸಿಂಗ್ ಕಾಲೇಜು ಸ್ಥಾಪನೆ ಹಾಗೂ ಹೆಚ್ಚುವರಿ ಸೀಟುಗಳ ಲಭ್ಯತೆ ಕಾರಣಕ್ಕೆ ಮತ್ತಷ್ಟು ಸಮಯ ನೀಡಿದ್ದು, ಅಭ್ಯರ್ಥಿಗಳು ಇದರ ಉಪಯೋಗ ಪಡೆದುಕೊಳ್ಳಬೇಕೆಂದು ಕೆಇಎ ಹೇಳಿದೆ.

ಸೀಟು ಹಂಚಿಕೆ ಫಲಿತಾಂಶ ನವೆಂಬರ್ 15ರ ಸಂಜೆ 6ಕ್ಕೆ ಪ್ರಕಟಿಸಲಾಗುತ್ತದೆ. ನ.19ರೊಳಗೆ ಶುಲ್ಕ ಪಾವತಿಸಿ, ಕಾಲೇಜುಗಳಿಗೆ ಪ್ರವೇಶ ಪಡೆಯಬಹುದು.

ಬಿ.ಇಡಿ ವ್ಯಾಸಂಗದ ರಜೆಯೂ ಸೇವಾವಧಿ

ಬೆಂಗಳೂರು: ಬಿ.ಇಡಿ ಪದವಿ ಪಡೆಯದೇ 2013ರಲ್ಲಿ ನೇಮಕಗೊಂಡಿದ್ದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸೇವೋತ್ತರ ವ್ಯಾಸಂಗದ ಅವಧಿಯನ್ನು (ಬಿ.ಇಡಿ ಕೋರ್ಸ್‌ಗೆ ಹಾಕಿದ್ದ ರಜೆ) ಅಸಾಧಾರಣ ರಜೆ ಎಂದು ಪರಿಗಣಿಸಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಆದೇಶ ಹೊರಡಿಸಿದೆ.

ಬಿ.ಇಡಿ ವ್ಯಾಸಂಗ ಪೂರೈಸಲು ಉಪನ್ಯಾಸಕರು ಹಾಕಿದ್ದ ವೇತನ ರಹಿತ ರಜೆಯ ಅವಧಿಯನ್ನು ಅಸಾಧಾರಣ ರಜೆ ಎಂದು ಆದೇಶ ಮಾಡಿರುವುದಿಂದ ಅವರಿಗೆ 10 ವರ್ಷಗಳ ಕಾಲಮಿತಿ ಬಡ್ತಿ ಹಾಗೂ 15 ವರ್ಷಗಳ ಹಿರಿಯ ವೇತನ ಶ್ರೇಣಿ ಮಂಜೂರು ಮಾಡಲು ಅನುಮತಿ ನೀಡಿದೆ.

ಬಾಣಂತಿಯರ ಸಾವು: ತನಿಖಾ ತಂಡ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಇತ್ತೀಚೆಗೆ ವರದಿಯಾದ ಬಾಣಂತಿಯರ ಸಾವಿನ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ, ವರದಿ ನೀಡಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ತನಿಖಾ ತಂಡ ರಚಿಸಿದೆ.

ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಸಿ., ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಸಹ ಪ್ರಾಧ್ಯಾಪಕ ಡಾ. ಭಾಸ್ಕರ್ ಬಿ. ಹಾಗೂ ಸಹಾಯಕ ಪ್ರಾಧ್ಯಾಪಕ ಡಾ. ಹರ್ಷ ಟಿ.ಆರ್. ತನಿಖಾ ತಂಡದಲ್ಲಿದ್ದಾರೆ.

ಇವರು ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಹೆರಿಗೆ ವೇಳೆ ಸಾವಿಗೆ ಕಾರಣವೇನು ಎಂಬುದರ ಬಗ್ಗೆ ತನಿಖಾ ವರದಿಯನ್ನು ಜರೂರಾಗಿ ಸಲ್ಲಿಸಬೇಕು ಎಂದು ವಿಶ್ವವಿದ್ಯಾಲಯದ ಕುಲಸಚಿವರು ಆದೇಶದಲ್ಲಿ ತಿಳಿಸಿದ್ದಾರೆ.

ಒಳ ಮೀಸಲಾತಿಗೆ ಆಯೋಗ

ಒಂದನೇ ಪುಟದಿಂದ...

ಒಳ ಮೀಸಲಾತಿ ಕುರಿತು ಪರಿಶೀಲಿಸುವ ಸಲುವಾಗಿ ಆಯೋಗ ರಚಿಸಲು ಅಗಸ್ಟ್ 24ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು.

ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಬೇಕೆಂಬ ಬೇಡಿಕೆ ಹಾಗೂ ಪರಿಶಿಷ್ಟ ಪಂಗಡದವರ ಮೀಸಲಾತಿ ಹೆಚ್ಚಳದ ಕುರಿತು ವರದಿ ನೀಡಲು ನ್ಯಾ. ನಾಗಮೋಹನದಾಸ್ ಅವರ ನೇತೃತ್ವದಲ್ಲಿಯೇ ಸಮಿತಿ ರಚಿಸಲಾಗಿತ್ತು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಐದು ಪ್ರಮುಖ ಇಲಾಖೆಗಳ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿತ್ತು ಎಂಬ ಆರೋಪ ಕುರಿತು ತನಿಖೆ ನಡೆಸಲು ನಾಗಮೋಹನ್ ದಾಸ್ ನೇತೃತ್ವದ ಆಯೋಗ ವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ 2023ರ ಆಗಸ್ಟ್ 5ರಂದು ನೇಮಿಸಿದ್ದು, ಆಯೋಗ ತನಿಖೆ ನಡೆಸುತ್ತಿದೆ.

ಒಳಮೀಸಲಾತಿ ಹಂಚಿಕೆಗೆ ಪರಿಶಿಷ್ಟ ಜಾತಿಯಲ್ಲಿರುವ ಉಪಜಾತಿಗಳ ಜನಸಂಖ್ಯೆಯ ಎಂಫರಿಕಲ್ ಡಾಟಾ ಅಗತ್ಯವಿದೆ. ಸದ್ಯ 2011ರ ಜನಗಣತಿಯ ಅಂಕಿಅಂಶ ಮಾತ್ರ ಅಧಿಕೃತ. ಆದರೆ, ಅದರಲ್ಲಿ ಉಪ ಜಾತಿಗಳ ಅಂಕಿಅಂಶ ಇಲ್ಲ. ಪರಿಶೀಲನಾತ್ಮಕ ದತ್ತಾಂಶವಾಗಿ ಯಾವುದನ್ನು ಪರಿಗಣಿಸಬೇಕು ಎಂಬ ಬಗ್ಗೆಯೂ ಚರ್ಚೆ ನಡೆದಿದೆ.

ನಾಗಮೋಹನ್ ದಾಸ್

2011ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಯಲ್ಲಿನ ಉಪ ಜಾತಿಗಳ ದತ್ತಾಂಶ ಇಲ್ಲ. ಹೊಸತಾಗಿ ದತ್ತಾಂಶ ಸಂಗ್ರಹಿಸಲು ಕನಿಷ್ಠ ಆರು ತಿಂಗಳು ಬೇಕು.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ಅವರ ಅವಧಿಯಲ್ಲಿ 2015ರಲ್ಲಿ ರಾಜ್ಯದಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯಲ್ಲಿ ಪರಿಶಿಷ್ಟ ಜಾತಿಯಲ್ಲಿನ ಉಪ ಜಾತಿಗಳ ದತ್ತಾಂಶವಿದೆ. ಆದರೆ, ಈ ವರದಿಯನ್ನು ಸರ್ಕಾರ ಇನ್ನೂ ಒಪ್ಪಿಕೊಂಡಿಲ್ಲ.

ಕಾಂತರಾಜ ಆಯೋಗದ ವರದಿಯನ್ನು ಸರ್ಕಾರ ಒಪ್ಪಿಕೊಳ್ಳಲಿದೆ ಎಂದು ಮುಖ್ಯಮಂತ್ರಿ ಮಾತು ಕೊಟ್ಟಿದ್ದಾರೆ. ಅದರಲ್ಲಿರುವ ದತ್ತಾಂಶವನ್ನೇ ಆಯೋಗವು ಪರಿಗಣನೆಗೆ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಶಂಕಿತರ ಪತ್ತೆಗೆ ಮುಂದುವರಿದ ಶೋಧ

ಅಲಿಗಢ (ಉತ್ತರ ಪ್ರದೇಶ), (ಪಿಟಿಐ): ಅಲಿಗಢ ಜಂಕ್ಷನ್ ರೈಲ್ವೆ ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಬಂದು ಆರು ದಿನದ ನಂತರವು ಶಂಕಿತರಿಗಾಗಿ ಶೋಧ ಮುಂದುವರಿದಿದೆ. ಶೋಧ ಕಾರ್ಯಕ್ಕೆ ಸ್ಥಳೀಯ ಪೊಲೀಸರು ಈಗ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ (ಎಎಂಯು) ನೆರವನ್ನೂ ಪಡೆದುಕೊಂಡಿದ್ದಾರೆ.

ನವೆಂಬರ್ 7ರಂದು ಬೆದರಿಕೆ ಕರೆ ಬಂದಿತ್ತು. ಪೊಲೀಸರು ತ್ವರಿತವಾಗಿ ಭದ್ರತಾ ಕ್ರಮಗಳನ್ನು ಬಿಗಿಗೊಳಿಸಿದ್ದರು. ಮೊಹಮ್ಮದ್ ವಾಸೀಮ್ ಅಲಿ ನೇತೃತ್ವದಲ್ಲಿ ಎಎಂಯು ತಂಡ ಪೊಲೀಸರ ಜೊತೆಗೂಡಿ ಕೆಲಸ ಮಾಡುತ್ತಿದೆ. ಶಂಕಿತರ ಪತ್ತೆಗಾಗಿ ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ಗಮನಿಸುತ್ತಿದೆ.

ಶಂಕಿತರ ಪತ್ತೆ ಸಾಧ್ಯವಾಗಿಲ್ಲ. ಆ ನಿಟ್ಟಿನಲ್ಲಿ ಯತ್ನ ನಡೆದಿದೆ ಎಂದು ಅಲಿ ಪ್ರತಿಕ್ರಿಯಿಸಿದರು. ಶಂಕಿತರ ಪತ್ತೆಗೆ ಸ್ಥಳೀಯ ಪೊಲೀಸರ ಜೊತೆಗೂಡಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಆರ್‌ಪಿಎಫ್ ಉಸ್ತುವಾರಿ ಅಧಿಕಾರಿ ಅಮಿತ್ ಕುಮಾರ್ ಸಿಂಗ್ ಅವರು ಪ್ರತಿಕ್ರಿಯಿಸಿದರು.

ಶೇ 25ರಷ್ಟು ದಂಡ ಠೇವಣಿಗೆ ಹೈಕೋರ್ಟ್ ಸೂಚನೆ

ಸೈಲ್ ಶಿಕ್ಷೆ ಅಮಾನತು: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಪ್ರಕರಣದ ಅಪರಾಧಿಗಳಾದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಮತ್ತಿತರರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಕಠಿಣ ಜೈಲು ಶಿಕ್ಷೆಯನ್ನು ಹೈಕೋರ್ಟ್ ಅಮಾನತ್ತಿನಲ್ಲಿ ಇರಿಸಿದೆ. ₹44 ಕೋಟಿಗೂ ಹೆಚ್ಚಿನ ದಂಡದ ಮೊತ್ತದಲ್ಲಿ ಶೇ 25ರಷ್ಟನ್ನು ಕೋರ್ಟ್‌ನಲ್ಲಿ ಠೇವಣಿ ಇರಿಸಬೇಕು' ಎಂದು ಆದೇಶಿಸಿದೆ.

ಇದರಿಂದಾಗಿ ಅಪರಾಧಿಗಳ ತಾತ್ಕಾಲಿಕ ಬಿಡುಗಡೆಗೆ ಅನುವು ಮಾಡಿಕೊಟ್ಟಿದೆ.



ಈ ಸಂಬಂಧ ಕಾರವಾರ ವಿಧಾನಸಭಾ ಕ್ಷೇತ್ರದ ಶಾಸಕ ಸತೀಶ್ ಕೃಷ್ಣ ಸೈಲ್ ಸೇರಿದಂತೆ ಆರು ಜನ ಅಪರಾಧಿಗಳ ಒಟ್ಟು 10 ಕ್ರಿಮಿನಲ್ ಮೇಲ್ಮನವಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮೇಲ್ಮನವಿದಾರರ ಪರ ವಕೀಲರು, 'ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಬೇಕು ಮತ್ತು ದಂಡದ ಮೊತ್ತಕ್ಕೆ ಸಂಬಂಧಿಸಿದಂತೆ ವಾದ ಮಾಡಬೇಕಿದೆ. ಈಗಲೇ ದಂಡದ ಮೊತ್ತ ಠೇವಣಿ ಇರಿಸುವಂತೆ ಆದೇಶಿಸಬಾರದು. ಅಂತಿಮ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯ ಈ ಸಂಗತಿಯನ್ನು ಪರಿಗಣಿಸಬಹುದು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, 'ಶಿಕ್ಷೆ ಅಮಾನತಿಗೆ ಯಾವುದೇ ಆಕ್ಷೇಪವಿಲ್ಲ. ಆದರೆ, ಅರ್ಜಿದಾರರು ದಂಡದ ಮೊತ್ತವನ್ನು ಠೇವಣಿ ಇರಿಸಲು ವಿನಾಯಿತಿ ಕೋರುತ್ತಿರುವುದು ಸರಿಯಲ್ಲ. ಇವರಿಗೆಲ್ಲಾ ಅವತ್ತು ತಪ್ಪು ಮಾಡುವಾಗ ಭವಿಷ್ಯದಲ್ಲಿ ಇಂತಹ ಸ್ಥಿತಿ ಎದುರಿಸಬೇಕಾಗುತ್ತದೆ ಎಂಬ ಅರಿವಿರಲಿಲ್ಲವೇ' ಎಂದು ಖಾರವಾಗಿ ಪ್ರಶ್ನಿಸಿದರು.

'ಇದು ಯಾರೋ ಹೊಟ್ಟೆ ಹಸಿದಿದೆ ಎಂದು ಬ್ರೆಡ್ ಅನ್ನು ಕದ್ದು ತಿಂದ ನಿರ್ಗತಿಕನ ಕಥೆಯಲ್ಲ. ಇವರೆಲ್ಲಾ ದೇಶದ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಿದ್ದಾರೆ. ವಿಚಾರಣಾ ನ್ಯಾಯಾಲಯ ಸೂಕ್ತವಾದ ರೀತಿಯಲ್ಲೇ ದಂಡ ವಿಧಿಸಿದೆ. ಅದನ್ನು ಪಾವತಿಸಲು ಆದೇಶಿಸಬೇಕು. ಇದರಲ್ಲಿ ವಿನಾಯಿತಿ ನೀಡಬಾರದು' ಎಂದು ನ್ಯಾಯಪೀಠಕ್ಕೆ ಆಗ್ರಹಿಸಿದರು.

ವಾದ-ಪ್ರತಿವಾದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಅಪರಾಧಿಗಳ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿತಲ್ಲದೇ 'ದಂಡದ ಮೊತ್ತದಲ್ಲಿ ಶೇ 25ರಷ್ಟನ್ನು ಠೇವಣಿ ಇರಿಸಿ' ಎಂದು ಅರ್ಜಿದಾರರಿಗೆ ಷರತ್ತು ವಿಧಿಸಿ ಆದೇಶಿಸಿತು.

ಮೆಸರ್ಸ್ ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ ಪ್ರೈವೇಟ್ ಲಿಮಿಟೆಡ್ ಕಂಪನಿ ಹಾಗೂ ಅದರ ವ್ಯವಸ್ಥಾಪಕ ನಿರ್ದೇಶಕರೂ ಆದ ಶಾಸಕ ಸತೀಶ್ ಸೈಲ್ ಮತ್ತು ಕೆ.ವಿ.ಎನ್.ಗೋವಿಂದ ರಾಜ್ ಅವರ ಆರು ಮೇಲ್ಮನವಿಗಳ ಪರ ಹಿರಿಯ ವಕೀಲರಾದ ಸಿ.ವಿ. ನಾಗೇಶ್ ಹಾಗೂ ಎಸ್.ಸುನಿಲ್ ಕುಮಾರ್, ಮೆಸರ್ಸ್ ಶ್ರೀ ಲಕ್ಷ್ಮಿ ವೆಂಕಟೇಶ್ವರ ಮಿನರಲ್ಸ್ ಪರ ಮತ್ತು ಕೆ.ಮಹೇಶ್ ಕುಮಾರ್ ಅಲಿಯಾಸ್ ಖಾರದಪುಡಿ ಮಹೇಶ್ ಪರ ಹಷ್ಮತ್ ಪಾಷ, ಪ್ರೇಮಚಂದ ಗರಗ್ ಪರ ಕಿರಣ್ ಜವಳಿ, ಮೆಸರ್ಸ್ ಸ್ವಸ್ತಿಕ್ ಸ್ಟೀಲ್ (ಹೊಸಪೇಟೆ) ಪ್ರೈವೇಟ್ ಲಿಮಿಟೆಡ್ ಕಂಪನಿ ಮತ್ತು ಅದರ ನಿರ್ದೇಶಕ ಕೆ.ವಿ.ನಾಗರಾಜ್ ಅಲಿಯಾಸ್ ಸ್ವಸ್ತಿಕ್ ನಾಗರಾಜ್ ಪರ ಎನ್.ವೆಂಕಟರಮಣ ನಾಯಕ್, ಆಶಾಪುರ ಮೈನ್ ಕೆಮ್ ಪರ ರವಿ ಬಿ.ನಾಯಕ್ ವಾದ ಮಂಡಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಮಕ್ಕಳ ದಿನಾಚರಣೆ

ಶ್ರೀ ಜವಾಹರಲಾಲ್ ನೆಹರು

ಅವರ ಸ್ಮರಣೆ

ಈ ಸಂಭ್ರಮದ ಸಂದರ್ಭದಲ್ಲಿ
ಮಾನ್ಯ ಉಪಮುಖ್ಯಮಂತ್ರಿಗಳಾದ

ಶ್ರೀ ಡಿ.ಕೆ. ಶಿವಕುಮಾರ್

ಅವರಿಂದ ಸರ್ಕಾರಿ ಶಾಲೆಗಳ ಮಕ್ಕಳೊಂದಿಗೆ
ಭವಿಷ್ಯದ ಕರ್ನಾಟಕಕ್ಕಾಗಿ ಸಂವಾದ

ಉಪಸ್ಥಿತಿ

ಶ್ರೀ ಮಧು ಬಂಗಾರಪ್ಪ
ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು
ಕರ್ನಾಟಕ ಸರ್ಕಾರ

ಡಾ. ಶಾಲಿನಿ ರಜನೀಶ್
ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ

14 ನವೆಂಬರ್ 2024 | ಬೆಳಿಗ್ಗೆ 9:00 ಗಂಟೆ

3ನೇ ಮಹಡಿ, ಸಮ್ಮೇಳನ ಸಭಾಂಗಣ, ವಿಧಾನಸೌಧ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಒಲಿಂಪಿಕ್ ಸಂಸ್ಥೆ
ಸಹಯೋಗ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಮಿನಿ ಒಲಿಂಪಿಕ್ ಕ್ರೀಡಾಕೂಟ 2024
ನವೆಂಬರ್ 14-20, 2024

ಕರ್ನಾಟಕದ ತೃತೀಯ

ಮಿನಿ ಒಲಿಂಪಿಕ್ಸ್

ಉದ್ಘಾಟನೆ 14ನೇ ನವೆಂಬರ್ 2024, ಸಂಜೆ 5.00 ಗಂಟೆಗೆ
ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಂಗಳೂರು

ಉದ್ಘಾಟನೆ

ಶ್ರೀ ಸಿದ್ದರಾಮಯ್ಯ

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

ಶ್ರೀ ಪಿ.ಸಿ.ಮೋಹನ್
ಮಾನ್ಯ ಲೋಕಸಭಾ ಸದಸ್ಯರು (ಬೆಂಗಳೂರು ಕೇಂದ್ರ) ಮತ್ತು ಅಧ್ಯಕ್ಷರು, ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸ್ಥಾಯಿ ಸಮಿತಿ, ಲೋಕಸಭೆ

ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಕೃಷ್ಣ ಬೈರೇಗೌಡ
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಕೆ.ಜೆ. ಜಾರ್ಜ್
ಮಾನ್ಯ ಇಂಧನ ಸಚಿವರು,
ಕರ್ನಾಟಕ ಸರ್ಕಾರ

ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
ಕರ್ನಾಟಕ ಸರ್ಕಾರ

ಡಾ. ಕೆ. ಗೋವಿಂದರಾಜ್
ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು
ಮಾನ್ಯ ಶಾಸಕರು (ವಿಧಾನ ಪರಿಷತ್ತು),
ಅಧ್ಯಕ್ಷರು, ಥ್ರೋಬಾಲ್ ಏಷ್ಯಾ ಹಾಗೂ
ಅಧ್ಯಕ್ಷರು, ಕರ್ನಾಟಕ ಒಲಿಂಪಿಕ್ ಸಂಸ್ಥೆ
ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತಿರುವುದು.

ತಮಗೆ ಆದರದ ಸ್ವಾಗತ

ರಂದೀಪ್ ಡಿ. ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರ

ಆರ್. ಚೇತನ್, ಭಾ.ಪೊ.ಸೇ.
ಆಯುಕ್ತರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರ

ಟಿ. ಅನಂತರಾಜು
ಮಹಾ ಕಾರ್ಯದರ್ಶಿಗಳು
ಕರ್ನಾಟಕ ಒಲಿಂಪಿಕ್ ಸಂಸ್ಥೆ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka dipr.karnataka.gov.in ಕರ್ನಾಟಕ ವಾರ್ತೆ

ಕೆ.ಎಂ.ಎಫ್ ನಂದಿನಿ KSCHF

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು
ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ., ಬೆಂಗಳೂರು | ಬಿ.ಡಿ.ಸಿ.ಸಿ. ಬ್ಯಾಂಕ್, ಬೆಂಗಳೂರು | ಜಿಲ್ಲಾ ಸಹಕಾರಿ ಹಾಲು ಒಕ್ಕೂಟ, ಬೆಂಗಳೂರು
ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳು ಹಾಗೂ ಸಹಕಾರ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

71ನೇ ಅಖಿಲ ಭಾರತ ಸಹಕಾರ ಸಪ್ತಾಹ-2024

ಸಪ್ತಾಹದ ಧ್ಯೇಯ : "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ
ದಿನದ ವಿಷಯ: "ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳವಳಿಯನ್ನು ಬಲಪಡಿಸುವುದು"

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ದಿನಾಂಕ : 14.11.2024, ಗುರುವಾರ **ಸಮಯ:** ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಂಗಳೂರು-560001.

ಶ್ರೀ ಕೆ.ಎನ್.ರಾಜಣ್ಣ
ಮಾನ್ಯ ಸಹಕಾರ ಸಚಿವರು
ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಕೆ. ವೆಂಕಟೇಶ್
ಮಾನ್ಯ ಪಶುಸಂಗೋಪನೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ ಆಡಳಿತ ಮಂಡಳಿ

ಶ್ರೀ ಜಿ.ಟಿ. ದೇವೇಗೌಡ
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು,
ಕ.ರಾ.ಸ.ಮ.ನಿ., ಬೆಂಗಳೂರು

ಶ್ರೀ ಎಸ್.ಟಿ ಸೋಮಶೇಖರ್
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು,
ಕ.ರಾ.ಸ.ವ.ಮ.ನಿ., ಬೆಂಗಳೂರು

ಕಾರ್ಯಕ್ರಮ ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಗೌರವಾನ್ವಿತ ಅತಿಥಿಗಳು
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಪ್ರಲ್ಹಾದ ಜೋಷಿ
ಮಾನ್ಯ ಕೇಂದ್ರ, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರು, ಭಾರತ ಸರ್ಕಾರ
ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಮಾನ್ಯ ಕೇಂದ್ರ, ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರು, ಭಾರತ ಸರ್ಕಾರ

ಗೋ ಪೂಜೆ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು

ಗೌರವಾನ್ವಿತ ಉಪಸ್ಥಿತಿ
ಕು|| ಶೋಭಾ ಕರಂದ್ಲಾಜೆ
ಮಾನ್ಯ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ
ಶ್ರೀ ವಿ. ಸೋಮಣ್ಣ
ಮಾನ್ಯ ಕೇಂದ್ರ, ಜಲಶಕ್ತಿ ಮತ್ತು ರೈಲ್ವೆ ರಾಜ್ಯ ಖಾತೆ ಸಚಿವರು, ಭಾರತ ಸರ್ಕಾರ

ಸಹಕಾರ ತತ್ವಗಳು
ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ
ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ
ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು
ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
ಶಿಕ್ಷಣ, ತರಬೇತಿ, ಸಹಕಾರ ಪ್ರಚಾರ
ಸಹಕಾರ ಸಂಸ್ಥೆಗಳ ನಡುವೆ ಪರಸ್ಪರ ಸಹಕಾರ
ಸಾಮಾಜಿಕ ಕಳಕಳಿ

ಬಮೂಲ್ ಅಧ್ಯಕ್ಷರು ಹಾಗೂ ಬಿಡಿಸಿಸಿ ಬ್ಯಾಂಕಿನ, ಅಧ್ಯಕ್ಷರು

ಸಹಕಾರ ಧ್ವಜದ ಬಣ್ಣಗಳ ಸಂಕೇತಗಳು
ಸಹಕಾರ ಬೇಸಾಯ
ಸಹಕಾರ ಉದ್ದಿಮೆ
ಸಹಕಾರ ಮಾರಾಟ
ಸಹಕಾರ ಪತ್ತು ಮತ್ತು ಹಣಕಾಸು
ಸಹಕಾರ ಶಿಕ್ಷಣ ಮತ್ತು ಪ್ರಚಾರ
ಮಾನವನ ಇತರೆ ಸಹಕಾರ ಚಟುವಟಿಕೆಗಳು
ಸಹಕಾರ ಆರೋಗ್ಯ

ಉಪಸ್ಥಿತ ಮಾನ್ಯ ಸಹಕಾರಿ ಗಣ್ಯರು

ಶ್ರೀ ಜಗದೀಶ್ ಎಂ. ಕವಟಗಿಮಠ
ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಶ್ರೀ ಗದಿಗೆಪ್ಪಗೌಡ. ಪ. ಪಾಟೀಲ
ಉಪಾಧ್ಯಕ್ಷರು,
ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ.,

ಶ್ರೀ ಎನ್. ಗಂಗಣ್ಣ
ನಾಮನಿರ್ದೇಶಿತ ನಿರ್ದೇಶಕರು
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಶ್ರೀ ಆರ್.ರಾಮರೆಡ್ಡಿ
ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಶ್ರೀ ಎ.ಸಿ. ನಾಗರಾಜ್
ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಶ್ರೀ ಎಚ್.ಎನ್. ಅಶೋಕ
ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಶ್ರೀ ಹೆಚ್.ವಿ. ನಾಗರಾಜು
ನಿರ್ದೇಶಕರು
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,

ಶ್ರೀಮತಿ ಕೆ.ಸಿ. ನಾಗರತ್ನ
ವೃತ್ತಿಪರ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಶ್ರೀ ಬಾಪೂಗೌಡ ಡಿ. ಪಾಟೀಲ್
ವೃತ್ತಿಪರ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಶ್ರೀ ಎಂ.ಡಿ. ವಿಜಯ್‌ದೇವ್
ಅಧ್ಯಕ್ಷರು,
ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು

ವಿಶೇಷ ಆಹ್ವಾನಿತರು

ಡಾ. ಎಂ.ಎನ್. ಅಜಯ್ ನಾಗಭೂಷಣ್, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ
ಹಾಗೂ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಶ್ರೀ ಟಿ.ಹೆಚ್.ಎಂ. ಕುಮಾರ್, ಭಾ.ಆ.ಸೇ.
ಸಹಕಾರ ಸಂಘಗಳ ನಿಬಂಧಕರು,
ಸಹಕಾರ ಇಲಾಖೆ

ಸರ್ವರಿಗೂ ಆದರದ ಸ್ವಾಗತ

ಪ್ರಕಟಣೆ : ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ,

ಸಹಕಾರ ಧ್ವಜಾರೋಹಣ
ಶ್ರೀ ಕೆ.ಎನ್.ರಾಜಣ್ಣ
ಮಾನ್ಯ ಸಹಕಾರ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು

ಸಹಕಾರ ಪತ್ರಿಕೆ ವಿಶೇಷ ಸಂಚಿಕೆ ಬಿಡುಗಡೆ
ಶ್ರೀ ಕೆ. ವೆಂಕಟೇಶ್
ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಸಹಕಾರ ಪಿತಾಮಹರ ಭಾವಚಿತ್ರಗಳಿಗೆ ಪುಷ್ಪಾರ್ಚನೆ
ಶ್ರೀ ಜಿ.ಟಿ. ದೇವೇಗೌಡ
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಸಹಕಾರಿಗಳಿಗೆ ಸನ್ಮಾನ
ಶ್ರೀ ಎಲ್.ಬಿ.ಪಿ. ಭೀಮನಾಯ್ಕ
ಮಾನ್ಯ ಅಧ್ಯಕ್ಷರು, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು
ಶ್ರೀ ಹೆಚ್.ಪಿ. ರಾಜ್ ಕುಮಾರ್
ಮಾನ್ಯ ಅಧ್ಯಕ್ಷರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟ, ಬೆಂಗಳೂರು

ಉಪಸ್ಥಿತ ಗಣ್ಯರು
ಸಂಸದರು, ಜಿಲ್ಲೆಯ ಎಲ್ಲಾ ಶಾಸಕರುಗಳು, ವಿಧಾನ ಪರಿಷತ್ತಿನ ಸದಸ್ಯರುಗಳು, ಮಹಾಮಂಡಳಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ನಿರ್ದೇಶಕರುಗಳು, ಸ್ಥಳೀಯ ಸಹಕಾರ ಸಂಸ್ಥೆಗಳ ಅಧ್ಯಕ್ಷರುಗಳು, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು



ಸುಭಾಷಿತ

ನಿಮ್ಮ ಯೋಜನೆಯು ಒಂದು ವರ್ಷದ್ದಾಗಿದ್ದರೆ ಭತ್ತ ಬೆಳೆಯಿರಿ, 10 ವರ್ಷದ್ದಾಗಿದ್ದರೆ ಮರಗಳನ್ನು ಬೆಳೆಸಿ, 100 ವರ್ಷದ್ದಾಗಿದ್ದರೆ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡಿ.

– ಕನ್‌ಫ್ಯೂಷಿಯಸ್

ಬಸ್ ಚಾಲಕ, ಸಿಬ್ಬಂದಿಯ ಆರೋಗ್ಯ ಸುರಕ್ಷಿತ ಪ್ರಯಾಣಕ್ಕೆ ಅಗತ್ಯ

ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಎಂಟಿಸಿ) ಬಸ್ಸಿನ ಚಾಲಕರೊಬ್ಬರು ಚಾಲನೆ ಮಾಡುತ್ತಿದ್ದ ಸಂದರ್ಭದಲ್ಲಿಯೇ ಹೃದಯಾಘಾತಕ್ಕೆ ತುತ್ತಾಗಿ ಮೃತಪಟ್ಟಿರುವುದು ಚಾಲಕರ ಆರೋಗ್ಯ ಮತ್ತು ಅವರ ಸುರಕ್ಷತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಬೇಕಾದ ಅಗತ್ಯವನ್ನು ಹೇಳುತ್ತಿದೆ. ಅದೃಷ್ಟವಶಾತ್, ಆ ಬಸ್ಸಿನಲ್ಲಿದ್ದ ಪ್ರಯಾಣಿಕರಿಗೆ ತೊಂದರೆ ಆಗಲಿಲ್ಲ. ಚಾಲಕನಿಗೆ ಹೃದಯಾಘಾತ ಆಗಿದ್ದನ್ನು ಗಮನಿಸಿದ ಬಸ್ಸಿನ ನಿರ್ವಾಹಕ, ಬಸ್ಸಿನ ಸ್ಟಿಯರಿಂಗ್ ಹಿಡಿದು, ಬಸ್ಸನ್ನು ಸುರಕ್ಷಿತವಾಗಿ ನಿಲ್ಲಿಸುವ ಕೆಲಸ ಮಾಡಿದರು. ಅದೇನೇ ಇದ್ದರೂ ಇಂತಹ ಘಟನೆಗಳು ಬಸ್ಸಿನ ಚಾಲಕ ಹಾಗೂ ಸಿಬ್ಬಂದಿಯ ಜೀವಕ್ಕೆ ಅಪಾಯ ತರುವುದಷ್ಟೇ ಅಲ್ಲದೆ, ರಸ್ತೆಯನ್ನು ಬಳಸುವ ಇತರ ಎಲ್ಲರ ಜೀವಕ್ಕೂ ಕುತ್ತು ತರುತ್ತವೆ. ಬೆಂಗಳೂರಿನ ಸಂಚಾರ ದಟ್ಟಣೆಯ ಪರಿಸರದಲ್ಲಿ ಕುತ್ತಿಗೆ ಹಾಗೂ ನಗರದ ಈ ಒತ್ತಡದ ಜೀವನಶೈಲಿಯನ್ನು ಗಮನಿಸಿದರೆ, ಚಾಲಕರ ಆರೋಗ್ಯದ ಬಗ್ಗೆ ತೀವ್ರ ಆದ್ಯತೆಯ ಮೇರೆಗೆ ಗಮನಹರಿಸಬೇಕಾದ ಎಂಬುದು ವೇದ್ಯವಾಗುತ್ತದೆ. ಸಿಬ್ಬಂದಿಯ ಆರೋಗ್ಯವನ್ನು ಕಾಲಕಾಲಕ್ಕೆ ತಪಾಸಣೆಗೆ ಒಳಪಡಿಸಲು ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ಜೊತೆ ಬಿಎಂಟಿಸಿ ಒಪ್ಪಂದ ಮಾಡಿಕೊಂಡಿದೆ. ಇದು ಸ್ವಾಗತಾರ್ಹ. ಆದರೆ, ಇದೇ ಬಗೆಯ ಆರೋಗ್ಯ ತಪಾಸಣಾ ಕ್ರಮಗಳು ರಾಜ್ಯದ ಇತರ ರಸ್ತೆ ಸಾರಿಗೆ ನಿಗಮಗಳಲ್ಲಿಯೂ ಇವೆಯೇ ಎಂಬುದು ಖಚಿತವಿಲ್ಲ. ದೊಡ್ಡ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಇನ್ನೊಂದೆಡೆ ಕರೆದೊಯ್ಯುವ ಖಾಸಗಿ ಬಸ್‌ಗಳ ಸಿಬ್ಬಂದಿಯನ್ನು ಇದೇ ರೀತಿ ತಪಾಸಣೆಗೆ ಒಳಪಡಿಸಲಾಗುತ್ತಿದೆಯೇ ಎಂಬುದು ಕಳವಳ ಮೂಡಿಸುವಂಥದ್ದು. ಸಾರಿಗೆ ನಿಗಮಗಳ ಸಿಬ್ಬಂದಿಯ ಕೆಲಸದ ಅವಧಿಯು ಬಹಳ ದೀರ್ಘವಾಗಿ ಇರುತ್ತದೆಯಾದ ಕಾರಣ, ಅವರನ್ನು ಕಾಲಕಾಲಕ್ಕೆ ಆರೋಗ್ಯ ತಪಾಸಣೆಗೆ ಒಳಪಡಿಸಬೇಕಿರುವುದು ಅವರ ಸುರಕ್ಷತೆ ಹಾಗೂ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಬಹಳ ಅವಶ್ಯಕ.

ಬಿಎಂಟಿಸಿ ಬಸ್ ಚಾಲಕನ ಸಾವು ಸಾರಿಗೆ ಅಧಿಕಾರಿಗಳಿಗೆ ಮುನ್ನೆಚ್ಚರಿಕೆಯ ಗಂಟೆಯಂತೆ ಆಗಬೇಕು

ಬೆಂಗಳೂರಿನ ರಸ್ತೆ ಜಾಲವು ಬಹಳ ಸಂಕೀರ್ಣವಾದ ಹಾಗೂ ವಿಶಿಷ್ಟವಾದ ಸವಾಲುಗಳನ್ನು ಒಡ್ಡುತ್ತದೆ. ಅದೇ ರೀತಿಯಲ್ಲಿ, ಉತ್ತರ ಕರ್ನಾಟಕದ ಹಲವೆಡೆ ಕೂಡ ಸಮಸ್ಯೆಗಳು ಇವೆ. ಅಲ್ಲಿ ಬಸ್ಸುಗಳು ಹಳೆಯವಾಗಿವೆ, ಅವುಗಳ ನಿರ್ವಹಣೆ ಸರಿಯಾಗಿಲ್ಲ. ಈ ಪರಿಣಾಮವಾಗಿ ಬಸ್ಸುಗಳು ಹಾಳಾಗುವ, ಅಪಘಾತಕ್ಕೆ ಈಡಾಗುವ ಸಾಧ್ಯತೆ ಹೆಚ್ಚಿರುತ್ತದೆ. ಅಪಘಾತ ಸಂಭವಿಸಿ ವೈದ್ಯಕೀಯ ತುರ್ತು ಸಂದರ್ಭ ಸೃಷ್ಟಿಯಾದಾಗ ಪರಿಣಾಮಗಳು ಬಹಳ ಕೆಟ್ಟದ್ದಾಗಿ ಇರುತ್ತವೆ. ಹಲವು ಬಸ್ಸುಗಳಲ್ಲಿ ಮೂಲಭೂತ ಸುರಕ್ಷತಾ ಅಗತ್ಯವಾದ ಪ್ರಥಮ ಚಿಕಿತ್ಸೆ ಪರಿಕರಗಳು ಇರುವುದಿಲ್ಲ. ತುರ್ತು ಸಂದರ್ಭ ಎದುರಾದರೆ ಅದನ್ನು ನಿಭಾಯಿಸುವುದು ಹೇಗೆ ಎಂಬ ಬಗ್ಗೆ ಎಲ್ಲ ಚಾಲಕರು ಹಾಗೂ ನಿರ್ವಾಹಕರಿಗೆ ತರಬೇತಿ ಇರುವುದಿಲ್ಲ. ಸುರಕ್ಷತಾ ಕ್ರಮಗಳ ವಿಚಾರದಲ್ಲಿನ ಸಿದ್ಧತೆಯ ಈ ಕೊರತೆಗಳು, ಸಿಬ್ಬಂದಿಯನ್ನು ಮತ್ತು ಪ್ರಯಾಣಿಕರನ್ನು ರಕ್ಷಿಸಲು ಇನ್ನಷ್ಟು ಹೆಚ್ಚು ಉತ್ತಮವಾದ, ಸಮಗ್ರವಾದ ಸುರಕ್ಷತಾ ಕ್ರಮಗಳ ಅಗತ್ಯವನ್ನು ಎತ್ತಿತೋರಿಸುತ್ತವೆ. ಸಿಬ್ಬಂದಿಯ ಆರೋಗ್ಯವನ್ನು ಕಾಲಕಾಲಕ್ಕೆ ತಪಾಸಣೆಗೆ ಒಳಪಡಿಸುವುದಷ್ಟೇ ಅಲ್ಲದೆ, ಪ್ರತಿ ಘಟಕದಲ್ಲಿಯೂ (ಡಿಪೊ) ಒಬ್ಬ ವೈದ್ಯ ಹಾಗೂ ಒಬ್ಬ ಆಪ್ತಸಮಾಲೋಚಕರನ್ನು ನಿಯೋಜಿಸುವ ಅಗತ್ಯದ ಬಗ್ಗೆ ಪರಿಶೀಲಿಸಬೇಕು. ದೈಹಿಕ ಆರೋಗ್ಯದ ಸಮಸ್ಯೆಗಳಷ್ಟೇ ಅಲ್ಲದೆ, ಸಾರಿಗೆ ನಿಗಮಗಳ ಸಿಬ್ಬಂದಿ ವೈಯಕ್ತಿಕವಾಗಿ ಮತ್ತು ವೃತ್ತಿಯ ನೆಲೆಯಲ್ಲಿ ಅತಿಯಾದ ಒತ್ತಡವನ್ನು ಎದುರಿಸುತ್ತಿರುತ್ತಾರೆ. ಇದು ಅವರ ಕಾರ್ಯಕ್ಷಮತೆಯ ಮೇಲೆ, ಸುರಕ್ಷಿತವಾಗಿ ಕೆಲಸಗಳನ್ನು ನಿರ್ವಹಿಸುವುದರ ಮೇಲೆ ಪರಿಣಾಮ ಉಂಟುಮಾಡುತ್ತದೆ. ಹೆಚ್ಚು ಒತ್ತಡ ಉಂಟುಮಾಡುವ ಉದ್ಯೋಗಗಳಲ್ಲಿ ಇರುವವರ ದೈಹಿಕ ಆರೋಗ್ಯದ ಮೇಲೆ ನಿಗಾ ಇರಿಸಿದರಷ್ಟೇ ಸಾಲದು, ಅವರ ಮಾನಸಿಕ ಆರೋಗ್ಯದ ಮೇಲೆಯೂ ಗಮನ ಇರಬೇಕು. ಖಾಸಗಿ ಬಸ್ಸುಗಳ ಚಾಲಕರನ್ನು ಕೂಡ ಸರ್ಕಾರಿ ಸಾರಿಗೆ ನಿಗಮಗಳ ಸಿಬ್ಬಂದಿಗೆ ನಿಗದಿಪಡಿಸಿರುವಂತಹ ಆರೋಗ್ಯ ತಪಾಸಣೆಗಳಿಗೆ ಒಳಪಡಿಸಬೇಕು. ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿ ಒಗ್ಗಟ್ಟಿನ ಯತ್ನವೊಂದು ನಡೆಯಬೇಕಿರುವುದು ರಸ್ತೆಗಳನ್ನು ಸುರಕ್ಷಿತವಾಗಿಸುವ ದಿಸೆಯಲ್ಲಿ ಅಗತ್ಯ ಕ್ರಮ.

ಬಿಎಂಟಿಸಿ ಬಸ್ ಚಾಲಕನ ಸಾವು ಸಾರಿಗೆ ಅಧಿಕಾರಿಗಳಿಗೆ ಮುನ್ನೆಚ್ಚರಿಕೆಯ ಗಂಟೆಯಂತೆ ಆಗಬೇಕು. ಸಿಬ್ಬಂದಿಯ ಆರೋಗ್ಯ ತಪಾಸಣೆ, ಅವರಿಗೆ ಅಗತ್ಯ ತರಬೇತಿ ಹಾಗೂ ಇತರ ಸುರಕ್ಷತಾ ಕ್ರಮಗಳ ವಿಚಾರವಾಗಿ ಸರ್ಕಾರವು ತ್ವರಿತವಾಗಿ ನಿಯಮಗಳನ್ನು ರೂಪಿಸಬೇಕು. ನಿಯಮಗಳನ್ನು ಪಾಲನೆ ಮಾಡದೇ ಇರುವವರಿಗೆ ಭಾರಿ ದಂಡ ವಿಧಿಸಬೇಕು. ಆರೋಗ್ಯ ತಪಾಸಣೆ, ಭಾವನಾತ್ಮಕ ನೆಲೆಯಲ್ಲಿ ಬೆಂಬಲ, ಉತ್ತಮವಾದ ತರಬೇತಿ ಹಾಗೂ ಸುಧಾರಿತ ಸುರಕ್ಷತಾ ಗುಣಮಟ್ಟದ ಮೂಲಕ ಮಾತ್ರ ದುರಂತಗಳನ್ನು ತಡೆಯಬಹುದು, ರಸ್ತೆಗಳು ಜನರ ಪಾಲಿಗೆ ಸುರಕ್ಷಿತವಾಗಿ ಇರುವಂತೆ ಮಾಡಬಹುದು.

ಪ್ರಕೃತಿಯ ಧ್ವಂಸಕಾರ್ಯದಲ್ಲಿ ಕೇಂದ್ರದ ಜೊತೆ ಕೈಜೋಡಿಸಿದಂತಿದೆ ಕರ್ನಾಟಕ

ಈಗಿನದೂ ಡಬಲ್ ಎಂಜಿನ್ ಸರ್ಕಾರ!

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಆಕಾಶದಲ್ಲಿ ಈಗ ಉಲ್ಕೆಗಳ ಸುರಿಮಳೆ ಆಗುತ್ತಿದೆ. ಅವು ವೃಷಭ ರಾಶಿಯಿಂದ ಬರುತ್ತಿರುವಂತೆ ಕಾಣುವುದರಿಂದ ಅದಕ್ಕೆ ವೃಷಭ ಉಲ್ಕಾಪಾತ (ಟಾರಿಡ್ ಮಿಟಿಯೊರ್ ಶಾವರ್) ಎನ್ನುತ್ತಾರೆ. ಪ್ರತಿ 3.3 ವರ್ಷಗಳಿಗೊಮ್ಮೆ ಸೂರ್ಯನ ಪ್ರದಕ್ಷಿಣೆ ಹಾಕಿ ಹೋಗುವ 'ಎನ್ಕಿ' ಹೆಸರಿನ ಧೂಮಕೇತು ತನ್ನ ತಲೆಯಲ್ಲಿನ ದೂಳು ಮತ್ತು ಹಿಮಕಣಗಳನ್ನು ಚೆಲ್ಲುತ್ತ ಸಾಗುತ್ತಿರುತ್ತದೆ. ಭೂಮಿ ತನ್ನ ಪಾಡಿಗೆ ತಾನು ಸುತ್ತುತ್ತ ವೃಷಭ ರಾಶಿಯ ಬಳಿ ಬಂದಾಗ ಅಲ್ಲಿ ಚೆಲ್ಲಾಡಿದ ದೂಳು ಕಣಗಳನ್ನೆಲ್ಲ ಹೀರುತ್ತ ಸಾಗುತ್ತದೆ. ಆದರೆ ಅಂಥ ಕಣಗಳೆಲ್ಲ ನೆಲಕ್ಕೆ ತಲುಪುವ ಮೊದಲೇ ವಾತಾವರಣದ ಘರ್ಷಣೆಗೆ ಉರಿದು ಬೂದಿಯಾಗುತ್ತವೆ. ಹೀಗಿದ್ದರೂ ಅಕಸ್ಮಾತ್ ಬುಟ್ಟಿಗಾತ್ರದ ಹಿಮದ ತುಂಡೊಂದು ಭೂಮಿಗೆ ಅಪ್ಪಳಿಸಿದರೂ ಭಾರೀ ದುರಂತ ಆಗಬಹುದಾಗಿದೆ. ಆಗಿಲ್ಲ, ಅದು ನಮ್ಮ ಅದೃಷ್ಟ.

ಈ ದಿನಗಳಲ್ಲೇ ಅಜರ್‌ಬೈಜಾನ್ ದೇಶದ ರಾಜಧಾನಿ 'ಬಾಕು' ನಗರದಲ್ಲಿ ಇನ್ನೊಂದು ಬಗೆಯ (ಮಾತಿನ) ಸುರಿಮಳೆ ನಡೆದಿದೆ. ಭೂಮಿಯನ್ನು ಬಿಸಿಪ್ರಳಯದ ಗಂಡಾಂತರದಿಂದ ಪಾರು ಮಾಡುವುದು ಹೇಗೆಂಬ ಬಗ್ಗೆ ಜಗತ್ತಿನ ಎಲ್ಲ ರಾಷ್ಟ್ರಗಳ ಪ್ರಮುಖರೂ ವರ್ಷಕ್ಕೊಮ್ಮೆ ಒಂದೆಡೆ ಸೇರುತ್ತಿದ್ದಾರೆ ತಾನೆ? ಆ ಸರಣಿಯ 29ನೇ ಸಭೆ (ಕಾಪ್29) ನವೆಂಬರ್ 11ರಿಂದ ಹತ್ತು ದಿನಗಳ ಕಾಲ ನಡೆಯಲಿದೆ. ಈ ವರ್ಷವಂತೂ ಬಿರುಬೇಸಿಗೆ, ಜಡಿಮಳೆ, ಚಂಡಮಾರುತ, ಹಿಮಪಾತಗಳು ಹಿಂದಿನ ಎಲ್ಲ ದಾಖಲೆಗಳನ್ನು ಮೀರಿಸಿವೆ. ಕಳೆದ 10 ಸಾವಿರ ವರ್ಷಗಳಲ್ಲಿ ಇಂಥ ಪ್ರಳಯಾಂತಕ ಸಂಚಲನ ಎಂದೂ ನಡೆದಿರಲಿಲ್ಲ ಎಂದೂ 'ನಾಸಾ' ಸಂಸ್ಥೆ ಹೇಳಿದೆ. ಯಾವ ಯಾವ ದೇಶ ಏನೇನು ಕ್ರಮಗಳನ್ನು ಸ್ವಇಚ್ಛೆಯಿಂದ ಕೈಗೊಳ್ಳಬೇಕು ಎಂಬುದರ ಬಗ್ಗೆ 2015ರಲ್ಲಿ ಘೋಷಿಸಲಾಗಿದ್ದ 'ಪ್ಯಾರಿಸ್ ಒಪ್ಪಂದ'ವನ್ನು ಯಾವ ದೇಶವೂ ಪಾಲಿಸುತ್ತಿಲ್ಲ. ಬಡದೇಶಗಳಿಗೆ ಬಿಸಿಪ್ರಳಯದಿಂದ ಬಚಾವಾಗಲು ಶ್ರೀಮಂತ ದೇಶಗಳು ವಂತಿಗೆ ನೀಡಬೇಕೆಂಬ ಒಪ್ಪಂದವನ್ನು ಅನೇಕ ರಾಷ್ಟ್ರಗಳು ಪಾಲಿಸುತ್ತಿಲ್ಲ. ಪೃಥ್ವಿಯ ರಕ್ಷಣೆಗೆ ನಾವೆಲ್ಲ ಕಟಿಬದ್ಧ ಆಗಬೇಕೆಂದು ವರ್ಷವರ್ಷವೂ ಭಾಷಣ ಮಾಡುತ್ತಿದ್ದ ಕೆಲವು ಪ್ರಮುಖ ದೇಶಗಳ ನಾಯಕರು ಈ ಬಾರಿಯ ಸಮ್ಮೇಳನಕ್ಕೆ ಹಾಜರಾಗುತ್ತಿಲ್ಲ.

ಈ ಮಧ್ಯೆ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ತಾಪಮಾನ ಏರಿಕೆ ಎಂಬುದೇ ಸುಳ್ಳೆಂದು ವಾದಿಸುತ್ತ ಬಂದ ಈ ಮಹಾಶಯ, ಹಿಂದಿನ ಬಾರಿ ಅಧ್ಯಕ್ಷರಾಗಿದ್ದಾಗ ಪ್ಯಾರಿಸ್ ಒಪ್ಪಂದವನ್ನೇ ಧಿಕ್ಕರಿಸಿದ್ದರು. ನಂತರ ಬಂದ ಬೈಡನ್ ನೇತೃತ್ವದ ಸರ್ಕಾರ ಆ ಒಪ್ಪಂದಕ್ಕೆ ಮತ್ತೆ ಮಾನ್ಯತೆ ನೀಡಿತ್ತು. ಈಗಿನ ಟ್ರಂಪ್2 ಅವಧಿಯಲ್ಲಿ ಪುನಃ ಪೆಟ್ರೋಧನಿಕರದ್ದೇ ಮೇಲುಗೈ ಆಗಲಿದೆ ಎಂದು ಬಹಳಷ್ಟು ಸಮೀಕ್ಷೆಗಳು ಹೇಳುತ್ತಿವೆ. ತಾಪಮಾನ ಏರಿಕೆಗೆ ಅತಿ ಹೆಚ್ಚು ಕೊಡುಗೆ ನೀಡುತ್ತಿರುವ ದೇಶವೇ ಹೀಗೆ ಜಾಗತಿಕ ಒಪ್ಪಂದವನ್ನು ಧಿಕ್ಕರಿಸುತ್ತಿದ್ದರೆ ಪ್ರಳಯಕಾಲ ದೂರವಿಲ್ಲ ಎಂಬಂತಾಗಿದೆ. ಬಾಕು ಸಮ್ಮೇಳನದ ಸಂದರ್ಭದಲ್ಲಿ ಟ್ರಂಪ್ ಎಂಬ ಧೂಮಕೇತು ಭೂಮಿಯತ್ತ ಧಾವಿಸುತ್ತಿರುವಂತೆ ವ್ಯಂಗ್ಯಚಿತ್ರಕಾರ ಸುಜಿತ್ ಕುಮಾರ್ ಬರೆದ ಕಾರ್ಟೂನ್ ಮೊನ್ನೆ 'ಡೆಕ್ಕನ್ ಹೆರಾಲ್ಡ್'ನಲ್ಲಿ ಪ್ರಕಟವಾಗಿತ್ತು.

ಅದು ಜಾಗತಿಕ ವಿದ್ಯಮಾನವಾದರೆ ನಮ್ಮ ದೇಶದ ಚಿತ್ರ ಏನು? ಇದುವರೆಗಿನ ಅತ್ಯಂತ ಉಗ್ರ ಬಿಸಿಗಾಳಿ, ಕಠೋರ ಬೇಸಿಗೆ ಮತ್ತು ಮಹಾಮಳೆಯನ್ನು ದಿಲ್ಲಿಯೇ ಈ ವರ್ಷ ನೋಡಿದೆ. ದಿಲ್ಲಿಯ ಸಚಿವೆಯಾಗಿದ್ದ, ಈಗ ಮುಖ್ಯಮಂತ್ರಿಯಾಗಿರುವ ಆತಿಷಿ ಕುಡಿಯುವ ನೀರಿಗಾಗಿ ಉಪವಾಸ ಕೂತಿದ್ದ ದಿನವೇ ಪ್ರಚಂಡ ಮಳೆ ಸುರಿದು ಟ್ಯಾಂಕರ್‌ಗಳನ್ನೂ ಮುಳುಗಿಸಿತ್ತು. ಯಮುನೆ ಉಕ್ಕೇರಿ ಸುಪ್ರೀಂ ಕೋರ್ಟ್‌ನ ಮೆಟ್ಟಿಲಿಗೆ ಬಂದಿತ್ತು. ನವನವೀನ ಸಂಸತ್ ಭವನದಲ್ಲೂ ನೀರು ಸೋರಿತ್ತು. ಈಗಂತೂ ಹೊಗೆ ಮತ್ತು ಮಂಜು (ಹೊಂಜು) ಜೊತೆಗೆ ಪಟಾಕಿ ಸುಡುಮಾರಿಗಳ ಅಬ್ಬರದಿಂದಾಗಿ ಗಾಳಿಯ ಗುಣಮಟ್ಟ ಇಡೀ ದೇಶವೇ ನಾಚಿಕೆಯಿಂದ ತಲೆತಗ್ಗಿಸಿ ನೋಡುವಷ್ಟು ಕೆಳಕ್ಕೆ ಕುಸಿದಿದೆ. ದೇಶದ ಇತರ ಭಾಗಗಳಲ್ಲಿ ಸೇತುವೆ ಕುಸಿತ, ಭೂಕುಸಿತದ ಕಥನಗಳು ನಮಗೆ ಗೊತ್ತೇ ಇವೆ. ಸರ್ಕಾರಿ ಅಂಕಿ ಅಂಶಗಳನ್ನೇ ಆಧರಿಸಿ 'ಡೌನ್ ಟು ಅರ್ಥ್' ಪತ್ರಿಕೆ ನೀಡಿದ ವಿಶ್ಲೇಷಣೆಯ ಪ್ರಕಾರ, ಈ ವರ್ಷದ ಸೆಪ್ಟೆಂಬರ್‌ವರೆಗಿನ ಮೊದಲ 274 ದಿನಗಳಲ್ಲಿ 255 (ಅಂದರೆ ಶೇ 93) ದಿನಗಳಲ್ಲಿ ದೇಶದ ಒಂದಲ್ಲ ಒಂದು ಕಡೆ ಅತಿ ವಿಪರೀತ ಘಟನೆಗಳು ಜರುಗಿವೆ. ಒಟ್ಟು 3,200 ಜನರ, 9,800 ಜಾನುವಾರುಗಳ ಜೀವ ಹೋಗಿದೆ; 32 ಲಕ್ಷ ಹೆಕ್ಟೇರಿನ ಪೈರುಫಸಲು ನಾಶವಾಗಿದೆ. 236 ಸಾವಿರ ಮನೆಗಳು ಕುಸಿದಿವೆ.

ಪ್ರಧಾನಿ ನರೇಂದ್ರ ಮೋದಿಯವರು ಬಾಕು ಸಮ್ಮೇಳನಕ್ಕೆ ಹೋಗುತ್ತಿಲ್ಲ. ಚುನಾವಣೆಯ ಕಾವು ಇಲ್ಲಿ ಇಷ್ಟೆಲ್ಲ ಇರುವಾಗ ಭೂಮಿಯ ಕಾವಿನ ಬಗ್ಗೆ ಮಾತಾಡಲು ಯಾರಿಗೆ ಪುರಸತ್ತಿದೆ? ಗ್ಲಾಸ್ಗೋ (Cop26) ಸಮ್ಮೇಳನದಲ್ಲಿ ನಮ್ಮ ಪ್ರಧಾನಿ ಭೂಮಿಯ ರಕ್ಷಣೆಯ ಬಗ್ಗೆ ಅತ್ಯಂತ ಭಾವುಕವಾಗಿ ಮಾತಾಡಿ 'ಪಂಚಾಮೃತ' ಘೋಷಣೆಯನ್ನು ಕೊಟ್ಟರು. 2030ರ ವೇಳೆಗೆ ಒಂದು ಶತಕೋಟಿ ಟನ್ ಇಂಗಾಲವನ್ನು ಭಾರತ ಕಡಿಮೆ ಮಾಡುತ್ತದೆಂಬುದು ಆ ಐದು ಅಮೃತ ಘೋಷಣೆಗಳಲ್ಲಿ ಒಂದಾಗಿತ್ತು. ವಾಸ್ತವ ಏನೆಂದರೆ, ಕಲ್ಲಿದ್ದಲ ಬಳಕೆ ಹಿಂದೆಂದಿಗಿಂತ ಹೆಚ್ಚುತ್ತಿದೆ. ಹಿಂದೆಲ್ಲ ಸರ್ಕಾರಿ ಸಂಸ್ಥೆಯೇ ದೇಶದ ಬಹುಪಾಲು ಕಲ್ಲಿದ್ದಲನ್ನು (ಶೇ 95) ಗಣಿಯಿಂದ ಎತ್ತುತ್ತಿತ್ತು. ಪರಿಸರ ರಕ್ಷಣೆಯ ಕಾನೂನುಗಳನ್ನು ತಕ್ಕಮಟ್ಟಿಗೆ ಪಾಲಿಸುತ್ತ, ಅರಣ್ಯ ಇಲ್ಲದಲ್ಲೇ ಗಣಿಗಾರಿಕೆ ನಡೆಯುತ್ತಿತ್ತು. ಈಗ ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡಿದ್ದರಿಂದ ದಟ್ಟಡವಿಯನ್ನೂ ಧ್ವಂಸ ಮಾಡಿ ಲಂಗುಲಗಾಮಿಲ್ಲದೆ ಕಲ್ಲಿದ್ದಲನ್ನು ಎತ್ತಲಾಗುತ್ತಿದೆ. 'ದಿ ವಯರ್' ಪತ್ರಿಕೆ ನಡೆಸಿದ ತನಿಖಾ ವರದಿಯ ಪ್ರಕಾರ, ಛತ್ತೀಸಗಢದ ದಟ್ಟ ಕಾಡಿನಲ್ಲಿ ಕಲ್ಲಿದ್ದಲ ಗಣಿಗಾರಿಕೆಗೆ (2014ರಲ್ಲಿ ಸುಪ್ರೀಂ ಕೋರ್ಟ್ ನಿಷೇಧಿಸಿತ್ತಾದರೂ) ಕೋವಿಡ್ ಅವಧಿಯಲ್ಲಿ ಅದಾನಿ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಹಸ್‌ದೇವ್ ಬ್ಲಾಕ್ ಎಂಬಲ್ಲಿ ಗಗನಚುಂಬಿ ಸಾಲ್ ಮರಗಳಿಂದ, ವನ್ಯಜೀವಿಗಳಿಂದ ಸಮೃದ್ಧವಾಗಿದ್ದ ತಾಣ ಬಟಾಬಯಲಾಗಿದೆ. ಕೇಟೆ ಎಂಬ ಗ್ರಾಮವೇ ನಾಮಾವಶೇಷವಾಗಿದೆ. 1,876 ಚದರ ಕಿ.ಮೀ. ವಿಸ್ತೀರ್ಣದಲ್ಲಿ ಇನ್ನೆರಡು ನಿಕ್ಷೇಪಗಳನ್ನು ಅಗೆಯಲು ಸಿದ್ಧತೆ ನಡೆದಿದೆ.

ಇತ್ತ ಮಹಾರಾಷ್ಟ್ರದಲ್ಲಿ ದಟ್ಟ ಅರಣ್ಯದ, ಆದಿವಾಸಿಗಳ ನೆಲೆವೀಡೆಂದೇ ಪ್ರಸಿದ್ಧವಾದ ಗಡ್‌ಚಿರೋಲಿ ಜಿಲ್ಲೆಯಲ್ಲಿ ದೇಶದ ಅತಿ ದೊಡ್ಡ ಉಕ್ಕಿನ ಸ್ಥಾವರ ಸಂಕೀರ್ಣವನ್ನು ನಿರ್ಮಿಸುವ ಘೋಷಣೆ ಹೊಮ್ಮಿದೆ. ಸಂಡೂರಿನ ಅರಣ್ಯದಲ್ಲಿ ಕುದುರೆಮುಖ ಕಂಪನಿಗೆ ಕಬ್ಬಿಣದ ಅದಿರಿನ ಗಣಿಗಾರಿಕೆಗೆ ಅನುಮತಿ ನೀಡುವುದಾಗಿ ಕುಮಾರಸ್ವಾಮಿಯವರು ಬೃಹತ್ ಉದ್ಯಮ ಸಚಿವರಾದ ಹೊಸದರಲ್ಲೇ ಘೋಷಿಸಿದ್ದಾರೆ. ರಾತ್ರಿಯಲ್ಲೂ ಗಣಿಗಾರಿಕೆ ನಡೆಸಬೇಕೆಂಬ ದುರ್ಬುದ್ಧಿ ಕೆಲವರಿಗೆ ಬಂದಂತಿದೆ. ಕಾವೇರಿ ವನ್ಯಧಾಮ ಧ್ವಂಸವಾದರೂ ಸರಿಯೆ, ಮೇಕೆದಾಟು ಅಣೆಕಟ್ಟು ಆಗಬೇಕೆನ್ನುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದೀಗ ಬಂಡೀಪುರದ ಹೆದ್ದಾರಿಯಲ್ಲಿ ರಾತ್ರಿ ಪ್ರಯಾಣಕ್ಕೂ ಅನುಮತಿ ಗಿಟ್ಟಿಸುವ ದಿಸೆಯಲ್ಲಿ ಪ್ರಿಯಾಂಕಾ ಗಾಂಧಿಯವರಿಗೆ ಸಹಕರಿಸುವುದಾಗಿ ಹೇಳಿದ್ದಾರೆ. ಹಿಂದೆ ವಯನಾಡಿನ ಸಂಸದರಾಗಿದ್ದ ರಾಹುಲ್ ಗಾಂಧಿ ಕೂಡ ಕೇರಳ ಸರ್ಕಾರದ ಒತ್ತಾಯಕ್ಕೆ ಕಟ್ಟುಬಿದ್ದು ಬಂಡೀಪುರದ ವನ್ಯಜೀವಿಗಳನ್ನು ಹೆದ್ದಾರಿಯಲ್ಲಿ ಹೊಸಕಲು ಹೊರಟಿದ್ದರು. ಅದಕ್ಕೂ ಮೊದಲು ಒಡಿಶಾದ ನಿಯಾಮಗಿರಿಯಲ್ಲಿ ವೇದಾಂತ ಕಂಪನಿಗೆ ಬಾಕ್ಸೈಟ್‌ನ (ಅಲ್ಯೂಮಿನಿಯಂ ಅದುರಿನ) ಗಣಿಗಾರಿಕೆಗೆ ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಅನುಮತಿ ನೀಡಿದಾಗ ಅಲ್ಲಿಗೆ ಹೋಗಿ ಆದಿವಾಸಿಗಳ ಬೆಂಬಲಕ್ಕೆ ನಿಂತಿದ್ದ ರಾಹುಲ್ ಗಾಂಧಿ ಇವರೇನೇ ಎಂಬಷ್ಟರ ಮಟ್ಟಿಗೆ ಇವರು ಬದಲಾಗಿದ್ದು ಹೇಗೊ?

ಒಟ್ಟಿನಮೇಲೆ, ಮತ ಹಾಕಲಾರದ ಕಾಡಿನ ಜೀವಿಗಳ ರಕ್ಷಣೆಯ ಪ್ರಶ್ನೆ ಬಂದಾಗ ಅಥವಾ ಮತದಾನದ ಹಕ್ಕು ಇನ್ನೂ ಬಂದಿಲ್ಲದ ಎಳೆಯರ ಭವಿಷ್ಯದ ಪ್ರಶ್ನೆ ಬಂದಾಗ ಎಲ್ಲ ಧುರೀಣರೂ ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳುತ್ತಾರೆ ಯಾಕೊ? ಅಭಿವೃದ್ಧಿಯ ಮಹಾರಥದ ಸವಾರಿ ಮಾಡುವ ಧಾವಂತದಲ್ಲಿ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಡಬಲ್ ಎಂಜಿನ್ ಸರ್ಕಾರವೇ ಆಗಿರುತ್ತದೆ.

ಹೀಗಿರುವಾಗ, ಬಾಕು ಸಮ್ಮೇಳನದಲ್ಲಿ ಮಾತಾಡಲು ಬಾಕಿ ಏನಿದೆ?

ಚುರುಮುರಿ

ಎಲೆಕ್ಷನ್ ಹರಾಜು!

• ಗುರು ಪಿ.ಎಸ್.

'ಕೆಲವೇ ದಿನಗಳಲ್ಲಿ ಹರಾಜು ಶುರುವಾಗುತ್ತೆ?' ಮಾತು ಶುರುವಿಟ್ಟುಕೊಂಡ ಮುದ್ದಣ್ಣ.

'ಯಾವ ಹರಾಜು, ನಿನ್ನ ಹೊಲ-ಮನೆ-ಆಸ್ತಿ ಹರಾಜಾಗುತ್ತಾ' ನಗುತ್ತಲೇ ಮುದ್ದಣ್ಣನ ಮಾನ ಹರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿದ ವಿಜಿ.

'ನನ್ನದಲ್ಲಪ್ಪ, ಐಪಿಎಲ್‌ಗೆ ಕ್ರಿಕೆಟ್ ಆಟಗಾರರ ಹರಾಜು' ಎಂದ.

'ಛೇ, ಬೈ ಎಲೆಕ್ಷನ್ ಮುಗಿದೇ ಹೋಯ್ತಲ್ಲ' ಕೈ ಕೈ ಹಿಸುಕಿಕೊಂಡ ವಿಜಿ.

'ಬೈ ಎಲೆಕ್ಷನ್ ಮುಗಿಯೋಕೂ ಐಪಿಎಲ್ ಆಕ್ಷನ್ ಪ್ರಾರಂಭವಾಗೋಕೂ ಏನಣ್ಣ ಸಂಬಂಧ?' ಗೊಂದಲದಲ್ಲಿ ಕೇಳಿದ ಮುದ್ದಣ್ಣ.

'ಐಪಿಎಲ್ ಫ್ರಾಂಚೈಸಿಯವರು ಏನ್ ಮಾಡ್ತಾರೆ ಹೇಳು?'

'ತಮಗೆ ಯಾವ ಆಟಗಾರ ಬೇಕೋ ಅವನ ಹೆಸರನ್ನ ಕೂಗುತ್ತಿದ್ದಂತೆ ಹೆಚ್ಚು ದುಡ್ಡು ಕೊಟ್ಟು ತಮ್ಮ ಟೀಮ್‌ಗೆ ಅವನನ್ನ ಕರ್ಕೋತಾರೆ'.

'ಅದಕ್ಕೆ?'

'ಎಲೆಕ್ಷನ್ ಕೂಡ ಹಾಗೇ ನಡೆಸಬಹುದಿತ್ತು'.

'ಅಂದ್ರೆ?'

'ಬೈ ಎಲೆಕ್ಷನ್ ನಡೆದ ಮೂರೂ ಕ್ಷೇತ್ರಗಳಲ್ಲಿ ನನ್ ಫ್ರೆಂಡ್ಸ್ ಇದಾರೆ, ಹೇಗೆ ನಡೀತು ಚುನಾವಣೆ ಅಂತ ಕೇಳಿದೆ, ಯಾರು ಜಾಸ್ತಿ ದುಡ್ಡು ಹಂಚಿದ್ದಾರೋ ಅವರು ಗೆಲ್ಲಬಹುದು ಅಂದ್ರು'.

'ಅದು ಬಹಿರಂಗ ಗುಟ್ಟು ಅಣ್ಣ, ಅದಕ್ಕೂ ಐಪಿಎಲ್ ಆಕ್ಷನ್‌ಗೂ ಏನು ಸಂಬಂಧ ಹೇಳು?'

'ಸುಮ್ಮನೆ ಇಷ್ಟೆಲ್ಲ ದುಡ್ಡು ಖರ್ಚು ಮಾಡಿ ಎಲೆಕ್ಷನ್ ಮಾಡೋ ಬದಲು, ಆಯಾ ಕ್ಷೇತ್ರದಲ್ಲಿ ಯಾವ ಪಕ್ಷದ ಅಭ್ಯರ್ಥಿ ಹೆಚ್ಚು ದುಡ್ಡು ಕೊಡುತ್ತಾರೋ ಅವರನ್ನೇ ಎಮ್ಮೆಲ್ಲೆ ಅಂತ ಅನೌನ್ಸ್ ಮಾಡಿ, ಆ ದುಡ್ಡನ್ನು ಮತದಾರರಿಗೆ ಸಮಾನವಾಗಿ ಹಂಚಿಬಿಡಬಹುದಲ್ಲ' ನಕ್ಕ ವಿಜಿ.

'ನನ್ನ ಹತ್ತಿರ ಮತ್ತೊಂದು ಐಡಿಯಾ ಇದೆ'.

'ಏನದು?'

'ಎಲೆಕ್ಷನ್ನು, ದುಡ್ಡು ಅಂತೆಲ್ಲ ತಲೆಕೆಡಿಸಿಕೊಳ್ಳೋ ಬದಲು, ಈ ಕ್ಷೇತ್ರದ ಎಮ್ಮೆಲ್ಲೆ ಇಂಥವರು ಅಂತ ವಿಧಾನಸಭೆಯ ದಾಖಲೆಗಳಲ್ಲೇ ಶಾಶ್ವತವಾಗಿ ಹೆಸರು ಬರೆಸಿಬಿಡಬಹುದಲ್ಲ... ಇದಕ್ಕೆ ನೀನೇನಂತೀಯ?'

'ಜೈ ಪ್ರಜಾಪ್ರಭುತ್ವ ಅಂತೀನಿ'.

ದಿನದ ಟ್ವೀಟ್

ಜಾಮೀನು ಷರತ್ತು: ಪರಾಮರ್ಶೆಗೆ ಒಳಪಡಲಿ

ಜಾಮೀನು ದೊರೆತ ನಂತರವೂ ಮಹಿಳೆಯೊಬ್ಬರು 300ಕ್ಕೂ ಹೆಚ್ಚು ದಿನಗಳಿಂದ ಜೈಲಿನಲ್ಲೇ ಇದ್ದಾರೆ. ₹ 25 ಸಾವಿರ ಮೊತ್ತದ ಜಾಮೀನಿನ ಬಾಂಡ್ ಹಾಗೂ ಕುಟುಂಬದವರಿಂದ ಜಾಮೀನು ಖಾತರಿ ಒದಗಿಸಲು ಅವರಿಗೆ ಸಾಧ್ಯವಾಗಿಲ್ಲದೇ ಇರುವುದು ಇದಕ್ಕೆ ಕಾರಣ. ಇಂತಹ ಪ್ರಕರಣಗಳಲ್ಲಿ ಜಾಮೀನಿಗೆ ಸಂಬಂಧಿಸಿದ ಷರತ್ತುಗಳಿಗೆ ಕೋರ್ಟ್‌ಗಳು ತಿದ್ದುಪಡಿ ಮಾಡಬಾರದೇಕೆ?

ಅರವಿಂದ್ ಗುಣಶೇಕರ್, ಪತ್ರಕರ್ತ

ಕಿಡಿನುಡಿ

ಸುರಕ್ಷಿತವಾದ ಪರಿಸರ ಎಂದು ನಂಬಲಾದ ಜಾಗದಲ್ಲೇ ಪುಂಡನೊಬ್ಬ ಖ್ಯಾತ ಆಂಕಾಲಜಿಸ್ಟ್ ಒಬ್ಬರಿಗೆ ಚೂರಿಯಿಂದ ಇರಿದಿರುವುದು ಭಯಾನಕವಾಗಿದೆ. ಕಟ್ಟುನಿಟ್ಟಿನ ಭದ್ರತಾ ಕ್ರಮಗಳ ಕೊರತೆಯು ಆರೋಗ್ಯ ರಕ್ಷಣಾ ವೃತ್ತಿಪರರನ್ನು ಅತ್ಯಂತ ಅಪಾಯಕಾರಿ ಸ್ಥಿತಿಗೆ ದೂಡಿದೆ. ಅವರ ಸುರಕ್ಷತೆಗೆ ಅತ್ಯಗತ್ಯವಾಗಿ ತುರ್ತು ಕ್ರಮ ಕೈಗೊಳ್ಳಬೇಕಾಗಿದೆ...

(ಚೆನ್ನೈನ ಆಸ್ಪತ್ರೆಯೊಂದರಲ್ಲಿ ರೋಗಿಯ ಸಂಬಂಧಿಕನೊಬ್ಬ ವೈದ್ಯರಿಗೆ ಚೂರಿಯಲ್ಲಿ ಇರಿದಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ಅಲನ್ ಇಗ್ನೇಷಿಯಸ್, ಗ್ರಾಫಿಕ್ ಡಿಸೈನರ್

25 ವರ್ಷಗಳ ಹಿಂದೆ

ಭಾನುವಾರ, 14-11-1999

• ಆಡಳಿತದಲ್ಲಿ ಆಮೂಲಾಗ್ರ ಬದಲಾವಣೆ

ಬೆಂಗಳೂರು, ನ. 13– ಪಾರದರ್ಶಕತೆಯಿಂದ ಕೂಡಿದ ದಕ್ಷ ಹಾಗೂ ಭ್ರಷ್ಟಾಚಾರರಹಿತ ಆಡಳಿತ ಕೊಡುವುದಾಗಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ವಿಧಾನಸಭೆಯಲ್ಲಿಂದು ರಾಜ್ಯದ ಜನತೆಗೆ ಭರವಸೆ ನೀಡಿ, ಭ್ರಷ್ಟ ಆಡಳಿತ ವ್ಯವಸ್ಥೆ ವಿರುದ್ಧ ಧರ್ಮಯುದ್ಧ ಘೋಷಿಸಿದರು.

ಈ ಧರ್ಮಯುದ್ಧದಲ್ಲಿ ಸರ್ಕಾರಿ ನೌಕರರು, ಶಾಸಕರು, ರಾಜಕಾರಣಿಗಳು ತಮಗೆ ಸಹಕಾರ ನೀಡಬೇಕು ಎಂದು ಕಳಕಳಿಯಿಂದ ಮನವಿ ಮಾಡಿಕೊಂಡ ಮುಖ್ಯಮಂತ್ರಿ, ಇದಕ್ಕಾಗಿ ಆಡಳಿತಯಂತ್ರವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳುವ ಇಂಗಿತವನ್ನು ವ್ಯಕ್ತಪಡಿಸಿದರು.

ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಕಚೇರಿಗಳಿಗೆ ಆದರ್ಶಪ್ರಾಯವಾಗಿರಬೇಕಾಗಿರುವ ವಿಧಾನ ಸೌಧದಲ್ಲಿ ಮೊದಲ ಹೆಜ್ಜೆಯಾಗಿ, ಜವಾನನಿಂದ ಹಿಡಿದು ಮುಖ್ಯಮಂತ್ರಿವರೆಗೆ ಎಲ್ಲರೂ ಸಮಯ ಹಾಗೂ ಶಿಸ್ತು ಪಾಲಿಸುವುದಕ್ಕೆ 'ಪಂಚಿಂಗ್' ವ್ಯವಸ್ಥೆಯನ್ನು ಶೀಘ್ರದಲ್ಲೇ ಜಾರಿಗೆ ತರಲಾಗುವುದು ಎಂದರು.

• ಒರಿಸ್ಸಾ ಸಂತ್ರಸ್ತರಿಗೆ ಹಣ ಸಂಗ್ರಹಿಸಲು ತಾರೆಯರ ಪಾದಯಾತ್ರೆ

ಬೆಂಗಳೂರು, ನ. 13– ಒರಿಸ್ಸಾ ಚಂಡಮಾರುತ ಸಂತ್ರಸ್ತರಿಗೆ ನೆರವು ನೀಡಲು ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ಕನ್ನಡ ಚಿತ್ರರಂಗದ ನಟ– ನಟಿಯರು, ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರು ನಗರದ ಪ್ರಮುಖ ರಸ್ತೆಗಳಲ್ಲಿ ಇಂದು ಪಾದಯಾತ್ರೆ ನಡೆಸಿ, ವ್ಯಾಪಾರಿಗಳು ಮತ್ತು ಸಾರ್ವಜನಿಕರಿಂದ ನಿಧಿ ಸಂಗ್ರಹಿಸಿದರು. ನಗರದ ಶಿವಾನಂದ ವೃತ್ತದ ಬಳಿ ಇರುವ ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿಯಿಂದ ಅವೆನ್ಯೂ ರಸ್ತೆಯ ಸ್ವಲ್ಪ ದೂರದವರೆಗೂ ವಾಹನದಲ್ಲಿ ಕ್ರಮಿಸಿ ಕಾಣಿಕೆಗಳನ್ನು ಸ್ವೀಕರಿಸಿದ ಚಿತ್ರರಂಗದ ಗಣ್ಯರು, ಆನಂತರ ಪಾದಯಾತ್ರೆಯಲ್ಲಿ ಮುಂದುವರಿದರು.

• ಮಂಡ್ಯ ವೈದ್ಯರ ಮನೆಯಿಂದ 3 ಲಕ್ಷದ ನಗನಾಣ್ಯ ದರೋಡೆ

ಮಂಡ್ಯ, ನ. 13– ಇಲ್ಲಿನ ಅಶೋಕ ನಗರದ ನಿವಾಸಿ ಡಾ. ಶಿವರಾಂ ಅವರ ಮನೆಗೆ ಇಂದು ರಾತ್ರಿ 2 ಗಂಟೆ ಸಮಯದಲ್ಲಿ ನುಗ್ಗಿದ ಎಂಟು ಮಂದಿ ದರೋಡೆಕೋರರು ಮನೆಯವರನ್ನೆಲ್ಲ ಕಟ್ಟಿಹಾಕಿ, ಚಾಕು ತೋರಿ ಬೆದರಿಸಿ ರೂ. 3 ಲಕ್ಷ ಮೌಲ್ಯದ ಹಣ, ಚಿನ್ನಾಭರಣ, ಕೈಗಡಿಯಾರ ಮತ್ತಿತರ ಬೆಲೆಬಾಳುವ ವಸ್ತುಗಳನ್ನು ದೋಚಿದ್ದಾರೆ.

ಕನ್ನಡ, ಇಂಗ್ಲಿಷ್, ತೆಲುಗು ಭಾಷೆಗಳನ್ನು ಮಾತನಾಡುತ್ತಿದ್ದ ಈ ತಂಡದ ಸದಸ್ಯರು ಕಣ್ಣಿಗೆ ಕಪ್ಪುಬಟ್ಟೆ ಕಟ್ಟಿದ್ದರು. ಮನೆಯ ಉಗ್ರಾಣದ ಕಿಟಕಿಯ ಸರಳುಗಳನ್ನು ಮುರಿದು ಒಳನುಗ್ಗಿ, ಮಲಗಿದ್ದ ಡಾ. ಶಿವರಾಂ, ಮಗ ಡಾ. ಭರತೇಶ್, ಸೊಸೆ ರಾಜಶ್ರೀ ಹಾಗೂ ಮೊಮ್ಮಕ್ಕಳಿಬ್ಬರನ್ನು ಹಗ್ಗದಿಂದ ಕಟ್ಟಿಹಾಕಿ, ದೂರವಾಣಿ ಸಂಪರ್ಕ ಕಡಿದು, ಮನೆಯಲ್ಲಿದ್ದ ವಸ್ತುಗಳನ್ನೆಲ್ಲ ಛಿದ್ರಗೊಳಿಸಿ, ದರೋಡೆ ಮಾಡಿದ್ದಾರೆ.

ಸುಮಾರು ಎರಡು ತಾಸು ಕಾರ್ಯಾಚರಣೆ ನಡೆಸಿ, 60 ಸಾವಿರ ಬೆಲೆಯ ವಜ್ರದ ಓಲೆ, 40 ಸಾವಿರದ ಚಿನ್ನದ ಸರ, 26 ಸಾವಿರ ನಗದು, 4 ಕೈಗಡಿಯಾರ, ಸಣ್ಣಪುಟ್ಟ ಚಿನ್ನಾಭರಣ ಸೇರಿದಂತೆ ರೂ. 3 ಲಕ್ಷ ಬೆಲೆಯ ವಸ್ತುಗಳನ್ನು ದರೋಡೆ ಮಾಡಿದ್ದಾರೆಂದು ಹೇಳಲಾಗಿದೆ.

ಸಂಗತ

ಮಧುಮೇಹ: ಮೂಡಲಿ ಜಾಗೃತಿ

ವಿಶ್ವ ಮಧುಮೇಹ ದಿನದ ಈ ಸಂದರ್ಭದಲ್ಲಿ, ಮಧುಮೇಹದ ಪರಿಣಾಮ, ಅದರ ನಿರ್ವಹಣೆ ಕುರಿತು ಜನಸಾಮಾನ್ಯರಲ್ಲಿ ವೈಜ್ಞಾನಿಕವಾಗಿ ಅರಿವು ಮೂಡಿಸಬೇಕಿದೆ

• ಡಾ. ಬಾಲಚಂದ್ರ ಜಿ.

ಭಾರತದಲ್ಲಿ ಮಧುಮೇಹದ ಹರಡುವಿಕೆಯು 2009ರಲ್ಲಿ ಶೇಕಡ 7.1ರಷ್ಟಿತ್ತು. 2019ರ ವೇಳೆಗೆ ಅದು ಶೇ 8.9ಕ್ಕೆ ಏರಿತ್ತು. ಅಂತರರಾಷ್ಟ್ರೀಯ ಮಧುಮೇಹ ಒಕ್ಕೂಟದ (ಐಡಿಎಫ್) ವರದಿಯ ಪ್ರಕಾರ, ಭಾರತದಲ್ಲಿ ಪ್ರಸ್ತುತ 20ರಿಂದ 77 ವರ್ಷ ವಯಸ್ಸಿನ 7.7 ಕೋಟಿ ಜನ ಮಧುಮೇಹದ ಸಮಸ್ಯೆ ಹೊಂದಿದ್ದಾರೆ. 2045ರ ವೇಳೆಗೆ ಇದು 13.42 ಕೋಟಿಗೆ ಏರಿಕೆಯಾಗಲಿದೆ.

ಜಗತ್ತಿನಲ್ಲಿ ಮಧುಮೇಹದ ಸಮಾಜೋ-ಆರ್ಥಿಕ ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ರಾಷ್ಟ್ರಗಳಲ್ಲಿ ಭಾರತವು ಮುಂಚೂಣಿಯಲ್ಲಿದೆ. ಮಧುಮೇಹ ಮತ್ತು ಅದರಿಂದ ಸಂಭವಿಸುವ ಇತರ ಸಮಸ್ಯೆಗಳ ಅಸಮರ್ಪಕ ನಿರ್ವಹಣೆ ಹಾಗೂ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದರಲ್ಲಿ ಎಡವುತ್ತಿರುವುದರಿಂದಲೇ ದೇಶದಲ್ಲಿ ಹೆಚ್ಚಿನ ಜನರ ಆರೋಗ್ಯ ಅಪಾಯಕ್ಕೆ ಸಿಲುಕುತ್ತಿದೆ ಎಂದು ಅಧ್ಯಯನ ವರದಿಗಳು ಹೇಳುತ್ತಿವೆ. ರಕ್ತದಲ್ಲಿನ ಸಕ್ಕರೆ ಪ್ರಮಾಣದಲ್ಲಿನ ಅತಿಯಾದ ಏರಿಕೆಯಿಂದ ಮಧುಮೇಹ ಬರುತ್ತದೆ. ಇದು ಮನುಷ್ಯರನ್ನು ದೀರ್ಘಕಾಲ, ನಿರಂತರವಾಗಿ ತೀವ್ರತರವಾಗಿ ಕಾಡುವ ಸಮಸ್ಯೆಯಾಗಿದ್ದು, ಬಹು ಅಂಗಾಂಗಗಳಿಗೆ ಹಾನಿ ಮಾಡುವ ಅಪಾಯವನ್ನು ಹೊಂದಿದೆ. ದೇಶದ ಜನರಲ್ಲಿ ಈ ಕುರಿತು ಅರಿವಿನ ಕೊರತೆ ಇದೆ. ಜಾಗೃತಿ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕಾಗಿರುವುದು ಈ ಹೊತ್ತಿನ ತುರ್ತು.

ಮಧುಮೇಹವು ಸೂಕ್ಷ್ಮ ರಕ್ತನಾಳಗಳ ಮೇಲೆ ಉಂಟುಮಾಡುವ ಹಾನಿಯು ನರರೋಗ, ಮೂತ್ರಕೋಶ ಸಂಬಂಧಿ ರೋಗ ಮತ್ತು ಕಣ್ಣಿನ ಸಮಸ್ಯೆಗೆ ಕಾರಣವಾಗುತ್ತದೆ. ದೊಡ್ಡ ರಕ್ತನಾಳಗಳ ಮೇಲೆ ಉಂಟುಮಾಡುವ ಪರಿಣಾಮಗಳು ಹೃದಯ ಸಂಬಂಧಿ ಸಮಸ್ಯೆಗಳು ಹಾಗೂ ಪಾರ್ಶ್ವವಾಯುವಿಗೆ ಕಾರಣವಾಗುತ್ತವೆ. ಮಧುಮೇಹವು ನಿಯಂತ್ರಣದಲ್ಲಿ ಇರುವವರೆಗೂ ಒಂದು ಸಾಮಾನ್ಯ ಸಮಸ್ಯೆ. ಆದರೆ, ಅರಿವಿನ ಕೊರತೆಯಿಂದ ನಿರ್ಲಕ್ಷ್ಯ ವಹಿಸಿ ನಿಯಂತ್ರಣ ಮೀರಿದರೆ ವ್ಯಕ್ತಿಯೊಬ್ಬನ ಜೀವನವನ್ನು ಸಂಕಷ್ಟಕ್ಕೆ ಸಿಲುಕಿಸಿಬಿಡುವ ಸಾಧ್ಯತೆಗಳಿವೆ. ಅದು ಸೃಷ್ಟಿಸುವ ಪರಿಣಾಮಗಳು ದೈಹಿಕವಾಗಿ ದಣಿವಾಗಿಸುವುದರ ಜೊತೆಯಲ್ಲೇ ಕುಟುಂಬವೊಂದನ್ನು ಆರ್ಥಿಕ ಸಂಕಷ್ಟದ ಸುಳಿಗೂ ತಳ್ಳಬಹುದು.

ಒತ್ತಡದ ಜೀವನದಲ್ಲಿ ಮಧುಮೇಹದಂತಹ ಸಮಸ್ಯೆಗಳ ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಸಮಯ ಮೀಸಲಿಡುವುದನ್ನು ಮರೆಯುವಂತಿಲ್ಲ. ನಿರಂತರವಾಗಿ ರಕ್ತದಲ್ಲಿನ ಸಕ್ಕರೆ ಪ್ರಮಾಣದ ತಪಾಸಣೆ, ನಿಯಮಿತವಾಗಿ ಔಷಧಿ ಸೇವನೆ, ಆಹಾರ ಕ್ರಮ ಮತ್ತು ಜೀವನಶೈಲಿಯಲ್ಲಿನ ಬದಲಾವಣೆಯ ಮೂಲಕ ಮಧುಮೇಹವನ್ನು ಸುಲಭವಾಗಿ ನಿಯಂತ್ರಿಸಬಹುದು. ನಿಯಮಿತವಾಗಿ ಎಚ್‌ಬಿಎ1ಸಿ (ಹಿಮೊಗ್ಲೋಬಿನ್ ಸಂಬಂಧಿ) ರಕ್ತಪರೀಕ್ಷೆ ಮಾಡಿಸಿಕೊಂಡರೆ ದೀರ್ಘಾವಧಿಯ ದತ್ತಾಂಶಗಳೊಂದಿಗೆ ನಿರ್ವಹಣೆ ಇನ್ನಷ್ಟು ಸುಲಭವಾಗುತ್ತದೆ. ಮಧುಮೇಹಿಗಳಲ್ಲಿ ಅಧಿಕ ರಕ್ತದೊತ್ತಡ ಮತ್ತು ಕೊಲೆಸ್ಟ್ರಾಲ್ ಹೆಚ್ಚಳದ ಸಮಸ್ಯೆ ಸಾಮಾನ್ಯವಾಗಿರುತ್ತದೆ. ಇವು ಹೃದಯಾಘಾತ ಮತ್ತು ಪಾರ್ಶ್ವವಾಯುವಿಗೆ ಕಾರಣವಾಗುತ್ತವೆ. ಮಧುಮೇಹದಿಂದ ಕಣ್ಣು, ಮೂತ್ರಕೋಶ ಮತ್ತು ನರಮಂಡಲಕ್ಕೂ ಹಾನಿಯಾಗುವ ಅಪಾಯ ಇರುತ್ತದೆ. ಆದ್ದರಿಂದ ಈ ಎಲ್ಲವುಗಳಿಗೆ ಸಂಬಂಧಿಸಿದಂತೆಯೂ ತಪಾಸಣೆ, ನಿಗಾ ಅಗತ್ಯ.

ಮಧುಮೇಹದ ನಿರ್ವಹಣೆ ಮತ್ತು ನಿಯಂತ್ರಣದಲ್ಲಿ ಆಹಾರ ಕ್ರಮ ಹಾಗೂ ದೈಹಿಕ ಚಟುವಟಿಕೆಗಳ ಪಾತ್ರವೂ ದೊಡ್ಡದು. ಹೆಚ್ಚಿನ ಪ್ರಮಾಣದಲ್ಲಿ ನಾರಿನ ಅಂಶಗಳುಳ್ಳ ಪದಾರ್ಥಗಳು, ಕಡಿಮೆ ಪ್ರಮಾಣದ ಕೊಬ್ಬಿನಂಶ ಇರುವ ಪ್ರೋಟೀನ್ ಮತ್ತು ಆರೋಗ್ಯಕಾರಿ ಕೊಬ್ಬು ಒಳಗೊಂಡ ಸಮತೂಕದ ಆಹಾರ ಸೇವನೆಯಿಂದ ಹೆಚ್ಚು ಅನುಕೂಲವಿದೆ. ನಡಿಗೆ, ಮಾಂಸಖಂಡಗಳನ್ನು ಬಲಪಡಿಸುವ ಕಸರತ್ತುಗಳೂ ಸೇರಿದಂತೆ ಏರೋಬಿಕ್ ಚಟುವಟಿಕೆಗಳು ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ನಿಯಂತ್ರಣಕ್ಕೆ ತರಲು ಪೂರಕ. ಮಧುಮೇಹ ಸಮಸ್ಯೆ ಇರುವವರು ಮಾತ್ರೆ ಅಥವಾ ಇನ್ಸುಲಿನ್ ಪಡೆಯಬೇಕೆಂದು ವೈದ್ಯರು ಸೂಚಿಸಿದಲ್ಲಿ, ಅದನ್ನು ಸರಿಯಾಗಿ ಪಾಲಿಸುವುದು ಕಡ್ಡಾಯ.

ವೈದ್ಯಕೀಯ ಸಲಹೆಗಳನ್ನು ಯಥಾವತ್ತಾಗಿ ಪಾಲಿಸಿ, ನಿಗದಿತ ಪ್ರಮಾಣದ ಔಷಧಿಗಳನ್ನು ತೆಗೆದುಕೊಳ್ಳಲೇಬೇಕು. ಔಷಧಿ ತೆಗೆದುಕೊಳ್ಳದಿರುವುದು ಅಥವಾ ವೈದ್ಯರ ಸೂಚನೆಗೆ ವ್ಯತಿರಿಕ್ತ ಪ್ರಮಾಣದಲ್ಲಿ (ಡೋಸ್) ಔಷಧಿ ತೆಗೆದುಕೊಳ್ಳುವುದರಿಂದಲೂ ರಕ್ತದಲ್ಲಿನ ಸಕ್ಕರೆ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಏರಲು ಅಥವಾ ಕುಸಿಯಲು ಕಾರಣವಾಗಬಹುದು.



ಮಧುಮೇಹ ನಿರ್ವಹಣೆಯು ಒತ್ತಡದಿಂದ ಕೂಡಿದ್ದು, ಮಾನಸಿಕ ಆರೋಗ್ಯದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಪ್ರಾಣಾಯಾಮ ಸೇರಿದಂತೆ ವಿವಿಧ ಚಟುವಟಿಕೆಗಳ ಮೂಲಕ ಮನಸ್ಸನ್ನು ಕ್ರಿಯಾಶೀಲವಾಗಿ ಇರಿಸಿಕೊಳ್ಳುವುದರಿಂದ ಹಾಗೂ ಮನೋಲ್ಲಾಸದ ಥೆರಪಿಗಳ ನೆರವಿನಿಂದ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳಬಹುದು. ಮಧುಮೇಹದ ಬಗೆಗಿನ ಜಾಗೃತಿಯ ಕೊರತೆಯಿಂದಲೇ ಹೆಚ್ಚು ಮಂದಿ ಅದರ ಪರಿಣಾಮಗಳ ಬಗ್ಗೆ ಗಂಭೀರವಾಗಿ ಯೋಚಿಸುತ್ತಿಲ್ಲ. ಇಂದು (ನ. 14) ವಿಶ್ವ ಮಧುಮೇಹ ದಿನ. ಈ ಹೊತ್ತಿನಲ್ಲಿ ಮಧುಮೇಹದ ಪರಿಣಾಮಗಳು, ಅದರ ನಿಯಂತ್ರಣ, ನಿರ್ವಹಣೆ ಕುರಿತು ಜನಸಾಮಾನ್ಯರಲ್ಲಿ ವೈಜ್ಞಾನಿಕವಾಗಿ ಅರಿವು ಮೂಡಿಸುವ ದಿಕ್ಕಿನಲ್ಲಿ ಹೆಜ್ಜೆ ಇಡಬೇಕಿದೆ.

ಲೇಖಕ: ಬೆಂಗಳೂರಿನ ರಾಜಾಜಿನಗರ ಇಎಸ್‌ಐ ವೈದ್ಯಕೀಯ ಕಾಲೇಜಿನ ಜನರಲ್ ಮೆಡಿಸಿನ್ ವಿಭಾಗದ ಮುಖ್ಯಸ್ಥ

ವಾಚಕರ ವಾಣಿ

ಚುನಾವಣೆ ಸಮಯಕ್ಕೇ ಬಂದದ್ದೇಕೆ ಗೃಹಲಕ್ಷ್ಮಿ?

ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಮುನ್ನಾದಿನವಾದ ಮಂಗಳವಾರ, ರಾಜ್ಯ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆಯ ಹಣವು ಹಾವೇರಿ ಜಿಲ್ಲೆಯ ಹಲವು ಮಹಿಳೆಯರ ಖಾತೆಗೆ ಜಮೆಯಾದ ಬಗ್ಗೆ ವರದಿಯಾಗಿದೆ (ಪ್ರ.ವಾ., ನ. 13). ನೀತಿಸಂಹಿತೆ ಜಾರಿಯಲ್ಲಿದ್ದರೂ ಗೃಹಲಕ್ಷ್ಮಿ ಹಣವನ್ನು ಹೀಗೆ ಜಮೆ ಮಾಡಿರುವುದು ಸರಿಯಲ್ಲ. ಕಾಂಗ್ರೆಸ್ ಪಕ್ಷವು ಸರ್ಕಾರದ ಹಣದಲ್ಲಿ ರಾಜಕೀಯ ಭ್ರಷ್ಟಾಚಾರ ಮಾಡುತ್ತಿದೆ ಎಂದು ವಿರೋಧ ಪಕ್ಷದ ನಾಯಕರು ಆರೋಪಿಸಿದ್ದಾರೆ. ಮತದಾನದ ಮುನ್ನಾ ದಿನ ಹಣ ಜಮೆ ಆಗಿರುವುದು ಈ ಆರೋಪಕ್ಕೆ ಪುಷ್ಟಿ ನೀಡುವಂತಿದೆ. ರಾಜಕೀಯ ಪಕ್ಷಗಳು ಆಮಿಷ ಒಡ್ಡಿ ಮತ ಗಳಿಸಿ ಅಧಿಕಾರದ ಗದ್ದುಗೆ ಏರುವುದು ಹೊಸತೇನಲ್ಲ.

ನಮ್ಮ ರಾಜಕೀಯ ನಾಯಕರ ಬಾಯಿಂದ 'ನಾವು ನಿಮಗಾಗಿ ಅಷ್ಟು ಅನುದಾನ ಕೊಟ್ಟಿದ್ದೇವೆ, ನಮ್ಮ ಪಕ್ಷ ಇಷ್ಟು ಯೋಜನೆಗಳನ್ನು ಜಾರಿ ಮಾಡಿದೆ' ಎಂಬಂತಹ ಮಾತುಗಳೇ ಉದುರುತ್ತಿರುತ್ತವೆ. ಸರ್ಕಾರದಿಂದ ಜನರಿಗೆ ಸಿಗಬೇಕಾದ ಅಗತ್ಯ ಸೌಲಭ್ಯ, ಅನುದಾನವನ್ನು ರಾಜಕೀಯ ನಾಯಕರು ಅವರಿಗೆ ನೀಡುವ ವರಪ್ರಸಾದ ಎನ್ನುವಂತೆ ಬಿಂಬಿಸುತ್ತಾರೆ. ಬಹುತೇಕರಿಗೆ ತಮಗೆ ಕೊಡಮಾಡುವ ಸೌಲಭ್ಯಗಳನ್ನು ಪಡೆಯುವುದು ತಮ್ಮ 'ಹಕ್ಕು' ಎನ್ನುವ ಅರಿವೇ ಇರುವುದಿಲ್ಲ, ಜನಪ್ರತಿನಿಧಿಗಳು ತಮಗೆ ಮಾಡುವ ಉಪಕಾರ ಎಂದೇ ತಿಳಿಯುತ್ತಾರೆ. ಅಷ್ಟರಮಟ್ಟಿಗೆ ಜನರಲ್ಲಿ ಕೃತಜ್ಞತಾ ಭಾವ ಹುಟ್ಟಿಸಿ, ಭಾವನಾತ್ಮಕವಾಗಿ ಅವರನ್ನು ಹಿಡಿದಿಡುವ ರಾಜಕೀಯ ತಂತ್ರವನ್ನು ಅನುಸರಿಸಲಾಗುತ್ತದೆ. ಆಮಿಷಗಳಿಗೆ ಅಥವಾ ಜಾತಿ–ಮತದ ಹೆಸರಿನಲ್ಲಿ ನಡೆಯುವ ಧ್ರುವೀಕರಣಕ್ಕೆ ಮರುಳಾಗಿ ಯಾರೇ ಮತ ಹಾಕಲಿ, ಅವರು ಮತದ ಮೌಲ್ಯವನ್ನು ಕಳೆದಂತೆಯೇ ಸರಿ. ನಾಯಕನನ್ನು ಆಯ್ಕೆ ಮಾಡುವ ಹಕ್ಕಿಗೆ ಚ್ಯುತಿ ತಂದಂತೆ.

ಮಂಜುನಾಥ್ ಹಾಲವರ್ತಿ, ಕೊಪ್ಪಳ

ಶಕ್ತಿ ಯೋಜನೆ: ಉಡಾಫೆಯ ವರ್ತನೆ ತರವಲ್ಲ

ರಾಜ್ಯ ಸರ್ಕಾರದ ಮಹತ್ವದ ಯೋಜನೆಗಳಲ್ಲೊಂದಾದ 'ಶಕ್ತಿ' ಯೋಜನೆ ಬಹಳಷ್ಟು ಮಹಿಳೆಯರಿಗೆ ನೆರವಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಈ ಯೋಜನೆಯಡಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಮಹಿಳೆಯರನ್ನು ಕೆಲವು ಚಾಲಕರು ಮತ್ತು ನಿರ್ವಾಹಕರು ಅಗೌರವದಿಂದ ನಡೆಸಿಕೊಳ್ಳುವುದು ಖಂಡನೀಯ. ಶಕ್ತಿ ಯೋಜನೆ ಜಾರಿಯಾದಾಗಿನಿಂದ ರಾಜ್ಯದ ಬಹಳಷ್ಟು ಬಸ್‌ಗಳು ಮಹಿಳೆಯರಿಂದಲೇ ತುಂಬಿರುತ್ತವೆ. ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿನಿಯರಿಂದ ಹಿಡಿದು ಉದ್ಯೋಗಸ್ಥ ಹೆಣ್ಣುಮಕ್ಕಳವರೆಗೆ ಈ ಯೋಜನೆ ಬಲ ತುಂಬಿದೆ. ಆದರೆ ಮಹಿಳೆಯರು ಉಚಿತವಾಗಿ ತೆರಳುತ್ತಾರೆ ಎಂಬ ಕಾರಣಕ್ಕೆ ನಿರ್ವಾಹಕರು ಅವರೊಂದಿಗೆ ಉಡಾಫೆಯಿಂದ ವರ್ತಿಸುವುದು ಸರಿಯಲ್ಲ.

ಇತ್ತೀಚೆಗೆ ಕಾರ್ಯನಿಮಿತ್ತ ಭಗವತಿ ಗ್ರಾಮದಿಂದ ಬಾಗಲಕೋಟೆಗೆ ತೆರಳುವಾಗ, ಬಾಗಲಕೋಟೆ ಘಟಕದ ನಿರ್ವಾಹಕರೊಬ್ಬರು ಟಿಕೆಟ್ ನೀಡುವ ಸಂದರ್ಭದಲ್ಲಿ ಅನೇಕ ಮಹಿಳೆಯರಿಗೆ ಏಕವಚನ ಪ್ರಯೋಗ ಮಾಡುತ್ತಿದ್ದರು. ಇದರಿಂದ ಬಸ್‌ನಲ್ಲಿದ್ದ ಹೆಣ್ಣುಮಕ್ಕಳಿಗೆ ಮುಜುಗರ ಉಂಟಾದಂತಿತ್ತು. 'ಬಸ್‌ನಲ್ಲಿ ಗಂಡನ ಮನೆಗೆ ಹೋಗಿ, ತವರು ಮನೆಗೆ ಹೋಗಿ, ಎಲ್ಲಿಗೆ ಹೋದರೂ ಫ್ರೀ' ಎಂದು ಜನನಾಯಕರು ಹೇಳುತ್ತಾರೆ. ಆದರೆ, ಸಾರಿಗೆ ನಿಗಮಗಳ ಬಸ್‌ಗಳನ್ನು ಮಹಿಳಾಸ್ನೇಹಿಯಾಗಿ ಮಾರ್ಪಡಿಸುವ ಕೆಲಸ ಮೊದಲು ಆಗಬೇಕಾಗಿದೆ. ಬಸ್ಸಿನಲ್ಲಿ ಪ್ರಯಾಣಿಸುವ ಹೆಣ್ಣುಮಕ್ಕಳನ್ನು ಗೌರವದಿಂದ ಕಾಣುವಂತಹ ವಾತಾವರಣ ಮೂಡಿಸಬೇಕು. ತಮಗೆ ಅವಮಾನವಾಗುವಂತಹ ಸಂದರ್ಭ ಬಂದಾಗ ಮಹಿಳೆಯರು ದೂರು ಕೊಡುವ ವ್ಯವಸ್ಥೆ ಜಾರಿಯಾಗಲಿ.

ಮಣಿಕಂಠ ಪಾ. ಹಿರೇಮಠ, ಬಾಗಲಕೋಟೆ

ಭಾಷಣ

ಒಂದೆಡೆ ದ್ವೇಷಭಾಷಣ,
ಮತ್ತೊಂದೆಡೆ ಆವೇಶಭಾಷಣ...
ಎಲ್ಲ ಕೂಡಿ ಕೂಡದೆ, ಒಟ್ಟಿನಲ್ಲಿ
ನಾಶಭಾಷಣ ಎನ್ನೋಣ!
(ಇದುವೆ ಅಲ್ಲವೆ ರಾಜಕಾ'ರಣ'?)

ಸಿ.ಪಿ.ಕೆ., ಮೈಸೂರು

ವಿದ್ಯಾರ್ಥಿಗಳಿಗೆ 'ಅಪಾರ್' ಸಂಖ್ಯೆ ಅವಶ್ಯವೇ?

ವಿದ್ಯಾರ್ಥಿಗಳಿಗೆ 'ಆಧಾರ್' ಸಂಖ್ಯೆಯ ರೀತಿಯಲ್ಲಿ 'ಅಪಾರ್' ಎಂಬ 12 ಅಂಕಿಗಳ ವಿಶಿಷ್ಟ ಗುರುತಿನ ಚೀಟಿ ವಿತರಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 13). ಇಂತಹದ್ದೊಂದು ವ್ಯವಸ್ಥೆಯ ಅವಶ್ಯಕತೆ ನಿಜಕ್ಕೂ ಇದೆಯೇ? ಇದು ಸರ್ಕಾರದ ಮತ್ತು ಜನರ ಅಮೂಲ್ಯ ಸಮಯ, ಹಣವನ್ನು ವ್ಯರ್ಥ ಮಾಡುವ ಕೆಲಸದಂತೆ ತೋರುತ್ತದೆ. ಇದನ್ನು ರಾಷ್ಟ್ರೀಯ ಶಿಕ್ಷಣ ನೀತಿಯಡಿ (ಎನ್‌ಇಪಿ) ಜಾರಿ ಮಾಡಲಾಗುತ್ತದೆ ಎನ್ನಲಾಗಿದೆ. ಆದರೆ ರಾಜ್ಯ ಸರ್ಕಾರ ಎನ್‌ಇಪಿಯನ್ನೇ ತಿರಸ್ಕರಿಸಿದೆಯಲ್ಲವೇ?

ವಿದ್ಯಾರ್ಥಿಗಳನ್ನು ಈಗಾಗಲೇ ಮೂರು ಸಂಖ್ಯೆಗಳಿಂದ ಗುರುತಿಸಲಾಗುತ್ತಿದೆ: 1. ಆಧಾರ್ ಸಂಖ್ಯೆ (ಒಕ್ಕೂಟ ಸರ್ಕಾರ), 2. ಎಸ್‌ಟಿಎಸ್ ಸಂಖ್ಯೆ (ಸ್ಟೂಡೆಂಟ್ ಟ್ರ್ಯಾಕಿಂಗ್ ಸಿಸ್ಟಂ ಐ.ಡಿ.– ರಾಜ್ಯ ಸರ್ಕಾರ), 3. ಪಿಇಎನ್ ಸಂಖ್ಯೆ (ಪರ್ಮನೆಂಟ್ ಎಜುಕೇಷನ್ ನಂಬರ್– ಒಕ್ಕೂಟ ಸರ್ಕಾರ). ಈ ಸಂಖ್ಯೆಗಳ ಜೊತೆಗೆ ಇನ್ನೊಂದು ಐ.ಡಿ. ಸಂಖ್ಯೆಯನ್ನು ಸೃಷ್ಟಿಸುವುದರಿಂದ ಆಗುವ ಪ್ರಯೋಜನವಾದರೂ ಏನು?

ಪ್ರಕಾಶ ವಿ. ಹೆಬ್ಬಳ್ಳಿ, ಬೆಂಗಳೂರು

ತೃತೀಯ ರಂಗ ಕಟ್ಟುವುದು ಸುಲಭವಿರಲಿಲ್ಲ...

'ತೃತೀಯ ರಂಗವನ್ನು ಸಂಘಟಿಸಬೇಕಿದ್ದ ಎಡಪಕ್ಷಗಳು ಯುಪಿಎ ಕೂಟಕ್ಕೆ ಜೋತುಬಿದ್ದುದು ದುರಂತ' ಎಂದಿದ್ದಾರೆ ಭೀಮನಗೌಡ ಕಾಶಿರೆಡ್ಡಿ (ವಾ.ವಾ., ನ. 13). ಎಡಪಕ್ಷಗಳು ಮೊದಲು ತೃತೀಯ ರಂಗವನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಿವೆ. ಆದರೆ ಅದು ಸಾಧ್ಯವಾಗದಿದ್ದಾಗ ಅನಿವಾರ್ಯವಾಗಿ ಯುಪಿಎ ಕೂಟವನ್ನು ಬೆಂಬಲಿಸಿವೆ. ಇದರಿಂದ ಎನ್‌ಡಿಎ ಮತಗಳಿಕೆಯ ಪ್ರಮಾಣ ಕಡಿಮೆಯಾಗಿರುವುದು ಚುನಾವಣಾ ಫಲಿತಾಂಶದಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ಇದು ದುರಂತವಲ್ಲ. ನಿತೀಶ್ ಕುಮಾರ್, ಚಂದ್ರಬಾಬು ನಾಯ್ಡು ಅವರಂತಹ, ಆಗಾಗ ಬಣ್ಣ ಬದಲಾಯಿಸುವ ಪಕ್ಕಾ ಅಧಿಕಾರದಾಹಿ ರಾಜಕಾರಣಿಗಳು ಇರುವಾಗ ತೃತೀಯ ರಂಗವನ್ನು ಕಟ್ಟುವುದು ಅಷ್ಟು ಸುಲಭ ಇರಲಿಲ್ಲ. ಇದನ್ನು ಮನಗಂಡ ಎಡಪಕ್ಷಗಳು ಯುಪಿಎಯನ್ನು ಬೆಂಬಲಿಸಿದ್ದು ಸರಿಯಾಗಿಯೇ ಇದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಕ್ಕಳ ಆಟ, ಪಾಠಕ್ಕೆ ಕಸುವು ತುಂಬಿ, ಕಲ್ಪನೆಗೆ ರೆಕ್ಕೆ ಮೂಡಿಸಿದವರು, ಬಾಲ್ಯಕ್ಕೆ ಬಣ್ಣ ತುಂಬಿದವರು ಹಲವು ಮಹನೀಯರು. ಅಂಥವರು ಸೃಷ್ಟಿಸಿದ ಮಾಂತ್ರಿಕ ಲೋಕದ ಕಿರು ಪರಿಚಯ ಇಲ್ಲಿದೆ. ಚಿಣ್ಣರು ಮರೆಯಲಾಗದ ಕವನಗಳು, ಮರೆಯಬಾರದ ಸಾಹಿತಿಗಳು, ನೋಡಲೇಬೇಕಾದ ಸಿನಿಮಾಗಳ ಸಣ್ಣ ಪಟ್ಟಿ; ಜತೆಗೆ ಒಂದು ಚೆಂದದ ಸಚಿತ್ರ ಕಥೆ. ಎಲ್ಲರೂ ಕ್ಷಣ ಹೊತ್ತು ಮಕ್ಕಳಾಗೋಣ ಬನ್ನಿ...

ಅಜ್ಜಮ್ಮನ ಅದ್ಭುತ ಯಂತ್ರಗಳು

ಮೂಲ ಕಥೆ: ರಾಜೀವ್ ಐಪೆ
ಚಿತ್ರಗಳು: ರಾಜೀವ್ ಐಪೆ
ಅನುವಾದ: ರವಿಕಿರಣ್

'ಅಜ್ಜಿ! ಅಜ್ಜಿ! ಇವತ್ತು ಕೊಬ್ಬರಿ ಮಿಠಾಯಿ ಮಾಡೋಣವಾ?' ಎಂದು ಸೂರಜ್ ಅಜ್ಜಿಯನ್ನು ಕೇಳಿದ. 'ಪ್ಲೀಈಈಈಈಈಈಈಈಸ್'

'ಆಗಲಿ ಪುಟ್ಟ! ಆದ್ರೆ, ನೀನೂ ಸಹಾಯ ಮಾಡಬೇಕು ಸರಿನಾ?' ಎಂದರು ಅಜ್ಜಿ. 'ಹೊ, ಹೊ!'



'ಶುರು ಮಾಡೋಣವಾ?' ಎಂದು ಸೂರಜ್ ಕೂಗಿದ. 'ಇದೋ ನಾನು ರೆಡಿ!' ಎಂದರು ಅಜ್ಜಿ.

ಚೆನ್ನಾಗಿ ಮಾಗಿರುವ ಕಾಯಿಗಳನ್ನು ಮಾತ್ರ ಕೀಳೋಣ, ಆಯಿತಾ? ಪೂರ್ತಿ ಕಂದು ಬಣ್ಣದ್ದಾಗಿರಬೇಕು... ಹುಷಾರು! ಇದೋ ಬಂತು!' ಜೂಊಊಊಯ್... ದೂಪ್!

'ಈಗ ನಾರು ಬಿಡಿಸೋಣ...' ಪಚಕ್! ಕರಕ್! ಪಚಕ್! ಕ ರ್ ರ್ ರ್ ರ್ ರ್ ರ್ ರ್ ಕ್

'ಮತ್ತು ಕಾಯಿಯನ್ನು ತು ರ್ ರ್ ರ್ ರ್ ರ್ ರ್ ರ್ ರ್ ರಿಯೋಣ!'

'ಅದನ್ನೆಲ್ಲ ಬಾಣಲೆಗೆ ಸುರಿದು ಸಕ್ಕರೆ, ತುಪ್ಪದ ಜೊತೆ ಹುರಿಯೋಣ...' 'ಆಹಾ ಅಜ್ಜಿ ಘಮ ಘಮ ಅಂತಿದೆ!'

'ಅದನ್ನೆಲ್ಲಾ ತಟ್ಟೆಗೆ ಸುರಿದು... ತಣ್ಣಗಾಗುವವರೆಗೆ ಕಾಯಬೇಕಪ್ಪ!' 'ಈಗ ಅದನ್ನು ಸಣ್ಣ ಸಣ್ಣ ಬಿಲ್ಲೆಗಳಂತೆ ಕುಯ್ಯೋಣ...' ಸೀ ಈ ಈ ಕ್ ಸೀ ಈ ಈ ಕ್ 'ಅಬ್ಬಾ! ಕೊಬ್ಬರಿ ಮಿಠಾಯಿ ತಿನ್ನಲು ರೆಡಿ!' 'ಹುಂ ಮ್ ಮ್!'



ಸರಳ ಯಂತ್ರಗಳು

ಅಜ್ಜಿ ಕೆಲವು ಸರಳ ಸಾಧನಗಳ ಸಹಾಯದಿಂದ ಕೊಬ್ಬರಿ ಮಿಠಾಯಿ ಮಾಡಿದರು. ಕೆಲವು ಕೈ ಕೆಲಸಗಳಿಗೆ ಈ ಸಾಧನಗಳು ಉಪಯೋಗವಾಗುತ್ತವೆ. ಅಜ್ಜಿ ಬಳಸಿದ ಆರು ಸರಳ ಯಂತ್ರಗಳೆಂದರೆ... 1. ಇಳಿಜಾರು 2.ಸನ್ನೆ ಅಥವಾ ಮೀಟುಗೋಲು 3. ಗಾಲಿ ಮತ್ತು ಅಚ್ಚು 4. ಅಲಗು 5.ರಾಟೆ 6. ತಿರುಪುಮೊಳೆ
ಸೂರಜ್ ಮತ್ತು ಅಜ್ಜಿ ಕೊಬ್ಬರಿ ಮಿಠಾಯಿ ಮಾಡಲು ಬಳಸಿದ ಸರಳಯಂತ್ರಗಳನ್ನು ಗುರುತಿಸುವಿರಾ?

ಕಥೆ ಸೌಜನ್ಯ: ಪ್ರಥಮ್ ಬುಕ್ಸ್, https://storyweaver.org.in

ಈ ಆಟಗಳು ಗೊತ್ತಿದೆಯೇ...?

- ಮರಕೋತಿಯಾಟ
- ಹುಲಿ ಹಸುವಿನ ಆಟ
- ಸರಿ ಬೆಸ ಆಟ
- ನದಿ–ದಡ ಆಟ
- ಕಲರ್ ಕಲರ್ ಯಾವ ಕಲರ್
- ಲಗೋರಿ
- ಚೆನ್ನೆಮಣೆ
- ಚಿನ್ನಿದಾಂಡು
- ಗೋಲಿಯಾಟ
- ಕಪ್ಪೆ ಜಿಗಿದಾಟ
- ಕುಂಟಾಟ/ಕುಂಟಿ ಮುಟ್ಟು ಬಾ
- ಚುಕು ಬುಕು ರೈಲು
- ತೆಂಗಿನ ಗರಿ ಆಟ
- ಪೇಪರ್ ದೋಣಿಯಾಟ

- ಬುಗುರಿ ಆಟ
- ರತ್ತೋ ರತ್ತೋ ರಾಯನ ಮಗಳು
- ಚುಕು ಚುಕು ರೈಲು
- ನಂದಿ ಕಂಬದಾಟ/ನಂದಿ ಕೋಲು ಆಟ
- ಅಪ್ಪಾಳೆ ತಿಪ್ಪಾಳೆ ಆಟ
- ಅವಲಕ್ಕಿ ಪವಲಕ್ಕಿ ಆಟ
- ಕಡ್ಡಿ ಬಿಡಿಸಿ ತೆಗೆಯೋ ಆಟ
- ಹಗ್ಗ ಎಳೆಯೋ ಆಟ
- ಗಾಣದ ಓಟ
- ಕಳ್ಳ ಪೊಲೀಸ್ ಆಟ
- ರಾಮ ಲಕ್ಷ್ಮಣರ ಆಟ

ಮಕ್ಕಳೇ, ಈ ಆಟಗಳ ಬಗ್ಗೆ ತಿಳಿದಿಲ್ಲವೇ...? ನಿಮ್ಮ ಪೋಷಕರನ್ನು ಕೇಳಿ ನೋಡಿ...

ಈ ಸಿನಿಮಾ ನೋಡಿದ್ದೀರಾ?



ಕನ್ನಡ

- ಚಿನ್ನಾರಿ ಮುತ್ತ
- ಪುಟಾಣಿ ಏಜೆಂಟ್ 1, 2, 3
- ಕಿನ್ನರ ಬಾಲೆ
- ಬೆಟ್ಟದ ಹೂವು
- ಮಕ್ಕಳ ಸೈನ್ಯ
- ಗುಬ್ಬಚ್ಚಿಗಳು
- ನಾಗರಹೊಳೆ

ಹಿಂದಿ

- ಕಾಬೂಲಿವಾಲಾ
- ಕರಾಮತಿ ಕೋಟ್

- ತಾರೆ ಜಮೀನ್ ಪರ್

ಇಂಗ್ಲಿಷ್

- ದಿ ಸೌಂಡ್ ಆಫ್ ಮ್ಯೂಸಿಕ್
- ಬ್ಲೂ ಅಂಬ್ರೆಲ್ಲಾ
- ಬಿಎಫ್‌ಜಿ
- ಡನ್‌ಸ್ಟನ್ ಚೆಕ್ಸ್ ಇನ್
- ಹೆಚಿಕೊ
- ದಿ ಜಂಗಲ್ ಬುಕ್
- ನೈಟ್ ಎಟ್ ದಿ ಮ್ಯೂಸಿಯಂ
- ಹೋಮ್ ಅಲೋನ್
- ಮಟಿಲ್ಡಾ
- 101 ಡಾಲ್ಮೇಷನ್ಸ್
- ದಿ ಓಲ್ಡ್ ಹಂಟರ್ಸ್ ಟೇಲ್
- ಬೇಬೀಸ್ ಡೇ ಔಟ್
- ಟೂ ಬ್ರದರ್ಸ್
- ದಿ ಬಾಯ್ ಇನ್ ದಿ ಸ್ಟ್ರಿಪ್ಡ್
- ಪೈಜಾಮಾಸ್
- ದಿ ಮ್ಯಾನ್ ಹು ನೋಸ್ ಇನ್‌ಫಿನಿಟಿ

ಸರಣಿಗಳು

- ಮಾಲ್ಗುಡಿ ಡೇಸ್
- ಚಾರ್ಲಿ ಚಾಪ್ಲಿನ್ ಸರಣಿಗಳು
- ಬ್ಯೋಮಕೇಶ ಬಕ್ಷಿ

ನೀವು ಇವರ ಬಲ್ಲಿರೇನು?

ಪಂಜೆ ಮಂಗೇಶರಾವ್



'ನಾಗರ ಹಾವೇ! ಹಾವೊಳು ಹೂವೇ! ಬಾಗಿಲ ಬಿಲದಲಿ ನಿನ್ನಯ ಠಾವೇ?' ಎಂದು ಬರೆದು ಕನ್ನಡ ನಾಡಿನ ಮಕ್ಕಳಲ್ಲಿ ರೋಮಾಂಚನ ಮೂಡಿಸಿದವರು 'ಕವಿಶಿಷ್ಯ' ಎಂದೇ ಖ್ಯಾತರಾದ ಪಂಜೆ ಮಂಗೇಶರಾಯರು. ಕನ್ನಡ ಪಂಡಿತರಾಗಿ, ಶಾಲಾ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡಿದ, ಕಿರು ಕಾದಂಬರಿ, ಪತ್ತೇದಾರಿ ಕಾದಂಬರಿ, ಐತಿಹಾಸಿಕ ಕಥೆ ಮುಂತಾಗಿ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ ಇವರು ಖ್ಯಾತರಾಗಿದ್ದು 'ಶಿಶು ಸಾಹಿತ್ಯದ ಜನಕ' ಎಂದು. 'ಮೂಡುವನು ರವಿ ಮೂಡುವನು..' ಎಂದು 'ಉದಯರಾಗ' ಹಾಡಿ, ಮಕ್ಕಳ ಕಲ್ಪನೆಯೊಂದಿಗೆ ಆಟ ಆಡಿದವರು ಪಂಜೆ ಮಂಗೇಶರಾಯರು.

ದಿನಕರ ದೇಸಾಯಿ

ಜನನಾಯಕರಾಗಿ, ಜನಪ್ರತಿನಿಧಿಯಾಗಿ, ರೈತ, ಕಾರ್ಮಿಕ ಮುಖಂಡರಾಗಿ ನಾಡಿಗೆ ಅಪಾರ ಸೇವೆ ಸಲ್ಲಿಸಿದವರು ದಿನಕರ ದೇಸಾಯಿ. ಸಾಹಿತ್ಯ ಕ್ಷೇತ್ರದಲ್ಲೂ ಇವರದ್ದು ಪ್ರಮುಖ ಹೆಸರು. ವಿಶಿಷ್ಟ ಲವಲವಿಕೆ, ಲಯ, ಗೇಯದ ಚೌಪದಿಗಳನ್ನು ಬರೆದು 'ಚುಟುಕು ಬ್ರಹ್ಮ'ನೆಂದು ಹೆಸರಾದ ಇವರಿಗೆ ಮಕ್ಕಳ ಬಗ್ಗೆ ವಿಶೇಷ ಕಳಕಳಿ. ಮಕ್ಕಳನ್ನು ಕುರಿತು ಇವರು ಬರೆದ 'ಟಿಕ್ ಟಿಕ್ ಗೆಳೆಯಾ', 'ಬೆಕ್ಕು' ಚಿಣ್ಣರು ಗುನುಗುವಂಥ ಜನಪ್ರಿಯ ಕವನಗಳು.

ಕುವೆಂಪು

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಬರೆದು ರಸಋಷಿ ಎನ್ನಿಸಿಕೊಂಡರೂ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ (ಕುವೆಂಪು) ಅವರು ಮಕ್ಕಳನ್ನು ಮರೆಯಲಿಲ್ಲ. 'ದೇವರ ಪೆಪ್ಪರಮೆಂಟೇನಮ್ಮಾ ಗಗನದೊಳಲೆಯುವ ಚಂದಿರನು' (ಅರ್ಧ ಚಂದ್ರ ಕವಿತೆ) ಎಂದು ತಮ್ಮ ಕಲ್ಪನಾ ವಿಲಾಸ ಮೆರೆದ ಅವರು 'ಕಿಂದರಿ ಜೋಗಿ'ಯ ಮೂಲಕ ಕನ್ನಡ ನಾಡಿನ ಮಕ್ಕಳನ್ನು ಮಂತ್ರಮುಗ್ಧರನ್ನಾಗಿಸಿದರು. ಇವರ 'ನನ್ನ ಮನೆ', 'ತಿಂಗಳ್ ಮಾವ', 'ಬಣ್ಣದ ಚುಕ್ಕಿ', 'ಒಡವೆಗಳು' ಮುಂತಾದ ಕವಿತೆಗಳು ಕಿರಿಯರ ಜತೆಗೆ ಹಿರಿಯರಿಗೂ ಪ್ರಿಯವಾದುದಾಗಿವೆ.

ಜಿ.ಪಿ.ರಾಜರತ್ನಂ



'ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ' ('ತುತ್ತೂರಿ' ಕವನ) ಎಂಬ ಸರಳ, ಸುಂದರ ರಚನೆಯ ಮೂಲಕ ಹಲವು ತಲೆಮಾರುಗಳ ಕನ್ನಡಿಗರ ಸ್ಮೃತಿಯಲ್ಲಿ ಉಳಿದವರು ಜಿ.ಪಿ. ರಾಜರತ್ನಂ. ಕನ್ನಡ ಪಂಡಿತರಾಗಿ, ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಇವರು ತಾವು ಬರೆದಷ್ಟೇ ಪ್ರಮುಖವಾಗಿ ಇತರರಿಂದಲೂ ಬರೆಯಿಸಿದವರು. 'ನಮ್ಮ ಮನೆಯಲೊಂದು ಸಣ್ಣ ಪಾಪ ಇರುವುದು', 'ಒಂದು ಎರಡು, ಬಾಳೆಲೆ ಹರಡು', 'ನಾಯಿ ಮರಿ ನಾಯಿ ಮರಿ ತಿಂಡಿ ಬೇಕೇ', 'ರೊಟ್ಟಿ ಅಂಗಡಿ ಕಿಟ್ಟಪ್ಪಾ' ಇಂತಹ ಶಿಶುಗೀತೆಗಳನ್ನು ಬರೆದು, ಬರೆಸಿ ಮಕ್ಕಳ ಸಾಹಿತ್ಯ ಪ್ರಕಾರದ ಬೆಳವಣಿಗೆಗೆ ಕಾರಣರಾದ ಪ್ರಾತಃಸ್ಮರಣೀಯರು.

ಸಿಸು ಸಂಗಮೇಶ

ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಮರೆಯಲಾಗದ ಹೆಸರು ಸಿಸು ಸಂಗಮೇಶ ಅವರದ್ದು. ವೃತ್ತಿಯಿಂದ ಅಧ್ಯಾಪಕರಾಗಿದ್ದ ಅವರು ಮಕ್ಕಳಿಗೆ ಪಾಠ ಹೇಳುವ ತನ್ಮಯತೆ ಮತ್ತು ಶ್ರದ್ಧೆಯಿಂದ ಶಿಶು ಸಾಹಿತ್ಯ ರಚಿಸಿದವರು. ಅವರು ಬಾಲ ಭಾರತಿ ಪ್ರಕಾಶನದಡಿ ಸುಮಾರು 80ಕ್ಕೂ ಹೆಚ್ಚು ಕೃತಿ ಪ್ರಕಟಿಸಿದರು. ಅವರ 'ನಾಯಿ ಫಜೀತಿ', 'ಮಂಕು ಮರಿ', 'ಯಾರು ಜಾಣರು?', 'ಆಶೆಬುರುಕಿ ಆಶಾ', 'ದಾರಿಯ ಬುತ್ತಿ' ಮುಂತಾದ ಕೃತಿಗಳು ಮಕ್ಕಳಿಗೆ ಅಚ್ಚುಮೆಚ್ಚು.

ಪ್ರೇರಣೆ ಇವರು

ಅಬ್ದುಲ್ ಕಲಾಂ

ಜ್ಞಾನವನ್ನೇ ತಮ್ಮ ಆಸ್ತಿಯನ್ನಾಗಿ ಮಾಡಿಕೊಂಡಿದ್ದ ಅಬ್ದುಲ್ ಕಲಾಂ ಮಕ್ಕಳಿಗೆ ತುಂಬಾ ಅಚ್ಚುಮೆಚ್ಚು. ವಿಜ್ಞಾನಿಯಾಗಿ, ದೇಶದ ಮೊದಲ ಪ್ರಜೆಯಾಗಿ (ರಾಷ್ಟ್ರಪತಿ) ಮಕ್ಕಳೊಂದಿಗೆ ಸದಾ ಒಡನಾಟ ಹೊಂದಿದ್ದವರು. ಮಗು ಮನಸ್ಸಿನ ಕಲಾಂ, ಬಡತನದಿಂದ ಬೆಳೆದು ಎಲ್ಲರಿಗೂ ಮಾದರಿಯಾಗುವಂತೆ ಅರಳಿದ ಪ್ರತಿಭೆ. ಶ್ರದ್ಧೆ, ಸಾಧಿಸುವ ಛಲ ಇದ್ದರೆ ಜೀವನದಲ್ಲಿ ಶ್ರೇಷ್ಠ ಸಾಧನೆ ಮಾಡಬಹುದು ಎನ್ನುವುದಕ್ಕೆ ನಿದರ್ಶನವಾಗಿರುವ ಅಬ್ದುಲ್ ಕಲಾಂ ಎಲ್ಲರಿಗೂ ಆದರ್ಶಪ್ರಾಯ. ವಿಜ್ಞಾನ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಬೇಕು ಎಂದು ಬಯಸುವ ಚಿಣ್ಣರಿಗೆ ಸ್ಫೂರ್ತಿಯ ಚಿಲುಮೆ ಅವರು.



ಶಿವರಾಮ ಕಾರಂತ

ಮೇರು ಸಾಹಿತಿ ಕೋಟ ಶಿವರಾಮ ಕಾರಂತ ಅವರು ಮಕ್ಕಳ ಪಾಲಿಗೆ ಪ್ರೀತಿಯ ಕಾರಂತಜ್ಜ. ಸಾಹಿತ್ಯ, ಯಕ್ಷಗಾನ, ಪರಿಸರ, ವಿಜ್ಞಾನ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಶಿವರಾಮ ಕಾರಂತರು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದ್ದರು. ಅವರ ಮಕ್ಕಳ ಪ್ರೀತಿಗೆ ಸಾಕ್ಷಿಯಾಗಿ ನಿಲ್ಲುತ್ತದೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿರುವ ಬಾಲವನ. ಮಕ್ಕಳಿಗೆ ಪೂರಕವಾದ ಸಾಹಿತ್ಯ, ವಿಜ್ಞಾನ ಸಾಹಿತ್ಯವನ್ನು ಬರೆದು ಚಿಣ್ಣರ ಕಲಿಕೆಯನ್ನು ಸುಲಭವಾಗಿಸಲು ಯತ್ನಿಸಿದ್ದರು. ಹೊಸದನ್ನು ಕಲಿಯುವ ಹಂಬಲವಿರುವ ಮಕ್ಕಳಿಗೆ ಕಾರಂತಜ್ಜ ಯಾವಾಗಲೂ ಮಾದರಿ.



ಗುಂಡಣ್ಣ

ಪ್ರಯತ್ನ ಪ್ರವೃತ್ತಿ ಇರಬೇಕು

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

66

ಮೇರಿ ಕೋಮ್ ಅಂತಾ ಒಬ್ಬರು ಬಾಕ್ಸರ್. ಆ ಹೆಣ್ಣುಮಗಳು ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ, ಬೆಳ್ಳಿ ಪದಕ ಗೆದ್ದಳು. ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಕಂಚಿನ ಪದಕ ತಂದುಕೊಟ್ಟಳು. ಅಷ್ಟರಲ್ಲಿಯೇ ಆಕೆಗೆ ಎರಡು ಮಕ್ಕಳಿದ್ದರು. ಅಂದರೆ ಎರಡು ಮಕ್ಕಳು ತಾಯಿಯಾಗಿ ಹೋಗಿ ಪ್ರಯತ್ನ ಮಾಡಿ ಭಾರತಕ್ಕೆ ಪದಕ ತಂದುಕೊಟ್ಟಳು.

ಒಬ್ಬ ವ್ಯಕ್ತಿ ಹೇಳುತ್ತಿದ್ದ, 'ನಾನು ಬಹುದೂರದ ವ್ಯಕ್ತಿಗಳ ಜೊತೆಗೆ ಮತಾಡುವ ಹಾಗೆ ಮಾಡ್ತೀನಿ' ಅಂತ. 'ಇದೆಲ್ಲ ಹ್ಯಾಂಗೆ ಸಾಧ್ಯ' ಎಂದು ಅವನ ಸ್ನೇಹಿತರು ಹೇಳುತ್ತಿದ್ದರು. ಆದರೂ ಆ ವ್ಯಕ್ತಿ ಪ್ರಯತ್ನ ಬಿಡಲಿಲ್ಲ. ಅವನೇ ಫೋನ್ ಕಂಡು ಹಿಡಿದ ಗ್ರಹಾಂ ಬೆಲ್. ಆತ ಫೋನ್ ಕಂಡು ಹಿಡಿದ ತಕ್ಷಣ ಮೊಟ್ಟಮೊದಲು ಫೋನ್ ಮಾಡಿದ್ದು ಆತನ ಗರ್ಲ್ ಫ್ರೆಂಡ್ ಮಾರ್ಗರೆಟ್ ಹೆಲೊ ಅವಳಿಗೆ. ಅವಳಿಗೆ ಹೆಲೊ ಎಂದ ಜಗತ್ತೆಲ್ಲಾ ಹೆಲೊ ಹೆಲೊ ಅನ್ನುತ್ತಿದೆ. ಜಮಖಂಡಿ ಹತ್ತಿರ ಚಿಕ್ಕಪಡಸಲಗಿ ಅಂತ ಒಂದು ಊರಿದೆ. ಕೃಷ್ಣಾ ನದಿಯ ದಂಡೆ. ನದಿಗೆ ಉಸುಕಿನ ಚೀಲ ಹಾಕಿ ನೀರು ನಿಲ್ಲಿಸಿ ರೈತರು ಬೇಸಾಯ ಮಾಡುತ್ತಿದ್ದರು. 20–30 ಹಳ್ಳಿಯ 1,500 ಕುಟುಂಬಗಳು ಇದನ್ನೇ ಮಾಡುತ್ತಿದ್ದವು. ಆದರೆ ಪ್ರವಾಹ ಬಂದರೆ ಈ ಉಸುಕಿನ ಚೀಲಗಳೆಲ್ಲಾ ತೇಲಿ ಹೋಗುತ್ತಿದ್ದವು. ರೈತರೆಲ್ಲಾ ಕೂಡಿ ನಾವ್ಯಾಕೆ ಡ್ಯಾಂ ಕಟ್ಟಬಾರದು ಅಂತಾ ಆಲೋಚಿಸಿದರು. ಅದರಂತೆ ಒಂದೇ ವರ್ಷದಲ್ಲಿ ರೈತರು ಡ್ಯಾಂ ಕಟ್ಟಿದರು. ಭಾರತದ ಇತಿಹಾಸದಲ್ಲಿ ರೈತರೇ ಕಟ್ಟಿದ ಮೊದಲ ಡ್ಯಾಂ ಅಂದರೆ ಅದು. ಅಂದರ ಪ್ರಯತ್ನದಿಂದ ಮನುಷ್ಯ ಎಷ್ಟು ದೊಡ್ಡವನಾಗುತ್ತಾನೆ.

ಪಶ್ಚಿಮ ಬಂಗಾಳದಲ್ಲಿ ಮುರ್ಶಿದಾಬಾದ್ ಅಂತ ಒಂದು ಊರು. ಅಲ್ಲಿ ಒಬ್ಬ ಹುಡುಗ ಬಾಬರ್ ಅಲಿ. ಅವರ ಊರಲ್ಲಿ ಶಾಲೆ ಇರಲಿಲ್ಲ. ಅವ 10 ಕಿಮೀ ರಿಕ್ಷಾದಲ್ಲಿ ಹೋಗುತ್ತಿದ್ದ ಮತ್ತೆ ಎರಡು ಕಿಮೀ ನಡೀತಿದ್ದ. ಅವನಿಗೆ 'ನಾನೇನೋ ಶಾಲೆಗೆ ಹೋಗ್ತೀನಿ. ಆದರೆ ಊರ ಮಕ್ಕಳು ಶಾಲೆಗೆ ಹೋಗುತ್ತಿಲ್ಲ' ಎಂದು ತಾನು ಶಾಲೆಯಿಂದ ಬಂದ ಮೇಲೆ 8–10 ಮಂದಿ ಹುಡುಗರಿಗೆ ಅಕ್ಷರ ಕಲಿಸುತ್ತಿದ್ದ. ಮನೆ ಹಿತ್ತಲಿನಲ್ಲಿಯೇ ಒಂದು ಚಪ್ಪರ ಇತ್ತು ಅಲ್ಲಿಯೇ ಪಾಠ ಮಾಡುತ್ತಿದ್ದ. ಬರಬರುತ್ತಾ ಮಕ್ಕಳ ಸಂಖ್ಯೆ ಹೆಚ್ಚಾಯಿತು. ಒಂದು ದಿನ ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ್ಯ ಸೇನ್ ಇವನನ್ನು ಶಾಂತಿನಿಕೇತನಕ್ಕೆ ಕರೆಸಿದರು. 'ನಿನ್ನ ಶಾಲೆ ಬಗ್ಗೆ ಹೇಳು' ಎಂದರು. ತನ್ನ ಶಾಲೆಗೆ ಆನಂದ ಶಿಕ್ಷಣ ನಿಕೇತನ ಅಂತ ಹೆಸರಿಟ್ಟಿದ್ದ ಬಾಬರ್. 'ನಾನು ವಿವೇಕಾನಂದರಿಂದ ಸ್ಫೂರ್ತಿ ಪಡೆದೆ' ಅಂದ. ಸಿಎನ್‌ಎನ್ ಐಬಿಎನ್ ನವರು ರಿಯಲ್ ಹೀರೊ ಅಂತ ಪ್ರಶಸ್ತಿ ಕೊಟ್ಟು 10 ಲಕ್ಷ ರೂಪಾಯಿ ಕೊಟ್ಟರು. ಹುಡುಗ ಅದನ್ನು ಮನೆಗೆ ಒಯ್ಯಲಿಲ್ಲ. ಶಾಲೆಗೆ ಒಂದಿಷ್ಟು ಜಾಗ ಖರೀದಿ ಮಾಡಿದ. ನಂತರ ಬಿಬಿಸಿ ಸಮೀಕ್ಷೆ ಮಾಡಿತು. 8 ಮಕ್ಕಳಿಂದ ಆರಂಭವಾದ ಶಾಲೆಯಲ್ಲಿ 800 ಮಕ್ಕಳು ಕಲಿಯುತ್ತಿದ್ದರು. ಇವನಿಂದ ಕಲಿತ ಮಕ್ಕಳೇ ಅಲ್ಲಿ ಶಿಕ್ಷಕರಾಗಿದ್ದರು. ಅವನೇ ಹೆಡ್ ಮಾಸ್ಟರ್ ಆಗಿದ್ದ. ಬಿಬಿಸಿ ಅವನಿಗೆ ವಿಶ್ವದ ಅತ್ಯಂತ ಕಿರಿಯ ಮುಖ್ಯ ಶಿಕ್ಷಕ ಎಂಬ ಬಿರುದು ಕೊಟ್ಟಿತು. ಇದು ಪ್ರಯತ್ನ ಪ್ರವೃತ್ತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ನವೆಂಬರ್ 14, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ತ್ರಯೋದಶಿ ಗಂ. 09-44 ನಕ್ಷತ್ರ: ಅಶ್ವಿನಿ ಗಂ. 24-33 ಯೋಗ: ಸಿದ್ಧಿ (ಆಸ್ರಿಕ್) ಗಂ. 11-30 ಕರಣ: ತೈತಿಲ ಗಂ. 09-44, ತುಲಾ ಮಾಸದ 28 ನೇ ದಿನ, ಮಳೆನಕ್ಷತ್ರ: ವಿಶಾಖ 3.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-33 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 11 ಜುಮಾದುಲ್ಲಾವಲ್, ದಿನ ವಿಶೇಷ : ವೈಕುಂಠ ಚತುರ್ದಶಿ, ಮಕ್ಕಳ ದಿನಾಚರಣೆ (ನೆಹರೂ ಜನ್ಮದಿನ), ಅದೃಷ್ಟ ಸಂಖ್ಯೆ : 9, 12

ಮೇಷ: ಬುದ್ಧಿವಂತಿಕೆಯಿಂದ ಮತ್ತು ವಾಕ್ಚಾತುರ್ಯದಿಂದ ಹಲವು ಕಲಹಗಳು ದೂರಾಗಲಿವೆ. ಕಲಾವಿದರಿಗೆ ಅಭ್ಯಾಸದ ಫಲದಿಂದ ಅವಕಾಶಗಳು ಲಭ್ಯವಾಗುತ್ತವೆ. ವಿಮೆಯಿಂದ ಲಾಭ ಪಡೆದುಕೊಳ್ಳುವಿರಿ.

ವೃಷಭ: ದುಡುಕು ಸ್ವಭಾವದಿಂದ ಅಣ್ಣತಮ್ಮಂದಿರ ಬಾಂಧವ್ಯಕ್ಕೆ ಹಾನಿ, ಎಚ್ಚರವಿರಲಿ. ವ್ಯವಹಾರಗಳನ್ನು ನೇರ ನಡೆ ನುಡಿಯಿರುವವರೊಂದಿಗೆ ಮಾತ್ರ ಮುಂದುವರಿಸಿಕೊಂಡು ಹೋಗುವ ತೀರ್ಮಾನ ತೆಗೆದುಕೊಳ್ಳುವಂತಾಗಲಿದೆ.

ಮಿಥುನ: ರಾಜಕೀಯ ರಂಗಕ್ಕೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ವಾತಾವರಣ ಇರುವುದು. ಅವಶ್ಯಕತೆ ಇರುವ ಹಾಗೂ ನಿಮಗೆ ಇಷ್ಟವಾಗುವ ವಸ್ತುಗಳನ್ನು ಖರೀದಿಸುವ ಯೋಗವಿದೆ. ಭೂ ವ್ಯವಹಾರದಲ್ಲಿ ಹೆಚ್ಚಿನ ಲಾಭವಿದೆ.

ಕರ್ಕಾಟಕ: ಅತಿ ಅವಸರ ಮತ್ತು ಉದ್ವೇಗ ಇವೆರಡೂ ತಲೆ ತಗ್ಗಿಸುವಂತೆ ಮಾಡುತ್ತದೆ. ಹಿರಿಯರ ಅನುಗ್ರಹದಿಂದ ಇಷ್ಟಸಿದ್ಧಿಯಾಗಿ ಕ್ರಯ-ವಿಕ್ರಯದಲ್ಲಿ ಲಾಭ ತರಲಿದೆ. ಗುರುಗಳ ಸ್ಮರಣೆ ಚೈತನ್ಯ ನೀಡುವುದು.

ಸಿಂಹ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವ ಸನ್ನಿವೇಶ ಇರುವುದು. ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು. ಉದಯೋನ್ಮುಖ ತಾರೆಯರಿಗೆ ಲಾಭ.

ಕನ್ಯಾ: ದಕ್ಷತೆಗೆ ಅಡ್ಡಿಯಾಗುವಂಥ ಘಟನೆಗಳು ನಡೆಯಬಹುದು. ಅಂಥ ಅವಕಾಶಗಳನ್ನು ನೀಡಬೇಡಿ. ಚಿತ್ರೀಕರಣ ನಡೆಸುವ ವೃತ್ತಿಯವರಿಗೆ ಅನುಭವದ ಕೊರತೆ ಕಾಣುವುದು.

ತುಲಾ: ಸಾಮಾಜಿಕವಾಗಿ ಜನೋಪಕಾರದಿಂದ ಪ್ರಶಂಸೆ ಲಭಿಸಲಿದೆ. ಕೆಲಸ ಕಾರ್ಯಗಳ ಬಗ್ಗೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ. ಯಶಸ್ಸು ನಿಮ್ಮದಾಗಿರುತ್ತದೆ.

ವೃಶ್ಚಿಕ: ಹೊಸ ವ್ಯಾಪಾರ ಆರಂಭಿಸುವ ಬಗ್ಗೆ ತಿಳಿದವರೊಂದಿಗೆ ಮತ್ತು ಮನೆಯವರೊಂದಿಗೆ ಚರ್ಚಿಸಿದ ನಂತರ ತೀರ್ಮಾನಕ್ಕೆ ಬರುವುದು ಉತ್ತಮ. ಔಷಧ ಪದಾರ್ಥಗಳ ಮಾರಾಟದಿಂದ ಲಾಭ ಪಡೆಯುವಿರಿ.

ಧನು: ಬರವಣಿಗೆ ಮತ್ತು ಮುದ್ರಣ ಕೆಲಸಗಳನ್ನು ಮಾಡುವವರಿಗೆ ವರಮಾನ ತರಲಿದೆ. ಕಥೆ ಬರಹಗಾರರಿಗೆ ಶುಭ ದಿನ. ಸುವರ್ಣ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ ಗಮನಹರಿಸಿ.

ಮಕರ: ಭಯದ ವಾತಾವರಣವು ಕೆಲಸಕ್ಕೆ ಅಡ್ಡಿಯನ್ನು ಉಂಟುಮಾಡುವುದು. ಹಣದ ಮೇಲಿನ ದುರಾಸೆಗಾಗಿ ಕೆಲಸವನ್ನೂ ಮಾಡಬೇಡಿ. ಸಾಧನೆ ಅಭಿನಂದನೆಗೆ ಪಾತ್ರವಾಗಲಿವೆ.

ಕುಂಭ: ರಾಜಕೀಯ ವ್ಯಕ್ತಿಗಳಿಗೆ ವಿವಿಧ ವಿಚಾರಗಳಲ್ಲಿ ಪ್ರಗತಿ ಇದ್ದು, ಸಾಮಾಜಿಕವಾಗಿ ಸ್ಥಾನಮಾನ ಹಾಗೂ ಗೌರವ ಪ್ರಾಪ್ತಿ. ಬಂಡವಾಳವನ್ನು ತೊಡಗಿಸುವ ವಿಚಾರ ಸದ್ಯಕ್ಕೆ ಮುಂದೂಡುವುದು ಒಳ್ಳೆಯದು.

ಮೀನ: ಹೊಸ ಉದ್ಯಮ ಅಥವಾ ವ್ಯಾಪಾರ ಪ್ರಾರಂಭಿಸಲು ಆಲೋಚನೆಗಳು ಬರಲಿವೆ. ಆದರೆ, ನೀವು ಯೋಚಿಸಿದಷ್ಟು ಸುಲಭವಾಗಿರುವುದಿಲ್ಲ. ನಿದ್ರಾಹೀನತೆಯಂಥ ಸಮಸ್ಯೆಗೆ ಕೆಟ್ಟ ಯೋಚನೆಗಳೇ ಮುಖ್ಯ ಕಾರಣವಾಗಿರುತ್ತದೆ.

ಪದಬಂಧ 5861

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚಿನ್ನದ ಗಣಿಗಾರಿಕೆಗೆ ಈ ಜಿಲ್ಲೆ ಪ್ರಸಿದ್ಧಿಯಾಗಿದೆ (3)
3.ಕುಂಟೆಯಿಂದ ಹರತೆ ಹೊಡೆ (3)
6.ಮರದ ಹತ್ತಿರ ನಡೆದ ಯುದ್ಧ (3)
7.ಜಾನಪದ ಹಾಡುಗಳ ಒಂದು ಪ್ರಕಾರ (3)
8.ವಿಷವಿದ್ದಾಗಲೇ ಕಷ್ಟದ ಪರಿಸ್ಥಿತಿ! (3)
10.ಮಾರುತಲಿದ್ದಾಗ ಬೀಸಿದ ಮೆಲುಗಾಳಿ (5)
14.ಈ ಪರಿ ಕಾಣುತ್ತಿರುವ ಆವರಣ ರೇಖೆ (3)
17.ಭವ ಕೊನೆಗಿದ್ದಾಗಿನ ಸಾಧ್ಯತೆ! (3)
18.ಮಾತು ಕೇಳಿಸಿಕೊಂಡಿರುವ ಸೋದರಮಾವ (3)
19.ತುಸು ಬೆಳಕಿರುವ ಮುಂಜಾನೆ (3)
20.ಗರಿ ಬಿದ್ದ ಜಾಗದಲ್ಲಿ ಬೆಳೆದ ಹುಲ್ಲು (3)

ಮೇಲಿಂದ ಕೆಳಕ್ಕೆ
1.ಆಟವಾಡಿಸಲು ಅಲಂಕರಿಸಿದ ಎತ್ತು (5)
2.ರಸ ಒಸರುವ ಜಿಹ್ವೆ (3)
3.ಹರನ ಮುಂದಿರಿಸಿದ ಮಣ್ಣಿನ ಬಾನಿ (3)
4.ಗುಲಾಬಿ ಹೂ ಹಿಡಿದಿರುವ ಸೇವಕ (3)
5.ಮಾಣಿಯ ಮುಂದಿರುವ ಕೆಂಪು ನವರತ್ನ(3)
9.ಹರುಷಗೊಂಡು ನೋಡುತ್ತಿರುವ ಪಟ್ಟಣ(3)
11.ದೊಡ್ಡ ಉರಿಯಿದು (3)
12.ಸಾಲ ಪಡೆದು ಖರೀದಿಸಿರುವ ಪುತ್ಥಳಿ! (5)
13.ತತ್ಪರತೆಯಿಂದ ಮಾಡುವ ವಿಧ್ಯಾಭ್ಯಾಸ(3)
14. ವನದ ಹತ್ತಿರ ಬೀಸಿದ ಗಾಳಿ (3)
15.ಸೊಕ್ಕು ಹೀಗೆ ಬಂದಿದೆ (3)
16.ರಾಜನ ಸಭೆ (3)



5860ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ರಣರಂಗ 5.ಜಾಯಮಾನ
6.ದಾರಿಹೋಕ 8.ಕಳಕಳಿ
10.ಸ್ನೇಹ 12.ಕೆರ
13.ಮಕರಂದ 15.ಸವಿಸ್ತಾರ
17.ಪ್ರಕರಣ 18.ಕರಗತ

ಮೇಲಿಂದ ಕೆಳಕ್ಕೆ:
1.ಹಜಾರ 2.ಪ್ರಾಮಾಣಿಕ
3.ರಸದಾಳಿ 4.ಗಣಕ
7.ಹೋಲಿಕೆ 9.ಕಳಂಕ
11.ಹರವಿ 13.ಮರಕತ
14.ದಸಕತ್ತು 15.ಸರೀಕ
16.ಪ್ರಣಯ

ಸುಡೊಕು 6246

6		4	5			7		8
	9	5		7	1			
1				4	8			6
		1				9		
			3	9	7		5	4
7		9				8		
5				6		4		
4					3		2	
	6				4		7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6245 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಗುರುವಾರ ● ನವೆಂಬರ್ 14, 2024 ಪ್ರಜಾವಾಣಿ

ಕಾನೂನನ್ನು ಕೈಗೆತ್ತಿಕೊಳ್ಳುವ ಅಧಿಕಾರಿಗಳನ್ನು ಉತ್ತರದಾಯಿ ಆಗಿಸಬೇಕು: ಸುಪ್ರೀಂ ಕೋರ್ಟ್

ಕಾರ್ಯಾಂಗದ ಮಿತಿ ನೆನಪಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಕಾರ್ಯಾಂಗದ ಅಧಿಕಾರಿಗಳು ನ್ಯಾಯಾಧೀಶರಾಗಲು ಅವಕಾಶ ಇಲ್ಲ, ಆರೋಪಿಯೊಬ್ಬ ಅಪರಾಧಿ ಎಂದು ತೀರ್ಮಾನಿಸಿ, ಆತನ ಆಸ್ತಿಯನ್ನು ಧ್ವಂಸಗೊಳಿಸುವ ಮೂಲಕ ಶಿಕ್ಷೆ ವಿಧಿಸಲು ಅವರಿಗೆ ಅಧಿಕಾರವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಈ ರೀತಿ ಮಾಡುವುದು ಅಧಿಕಾರದ ವ್ಯಾಪ್ತಿಯನ್ನು ಮೀರುವುದಕ್ಕೆ ಸಮ ಎಂದು ಅದು ಹೇಳಿದೆ. ವ್ಯಕ್ತಿಯೊಬ್ಬ ಆರೋಪಿ ಎಂಬ ಕಾರಣಕ್ಕೆ ಅಥವಾ ಆತ ಅಪರಾಧಿ ಎಂಬ ಕಾರಣಕ್ಕೆ ಆತ ಮನೆಯನ್ನು ಕಾನೂನಿನ ಪ್ರಕ್ರಿಯೆಯನ್ನು ಪಾಲಿಸದೆ ಧ್ವಂಸಗೊಳಿಸುವುದು ಸಂಪೂರ್ಣವಾಗಿ ಸಂವಿಧಾನಬಾಹಿರ ಎನ್ನಲು ಒಂದಕ್ಕಿಂತ ಹೆಚ್ಚು ಕಾರಣಗಳಿವೆ ಎಂದು ಕೂಡ ಕೋರ್ಟ್ ಹೇಳಿದೆ.

‘ಕಾರ್ಯಾಂಗದ ಅಧಿಕಾರಿಗಳು ನ್ಯಾಯಾಧೀಶರಂತೆ ವರ್ತಿಸಿದರೆ, ಅಧಿಕಾರದ ಮಿತಿಗಳನ್ನು ಹೇಳುವ ತತ್ತ್ವಕ್ಕೆ ವಿರುದ್ಧವಾಗಿ ನಡೆದಂತಾಗುತ್ತದೆ. ಕಾನೂನನ್ನು ಕೈಗೆತ್ತಿಕೊಳ್ಳುವ ಅಧಿಕಾರಿಗಳನ್ನು ಉತ್ತರದಾಯಿ ಆಗಿಸಬೇಕು ಎಂಬುದು ನಮ್ಮ ಅಭಿಪ್ರಾಯ’ ಎಂದು ಪೀಠವು ಸ್ಪಷ್ಟಪಡಿಸಿದೆ.

ಅತ್ಯಂತ ಹೇಯವಾದ ಅಪರಾಧ ಎಸಗಿದ ವ್ಯಕ್ತಿ ಅಪರಾಧಿ ಎಂದು ಘೋಷಿಸಿದಾಗಲೂ, ಕಾನೂನಿನ ಅಡಿ ಇರುವ ಕಡ್ಡಾಯ ಪ್ರಕ್ರಿಯೆಗಳನ್ನು ಪಾಲನೆ ಮಾಡದೆ ಶಿಕ್ಷೆ ವಿಧಿಸಲು ಅವಕಾಶ ಇಲ್ಲ. ಹೀಗಿರುವಾಗ, ಯಾವುದೋ ಒಂದು ಅಪರಾಧ ಎಸಗಿದ ಆರೋಪವನ್ನು ಮಾತ್ರ ಹೊತ್ತಿರುವ ವ್ಯಕ್ತಿಯು ಅಥವಾ ಆ ಅಪರಾಧ ಎಸಗಿರುವ ವ್ಯಕ್ತಿಯು ತನ್ನ ಆಸ್ತಿಯ ಧ್ವಂಸದ ಶಿಕ್ಷೆಗೆ ಗುರಿಯಾಗಬಹುದೇ? ಇದಕ್ಕೆ ಉತ್ತರ ‘ಇಲ್ಲ’ ಎಂದು ಪೀಠವು ಖಚಿತ ದನಿಯಲ್ಲಿ ಹೇಳಿದೆ. ಆರೋಪಿಯು ಅಪರಾಧಿ ಎಂಬುದು ನ್ಯಾಯಾಲಯದಲ್ಲಿ ಸಾಬೀತಾಗುವವರೆಗೂ ಆತ ನಿರ್ದೋಷಿ ಎಂಬ ತತ್ತ್ವವು ಯಾವುದೇ ಕಾನೂನು ವ್ಯವಸ್ಥೆಯ ಪಾಲಿಗೆ ಅಡಿಗಲ್ಲು ಇದ್ದಂತೆ ಎಂಬುದನ್ನು ನ್ಯಾಯಪೀಠವು ನೆನಪಿಸಿಕೊಟ್ಟಿದೆ. ವ್ಯಕ್ತಿಗೆ ಅನ್ಯಾಯವಾಗಿ ಶಿಕ್ಷೆ ಆಗದಂತೆ ಈ ತತ್ತ್ವವು ಖಾತರಿಪಡಿಸುತ್ತದೆ ಎಂದು ಹೇಳಿದೆ.

ತೀರ್ಪು ಸ್ವಾಗತಿಸಿದ ಉತ್ತರ ಪ್ರದೇಶ ಸರ್ಕಾರ

ಲಖನೌ (ಪಿಟಿಐ): ಕ್ರಿಮಿನಲ್ ಪ್ರಕರಣಗಳ ಆರೋಪಿಗಳ ಮನೆಗಳನ್ನು ಅಥವಾ ಅವರಿಗೆ ಸೇರಿದ ಕಟ್ಟಡಗಳನ್ನು ಬುಲ್ಡೋಜರ್ ಬಳಸಿ ಧ್ವಂಸಗೊಳಿಸುವ ಕ್ರಮದ ಬಗ್ಗೆ ಸುಪ್ರೀಂ ಕೋರ್ಟ್ ಬುಧವಾರ ನೀಡಿರುವ ತೀರ್ಪನ್ನು ಉತ್ತರ ಪ್ರದೇಶ ಸರ್ಕಾರ ಸ್ವಾಗತಿಸಿದೆ.

ಈ ತೀರ್ಪಿನ ಕಾರಣದಿಂದಾಗಿ ಸಂಘಟಿತ ಅಪರಾಧಗಳನ್ನು ಹತ್ತಿಕ್ಕಲು ಹಾಗೂ ಕ್ರಿಮಿನಲ್ ಅಪರಾಧ ಎಸಗಿದವರಲ್ಲಿ ಕಾನೂನಿನ ಪರಿಣಾಮಗಳ ಬಗ್ಗೆ ಭೀತಿಯನ್ನು ಮೂಡಿಸಲು ಸಾಧ್ಯವಾಗುತ್ತದೆ ಎಂದು ಅದು ಹೇಳಿದೆ.

ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ನೀಡಿರುವ ಪ್ರಕರಣದಲ್ಲಿ ಉತ್ತರ ಪ್ರದೇಶ ಸರ್ಕಾರ ಪ್ರತಿವಾದಿ ಆಗಿರಲಿಲ್ಲ ಎಂಬ ಸ್ಪಷ್ಟನೆ ನೀಡಿರುವ ಸರ್ಕಾರದ ವಕ್ತಾರರೊಬ್ಬರು, ಈ ತೀರ್ಪು ಜಮಿಯತ್ ಉಲೇಮಾ ಎ ಹಿಂದ್ ಮತ್ತು ಉತ್ತರ ದೆಹಲಿ ನಗರ ಪಾಲಿಕೆ ನಡುವಿನ ಪ್ರಕರಣದಲ್ಲಿ ಬಂದಿದೆ ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪು ಬುಲ್ಡೋಜರ್‌ಗಳನ್ನು ಶಾಶ್ವತವಾಗಿ ಗ್ಯಾರೇಜಿಗೆ ಕಳುಹಿಸಿದೆ. ಬುಲ್ಡೋಜರ್ ಕ್ರಮದ ಹೆಸರಿನಲ್ಲಿ ಬಡವರ ಮನೆಗಳನ್ನು ಧ್ವಂಸಗೊಳಿಸಲಾಗುತ್ತಿತ್ತು

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಸುಪ್ರೀಂ ಕೋರ್ಟ್ ನೀಡಿರುವ ಬುಲ್ಡೋಜರ್ ತೀರ್ಪು ಸ್ವಾಗತಾರ್ಹ. ಜಾರಿಗೆ ತರಬಹುದಾದ ಮಾರ್ಗಸೂಚಿಗಳು ಈ ತೀರ್ಪಿನ ಅತ್ಯಂತ ಮಹತ್ವದ ಅಂಶ. ಮುಸ್ಲಿಮರು ಹಾಗೂ ಸಮಾಜದ ಅಂಚಿನ ಇತರ ಸಮುದಾಯಗಳನ್ನು ರಾಜ್ಯ ಸರ್ಕಾರಗಳು ಒಟ್ಟಾಗಿ ಶಿಕ್ಷಿಸುವುದನ್ನು ತಡೆಯಲು ಈ ಮಾರ್ಗಸೂಚಿಗಳು ನೆರವಾಗುವ ನಿರೀಕ್ಷೆ ಇದೆ.

ಅಸಾದುದ್ದೀನ್ ಒವೈಸಿ, ಎಐಎಂಐಎಂ ಮುಖ್ಯಸ್ಥ

ಬುಲ್ಡೋಜರ್ ಕ್ರಮ ಅಕ್ರಮ ಹಾಗೂ ದುರುದ್ದೇಶದ್ದು ಎಂದು ಹೇಳಿರುವ ಸುಪ್ರೀಂ ಕೋರ್ಟ್ ತೀರ್ಪನ್ನು ನಾನು ಸ್ವಾಗತಿಸುತ್ತೇನೆ. ಈ ತೀರ್ಪು ಬೇಗ ಬಂದಿದ್ದಿದ್ದರೆ ಬಿಜೆಪಿಯ ಆಡಳಿತ ಇರುವ ರಾಜ್ಯಗಳಲ್ಲಿ ಇನ್ನಷ್ಟು ಮನೆಗಳು ಧ್ವಂಸಗೊಳ್ಳುವುದನ್ನು ತಡೆಯಬಹುದಿತ್ತು.

ಬೃಂದಾ ಕಾರಟ್, ಸಿಪಿಎಂ ನಾಯಕಿ

‘ಬುಲ್ಡೋಜರ್ ನ್ಯಾಯ’ಕ್ಕೆ ಕೋರ್ಟ್ ಅಂಕುಶ

ಒಂದನೇ ಪುಟದಿಂದ...

ಬುಲ್ಡೋಜರ್‌ಗಳು ಮನೆಗಳನ್ನು ಧ್ವಂಸಗೊಳಿಸುವ, ಮಹಿಳೆಯರು, ಮಕ್ಕಳು ಹಾಗೂ ವೃದ್ಧರನ್ನು ರಾತ್ರೋರಾತ್ರಿ ಸೂರಿಲ್ಲದವರನ್ನಾಗಿಸುವ ದೃಶ್ಯಗಳು ಬಹಳ ಭೀತಿ ಮೂಡಿಸುವಂಥವು ಎಂದು ಪೀಠವು ಹೇಳಿದೆ. ಇಂತಹ ಕೃತ್ಯಗಳಿಗೆ ಸಂವಿಧಾನದ ಅಡಿಯಲ್ಲಿ ಮಾನ್ಯತೆ ಇಲ್ಲ ಎಂದು ಅದು ಸ್ಪಷ್ಟಪಡಿಸಿದೆ.

ಕಟ್ಟಡ ಧ್ವಂಸಕ್ಕೆ ಸಂಬಂಧಿಸಿದಂತೆ ತಾನು ರೂಪಿಸಿರುವ ಮಾರ್ಗಸೂಚಿಗಳು ರಸ್ತೆ, ಬೀದಿ, ಪಾದಚಾರಿ ಮಾರ್ಗ, ರೈಲು ಮಾರ್ಗಕ್ಕೆ ಹೊಂದಿಕೊಂಡಿರುವ ಜಾಗಗಳು, ನದಿ ಅಥವಾ ಜಲ ಮೂಲಗಳಲ್ಲಿ ಇರುವ ಅನಧಿಕೃತ ಕಟ್ಟಡಗಳಿಗೆ ಅನ್ವಯ ಆಗುವುದಿಲ್ಲ ಎಂದು ಪೀಠವು ಸ್ಪಷ್ಟಪಡಿಸಿದೆ. ಹಾಗೆಯೇ, ಕಟ್ಟಡ ಧ್ವಂಸಕ್ಕೆ ನ್ಯಾಯಾಲಯದಿಂದ ಆದೇಶ ಇದ್ದರೆ, ಅಂತಹ ಪ್ರಕರಣಗಳಿಗೆ ಕೂಡ ಈ ಮಾರ್ಗಸೂಚಿ ಅನ್ವಯವಾಗುವುದಿಲ್ಲ ಎಂದು ಅದು ಹೇಳಿದೆ.

ನ್ಯಾಯಪೀಠ ರೂಪಿಸಿರುವ ಮಾರ್ಗಸೂಚಿ ಹೀಗಿದೆ...

ಒಂದನೇ ಪುಟದಿಂದ...

- 15 ದಿನಗಳಲ್ಲಿ ಆತ ಏನೂ ಮಾಡದೆ ಇದ್ದರೆ, ನೋಟಿಸ್‌ಗೆ ಮೇಲ್ಮನವಿ ಪ್ರಾಧಿಕಾರ ಅಥವಾ ನ್ಯಾಯಾಲಯ ತಡೆ ನೀಡಿಲ್ಲದಿದ್ದರೆ, ಧ್ವಂಸ ಕಾರ್ಯಕ್ಕೆ ಮುಂದಾಗಬಹುದು.
- ಕಟ್ಟಡದ ಮಾಲೀಕನಿಗೆ ಅಥವಾ ಕಟ್ಟಡದಲ್ಲಿ ಇರುವವನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ನೋಟಿಸ್ ಕಳುಹಿಸಬೇಕು. ನೋಟಿಸ್ ಪ್ರತಿಯನ್ನು ಕಟ್ಟಡದ ಹೊರಭಾಗದಲ್ಲಿ ಸ್ಪಷ್ಟವಾಗಿ ಎದ್ದುಕಾಣುವಂತೆ ಅಂಟಿಸಬೇಕು.
- ನೋಟಿಸ್ ನೀಡುವಾಗ ಹಿಂದಿನ ದಿನಾಂಕವನ್ನು ಅದರಲ್ಲಿ ನಮೂದಿಸಲಾಗುತ್ತದೆ ಎಂಬ ಆರೋಪಗಳು ಇನ್ನು ಮುಂದೆ ಬರಬಾರದು ಎಂಬ ಉದ್ದೇಶದಿಂದ ಸುಪ್ರೀಂ ಕೋರ್ಟ್, ನೋಟಿಸ್ ನೀಡಿದ ತಕ್ಷಣವೇ ಅದರ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅಥವಾ ಕಲೆಕ್ಟರ್‌ಗೆ ಡಿಜಿಟಲ್ ಸ್ವರೂಪದಲ್ಲಿ, ಇ-ಮೇಲ್ ಮೂಲಕ ಮಾಹಿತಿ ಒದಗಿಸಬೇಕು ಎಂದು ಸ್ಪಷ್ಟಪಡಿಸಿದೆ.
- ಅಕ್ರಮ ನಿರ್ಮಾಣದ ಸ್ವರೂಪದ ಬಗ್ಗೆ, ನಿರ್ದಿಷ್ಟವಾದ ಕಾನೂನಿನ ಉಲ್ಲಂಘನೆಗಳ ಬಗ್ಗೆ ಹಾಗೂ ಕಟ್ಟಡ ಧ್ವಂಸಕ್ಕೆ ಕಾರಣ ಏನು ಎಂಬ ಬಗ್ಗೆ ನೋಟಿಸ್‌ನಲ್ಲಿ ವಿವರಗಳು ಇರಬೇಕು.
- ನೋಟಿಸ್ ಪಡೆದ ವ್ಯಕ್ತಿಯು ಸಲ್ಲಿಸಬೇಕಿರುವ ದಾಖಲೆಗಳು ಯಾವುವು, ಆ ವ್ಯಕ್ತಿಯ ಖುದ್ದು ವಿಚಾರಣೆ ಯಾವ ದಿನ ನಡೆಯಲಿದೆ, ಯಾವ ಅಧಿಕಾರಿಯು ವಿಚಾರಣೆ ನಡೆಸಲಿದ್ದಾರೆ ಎಂಬುದನ್ನು ನೋಟಿಸ್‌ನಲ್ಲಿ ತಿಳಿಸಿರಬೇಕು.
- ಎಲ್ಲ ಸ್ಥಳೀಯ ಸಂಸ್ಥೆಗಳು ಮೂರು ತಿಂಗಳ ಒಳಗೆ ಡಿಜಿಟಲ್ ಪೋರ್ಟಲ್ ಒಂದನ್ನು ಆರಂಭಿಸಬೇಕು. ಆ ಪೋರ್ಟಲ್‌ನಲ್ಲಿ ನೋಟಿಸ್ ನೀಡಿರುವ ವಿವರ, ಅದಕ್ಕೆ ದೊರೆತ ಪ್ರತಿಕ್ರಿಯೆಯ ಮಾಹಿತಿ ಹಾಗೂ ಆದೇಶ ಹೊರಡಿಸಿದ್ದರ ಬಗ್ಗೆ ಮಾಹಿತಿ ಲಭ್ಯವಿರಬೇಕು.
- ಸಂಬಂಧಪಟ್ಟ ಪ್ರಾಧಿಕಾರವು ನೋಟಿಸ್ ಪಡೆದ ವ್ಯಕ್ತಿಯ ವಾದವನ್ನು ಆಲಿಸಿದ ನಂತರವೇ ಅಂತಿಮ ಆದೇಶವನ್ನು ಹೊರಡಿಸಬೇಕು. ವ್ಯಕ್ತಿಯ ವಾದ ಏನಿತ್ತು ಎಂಬುದನ್ನು ಅಂತಿಮ ಆದೇಶದಲ್ಲಿ ದಾಖಲಿಸಬೇಕು, ಆತನ ವಾದವನ್ನು ಪ್ರಾಧಿಕಾರವು ಒಪ್ಪದೆ ಇದ್ದಾಗ, ಅದಕ್ಕೆ ಕಾರಣ ವಿವರಿಸಬೇಕು.
- ಕಟ್ಟಡವನ್ನು ಧ್ವಂಸಗೊಳಿಸುವ ತೀವ್ರವಾದ ಕ್ರಮ ಮಾತ್ರವೇ ಏಕೈಕ ಆಯ್ಕೆಯಾಗಿದ್ದು ಏಕೆ ಎಂಬುದನ್ನು ಅಂತಿಮ ಆದೇಶದಲ್ಲಿ ವಿವರಿಸಬೇಕು. ಕಟ್ಟಡದಿಂದ ಆಗಿರುವ ಕಾನೂನು ಉಲ್ಲಂಘನೆಯು ಗಂಭೀರ ಸ್ವರೂಪದ್ದೇ, ಅದು ಗಂಭೀರ ಸ್ವರೂಪದ ಉಲ್ಲಂಘನೆ ಎಂದಾದರೆ ಅದಕ್ಕೆ ಕಾರಣ ಏನು, ಅದರ ಕೆಲವು ಭಾಗಗಳನ್ನು ಮಾತ್ರ ತೆರವು ಮಾಡುವ ಆಯ್ಕೆ ಏಕೆ ಲಭ್ಯವಿಲ್ಲ ಎಂಬುದನ್ನೂ ವಿವರಿಸಬೇಕು.
- ಕಟ್ಟಡ ಧ್ವಂಸ ಕಾರ್ಯವನ್ನು ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಬೇಕು. ಅದನ್ನು ಕಾಪಿಡಬೇಕು. ಆ ವಿಡಿಯೊವನ್ನು ಮುನಿಸಿಪಲ್ ಆಯುಕ್ತರಿಗೆ ರವಾನಿಸಬೇಕು, ಅದನ್ನು ಪೋರ್ಟಲ್ ಮೂಲಕ ಪ್ರದರ್ಶಿಸಬೇಕು. ಧ್ವಂಸಕ್ಕೂ ಮೊದಲು ವಿಸ್ತೃತವಾದ ಪರಿಶೀಲನಾ ವರದಿಯನ್ನು ಸಿದ್ಧಪಡಿಸಬೇಕು, ಆ ವರದಿಗೆ ಇಬ್ಬರು ಪಂಚರ ಸಹಿ ಇರಬೇಕು.
- ಮಾರ್ಗಸೂಚಿಯನ್ನು ಉಲ್ಲಂಘಿಸಿದರೆ ಸಂಬಂಧ ಪಟ್ಟವರ ವಿರುದ್ಧ ನ್ಯಾಯಾಂಗ ನಿಂದನೆ ಕಾನೂನಿನ ಅಡಿ ಕ್ರಮ ಜರುಗಿಸಲಾಗುತ್ತದೆ.

ಸುದ್ದಿ 2 ನಿಮಿಷ

ಜಾರ್ಖಂಡ್: ನಾಲ್ವರನ್ನು ಬಂಧಿಸಿದ ಜಾರಿ ನಿರ್ದೇಶನಾಲಯ

ರಾಂಚಿ (ಪಿಟಿಐ): ಬಾಂಗ್ಲಾದೇಶದಿಂದ ಒಳನುಸುಳುವಿಕೆಯ ಜತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದ ಶೋಧ ಕಾರ್ಯಾಚರಣೆ ವೇಳೆ ಜಾರಿ ನಿರ್ದೇಶನಾಲಯವು (ಇ.ಡಿ) ಇಬ್ಬರು ಬಾಂಗ್ಲಾ ಪ್ರಜೆಗಳು ಸೇರಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಿದೆ.

ಬಾಂಗ್ಲಾದ ರೋನಿ ಮಂಡಾಲ್, ಸಮೀರ್ ಚೌಧರಿ ಹಾಗೂ ಭಾರತೀಯ ಪಿಂಟು ಹಲ್ದಾರ್ ಅವರನ್ನು ಪಶ್ಚಿಮ ಬಂಗಾಳದಲ್ಲಿ ಮಂಗಳವಾರ ರಾತ್ರಿ ಬಂಧಿಸಲಾಗಿದೆ. ಇವರು ಭಾರತದಲ್ಲಿ ಮಾನವ ಕಳ್ಳಸಾಗಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪಿಂಕಿ ಬಸು ಮುಖರ್ಜಿ ಎಂಬ ಮಹಿಳಾ ಆರೋಪಿಯನ್ನು ಬುಧವಾರ ವಶಕ್ಕೆ ಪಡೆಯಲಾಗಿದೆ.

ಪ್ರಕರಣದ ತನಿಖೆಯ ಭಾಗವಾಗಿ ಜಾರ್ಖಂಡ್ ಹಾಗೂ ನೆರೆಯ ಎರಡು ರಾಜ್ಯಗಳಲ್ಲಿ ಒಟ್ಟು 17 ಸ್ಥಳಗಳಲ್ಲಿ ಇ.ಡಿ ಶೋಧ ಕಾರ್ಯಾಚರಣೆಯನ್ನು ಮಂಗಳವಾರ ನಡೆಸಿತ್ತು. ಈ ವೇಳೆ ನಕಲಿ ಆಧಾರ್ ಕಾರ್ಡ್, ಪಾಸ್‌ಪೋರ್ಟ್, ಸ್ಥಿರ ಆಸ್ತಿ ದಾಖಲೆಗಳು, ನಗದು ಹಾಗೂ ಆಭರಣ ಸೇರಿದಂತೆ ಹಲವು ವಸ್ತುಗಳನ್ನು ವಶಪಡಿಸಿಕೊಂಡಿದೆ.

ತೆಲಂಗಾಣ: ಬಿಆರ್‌ಎಸ್‌ನ ಮಾಜಿ ಶಾಸಕನ ಬಂಧನ

ಹೈದರಾಬಾದ್: ವಿಕಾರಾಬಾದ್‌ನ ಕಲೆಕ್ಟರ್ ಪ್ರತೀಕ್ ಜೈನ್ ಮತ್ತು ಇತರ ಸರ್ಕಾರಿ ಅಧಿಕಾರಿಗಳ ಮೇಲೆ ಎರಡು ದಿನಗಳ ಹಿಂದೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ಕೊಡಂಗಲ್‌ನ ಮಾಜಿ ಶಾಸಕ, ಬಿಆರ್‌ಎಸ್‌ನ ನರೇಂದರ್ ರೆಡ್ಡಿ ಅವರನ್ನು ತೆಲಂಗಾಣ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರ ಸ್ವಕ್ಷೇತ್ರ ಕೊಡಂಗಲ್‌ನಲ್ಲಿ ಈ ಘಟನೆ ನಡೆದಿದ್ದು, ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ನಗರದ ಕೆಬಿಆರ್ ಪಾರ್ಕ್‌ನಲ್ಲಿ ಮುಂಜಾನೆ ವಾಯುವಿಹಾರ ಮಾಡುತ್ತಿದ್ದ ಮಾಜಿ ಶಾಸಕರನ್ನು ಪೊಲೀಸರು ಬಂಧಿಸಿದರು.

ಬಿಆರ್‌ಎಸ್‌ನ ಸ್ಥಳೀಯ ಮುಖಂಡನಾಗಿರುವ ಬಿ. ಸುರೇಶ್ ಪ್ರಕರಣದ ಪ್ರಮುಖ ಆರೋಪಿ. ಹಲ್ಲೆ ನಡೆಯುವ ಒಂದು ದಿನ ಮೊದಲು ಹಾಗೂ ಹಲ್ಲೆ ನಡೆದ ದಿನದಂದು ಈತ ಮಾಜಿ ಶಾಸಕರಿಗೆ ಸರಣಿ ಕರೆ ಮಾಡಿರುವುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ.

ಹಲ್ಲೆಗೆ ಸಂಬಂಧಿಸಿದಂತೆ ಇದುವರೆಗೂ ಪೊಲೀಸರು ಲಾಗ್ಚೆರ್ಲಾದ 16 ನಿವಾಸಿಗಳನ್ನು ಬಂಧಿಸಿದ್ದು, ಮುಖ್ಯ ಆರೋಪಿ ಸುರೇಶ್ ಸೇರಿದಂತೆ ಮತ್ತಿತರ 40 ಜನರ ಬಂಧನಕ್ಕಾಗಿ ಶೋಧ ನಡೆಸಿದ್ದಾರೆ.

ಮಣಿಪುರಕ್ಕೆ 20 ಹೆಚ್ಚುವರಿ ತುಕಡಿ ರವಾನೆ

ನವದೆಹಲಿ(ಪಿಟಿಐ): ಸಂಘರ್ಷಪೀಡಿತ ಮಣಿಪುರದಲ್ಲಿ ಸಶಸ್ತ್ರ ಗುಂಪುಗಳಿಂದ ಹೊಸದಾಗಿ ನಡೆದಿರುವ ದಾಳಿ, ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಸುಮಾರು 2,000 ಸಿಬ್ಬಂದಿ ಒಳಗೊಂಡ 20 ಪೊಲೀಸ್ ತುಕಡಿಗಳನ್ನು ರಾಜ್ಯಕ್ಕೆ ಕಳುಹಿಸಿದೆ.

ಈ ತುಕಡಿಗಳನ್ನು ತಕ್ಷಣವೇ ನಿಯೋಜನೆ ಮಾಡುವಂತೆ ಗೃಹ ಸಚಿವಾಲಯ ಮಂಗಳವಾರ ರಾತ್ರಿಯೇ ಆದೇಶ ಹೊರಡಿಸಿತ್ತು ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

ಮಣಿಪುರಕ್ಕೆ ಹೊಸದಾಗಿ ನಿಯೋಜಿತಗೊಂಡಿರುವ 20 ತುಕಡಿಗಳಲ್ಲಿ 15 ಸಿಆರ್‌ಪಿಎಫ್ ತುಕಡಿಗಳು ಮತ್ತು 5 ಗಡಿ ಭದ್ರತಾ ಪಡೆ (ಬಿಎಸ್‌ಎಫ್) ತುಕಡಿಗಳು ಸೇರಿವೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಪರಿಸ್ಥಿತಿ ನಿಯಂತ್ರಿಸಲು ಸಿಎಪಿಎಫ್‌ಗಳ 198 ತುಕಡಿಗಳನ್ನು ಕೇಂದ್ರ ಸರ್ಕಾರ ಈ ಮೊದಲು ನಿಯೋಜಿಸಿತ್ತು.

ಬಲೆಯ ಕಲೆ... ಗುವಾಹಟಿಯಲ್ಲಿ ಬುಧವಾರ ಮೀನುಗಾರನೊಬ್ಬ ಬ್ರಹ್ಮಪುತ್ರ ನದಿ ತೀರದಲ್ಲಿ ಎಸೆದ ಬಲೆ ಬೆಳಗಿನ ಹೊಂಬೆಳಕಿನ ಹಿನ್ನೆಲೆಯಲ್ಲಿ ಕಂಡ ಬಗೆ ಇದು

ಎಎಫ್‌ಪಿ ಚಿತ್ರ

‘ಅತ್ಯಾಚಾರ ಆರೋಪ ಸಾಬೀತಿಗಾಗಿ ಮಾದರಿ ಸಂಗ್ರಹ ಸಾಧ್ಯವಾಗುತ್ತಿಲ್ಲ’

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ನ.7ರಂದು ಹತ್ಯೆಯಾದ ಹಮರ್ ಸಮುದಾಯದ ಮಹಿಳೆಯ ದೇಹವು ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ಗುರುತಿಸಲಾಗದ ಸ್ಥಿತಿಯಲ್ಲಿದೆ. ಹೀಗಾಗಿ, ಮಹಿಳೆಯ ದೇಹದ ಮಾದರಿಗಳನ್ನು ಸಂಗ್ರಹಿಸಲು ಅಸ್ಸಾಂನ ಸಿಲ್ಚಾರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ (ಎಸ್‌ಎಂಸಿಎಚ್) ವೈದ್ಯರಿಗೆ ಸಾಧ್ಯವಾಗಿಲ್ಲ.

‘ನನ್ನ ಪತ್ನಿ ಮೇಲೆ ಅತ್ಯಾಚಾರ ಎಸಗಿ, ಆಕೆಯನ್ನು ಕೊಲೆ ಮಾಡಲಾಗಿದೆ’ ಎಂದು ಹತ್ಯೆಯಾದ ಮಹಿಳೆಯ ಪತಿ ಹೇಳಿಕೊಂಡಿದ್ದಾರೆ. ಮಹಿಳೆಯ ದೇಹ ಸಂಪೂರ್ಣ ಸುಟ್ಟಿರುವ ಕಾರಣ ಮಾದರಿಗಳ ಸಂಗ್ರಹ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಪತಿಯ ಆರೋಪಗಳನ್ನು ಸಾಬೀತುಪಡಿಸುವುದು ಸವಾಲಾಗಿದೆ.

‘ಮಹಿಳೆಯ ದೇಹ ಸುಟ್ಟು ಕರಕಲಾಗಿರುವುದರಿಂದ, ದೇಹದಲ್ಲಿ ವೀರ್ಯ ಇರುವುದನ್ನು ಪತ್ತೆ ಮಾಡುವ ಪರೀಕ್ಷೆ ನಡೆಸುವುದು ಕಷ್ಟ. ರಾಸಾಯನಿಕ ಪರೀಕ್ಷೆಗಾಗಿ ಕರುಳುಗಳ ಮಾದರಿ ಸಂಗ್ರಹವೂ ಸಾಧ್ಯವಾಗುತ್ತಿಲ್ಲ’ ಎಂದು ಎಸ್‌ಎಂಸಿಎಚ್‌ನ ವಿಧಿವಿಜ್ಞಾನ ವಿಭಾಗದ ವರದಿಯಲ್ಲಿ ಹೇಳಲಾಗಿದೆ.

ಸುಟ್ಟು ಕರಕಲಾದ ಸ್ಥಿತಿಯಲ್ಲಿದ್ದ 31 ವರ್ಷದ ಹಮರ್ ಮಹಿಳೆ ದೇಹದ ಭಾಗಗಳನ್ನು ಆಕೆಯ ಮನೆಯಿಂದ ವಶಪಡಿಸಿಕೊಳ್ಳಲಾಗಿತ್ತು. ಅರಂಬಾಯ್ ಟೆಂಗೋಲ್ ಎಂಬ ಸಂಘಟನೆಯ ಸಶಸ್ತ್ರ ಜನರಿದ್ದ ಗುಂಪೊಂದು ಆಕೆಗೆ ಬೆಂಕಿ ಹಚ್ಚಿ, ಹತ್ಯೆ ಮಾಡಿತ್ತು ಎಂದು ಆರೋಪಿಸಲಾಗಿದೆ.

ಘಟನೆ ನಂತರ ಸಂಘಟನೆ ವಿರುದ್ಧ ಮಹಿಳೆಯ ಪತಿ ದೂರು ನೀಡಿದ್ದರು. ‘ಅರಂಬಾಯ್ ಟೆಂಗೋಲ್ ಸದಸ್ಯರು ಪತ್ನಿಯ ಮೇಲೆ ಅತ್ಯಾಚಾರ ಎಸಗಿ, ಆಕೆಗೆ ಗುಂಡು ಹೊಡೆದು, ನಂತರ ಜೀವಂತ ದಹನ ಮಾಡಿದ್ದಾರೆ’ ಎಂದು ದೂರಿನಲ್ಲಿ ಹೇಳಿದ್ದಾರೆ.

ಮಠದ ‘ಅಧೀನಂ’ ತೊರೆಯಲು ಭಕ್ತರ ಆಗ್ರಹ

ಬೆಂಗಳೂರಿನ ಮಹಿಳೆ ವರಿಸಿದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಕಾವೇರಿ ಕಣಿವೆಯ ಕುಂಭಕೋಣಂನಲ್ಲಿರುವ ಪ್ರಸಿದ್ಧ ಸೂರ್ಯನಾರ್ ದೇವಸ್ಥಾನದ ಮಠಾಧೀಶರಾದ 54 ವರ್ಷದ ಮಹಾಲಿಂಗ ಸ್ವಾಮೀಜಿ ಅವರು ತಮ್ಮ ಭಕ್ತೆ, ಬೆಂಗಳೂರಿನ 47 ವರ್ಷದ ಹೇಮಾ ಶ್ರೀ ಅವರನ್ನು ಕಳೆದ ತಿಂಗಳು ವಿವಾಹವಾಗುವ ಮೂಲಕ ಬ್ರಹ್ಮಚರ್ಯ ಮುರಿದಿದ್ದಾರೆ.

ಸ್ವಾಮೀಜಿ ಹಠಾತ್ ದಾಂಪತ್ಯ ಜೀವನಕ್ಕೆ ಕಾಲಿಟ್ಟಿರುವ ಸಂಗತಿಯನ್ನು ವಾರಗಟ್ಟಲೆ ರಹಸ್ಯವಾಗಿಟ್ಟಿದ್ದು, ಇದು ಈಗ ಬಹಿರಂಗವಾಗುತ್ತಿದ್ದಂತೆ ತಮಿಳು ನಾಡಿನಲ್ಲಿ ದೊಡ್ಡ ವಿವಾದಕ್ಕೆ ಕಾರಣವಾಗಿದೆ. ನೂರಾರು ಕೋಟಿ ರೂಪಾಯಿ ಆಸ್ತಿ ಹೊಂದಿರುವ ಮಠದ ‘ಅಧೀನಂ’ (ಮಠದ ಮುಖ್ಯಸ್ಥ) ಸ್ಥಾನ ತೊರೆಯುವಂತೆ ಭಕ್ತರು ಸ್ವಾಮೀಜಿ ಮೇಲೆ ಒತ್ತಡ ಹೇರಿದ್ದಾರೆ.

ತಂಜಾವೂರು ಜಿಲ್ಲೆಯ ಕುಂಭಕೋಣಂನಲ್ಲಿರುವ ಸೂರ್ಯನಾರ್ ದೇವಸ್ಥಾನದ ‘ಅಧೀನಂ’ನ 28ನೇ ಮುಖ್ಯಸ್ಥರಾಗಿ 2022ರಲ್ಲಿ ಅಧಿಕಾರ ವಹಿಸಿಕೊಂಡ ಮಹಾಲಿಂಗ ಸ್ವಾಮೀಜಿ, ಕಳೆದ ಅ. 10ರಂದು ಬೆಂಗಳೂರಿನಲ್ಲಿ ಹೇಮಾ ಶ್ರೀ ಅವರನ್ನು ವರಿಸಿದ್ದಾರೆ.

ತಮಿಳುನಾಡಿನಲ್ಲಿ ಶತಮಾನಗಳ ಹಿಂದೆ ಸ್ಥಾಪಿಸಲಾದ 18 ಶೈವ ಮಠಗಳಲ್ಲಿ ಸೂರ್ಯನಾರ್ ದೇವಾಲಯದ ಮಠವೂ ಒಂದೆನಿಸಿದೆ. ಶೈವ ಸಿದ್ಧಾಂತದ ತತ್ವ ಪ್ರಚಾರ ಮಾಡುವ ಶೈವ ಮಠಗಳು ಭಾರಿ ಪ್ರಮಾಣದಲ್ಲಿ ಜಮೀನು ಮತ್ತು ಆಸ್ತಿ ಹೊಂದಿವೆ. 2023ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹೊಸ ಸಂಸತ್ತಿನ ಕಟ್ಟಡದಲ್ಲಿ ಸೆಂಗೋಲ್ ಸ್ಥಾಪಿಸಲು ನವದೆಹಲಿಗೆ ಶೈವ ಮಠಾಧೀಶರನ್ನು ಆಹ್ವಾನಿಸಿದ್ದರು.

ಸೂರ್ಯನಾರ್ ದೇವಾಲಯ ನಿರ್ವಹಿಸುವ ಗ್ರಾಮಸ್ಥರು ಮತ್ತು ಮಠದ ಅನುಯಾಯಿಗಳು ಮಂಗಳವಾರ ಮಹಾಲಿಂಗ ಸ್ವಾಮೀಜಿ ಅವರನ್ನು ಮಠದ ಪ್ರಧಾನ ಕಚೇರಿಯಿಂದ ಬಲವಂತವಾಗಿ ಹೊರಹಾಕಲು ಯತ್ನಿಸಿದರು. ಆದರೆ, ಅದು ಸಾಧ್ಯವಾಗಲಿಲ್ಲ. ವಿವಾಹವಾಗಿರುವುದನ್ನು ಪ್ರಶ್ನಿಸಿದ್ದಕ್ಕಾಗಿ ತಮ್ಮ ಶಿಷ್ಯ ಸ್ವಾಮಿನಾಥ ಸ್ವಾಮೀಜಿಯವರನ್ನು ಪ್ರತೀಕಾರದ ಕ್ರಮವಾಗಿ ವಜಾಗೊಳಿಸಿದ ಮಹಾಲಿಂಗ ಸ್ವಾಮೀಜಿ, ತಮಿಳುನಾಡು ಸರ್ಕಾರದ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಪತ್ರ ಬರೆದು ಮಠದ ಆಡಳಿತವನ್ನು ಸುಪರ್ದಿಗೆ ಪಡೆಯುವಂತೆ ಕೋರಿದ್ದಾರೆ.

ತನ್ನ ಭಕ್ತೆಯೊಂದಿಗೆ ವಿವಾಹವಾಗಿರುವುದನ್ನು ಸಮರ್ಥಿಸಿಕೊಂಡಿರುವ ಮಹಾಲಿಂಗ ಸ್ವಾಮೀಜಿ, ‘ಈ ಹಿಂದೆ ಮಠಾಧೀಶರು ವಿವಾಹವಾದ ಸಾಕಷ್ಟು ಉದಾಹರಣೆಗಳಿವೆ. ನಾನು ಮದುವೆ ನೋಂದಾಯಿಸಿದ್ದು, ಇದು ಖಾಸಗಿ ವಿಚಾರ. ಮಠಾಧೀಶನಾಗಿಯೇ ಮುಂದುವರಿಯುವೆ’ ಎಂದು ಹೇಳಿದ್ದಾರೆ.

ಮಹಾಲಿಂಗ ಸ್ವಾಮೀಜಿ ಅವರು ಮಠದ ಕೇಂದ್ರ ಕಚೇರಿ ತೊರೆಯದಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಗ್ರಾಮಸ್ಥರು, ತಕ್ಷಣವೇ ಮಠವನ್ನು ತೊರೆಯಬೇಕೆಂದು ಪಟ್ಟುಹಿಡಿದರು. ಭಕ್ತರ ಒತ್ತಡಕ್ಕೆ ಸೊಪ್ಪು ಹಾಕದ ಸ್ವಾಮೀಜಿ, ಧಾರ್ಮಿಕ ದತ್ತಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬಂದು, ಮಠದ ಆಡಳಿತವನ್ನು ಅವರ ಸುಪರ್ದಿಗೆ ಒಪ್ಪಿಸುವವರೆಗೂ ಸ್ಥಳ ಬಿಟ್ಟು ಕದಲುವುದಿಲ್ಲವೆಂದು ಪಟ್ಟುಹಿಡಿದರು.

ಮಠದ ಆಡಳಿತವನ್ನು ಧಾರ್ಮಿಕ ದತ್ತಿ ಇಲಾಖೆಗೆ ವರ್ಗಾಯಿಸುವವರೆಗೆ ನಾನು ಗ್ರಾಮ ತೊರೆಯುವುದಿಲ್ಲ. ನನ್ನ ಜವಾಬ್ದಾರಿ ಮುಗಿಸಿ, ಪತ್ನಿಯ ಊರಿಗೆ ತೆರಳುವೆ

ಮಹಾಲಿಂಗ ಸ್ವಾಮೀಜಿ
ಸೂರ್ಯನಾರ್ ದೇವಸ್ಥಾನದ ಮಠಾಧೀಶ

ಧಾರ್ಮಿಕ ದತ್ತಿ ಕಾಯ್ದೆಯ ಸೆಕ್ಷನ್ 60 ಮತ್ತು 60 (ಎ) ಅಡಿಯಲ್ಲಿ ದೇವಾಲಯ ಮತ್ತು ಮಠದ ಆಡಳಿತ ನಿಯಂತ್ರಣವನ್ನು ಸರ್ಕಾರವು ತನ್ನ ಸುಪರ್ದಿಗೆ ತೆಗೆದುಕೊಳ್ಳಲಿದೆ

ಪಿ.ಕೆ. ಶೇಖರ್‌ಬಾಬು
ಧಾರ್ಮಿಕ ದತ್ತಿ ಇಲಾಖೆ ಸಚಿವ

ವೈಎಸ್‌ಆರ್ ಕಾಂಗ್ರೆಸ್ ಕಾರ್ಯಕರ್ತರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ವಿರೋಧ ಪಕ್ಷಗಳ ನಾಯಕರು ಹಾಗೂ ಅವರ ಕುಟುಂಬ ಸದಸ್ಯರನ್ನು ಗುರಿಯಾಗಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ವಿಷಯವಸ್ತುಗಳನ್ನು ಪೋಸ್ಟ್ ಮಾಡುತ್ತಿದ್ದ ಆರೋಪದಡಿ ವೈ.ಎಸ್.ಆರ್. ಕಾಂಗ್ರೆಸ್ ಪಕ್ಷದ ಸಾವಿರಾರು ಕಾರ್ಯಕರ್ತರಿಗೆ ಆಂಧ್ರಪ್ರದೇಶ ಪೊಲೀಸರು ನೋಟಿಸ್‌ಗಳನ್ನು ಕಳುಹಿಸಿದ್ದಾರೆ.

ಕಳೆದ ಕೆಲ ದಿನಗಳಲ್ಲಿ, ಈ ಸಂಬಂಧ 55 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಪೊಲೀಸರ ಈ ಕ್ರಮವು ರಾಜ್ಯ ರಾಜಕಾರಣದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಪ್ರಕಾಶಂ ಜಿಲ್ಲೆಯ ಮದ್ದಿಪಾಡು ಪೊಲೀಸ್ ಠಾಣೆ ಪೊಲೀಸರು ಬುಧವಾರ ಹೈದರಾಬಾದ್‌ಗೆ ಬಂದು, ಖ್ಯಾತ ಚಿತ್ರ ನಿರ್ದೇಶಕ ರಾಮಗೋಪಾಲ್ ವರ್ಮಾ ಅವರಿಗೆ ನೋಟಿಸ್ ನೀಡಿದ್ದಾರೆ.

ರಾಮಗೋಪಾಲ್ ವರ್ಮಾ ಅವರು ಇತ್ತೀಚೆಗೆ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಕುಟುಂಬ ಸದಸ್ಯರ ತಿರುಚಿದ ಚಿತ್ರಗಳನ್ನು ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಹಂಚಿಕೊಂಡಿದ್ದ ಆರೋಪ ಎದುರಿಸುತ್ತಿದ್ದು, ಅವರ ವಿರುದ್ಧ ಪ್ರಕರಣವೂ ದಾಖಲಾಗಿದೆ. ವಿಚಾರಣೆಗಾಗಿ ನ.19ರಂದು ತಮ್ಮ ಮುಂದೆ ಹಾಜರಾಗುವಂತೆ ರಾಮಗೋಪಾಲ್ ವರ್ಮಾ ಅವರಿಗೆ ಪೊಲೀಸರು ಸೂಚಿಸಿದ್ದಾರೆ.

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು – 560001.
Ph: 080-29565353 Email: splocaima21@gmail.com

ಸಂಖ್ಯೆ: SPLOCA/ADM/30/2024-25 ದಿನಾಂಕ: 12.11.2024

ಪ್ರಕಟಣೆ

ವಿಷಯ: ವಿಶೇಷಾಧಿಕಾರಿ ಮತ್ತು ಸಕ್ಷಮಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಅರ್ಜಿಗಳನ್ನು / ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

ವಿಶೇಷಾಧಿಕಾರಿ ಮತ್ತು ಸಕ್ಷಮಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಗಳವರ ಕಛೇರಿಗೆ ಮಂಜೂರಾಗಿ ನೇಮಕವಾಗದೇ ಖಾಲಿ ಇರುವ ಈ ಕೆಳಕಂಡ ವಿವಿಧ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ Resume ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

Last date of submission of Resume: 20.11.2024

ಹುದ್ದೆಗಳ ವಿವರ:

Sl. No.	Post / Designation	Qualification	No. of Post	Contract wage per month
		Basic		
1.	**Legal Typist**	LLB, Registered at Bar Council of Karnataka, typing speed 40 WPM both English & Kannada. Ability to communicate in both Kannada & English.	1	18,700/- with OT charges and Sitting fees as per Government norms (on outsource basis)

Sl. No.	Post / Designation	No. of Post	Maximum Contract wage per month (Actual shall depend upon qualification & Experience	Qualification
1.	Assistant Controller	1	Rs. 75,330/-	Either retired from State Audit & Accounts Department of any Accounts & Audit service from Central Government, within the last 2 years in equivalent position, with minimum qualification of B.Com for Assistant controller & not above the age of 62 years **or** M.Com with at least 10 years' experience in accounts in any reputed Firm / Government organisation in an equivalent position and for Accounts Superintendent M.Com with 5 years' experience. A chartered Accountant is preferred for the post of Assistant Controller. The applicant must have sound knowledge of and familiarity with single entry accounting.
2.	Accounts Superintendent	1	Rs. 59,355/-	

The Position to be filled is a post created in the office of Special officer & Competent Authority, Financial Frauds Revenue Department Government of Karnataka vide Government Order and is renewable year on year. It is a post on contract, renewable on satisfactory performance with periodic enhancement of salary scales, **not a permanent government service.**

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮಪ್ರಾಧಿಕಾರಿ
ಐಎಂಎ ಹಾಗೂ ಇತರೆ ಕೆಪಿಐಡಿ ಪ್ರಕರಣಗಳು
ಕಂದಾಯ ಇಲಾಖೆ, ಬೆಂಗಳೂರು

ವಾಸಸಂಇ/ಸಿಪಿ/ಎಎಎ/3175/2024–25

An Autonomous Institute of Government of Karnataka

SHRI ATAL BIHARI VAJPAYEE MEDICAL COLLEGE & RESEARCH INSTITUTE, BENGALURU

(Formerly called Bowring & Lady Curzon Medical College & Research Institute)
Office of the Director cum Dean, Shivajinagar, Bengaluru.

No: SABVMCRI/Fellow/01/2024-25 Dated: 13-11-2024

NOTIFICATION

Applications are invited from NMC / MCI recognized MS / MD qualified candidates for **Fellowship Programmes in below Mentioned Subjects at SABVMCRI, Bengaluru** for the Academic year 2024-25.

Sl. No.	Subject	Duration of Course	Number of Admissions
1	Aesthetic Dermatology	12 Months	2
2	Pediatric Dermatology	12 Months	2
3	High Risk Pregnancy	18 Months	2
4	Spine Surgery	18 Months	2

For further information visit the Institution's Website: **https://sabvmcri.karnataka.gov.in**

Sd/- Director Cum Dean
SABVMCRI, Bengaluru.

DIPR/CP/3196/Adverto/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಎಸ್‌ಸಿ(ಎಫ್)ಆರ್‌ಪಿಓ/2024/931 ದಿನಾಂಕ: 12.11.2024

ಸೂಚನೆ

ವಿಷಯ: ಕರಡು ಕ.ವಿ.ನಿ.ಆ. (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಮಾಡುವುದು) (ಹನ್ನೊಂದನೆಯ ತಿದ್ದುಪಡಿ) ವಿನಿಯಮಗಳು, 2024ರ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಹೊರಡಿಸಲು ಪ್ರಸ್ತಾವಿಸಿರುವ ಕ.ವಿ.ನಿ.ಆ. (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಮಾಡುವುದು) (ಹನ್ನೊಂದನೆಯ ತಿದ್ದುಪಡಿ) ವಿನಿಯಮಗಳು, 2024ರ ಕರಡು, ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 04.11.2024ರಂದು ಪ್ರಕಟವಾಗಿದೆ. ಕ.ವಿ.ನಿ.ಆ.ದ ಜಾಲತಾಣ (ವೆಬ್‌ಸೈಟ್) https://kerc.karnataka.gov.in ದಲ್ಲಿ ಕರಡು ವಿನಿಯಮಗಳು ಲಭ್ಯವಿದೆ.

ಭಾಗೀದಾರರು ಮತ್ತು ಆಸಕ್ತರು ಕರಡು ವಿನಿಯಮಗಳ ಬಗ್ಗೆ ತಮ್ಮ ಲಿಖಿತ ಆಕ್ಷೇಪಣೆ / ಅಭಿಪ್ರಾಯ / ಸಲಹೆಗಳು ಇದ್ದಲ್ಲಿ, ಆಯೋಗದ ಕಾರ್ಯದರ್ಶಿಯವರಿಗೆ **ದಿನಾಂಕ: 27.11.2024ರ** ಒಳಗಾಗಿ ಖುದ್ದಾಗಿ / ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/3195/2024-25

ರವೀಂದ್ರ ಕಲಾಕ್ಷೇತ್ರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ,

ಕನ್ನಡ ಭವನ, ಜೆ.ಸಿ,. ರಸ್ತೆ, ಬೆಂಗಳೂರು – 560 002.
ದೂರವಾಣಿ: 080–22220853, । ಇ–ಮೇಲ್:ravindrakalakshetra50@gmail.com

ಸಂಖ್ಯೆ:26011/15/2022 ದಿನಾಂಕ:11.11.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಬರುವ ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರದ ತಾಂತ್ರಿಕ / ಅರೆ ತಾಂತ್ರಿಕ ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಅರ್ಜಿಗಳನ್ನು ಪಡೆದು ಸಲ್ಲಿಸಬಹುದಾಗಿದೆ.

Indent No.: RK/2024-25/SE0002/Call-2

ಸಹಿ/–
ವ್ಯವಸ್ಥಾಪಕರು,
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/3184/2024–25

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ:ಕಾಸಮಂ/ತಾ.ಶಾ./ಸ.ಇ/ಟೆಂಡರ್–09/2024/3663 ದಿ: 13.11.2024

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದ ಕೊಡಗು ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: 22.11.2024ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ನ್ನು ಜಿ.ಎಸ್.ಟಿ. ಹೊರತುಪಡಿಸಿ ಆಹ್ವಾನಿಸಲಾಗಿದ್ದು, ಟೆಂಡರ್‌ದಾರರು ಜಿ.ಎಸ್.ಟಿ.ಯನ್ನು ಹೊರತುಪಡಿಸಿ ದರಗಳನ್ನು ನಮೂದಿಸತಕ್ಕದ್ದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824–2440720)

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/ADM/KSMCA/820/24-25 dt.13.11.2024

‘ರಾಜಕುಮಾರ’ನಿಂದ ಮೀಸಲಾತಿ ರದ್ದತಿಗೆ ಪಿತೂರಿ: ಮೋದಿ

ಸರಥ್ (ಜಾರ್ಖಂಡ್) (ಪಿಟಿಐ): ‘ಕಾಂಗ್ರೆಸ್‌ನ ‘ರಾಜಕುಮಾರ’ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ರದ್ದು ಮಾಡುವ ಪಿತೂರಿ ನಡೆಸುತ್ತಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು, ರಾಹುಲ್ ಗಾಂಧಿ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ ಬುಧವಾರ ಆರೋಪಿಸಿದರು.

ದೇವಧರ್‌ನಲ್ಲಿ ಬಿಜೆಪಿ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಇದು ಆಳವಾಗಿ ಬೇರೂರಿರುವ ಪಿತೂರಿ. ಇದು ಜಾರ್ಖಂಡ್‌ನ ಅಸ್ಮಿತೆಯನ್ನೇ ಬದಲಾಯಿಸಲಿದೆ’ ಎಂದು ಹೇಳಿದರು.

‘ಕಾಂಗ್ರೆಸ್ ಅಪಾಯಕಾರಿ ಉದ್ದೇಶವನ್ನು ಹೊಂದಿದೆ. ‘ರಾಜಕುಮಾರ’ ಅವರ ತಂದೆ (ರಾಜೀವ್ ಗಾಂಧಿ) ಮೀಸಲಾತಿಯನ್ನು ಗುಲಾಮಗಿರಿ ಎಂದು ಘೋಷಿಸಿದ್ದರು. ಮೀಸಲಾತಿಯನ್ನು ತೆಗೆದುಹಾಕುವ ಜಾಹೀರಾತು ನೀಡಿದ್ದರು. ಬಳಿಕ ಅವರ ಪಕ್ಷ ಚುನಾವಣೆಯಲ್ಲಿ ಪರಾಭವಗೊಂಡಿತು. ಎಸ್‌ಸಿ, ಎಸ್ಟಿ, ಒಬಿಸಿ ಸಮುದಾಯವನ್ನು ದುರ್ಬಲಗೊಳಿಸುವ ಇಂಥ ಪ್ರಯತ್ನವನ್ನು ನಾವು ವಿಫಲಗೊಳಿಸುತ್ತೇವೆ’ ಎಂದು ಹೇಳಿದರು.

ಆಡಳಿತಾರೂಢ ಜೆಎಂಎಂ ಮೈತ್ರಿಯು ಒಳನುಸುಳುಕೋರರಿಗೆ ಪೌರತ್ವ ನೀಡಲು ನೆರವು ನೀಡುತ್ತಿದೆ. ಈ ಮೂಲಕ ಜಾರ್ಖಂಡ್ ರಾಜ್ಯದ ಹೆಣ್ಣುಮಕ್ಕಳು, ಭೂಮಿ ಮತ್ತು ಆಹಾರ ಭದ್ರತೆ ಜೊತೆ ಆಟವಾಡುತ್ತಿದೆ ಎಂದು ದೂರಿದರು.

ಇದೇ ಸಂದರ್ಭದಲ್ಲಿ, ಬಿಜೆಪಿ ನೇತೃತ್ವದ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಧೋನಿ, ಅವರ ಪತ್ನಿ ಸಾಕ್ಷಿ ಸೇರಿದಂತೆ ಗಣ್ಯರಿಂದ ಮತಚಲಾವಣೆ • 2ನೇ ಹಂತದ ಚುನಾವಣೆ ನ.20ಕ್ಕೆ

ಜಾರ್ಖಂಡ್: ಶೇ 66.18ರಷ್ಟು ಮತದಾನ

ಪಶ್ಚಿಮ ಸಿಂಹಭೂಮ್ ಜಿಲ್ಲೆಯಲ್ಲಿ ಜನರು ಮತ ಚಲಾಯಿಸಲು ಸರತಿ ಸಾಲಿನಲ್ಲಿ ಬುಧವಾರ ನಿಂತಿದ್ದರು —ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ರಾಂಚಿ/ಪಟ್ನಾ: ಜಾರ್ಖಂಡ್ ವಿಧಾನಸಭೆ 43 ಕ್ಷೇತ್ರಗಳಲ್ಲಿ ಮೊದಲ ಹಂತದ ಮತದಾನವು ಬುಧವಾರ ನಡೆದಿದ್ದು ಪ್ರಾಥಮಿಕ ಮಾಹಿತಿ ಪ್ರಕಾರ ಶೇ 66.18ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಭಾರತ ಕ್ರಿಕೆಟ್ ತಂಡ ಮಾಜಿ ನಾಯಕ ಎಂ.ಎಸ್. ಧೋನಿ, ಅವರ ಪತ್ನಿ ಸಾಕ್ಷಿ, ಮುಖ್ಯಮಂತ್ರಿ ಹೇಮಂತ್, ಪತ್ನಿ ಕಲ್ಪನಾ ಸೋರೆನ್ ಸೇರಿದಂತೆ ಹಲವು ಗಣ್ಯರು ಮೊದಲ ಹಂತದ ಮತದಾನದಲ್ಲಿ ತಮ್ಮ ಹಕ್ಕು ಚಲಾಯಿಸಿದರು. ಧೋನಿ ಅವರೊಂದಿಗೆ ಫೋಟೊ ತೆಗೆಸಿಕೊಳ್ಳಲು ರಾಂಚಿಯ ಮತಗಟ್ಟೆಯಲ್ಲಿ ನೂಕು ನುಗ್ಗಲು ಏರ್ಪಟ್ಟಿತ್ತು.

ಜೆಎಂಎಂ ತೊರೆದು ಬಿಜೆಪಿ ಪಾಳೆಯ ಸೇರಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ಚಂಪೈ ಸೋರೆನ್, ಆರೋಗ್ಯ ಸಚಿವ ಬನ್ನಾ ಗುಪ್ತಾ, ಜೆಎಂಎಂನ ರಾಜ್ಯಸಭಾ ಸದಸ್ಯೆ ಮಹುವಾ ಮಾಂಝಿ, ಪ್ರತಿಮಾ ದಾಸ್ (ಮಾಜಿ ಮುಖ್ಯಮಂತ್ರಿ ರಘುವರ್ ದಾಸ್ (ಈಗ ಒಡಿಶಾ ರಾಜ್ಯಪಾಲ) ಅವರ ಸೊಸೆ) ಸೇರಿದಂತೆ ಹಲವರ ಫಲಿತಾಂಶವು ಮತಗಟ್ಟೆಯಲ್ಲಿ ಭದ್ರಗೊಂಡಿದೆ.

ಉಳಿದ 38 ಕ್ಷೇತ್ರಗಳಿಗೆ ನ.20ರಂದು ಮತದಾನ ನಡೆಯಲಿದೆ.

ಮೊದಲ ಹಂತ ಕಣದ ಚಿತ್ರಣ

1 ಲಿಂಗತ್ವ ಅಲ್ಪಸಂಖ್ಯಾತ

73 ಮಹಿಳೆಯರು

609 ಪುರುಷರು

683 ಮೊದಲ ಹಂತದಲ್ಲಿ ಕಣದಲ್ಲಿದ್ದ ಒಟ್ಟು ಅಭ್ಯರ್ಥಿಗಳ ಸಂಖ್ಯೆ

43 ಮೊದಲ ಹಂತದಲ್ಲಿ ಮತದಾನ ನಡೆದ ಕ್ಷೇತ್ರಗಳ ಸಂಖ್ಯೆ

1.37 ಕೋಟಿ ಮೊದಲ ಹಂತದಲ್ಲಿ ಮತ ಚಲಾಯಿಸಿದ ಮತದಾರರ ಸಂಖ್ಯೆ

ಲಿಂಗತ್ವ ಅಲ್ಪಸಂಖ್ಯಾತ ಏಕೈಕ ಅಭ್ಯರ್ಥಿ ನಗ್ಮಾ

ವಿಧಾನಸಭಾ ಚುನಾವಣಾ ಕಣದಲ್ಲಿ ಇರುವ ಏಕೈಕ ಲಿಂಗತ್ವ ಅಲ್ಪಸಂಖ್ಯಾತೆ ನಗ್ಮಾ ರಾಣಿ ಅವರು ಬುಧವಾರ ಮತ ಚಲಾಯಿಸಿದರು. ರಾಂಚಿ ಸಮೀಪದ ಹಾಠಿಯಾ ಕ್ಷೇತ್ರದಿಂದ 35 ವರ್ಷದ ನಗ್ಮಾ ಅವರು ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ. ಬಿಜೆಪಿಯ ನವಿನ್ ಜೈಸ್ವಾಲ್ ಹಾಗೂ ಕಾಂಗ್ರೆಸ್‌ನ ಅಜಯ್ ನಾಥ್ ನಗ್ಮಾ ಅವರು ಪ್ರತಿಸ್ಪರ್ಧಿಗಳಾಗಿದ್ದಾರೆ.

‘ಪ್ರಚಾರದುದ್ದಕ್ಕೂ ಜನರು ನನಗೆ ನೀಡಿರುವ ಬೆಂಬಲದಿಂದ ಆಶ್ಚರ್ಯಗೊಂಡಿದ್ದೇನೆ. ಜನರು ನನಗೆ ಮತ ನೀಡುತ್ತಾರೆ ಎಂಬ ನಂಬಿಕೆ ಇದೆ. ನಾನು ಈ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತೇನೆ’ ಎಂದು ನಗ್ಮಾ ಅವರು ವಿಶ್ವಾಸ ವ್ಯಕ್ತಪಡಿಸಿದರು. ಮಗಧ್ ವಿಶ್ವವಿದ್ಯಾಲಯದಿಂದ ನಗ್ಮಾ ಅವರು ಇತಿಹಾಸದಲ್ಲಿ ಪದವಿ ಪಡೆದುಕೊಂಡಿದ್ದಾರೆ.

75 ವರ್ಷಗಳಲ್ಲಿ ಮೊದಲ ಬಾರಿಗೆ ಮತದಾನ

ರಾಂಚಿ ಸಮೀಪದ ತಮಾಢ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಕ್ಸಲ್ ಪೀಡಿತ ಅರಾಹಂಗಾ ಗ್ರಾಮದ ಜನರು ಸ್ವಾತಂತ್ರ್ಯ ನಂತರ ಇದೇ ಮೊದಲ ಬಾರಿಗೆ ದೊಡ್ಡ ಸಂಖ್ಯೆಯಲ್ಲಿ ಮತ ಚಲಾಯಿಸಿದರು. ನಕ್ಸಲರ ಭಯದಿಂದಾಗಿ ಈ ಗ್ರಾಮದವರು ಮತದಾನದ ತಮ್ಮ ಹಕ್ಕನ್ನು ಇಷ್ಟು ವರ್ಷಗಳವರೆಗೆ ಚಲಾಯಿಸಿಯೇ ಇರಲಿಲ್ಲ.

ಚುನಾವಣಾ ಅಧಿಕಾರಿಯ ಕೆನ್ನೆಗೆ ಹೊಡೆದ ಅಭ್ಯರ್ಥಿ

ಜೈಪುರ (ಪಿಟಿಐ): ರಾಜಸ್ಥಾನದ ‘ದೆವಲಿ–ಉನಿಯಾರಾ’ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ನರೇಶ್ ಮೀನಾ ಅವರು ಚುನಾವಣಾ ಕಾರ್ಯದಲ್ಲಿದ್ದ ಉಪವಿಭಾಗಾಧಿಕಾರಿ ಅಮಿತ್ ಚೌಧರಿ ಅವರ ಕಾಲರ್ ಹಿಡಿದು, ಕೆನ್ನೆಗೆ ಹೊಡೆದಿದ್ದಾರೆ ಎಂದು ಆರೋಪಿಸಲಾಗಿದೆ.

‘ತಮ್ಮ ಗ್ರಾಮವನ್ನು ಉನಿಯಾರಾ ತಾಲ್ಲೂಕಿಗೆ ಸೇರ್ಪಡೆಗೊಳಿಸಬೇಕು ಎನ್ನುವುದು ಸಮ್ರಾವತ್ ಗ್ರಾಮಸ್ಥರ ಒತ್ತಾಯ. ಪ್ರಸ್ತುತ ಈ ಗ್ರಾಮವು ನಗರ ಫೋರ್ಟ್ ತಾಲ್ಲೂಕಿಗೆ ಸೇರುತ್ತದೆ. ಈ ಕಾರಣದಿಂದಾಗಿ ಗ್ರಾಮಸ್ಥರು ಮತದಾನ ಬಹಿಷ್ಕರಿಸಿದ್ದರು. ಅಮಿತ್ ಅವರು ಗ್ರಾಮಸ್ಥರೊಂದಿಗೆ ಮಾತುಕತೆ ನಡೆಸುತ್ತಿದ್ದ ವೇಳೆ ನರೇಶ್ ಈ ರೀತಿ ಮಾಡಿದ್ದಾರೆ’ ಎಂದು ಟೋಂಕ್‌ನ ಜಿಲ್ಲಾಧಿಕಾರಿ ಸೌಮ್ಯಾ ಝಾ ವಿವರಿಸಿದರು.

ಭಾವನಾತ್ಮಕ ದೃಶ್ಯಗಳಿಗೆ ಸಾಕ್ಷಿಯಾದ ವಯನಾಡ್ ಮತಗಟ್ಟೆ

ವಯನಾಡ್ (ಪಿಟಿಐ): ಸುಮಾರು ಮೂರು ತಿಂಗಳ ಹಿಂದೆ ಸಂಭವಿಸಿದ ಭೀಕರ ಭೂಕುಸಿತದ ನೆನಪುಗಳು ಇನ್ನೂ ಮಾಸಿಲ್ಲ. ಭೂಕುಸಿತದ ಸಂತ್ರಸ್ತರು ತಮ್ಮ ನೆನಪುಗಳ ಭಾರವನ್ನು ಹೊತ್ತುಕೊಂಡು ತಮಗಾಗಿಯೇ ಇಲ್ಲಿ ಸಿದ್ಧಪಡಿಸಲಾಗಿದ್ದ ಮತಗಟ್ಟೆಗೆ ಬುಧವಾರ ಬಂದಿದ್ದರು. ಸಂತ್ರಸ್ತರ ಕಣ್ಣೀರಿನ, ಅಪ್ಪುಗೆಯ ಭಾನಾತ್ಮಕ ದೃಶ್ಯಗಳಿಗೆ ಈ ಮತಗಟ್ಟೆಯು ಸಾಕ್ಷಿಯಾಯಿತು.

ಮತಗಟ್ಟೆಯಲ್ಲಿನ ಇಡೀ ವಾತಾವರಣವೇ ದುಃಖದಿಂದ ಕೂಡಿತ್ತು. ಆದರೆ, ಸಂತ್ರಸ್ತರು ಧೃತಿಗೆಟ್ಟಿರಲಿಲ್ಲ, ಧೈರ್ಯದಿಂದಲೇ ಇದ್ದರು. ಭೂಕುಸಿತದಿಂದ ತೀವ್ರ ಹಾನಿಗೊಳಗಾಗಿದ್ದ ಮುಂಡಕ್ಕೈ, ಚೂರಲ್‌ಮಲ ಹಾಗೂ ಪುಂಜಿರಿಮಟ್ಟಂ ಗ್ರಾಮಗಳ ಜನರು ಪರಸ್ಪರ ಕುಶಲೋಪರಿ ನಡೆಸಿದರು. ಭೂಕುಸಿತಕ್ಕೂ ಹಿಂದಿನ ಸಿಹಿ ನೆನಪುಗಳನ್ನು ಮೆಲುಕು ಹಾಕಿದರು.

‘ಮೇ ತಿಂಗಳಲ್ಲಿ ಲೋಕಸಭೆ ಚುನಾವಣೆ ವೇಳೆ ನಮ್ಮ ಪ್ರೀತಿಪಾತ್ರರೊಂದಿಗೆ ಮತಗಟ್ಟೆಗೆ ಬಂದು ಮತದಾನ ಮಾಡಿದ್ದೇವು. ನಂತರ ಏನೆಲ್ಲಾ ನಡೆದು ಹೋಯಿತು. ಈಗ ನಮ್ಮವರನ್ನು ಕಳೆದುಕೊಂಡು, ಉಪಚುನಾವಣೆಯ ಮತದಾನಕ್ಕೆ ಬಂದಿದ್ದೇವೆ’ ಎಂಬೆಲ್ಲಾ ಮಾತುಗಳು ಸಂತ್ರಸ್ತರ ನಡುವೆ ಸುಳಿದವು.

‘ಊರಿಗೇ ಊರೇ ಒಂದು ದೊಡ್ಡ ಕುಟುಂಬದಂತೆ ಇದ್ದೆವು. ಜಾತಿ, ಧರ್ಮದ ಎಲ್ಲೆಗಳನ್ನು ಮೀರಿ ಎಲ್ಲ ಹಬ್ಬಗಳನ್ನೂ ಈ ಮೂರು ಊರಿನ ಜನರು ಒಟ್ಟಿಗೆ ಆಚರಿಸುತ್ತಿದ್ದೆವು. ಆದರೆ, 100 ದಿನಗಳ ಹಿಂದೆ ನಮ್ಮ ಖುಷಿ, ನಮ್ಮದು ಎಂದಿದ್ದ ಎಲ್ಲವನ್ನೂ ಭೂಕುಸಿತ ಕಸಿದುಕೊಂಡಿತು’ ಎನ್ನುತ್ತಾ ವೃದ್ಧರೊಬ್ಬರು ಕಣ್ಣೀರು ಸುರಿಸಿದರು.

ಸಂತ್ರಸ್ತರಿಗೆ ವಿವಿಧೆಡೆ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆ. ಆದ್ದರಿಂದ, ಇವರೆಲ್ಲರಿಗೂ ಆಡಳಿತವು ಬಸ್ ವ್ಯವಸ್ಥೆ ಕಲ್ಪಿಸಿತ್ತು. ಬಸ್‌ನಲ್ಲಿ ಸಿಕ್ಕ ಪ್ರೀತಿಪಾತ್ರರನ್ನು ಸಂತೈಸುತ್ತಿದ್ದ ವೃದ್ಧರೊಬ್ಬರು, ‘ಅಳ ಬೇಡ. ಎಲ್ಲವೂ ಸರಿ ಹೋಗುತ್ತದೆ. ಒಳ್ಳೆಯದೇ ಆಗುತ್ತದೆ’ ಎಂದು ಸಮಾಧಾನಪಡಿಸಿದರು.

ಶೇ 65ರಷ್ಟು ಮತದಾನ

ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಶೇ 65ರಷ್ಟು ಮಂದಿ ತಮ್ಮ ಮತದಾನದ ಹಕ್ಕು ಚಲಾಯಿಸಿದ್ದಾರೆ.

ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸಿದ ಅಜಿತ್ ಪವಾರ್ ಹೇಳಿಕೆ

‘ಬಿಜೆಪಿ–ಎನ್‌ಸಿಪಿ ಸಭೆಯಲ್ಲಿ ಅದಾನಿ ಭಾಗಿ’

ಪ್ರಜಾವಾಣಿ ವಾರ್ತೆ

ಗೌತಮ್ ಅದಾನಿ

ಪುಣೆ: ‘ಮಹಾರಾಷ್ಟ್ರದಲ್ಲಿ 2019ರಲ್ಲಿ ನಡೆದ ಚುನಾವಣೆ ಬಳಿಕ ಸರ್ಕಾರ ರಚಿಸುವ ಸಲುವಾಗಿ ಬಿಜೆಪಿ ಹಾಗೂ ಎನ್‌ಸಿಪಿ ನಡುವೆ ನಡೆದ ಸಭೆಯಲ್ಲಿ ಉದ್ಯಮಿ ಗೌತಮ್ ಅದಾನಿ ಭಾಗಿಯಾಗಿದ್ದರು’ ಎಂದು ಎನ್‌ಸಿಪಿ (ಅಜಿತ್ ಬಣ) ಮುಖ್ಯಸ್ಥ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ನೀಡಿರುವ ಹೇಳಿಕೆಯು ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸಿದೆ.

ಮಹಾರಾಷ್ಟ್ರ ವಿಧಾನಸಭೆಗೆ ಇದೇ 20ರಂದು ಮತದಾನ ನಡೆಯಲಿದೆ. ಈ ವೇಳೆ ಖಾಸಗಿ ಮಾಧ್ಯಮ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅಜಿತ್ ಪವಾರ್ ಈ ವಿಷಯ ಬಹಿರಂಗಪಡಿಸಿದ್ದಾರೆ. ಈ ಮಧ್ಯೆ ಎರಡು ರಾಜಕೀಯ ಪಕ್ಷಗಳ ನಡುವೆ ನಡೆದ ಸಭೆಯಲ್ಲಿ ಉದ್ಯಮಿ ಅದಾನಿ ಅವರಿಗೆ ಏನು ಕೆಲಸ ಎಂದು ವಿರೋಧ ಪಕ್ಷಗಳು ಪ್ರಶ್ನಿಸಿವೆ. 2019ರ ಚುನಾವಣೆ ಬಳಿಕ ಉದ್ಧವ್ ಠಾಕ್ರೆ ಅವರ ಶಿವಸೇನಾವು ಬಿಜೆಪಿಯೊಂದಿಗಿನ ತನ್ನ 30 ವರ್ಷಗಳ ಮೈತ್ರಿ ಸಂಬಂಧವನ್ನು ಕಡಿದುಕೊಂಡಿತ್ತು ಮತ್ತು ಸರ್ಕಾರ ರಚಿಸುವ ಸಲುವಾಗಿ ಕಾಂಗ್ರೆಸ್ ಹಾಗೂ ಎನ್‌ಸಿಪಿಯೊಂದಿಗೆ ಮಾತುಕತೆಯಲ್ಲಿ ತೊಡಗಿತ್ತು. ಈ ಹಂತದಲ್ಲಿಯೇ ಬಿಜೆಪಿ ಹಾಗೂ ಎನ್‌ಸಿಪಿ ನಡುವೆ ಸಭೆ ನಡೆದಿತ್ತು.

ಎಲ್ಲರಿಗೂ ಎಲ್ಲವೂ ಗೊತ್ತಿತ್ತು. ಆದರೆ, ಆರೋಪ ಮಾತ್ರ ನನ್ನ ಮೇಲೆ ಬಿತ್ತು. ಬೇರೆ ಎಲ್ಲರೂ ಸುರಕ್ಷಿತವಾಗಿ ಇರಲು ನಾನೇ ನನ್ನ ಮೇಲೆಯೇ ಆರೋಪ ಎಳೆದುಕೊಂಡಿದ್ದೇನೆ

ಅಜಿತ್ ಪವಾರ್, ಎನ್‌ಸಿಪಿ

ಅಜಿತ್ ಹೇಳಿದ್ದೇನು?: ‘5 ವರ್ಷಗಳ ಹಿಂದೆ ಸಭೆಯು ಅದಾನಿ ಅವರ ದೆಹಲಿ ನಿವಾಸದಲ್ಲಿ ನಡೆದಿತ್ತು. ಆ ಸಭೆಯಲ್ಲಿ ಅಮಿತ್ ಶಾ, ಗೌತಮ್ ಅದಾನಿ, ಪ್ರಫುಲ್ ಪಟೇಲ್, ದೇವೇಂದ್ರ ಫಡಣವೀಸ್, ನಾನು ಹಾಗೂ ಪವಾರ್ ಸಾಹೇಬರು (ಶರದ್ ಪವಾರ್) ಇದ್ದೆವು’ ಎಂದು ಅಜಿತ್ ಪವಾರ್ ಹೇಳಿದ್ದಾರೆ.

ಸಭೆ ನಡೆದ ಬಳಿಕವೂ ಶರದ್ ಪವಾರ್ ಅವರು ಏಕೆ ಎನ್‌ಡಿಎ ಮೈತ್ರಿಕೂಟ ಸೇರಿಕೊಳ್ಳಲಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅಜಿತ್, ‘ಪವಾರ್ ಸಾಹೇಬರ ತಲೆಯಲ್ಲಿ ಏನು ಓಡುತ್ತದೆ ಎಂದು ಚಿಕ್ಕಮ್ಮನಿಗೆ (ಪ್ರತಿಭಾ ಪವಾರ್) ಮತ್ತು ತಂಗಿಗೆ (ಸುಪ್ರಿಯಾ ಸುಳೆ) ಕೂಡ ಗೊತ್ತಿರುವುದಿಲ್ಲ’ ಎಂದರು.

ರಾಜಕಾರಣದಲ್ಲಿ ನಿಮಗೆ ಸೈದ್ಧಾಂತಿಕ ನಿಲುವು ಇಲ್ಲವೇ ಎಂದು ಪ್ರಶ್ನಿಸಿದಾಗ, ‘ಮಹಾರಾಷ್ಟ್ರದಲ್ಲಿ ಸಿದ್ಧಾಂತದ ಬಗ್ಗೆ ಕೇಳಲೇಬೇಡಿ. ರಾಜ್ಯದ ಇಡಿ ರಾಜಕಾರಣವು ಬದಲಾಗಿದೆ. ಇಲ್ಲಿ ಎಲ್ಲರಿಗೂ ಅಧಿಕಾರ ಬೇಕು. ಅಧಿಕಾರಕ್ಕಾಗಿ ಸಿದ್ಧಾಂತವನ್ನು ಮೂಲೆಗೆ ಬಿಸಾಡಲಾಗಿದೆ’ ಎಂದರು. ಅಜಿತ್ ಅವರ ಹೇಳಿಕೆ ಕುರಿತು ಬಿಜೆಪಿಯಾಗಲಿ, ಎನ್‌ಸಿಪಿ ಆಗಲಿ (ಶರದ್ ಬಣ) ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಯಾರು ಏನು ಹೇಳಿದರು?

ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಹೇಗೆ ರಚಿಸಬೇಕು ಎಂಬ ಕುರಿತು ನಡೆದ ಸಭೆಯಲ್ಲಿ ಅದಾನಿ ಅವರೂ ಇದ್ದರು ಎಂಬುದಾಗಿ ಸಚಿವ ಸಂಪುಟದ ಹಿರಿಯ ಸಚಿವರೊಬ್ಬರ ಸಂದರ್ಶನದ ಮೂಲಕ ತಿಳಿದುಬಂದಿದೆ. ಇದು ಕೆಲವು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ: 1.ಅದಾನಿ ಅವರು ಬಿಜೆಪಿಯ ಅಧಿಕೃತ ಸಂಧಾನಕಾರರೇ? 2. ಮೈತ್ರಿಕೂಟ ರಚಿಸುವ ಜವಾಬ್ದಾರಿಯನ್ನು ಅದಾನಿ ಅವರಿಗೆ ನೀಡಲಾಗಿತ್ತೇ? 3. ಮಹಾರಾಷ್ಟ್ರದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಉದ್ಯಮಿಯೊಬ್ಬರು ಏಕೆ ಇಷ್ಟೊಂದು ಆಸಕ್ತಿವಹಿಸಿ ಕೆಲಸ ಮಾಡಿದರು?

ಪ್ರಿಯಾಂಕಾ ಚತುರ್ವೇದಿ, ಶಿವಸೇನಾದ (ಉದ್ಧವ್ ಬಣ) ರಾಜ್ಯಸಭಾ ಸದಸ್ಯೆ

ಉದ್ಯಮಿ ಗೌತಮ್ ಅದಾನಿ ಅವರೂ ಸಭೆಯಲ್ಲಿ ಇದ್ದರು ಎಂದು ಹೇಳುವ ಮೂಲಕ ಅಜಿತ್ ಅವರು ಮಹತ್ವದ ವಿಚಾರವೊಂದನ್ನು ಬಹಿರಂಗಪಡಿಸಿದ್ದಾರೆ. ಸಭೆಯಲ್ಲಿ ಹಾಜರಿದ್ದ ಅದಾನಿ ಅವರಿಗೆ ಫಡಣವೀಸ್–ಶಿಂದೆ ಸರ್ಕಾರವು ಕೋಟಿಗಟ್ಟಲೆ ಬೆಲೆ ಬಾಳುವ ಭೂಮಿಯನ್ನು ತೀರಾ ಕಡಿಮೆ ಬೆಲೆಗೆ ಮಾರಿದೆ

ಸುಪ್ರಿಯಾ ಶ್ರೀನೇತ್, ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಹಾಗೂ ಡಿಜಿಟಲ್ ವೇದಿಕೆ ಮುಖ್ಯಸ್ಥೆ

ಮೋದಿ ಮತ್ತು ಅದಾನಿ ನಡುವಣ ಅಪವಿತ್ರ ಮೈತ್ರಿಗೆ ಇದೊಂದು ಆಘಾತಕಾರಿ ಉದಾಹರಣೆ. ನಿರ್ಲಜ್ಜೆಯ ಹೊಸದೊಂದು ಉದಾಹರಣೆ ಹೊರಬಂದಿದೆ. ಪಕ್ಷಗಳ ಸಭೆಯೊಂದರಲ್ಲಿ ಉದ್ಯಮಿಯೊಬ್ಬರು ಹೇಗೆ ಅಧಿಕೃತವಾಗಿ ಪಾಲ್ಗೊಳ್ಳುತ್ತಾರೆ?

ಪವನ್ ಖೇರಾ, ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ

‘ಶರದ್ ಪವಾರ್ ಚಿತ್ರ, ವಿಡಿಯೊ ಬಳಸಬೇಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಪ್ರಚಾರದ ವೇಳೆ ಶರದ್ ಪವಾರ್ ಅವರ ಫೋಟೊ ಮತ್ತು ವಿಡಿಯೊ ಬಳಕೆ ಮಾಡಬಾರದು ಎಂದು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಗೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಪಕ್ಷದ ಕಾರ್ಯಕರ್ತರು, ಮತ್ತಿತರರು ಶರದ್ ಪವಾರ್ ಅವರ ಫೋಟೊ ಮತ್ತು ವಿಡಿಯೊ ಬಳಸದಂತೆ ಇ–ಸುತ್ತೋಲೆ ಹೊರಡಿಸಿ ಎಂದು ಪಕ್ಷದ ಅಧ್ಯಕ್ಷ ಅಜಿತ್ ಪವಾರ್ ಅವರಿಗೆ ತಿಳಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಉಜ್ವಲ್ ಭುಯಾನ್ ಅವರನ್ನು ಒಳಗೊಂಡ ನ್ಯಾಯಪೀಠವು, ‘ಪ್ರತ್ಯೇಕ ಮತ್ತು ವಿಶಿಷ್ಟ ರಾಜಕೀಯ ಪಕ್ಷವಾಗಿ ನಿಮ್ಮ ವರ್ಚಸ್ಸಿನ ಮೇಲೆ ಕಾರ್ಯನಿರ್ವಹಿಸಿ’ ಎಂದು ಅಜಿತ್ ಪವಾರ್ ಬಣದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಬಲ್ಬೀರ್ ಸಿಂಗ್ ಅವರಿಗೆ ಸೂಚಿಸಿತು.

‘ನೀವು ಅವರ (ಶರದ್ ಪವಾರ್) ವಿರುದ್ಧವೇ ಹೋರಾಟ ಮಾಡುತ್ತಿರುವಾಗ ಅವರ ಫೋಟೊ, ವಿಡಿಯೊವನ್ನು ಬಳಸಬಾರದು. ನಿಮ್ಮ ಸಾಮರ್ಥ್ಯದ ಮೇಲೆ ಪ್ರಚಾರ ನಡೆಸಿ’ ಎಂದು ಪೀಠ ಹೇಳಿತು.

‘ರಾಹುಲ್ ಗಾಂಧಿಯ 4ನೇ ತಲೆಮಾರು ಬಂದರೂ ಮುಸ್ಲಿಂ ಮೀಸಲು ಸಿಗದು’



ಅಮಿತ್ ಶಾ

ಧುಲೆ(ಪಿಟಿಐ): ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಾಲ್ಕನೇ ತಲೆಮಾರು ಬಂದರೂ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳಿಗೆ ನೀಡುತ್ತಿರುವ ಮೀಸಲಾತಿ ಮುಸ್ಲಿಮರಿಗೆ ಸಿಗುವುದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಚುನಾವಣಾ ರ‍್ಯಾಲಿ ಉದ್ದೇಶಿ ಮಾತನಾಡಿದ ಅವರು, ‘ಕೆಲವು ದಿನಗಳ ಹಿಂದೆ ಉಲೇಮಾಗಳು ಕಾಂಗ್ರೆಸ್ ಅಧ್ಯಕ್ಷರನ್ನು ಭೇಟಿಯಾಗಿ, ಮುಸ್ಲಿಮರಿಗೂ ಮೀಸಲಾತಿ ನೀಡಬೇಕೆಂದು ಹೇಳಿದ್ದಾರೆ’ ಎಂದು ಶಾ ತಿಳಿಸಿದರು.

‘ಮುಸ್ಲಿಮರಿಗೆ ಮೀಸಲಾತಿ ನೀಡಬೇಕಾದರೆ, ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳ ಮೀಸಲಾತಿಯನ್ನು ಕಡಿತಗೊಳಿಸಬೇಕಾಗುತ್ತದೆ. ರಾಹುಲ್ ಬಾಬಾ, ನೀವು ಮಾತ್ರವಲ್ಲ, ನಿಮ್ಮ ನಾಲ್ಕು ತಲೆಮಾರುಗಳು ಬಂದರೂ ಅವರು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳಿಗೆ ಮೀಸಲಾದ ಕೋಟಾ ಕಡಿತಗೊಳಿಸಿ ಮುಸ್ಲಿಮರಿಗೆ ನೀಡಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ವಕ್ಫ್ ಕಾನೂನಿನಿಂದ ದೇಶದ ಜನರು ತೊಂದರೆಗೀಡಾಗಿದ್ದಾರೆ.

370ನೇ ವಿಧಿಯಡಿ ವಿಶೇಷ ಸ್ಥಾನಮಾನ ಮರುಸ್ಥಾಪಿಸಲು ಸಾಧ್ಯವಿಲ್ಲ. ಇಂದಿರಾ ಗಾಂಧಿ ಸ್ವರ್ಗದಿಂದ ಹಿಂತಿರುಗಿದರೂ ಮರುಸ್ಥಾಪಿಸಲಾಗದು

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಇತ್ತೀಚೆಗಷ್ಟೇ ಕರ್ನಾಟಕದ ವಕ್ಫ್ ಬೋರ್ಡ್ ಇಡೀ ಗ್ರಾಮಗಳನ್ನು ವಕ್ಫ್ ಆಸ್ತಿ ಎಂದು ಘೋಷಿಸಿದೆ. 400 ವರ್ಷಗಳಷ್ಟು ಹಳೆಯದಾದ ದೇವಾಲಯಗಳು, ರೈತರ ಭೂಮಿ ಮತ್ತು ಮನೆಗಳನ್ನು ವಕ್ಫ್ ಆಸ್ತಿ ಎಂದು ಪರಿಗಣಿಸಿದೆ’ ಎಂದು ಟೀಕಿಸಿದರು.

ಕೇಂದ್ರ ಗೃಹ ಸಚಿವನಾಗಿ ಶ್ರೀನಗರದ ಲಾಲ್ ಚೌಕ್‌ಗೆ ಭೇಟಿ ನೀಡಿದ್ದ ಸಂದರ್ಭ ಭಯಭೀತನಾಗಿದ್ದೆ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಸುಶೀಲ್‌ಕುಮಾರ್ ಶಿಂದೆ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅಮಿತ್ ಶಾ, ‘ಶಿಂದೆ ಜೀ, ನಿಮ್ಮ ಮೊಮ್ಮಕ್ಕಳೊಂದಿಗೆ ಈಗ ಕಾಶ್ಮೀರಕ್ಕೆ ಹೋಗಿ, ನಿಮಗೆ ಯಾವುದೇ ಅಪಾಯ ಎದುರಾಗದು. ಸೋನಿಯಾ-ಮನಮೋಹನ್ ಸಿಂಗ್ ಆಡಳಿತದ 10 ವರ್ಷಗಳ ಅವಧಿಯಲ್ಲಿ, ಭಯೋತ್ಪಾದಕರು ಪಾಕಿಸ್ತಾನದಿಂದ ಮುಕ್ತವಾಗಿ ಬಂದು ಇಲ್ಲಿ ಬಾಂಬ್ ಸ್ಫೋಟಿಸುತ್ತಿದ್ದರು’ ಎಂದು ಟೀಕಿಸಿದರು.

ಸಿಐಎಸ್‌ಎಫ್‌ನಿಂದ ಸಂಪೂರ್ಣ ಮಹಿಳಾ ತುಕಡಿ ರಚನೆ

ಪ್ರಜಾವಾಣಿ ವಾರ್ತೆ, ಪಿಟಿಐ

ಮುಖ್ಯಾಂಶಗಳು

- 1025 ಸಿಬ್ಬಂದಿಯುಳ್ಳ ವಿಶೇಷ ಮಹಿಳಾ ಮೀಸಲು ಪಡೆ
- ರೈಲು, ವಿಮಾನ ನಿಲ್ದಾಣ, ಮೆಟ್ರೊ ರೈಲಿಗೆ ಭದ್ರತೆ
- ಗೃಹ ಸಚಿವ ಅಮಿತ್ ಶಾ ಹೇಳಿಕೆ

ನವದೆಹಲಿ: ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಿಂದ (ಸಿಐಎಸ್‌ಎಫ್) ಮಹಿಳಾ ತುಕಡಿಯೊಂದನ್ನು ರಚಿಸಲಾಗುವುದು. ಶೀಘ್ರದಲ್ಲಿ ಈ ತುಕಡಿಯ ಸಿಬ್ಬಂದಿ ಕಮಾಂಡೊಗಳಾಗಿ ರೈಲು, ವಿಮಾನ ನಿಲ್ದಾಣ ಹಾಗೂ ಮೆಟ್ರೊ ರೈಲುಗಳಂತಹ ದೇಶದ ಪ್ರಮುಖ ಮೂಲಸೌಕರ್ಯಗಳನ್ನು ರಕ್ಷಿಸುವ ಮತ್ತು ವಿಐಪಿಗಳಿಗೆ ಭದ್ರತೆ ಒದಗಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಹಿರಿಯ ಕಮಾಂಡೆಂಟ್ ಶ್ರೇಣಿಯ ಅಧಿಕಾರಿಯ ನೇತೃತ್ವದಲ್ಲಿ ಇದೇ ಮೊದಲ ಬಾರಿಗೆ 1025 ಸಿಬ್ಬಂದಿಯನ್ನು ಒಳಗೊಂಡ ವಿಶೇಷ ಮಹಿಳಾ ಮೀಸಲು ಪಡೆ ರಚನೆಯನ್ನು ಮಂಜೂರು ಮಾಡಿ ಗೃಹ ಸಚಿವಾಲಯವು ಸೋಮವಾರ ಆದೇಶ ಹೊರಡಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅಮಿತ್ ಶಾ, ‘ರಾಷ್ಟ್ರ ನಿರ್ಮಾಣದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಬೇಕೆಂಬ ಪ್ರಧಾನಿ ನರೇಂದ್ರ ಮೋದಿಯವರ ಗುರಿಯನ್ನು ತಲುಪುವ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ಸಿಐಎಸ್‌ಎಫ್‌ನಿಂದ ಸಂಪೂರ್ಣ ಮಹಿಳಾ ತುಕಡಿಯ ರಚನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ನಿರ್ಧಾರವು ರಾಷ್ಟ್ರವನ್ನು ರಕ್ಷಿಸುವ ನಿರ್ಣಾಯಕ ಕಾರ್ಯಗಳಲ್ಲಿ ಭಾಗವಹಿಸಬೇಕೆಂಬ ಹೆಚ್ಚಿನ ಮಹಿಳೆಯರ ಆಕಾಂಕ್ಷೆಗಳನ್ನು ಈಡೇರಿಸುತ್ತದೆ. ಅಲ್ಲದೇ ಈ ತುಕಡಿಯನ್ನು ದೊಡ್ಡ ಪಡೆಯನ್ನಾಗಿ ಬೆಳೆಸಲಾಗುವುದು’ ಎಂದಿದ್ದಾರೆ.

ಸಿಐಎಸ್‌ಎಫ್‌ನಲ್ಲಿ ಒಟ್ಟು 1.77 ಲಕ್ಷ ಸಿಬ್ಬಂದಿ ಇದ್ದು, ಇದರಲ್ಲಿ ಶೇ7ರಷ್ಟು ಮಹಿಳೆಯರಿದ್ದಾರೆ. ಹೊಸದಾಗಿ ರಚನೆಯಾಗುತ್ತಿರುವುದು ಸಿಐಎಸ್‌ಎಫ್‌ನ 13ನೇ ತುಕಡಿಯಾಗಿರುತ್ತದೆ. ಇದರ ನೇಮಕಾತಿ, ತರಬೇತಿ ಹಾಗೂ ಅಗತ್ಯ ಸ್ಥಳವನ್ನು ಆಯ್ಕೆ ಮಾಡಲು ಸಿದ್ಧತೆಯನ್ನು ಪ್ರಾರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಳಿ ತಪ್ಪಿದ ಗೂಡ್ಸ್ ರೈಲು 39 ರೈಲುಗಳ ಸಂಚಾರ ರದ್ದು

ಹೈದರಾಬಾದ್ (ಪಿಟಿಐ): ತೆಲಂಗಾಣದ ಪೆದ್ದಪಲ್ಲಿ ಜಿಲ್ಲೆಯಲ್ಲಿ ಸರಕು ಸಾಗಣೆ ರೈಲೊಂದು ಹಳಿ ತಪ್ಪಿದ ಪರಿಣಾಮ, 39 ಪ್ರಯಾಣಿಕ ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ ಎಂದು ದಕ್ಷಿಣ ಕೇಂದ್ರ ರೈಲ್ವೆಯ (ಎಸ್‌ಸಿಆರ್) ಅಧಿಕಾರಿಗಳು ಬುಧವಾರ ತಿಳಿಸಿದರು.

ಕಬ್ಬಿಣದ ಸರಳುಗಳನ್ನು ಸಾಗಿಸುತ್ತಿದ್ದ ಗೂಡ್ಸ್ ರೈಲಿನ 12 ಬೋಗಿಗಳು ರಾಘವಪುರಂ ಮತ್ತು ರಾಮಗುಂಡಂ ನಡುವೆ ಮಂಗಳವಾರ ರಾತ್ರಿ ಹಳಿ ತಪ್ಪಿವೆ. ಇದರಿಂದ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಎಸ್‌ಸಿಆರ್‌ನ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಶ್ರೀಧರ್ ತಿಳಿಸಿದರು.

ರೈಲು ಕರ್ನಾಟಕದ ಬಳ್ಳಾರಿಯಿಂದ ಗಾಜಿಯಾಬಾದ್‌ನತ್ತ ಸಾಗುತ್ತಿತ್ತು. ರೈಲು ಸಾಗುತ್ತಿದ್ದ ಮಾರ್ಗದ ಹಳಿಗಳಿಗೆ ಹಾನಿಯಾದ ಪರಿಣಾಮ ಈ ಘಟನೆ ಸಂಭವಿಸಿದ್ದು, ಹಳಿಗಳ ಮರುಸ್ಥಾಪನೆ ಕಾರ್ಯ ನಡೆಯುತ್ತಿದೆ ಎಂದರು.

ತೆಲಂಗಾಣದ ಪೆದ್ದಪಲ್ಲಿ ಜಿಲ್ಲೆಯಲ್ಲಿ ಗೂಡ್ಸ್ ರೈಲು ಹಳಿ ತಪ್ಪಿದ ನಂತರ ಹಳಿಗಳ ಪುನಃಸ್ಥಾಪನೆ ಕಾರ್ಯ ನಡೆಯಿತು —ಪಿಟಿಐ ಚಿತ್ರ

ಗೂಡ್ಸ್ ರೈಲು ಹಳಿ ತಪ್ಪಿದ ಕಾರಣ 39 ಪ್ರಯಾಣಿಕ ರೈಲುಗಳ ಸಂಚಾರವನ್ನು ರದ್ದು ಮಾಡಲಾಗಿದೆ, 7 ರೈಲುಗಳ ಸೇವೆಯಲ್ಲಿ ವ್ಯತ್ಯಯವಾಗಿದೆ ಮತ್ತು 61 ರೈಲುಗಳ ಸಂಚಾರ ಮಾರ್ಗವನ್ನು ಬದಲಾವಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ತಾಯಿಗೆ ಚಿಕಿತ್ಸೆ ನೀಡುವಲ್ಲಿ ಲೋಪ: ಸಿಟ್ಟಿಗೆದ್ದ ಮಗನಿಂದ ಕೃತ್ಯ

ಆಸ್ಪತ್ರೆಯಲ್ಲೇ ವೈದ್ಯರಿಗೆ ಏಳು ಬಾರಿ ಇರಿತ

ಪ್ರಜಾವಾಣಿ ವಾರ್ತೆ

ಚೆನ್ನೈ: ಕ್ಯಾನ್ಸರ್ ರೋಗಿಯ ಪುತ್ರನೊಬ್ಬ ತನ್ನ ತಾಯಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರಿಗೆ ಮನಸೋಇಚ್ಛೆ ಚಾಕುವಿನಿಂದ ಏಳು ಬಾರಿ ಇರಿದಿರುವ ಕೃತ್ಯ ಬುಧವಾರ ನಡೆದಿದೆ.

ಇಲ್ಲಿನ ಕಲೈಗನರ್ ಶತಮಾನೋತ್ಸವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೃತ್ಯ ನಡೆದಿದೆ. ಗಂಭೀರವಾಗಿ ಗಾಯಗಳಾಗಿರುವ ವೈದ್ಯ ಬಾಲಾಜಿ ಅವರನ್ನು ನಿಗಾ ಘಟಕದಲ್ಲಿ (ಐಸಿಯು) ಇರಿಸಿದ್ದು ಅವರ ಸ್ಥಿತಿ ಸ್ಥಿರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ‘ನನ್ನ ತಾಯಿಗೆ ಚಿಕಿತ್ಸೆ ನೀಡುವಲ್ಲಿ ವೈದ್ಯರು ನಿರ್ಲಕ್ಷ್ಯ ತೋರಿದರು’ ಎಂದು ಸದ್ಯ ಪೊಲೀಸರ ವಶದಲ್ಲಿರುವ ಆರೋಪಿ, 26 ವರ್ಷದ ವಿಘ್ನೇಶ್ವರನ್ ಆರೋಪಿಸಿದ್ದಾನೆ.

ಜನದಟ್ಟಣೆ ಇರುವಾಗಲೇ ಚೆನ್ನೈನಲ್ಲಿ ವೈದ್ಯರಿಗೆ ಇರಿಯಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಇರುವ ಭದ್ರತಾ ವ್ಯವಸ್ಥೆಯನ್ನು ಪ್ರಶ್ನಿಸುವಂತಾಗಿದೆ.

ಚಾಕುವಿನ ಇರಿತಕ್ಕೀಡಾಗಿರುವ ಬಾಲಾಜಿ ಆಸ್ಪತ್ರೆಯ ಅಂಕಾಲಜಿ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದಾರೆ. ‘ವೈದ್ಯರು ಹೃದ್ರೋಗಿ ಆಗಿದ್ದು, ಪೇಸ್‌ಮೇಕರ್ ಅಳವಡಿಸಿಕೊಂಡಿದ್ದರು. ಸದ್ಯ ಅವರ ಸ್ಥಿತಿ ಸ್ಥಿರವಾಗಿದೆ’ ಎಂದು ಆಸ್ಪತ್ರೆಯ ನಿರ್ದೇಶಕ ಎಲ್.ಪಾರ್ಥಸಾರಥಿ ತಿಳಿಸಿದ್ದಾರೆ.

ಚೆನ್ನೈ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಇರಿದಿದ್ದ ಆರೋಪಿಯನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದರು —ಪಿಟಿಐ ಚಿತ್ರ

ವಿಘ್ನೇಷ್ ಮತ್ತು ಆತನ ಗೆಳೆಯರು ಹೊರರೋಗಿಗಳ ಟೋಕನ್ ಪಡೆದು ಬೆಳಿಗ್ಗೆ 10.30ಕ್ಕೆ ಆಸ್ಪತ್ರೆಗೆ ಬಂದಿದ್ದು, ನೇರ ಬಾಲಾಜಿ ಅವರ ಕೊಠಡಿಯತ್ತ ತೆರಳಿದ್ದಾರೆ. ರೋಗಿಯ ಬಂಧು ಎಂದು ಪರಿಚಯವಿದ್ದರಿಂದ ಕೊಠಡಿ ಒಳಗೆ ಪ್ರವೇಶಿಸಲು ಅವಕಾಶ ನೀಡಿದ್ದಾರೆ. ಒಂದು ಹಂತದಲ್ಲಿ ಜೇಬಿನಲ್ಲಿ ಇಟ್ಟುಕೊಂಡಿದ್ದ ಚಾಕು ತೆಗೆದು ವೈದ್ಯರಿಗೆ ಇರಿಯಲು ಆರಂಭಿಸಿದ್ದಾನೆ. ತಲೆಗೆ ನಾಲ್ಕು ಬಾರಿ, ಕತ್ತಿನ ಭಾಗ, ಕುತ್ತಿಗೆ, ತೋಳಿನ ಬಳಿ ತಲಾ ಒಂದು ಬಾರಿ ಇರಿಯಲಾಗಿದೆ. ಒಟ್ಟು ಏಳು ಬಾರಿ ಇರಿಯಲಾಗಿದೆ.

ತರಾಟೆ: ಘಟನೆ ಹಿಂದೆಯೇ ವಿರೋಧ ಪಕ್ಷಗಳು ರಾಜ್ಯದ ಆರೋಗ್ಯ ಸಚಿವ ಮಾ ಸುಬ್ರಹ್ಮಣಿಯನ್ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿವೆ.

ಇನ್ನೊಂದೆಡೆ, ಕೃತ್ಯವನ್ನು ಖಂಡಿಸಿ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ದಿಢೀರ್ ಪ್ರತಿಭಟನೆ ನಡೆಸಿದ್ದು, ತಪ್ಪಿತಸ್ಥನ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಪಡಿಸಿದ್ದಾರೆ. ತಮಿಳುನಾಡು ಸರ್ಕಾರಿ ವೈದ್ಯರ ಸಂಘವು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿತ್ತು. ಆದರೆ, ಸರ್ಕಾರದ ಜೊತೆಗೆ ನಡೆದ ಮಾತುಕತೆ ಫಲಪ್ರದವಾದ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಟ್ಟಿತು

ಆಸ್ಪತ್ರೆಯ ಆಯಕಟ್ಟಿನ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲು ಹಾಗೂ ಪ್ರವೇಶ ದ್ವಾರದಲ್ಲಿ ಥರ್ಮಲ್ ಪರಿಶೀಲನಾ ಘಟಕ ಅಳವಡಿಸಲು ಸೂಚಿಸಿ ಸರ್ಕಾರ ಮಧ್ಯಾಹ್ನದ ವೇಳೆಗೆ ಆದೇಶ ಹೊರಡಿಸಿದೆ. ಆರೋಪಿ ವಿಘ್ನೇಶ್ ವಿರುದ್ಧ ಭಾರತೀಯ ನ್ಯಾಯಸಂಹಿತೆಯ ವಿವಿಧ ಪ್ರಕರಣಗಳಡಿ ಮೊಕದ್ದಮೆ ದಾಖಲಿಸಲಾಗಿದೆ.

ಖಾಸಗಿ ಆಸ್ಪತ್ರೆಯವರು, ನಿಮ್ಮ ತಾಯಿಗೆ ತಪ್ಪಾಗಿ ಚಿಕಿತ್ಸೆ ನೀಡಿರುವುದೇ ಅವರಿಗೆ ಉಸಿರಾಟದ ಸಮಸ್ಯೆ ಬಾಧಿಸಲು ಕಾರಣವಾಗಿದೆ ಎಂದು ಹೇಳಿರುವುದು ಕೃತ್ಯಕ್ಕೆ ಕಾರಣ ಎನ್ನಲಾಗಿದೆ.

ಕೃತ್ಯದ ನಂತರ ಚಾಕುವನ್ನು ಕಿಟಕಿಯಿಂದ ಹೊರಗೆ ಎಸೆದು ಕಾರಿಡಾರ್‌ನಲ್ಲಿ ವಿಘ್ನೇಶ್ ಸಹಜವಾಗಿ ನಡೆದುಹೋಗುತ್ತಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,883
ಇಂದಿನ ಅಂತ್ಯ	23,559
▼	324
ದಿನದ ಕನಿಷ್ಠ	23,509

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹425-588
ದ್ವಿತಳಿ (ಬಿ.ವಿ) ₹402-739

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹179
ಆರ್‌ಎಸ್‌ಎಸ್-5 ₹173
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹169

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1560 (1570)
ಸೋಯಾ (ರಿಫೈನ್ಡ್)	₹1350 (1380)
ಸೂರ್ಯಕಾಂತಿ (ರಿಫೈನ್ಡ್)	₹1400 (1420)
ಪಾಮೋಲಿನ್	₹1370 (1400)

8 ಕೋಟಿಗೂ ಹೆಚ್ಚು ಐಟಿಆರ್ ಸಲ್ಲಿಕೆ

ನವದೆಹಲಿ (ಪಿಟಿಐ): 2024–25ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ 8 ಕೋಟಿಗೂ ಹೆಚ್ಚು ರಿಟರ್ನ್ಸ್ ಸಲ್ಲಿಕೆಯಾಗಿವೆ. ಈ ಪೈಕಿ 5.92 ಕೋಟಿ (ಶೇ 74ರಷ್ಟು) ತೆರಿಗೆದಾರರು ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಈ ವರ್ಷದಲ್ಲಿ 75 ಲಕ್ಷ ಪರಿಷ್ಕೃತ ಐಟಿಆರ್‌ಗಳು ಸಲ್ಲಿಕೆಯಾಗಿದ್ದು, ಹೆಚ್ಚುವರಿಯಾಗಿ ₹8 ಸಾವಿರ ಕೋಟಿ ತೆರಿಗೆ ಸಂಗ್ರಹವಾಗಿದೆ ಎಂದು ಹೇಳಿದೆ.

ಐದು ಪಟ್ಟು ಏರಿಕೆ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ 10 ವರ್ಷಗಳಲ್ಲಿ ವೈಯಕ್ತಿಕವಾಗಿ ₹50 ಲಕ್ಷಕ್ಕೂ ಹೆಚ್ಚು ಆದಾಯ ಹೊಂದಿದವರು ಐಟಿಆರ್ ಸಲ್ಲಿಸುವ ಪ್ರಮಾಣದಲ್ಲಿ ಐದು ಪಟ್ಟು ಹೆಚ್ಚಳವಾಗಿದೆ ಎಂದು ಮೂಲಗಳು ತಿಳಿಸಿವೆ.

2013–14ರಲ್ಲಿ ಇಷ್ಟು ಮೊತ್ತದ ಆದಾಯ ಹೊಂದಿದ 1.85 ಲಕ್ಷ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಿದ್ದರು. 2023–24ರಲ್ಲಿ ಈ ತೆರಿಗೆದಾರರ ಸಂಖ್ಯೆ 9.39 ಲಕ್ಷಕ್ಕೆ ಮುಟ್ಟಿದೆ.

ದಿಕ್ಕು ತಪ್ಪಿಸುವ ಜಾಹೀರಾತು ಪ್ರಕಟಿಸದಂತೆ ಕೇಂದ್ರ ಸರ್ಕಾರ ಸೂಚನೆ

ಕೋಚಿಂಗ್ ಕೇಂದ್ರಕ್ಕೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳನ್ನು ದಿಕ್ಕು ತಪ್ಪಿಸುವಂತಹ ಜಾಹೀರಾತು ಪ್ರಕಟಿಸದಂತೆ ಕೋಚಿಂಗ್ ಕೇಂದ್ರಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಕೇಂದ್ರ ಸರ್ಕಾರವು, ಬುಧವಾರ ಹೊಸ ಮಾರ್ಗಸೂಚಿ ಪ್ರಕಟಿಸಿದೆ.

‘ನಮ್ಮ ಕೋಚಿಂಗ್ ಕೇಂದ್ರದಲ್ಲಿ ತರಬೇತಿ ಪಡೆದರೆ ಉದ್ಯೋಗಕ್ಕೆ ಆಯ್ಕೆಯಾಗುವುದು ಶೇ 100ರಷ್ಟು ಖಚಿತ ಅಥವಾ ಉದ್ಯೋಗ ಲಭಿಸುವುದು ಗ್ಯಾರಂಟಿ’ ಎಂಬ ಜಾಹೀರಾತು ಪ್ರಕಟಿಸದಂತೆ ನಿರ್ಬಂಧ ಹೇರಲಾಗಿದೆ.

ಕೇಂದ್ರಗಳಿಂದ ಪರೀಕ್ಷಾರ್ಥಿಗಳನ್ನು ದಾರಿ ತಪ್ಪಿಸುವಂತಹ ಜಾಹೀರಾತುಗಳು ಪ್ರಕಟವಾಗುತ್ತಿರುವ ಬಗ್ಗೆ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರಕ್ಕೆ (ಸಿಸಿಪಿಎ) ಹಲವು ದೂರು ಸಲ್ಲಿಕೆಯಾಗಿದ್ದವು. ಈ ಸಂಬಂಧ ಕೇಂದ್ರಗಳಿಗೆ 54 ನೋಟಿಸ್ ನೀಡಿರುವ ಪ್ರಾಧಿಕಾರವು, ಇಲ್ಲಿಯವರೆಗೆ ₹54.60 ಲಕ್ಷ ದಂಡ ವಿಧಿಸಿದೆ.

ಯಾವುದಕ್ಕೆ ನಿರ್ಬಂಧ?

‘ಕೋಚಿಂಗ್ ಸೆಕ್ಟರ್‌ನಲ್ಲಿ ದಾರಿ ತಪ್ಪಿಸುವ ಜಾಹೀರಾತು ತಡೆಗಟ್ಟುವಿಕೆ’ ಎಂಬ ಶೀರ್ಷಿಕೆಯಡಿ ಈ ಮಾರ್ಗಸೂಚಿ ಪ್ರಕಟಿಸಲಾಗಿದೆ.

ಕೋರ್ಸ್‌ಗಳು ಮತ್ತು ತರಬೇತಿ ಅವಧಿ, ತರಬೇತಿ ಸಿಬ್ಬಂದಿಯ ಪರಿಚಯ, ಶುಲ್ಕ ಮತ್ತು ಮರುಪಾವತಿ, ಆಯ್ಕೆಯ ಮಾನದಂಡ ಮತ್ತು ಪರೀಕ್ಷಾ ರ‍್ಯಾಂಕ್‌ಗಳ ಬಗ್ಗೆ ಜಾಹೀರಾತಿನ ಮೂಲಕ ಸುಳ್ಳು ಮಾಹಿತಿಯನ್ನು ಪ್ರಚಾರಪಡಿಸುವಂತಿಲ್ಲ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

‘ಕೋಚಿಂಗ್’ ಎಂದರೆ ಶೈಕ್ಷಣಿಕ ಬೆಂಬಲ, ಶಿಕ್ಷಣ, ಮಾರ್ಗದರ್ಶನ, ಅಧ್ಯಯನ ಕಾರ್ಯಕ್ರಮ ಮತ್ತು ಬೋಧನೆ ಎಂದು ವ್ಯಾಖ್ಯಾನಿಸಲಾಗಿದೆ. ಕೌನ್ಸೆಲಿಂಗ್, ಕ್ರೀಡೆಗಳು ಮತ್ತು ಸೃಜನಶೀಲ ಚಟುವಟಿಕೆಗಳು ಇದರ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾದವರ ಹೆಸರು, ಭಾವಚಿತ್ರ ಅಥವಾ ಪ್ರಶಂಸಾ ಪತ್ರಗಳನ್ನು ಅವರ ಲಿಖಿತ ಅನುಮತಿ ಇಲ್ಲದೆ ಕೋಚಿಂಗ್ ಕೇಂದ್ರಗಳು ಬಳಸುವಂತಿಲ್ಲ. ತರಬೇತಿ ನೀಡುವ ಕೋರ್ಸ್‌ಗಳ ಬಗ್ಗೆ ಪ್ರಮುಖ ಮಾಹಿತಿಯನ್ನು ಪ್ರಕಟಿಸಬೇಕಿದೆ ಎಂದು ಸೂಚಿಸಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ, ‘ವಿದ್ಯಾರ್ಥಿಗಳಿಗೆ ನೈಜ ಮಾಹಿತಿ ನೀಡದೆ ಈ ಕೇಂದ್ರಗಳು ಸತ್ಯ ಮರೆಮಾಚುವುದನ್ನು ನೋಡುತ್ತಿದ್ದೇವೆ. ಹಾಗಾಗಿ, ಈ ಮಾರ್ಗಸೂಚಿ ಪ್ರಕಟಿಸಲಾಗಿದೆ’ ಎಂದರು.

‘ಸರ್ಕಾರವು ಯಾವುದೇ ಕೋಚಿಂಗ್ ಕೇಂದ್ರದ ವಿರುದ್ಧವಿಲ್ಲ. ಆದರೆ, ಕೋಚಿಂಗ್ ಹೆಸರಿನಲ್ಲಿ ಪ್ರಕಟಿಸುವ ಯಾವುದೇ ಜಾಹೀರಾತುಗಳು ಗ್ರಾಹಕರ ಹಕ್ಕುಗಳಿಗೆ ಧಕ್ಕೆ ತರಬಾರದು’ ಎಂದು ಹೇಳಿದರು.

‘ಯುಪಿಎಸ್‌ಇ ಪರೀಕ್ಷೆ ಬರೆಯುವ ಬಹಳಷ್ಟು ವಿದ್ಯಾರ್ಥಿಗಳು ಸ್ವಸಾಮರ್ಥ್ಯದ ಮೇಲೆ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೆ. ಆದರೆ, ಕೋಚಿಂಗ್ ಕೇಂದ್ರಗಳಲ್ಲಿ ಸಂದರ್ಶನ ಎದುರಿಸುವ ಬಗ್ಗೆಯಷ್ಟೇ ಮಾರ್ಗದರ್ಶನ ಪಡೆದಿರುತ್ತಾರೆ. ಹಾಗಾಗಿ, ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳು ಕೇಂದ್ರದಲ್ಲಿ ಯಾವ ಕೋರ್ಸ್‌ಗಳಿಗೆ ದಾಖಲಾಗಿದ್ದರು ಅಥವಾ ಯಾವ ತರಬೇತಿ ಪಡೆದಿದ್ದರು ಎಂಬ ಬಗ್ಗೆ ಕೇಂದ್ರಗಳಿಗೆ ಪ್ರವೇಶಾತಿ ಪಡೆಯಲು ಬರುವ ವಿದ್ಯಾರ್ಥಿಗಳಿಗೆ ತಿಳಿಸಬೇಕಿದೆ ಎಂದರು.

ನಿಯಮಾವಳಿ ಉಲ್ಲಂಘಿಸಿದರೆ ಗ್ರಾಹಕರ ರಕ್ಷಣಾ ಕಾಯ್ದೆಯಡಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು.

ಸೆನ್ಸೆಕ್ಸ್, ನಿಫ್ಟಿ ಕುಸಿತ ಮುಂದುವರಿಕೆ

ಮುಂಬೈ (ಪಿಟಿಐ): ಚಿಲ್ಲರೆ ಹಣದುಬ್ಬರದ ಏರಿಕೆಯಿಂದಾಗಿ ಬುಧವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಶೇ 1ರಷ್ಟು ಕುಸಿತ ಕಂಡಿವೆ. ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳವೂ ಇದಕ್ಕೆ ನೆರವಾಯಿತು.

ಎರಡು ದಿನದಲ್ಲಿ ಹೂಡಿಕೆದಾರರ ಸಂಪತ್ತು ₹13 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 984 ಅಂಶ ಇಳಿಕೆ ಕಂಡು, 77,690 ಅಂಶಗಳಲ್ಲಿ ಮುಕ್ತಾಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,141 ಅಂಶ ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 324 ಅಂಶ ಇಳಿಕೆ ಕಂಡು 23,559 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್, ಅದಾನಿ ಪೋರ್ಟ್ಸ್, ಜೆಎಸ್‌ಡಬ್ಲ್ಯು ಸ್ಟೀಲ್, ಇಂಡಸ್ ಇಂಡ್ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯ ಇಳಿಕೆಯಾಗಿದೆ.

ಸುದ್ದಿ 2 ನಿಮಿಷ

ಮಹತ್ವದ ಬ್ಯಾಂಕ್‌ಗಳ ಪಟ್ಟಿ ಪ್ರಕಟ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ಬುಧವಾರ ಪ್ರಕಟಿಸಿರುವ ದೇಶೀಯವಾಗಿ ವ್ಯವಸ್ಥಿತ ಹಾಗೂ ಮಹತ್ವದ ಬ್ಯಾಂಕ್‌ಗಳ (ಡಿ–ಎಸ್‌ಐಬಿ) ಪಟ್ಟಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಮತ್ತೆ ಸ್ಥಾನ ಪಡೆದಿವೆ.

ಬ್ಯಾಂಕ್‌ಗಳು ಬಂಡವಾಳ ಸೃಷ್ಟಿಯಲ್ಲಿ ಹೊಂದಿರುವ ಸಾಮಾನ್ಯ ಈಕ್ವಿಟಿ ಶ್ರೇಣಿ 1 (ಸಿಇಟಿ1) ಅನುಪಾತ ಆಧಾರದ ಮೇಲೆ ಈ ಪಟ್ಟಿ ಸಿದ್ಧಪಡಿಸಲಾಗಿದೆ. ಈ ಶ್ರೇಣಿಯು ಆರ್ಥಿಕ ಬಿಕ್ಕಟ್ಟನ್ನು ಎದುರಿಸಲು ಬ್ಯಾಂಕ್ ಹೊಂದಿರುವ ಬಂಡವಾಳ ಸಾಮರ್ಥ್ಯದ ಸೂಚಕವಾಗಿದೆ.

ಬ್ಯಾಂಕ್‌ಗಳಿಂದ ಮಾರ್ಚ್‌ನಲ್ಲಿ ಸಂಗ್ರಹಿಸಿದ ದತ್ತಾಂಶ ಆಧಾರದ ಮೇಲೆ ಈ ಪಟ್ಟಿ ಸಿದ್ಧಪಡಿಸಲಾಗಿದೆ.

2014ರಲ್ಲಿ ಮೊದಲ ಬಾರಿಗೆ ಆರ್‌ಬಿಐ ಈ ಚೌಕಟ್ಟನ್ನು ರೂಪಿಸಿತು. 2015 ಮತ್ತು 2016ರಲ್ಲಿ ಎಸ್‌ಬಿಐ ಹಾಗೂ ಐಸಿಐಸಿಐ ಬ್ಯಾಂಕ್ ಈ ಪಟ್ಟಿಯಲ್ಲಿ ಸ್ಥಾನ ಪಡೆದವು. 2017ರಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ಈ ಪಟ್ಟಿಗೆ ಸೇರ್ಪಡೆಗೊಂಡಿತು.

ಸ್ವಿಗ್ಗಿ: ಒಂದೇ ದಿನದಲ್ಲಿ 500 ಉದ್ಯೋಗಿಗಳು ಕೋಟ್ಯಧೀಶರು

ನವದೆಹಲಿ (ಪಿಟಿಐ): ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ಸ್ವಿಗ್ಗಿ ಕಂಪನಿಯು ₹11,327 ಕೋಟಿ ಬಂಡವಾಳ ಸಂಗ್ರಹಿಸಿದ ಬೆನ್ನಲ್ಲೇ, ಅದರ 500 ಉದ್ಯೋಗಿಗಳಿಗೆ ಕೋಟ್ಯಧಿಪತಿಗಳಾಗುವ ಭಾಗ್ಯ ಒಲಿದಿದೆ.

ಕಂಪನಿಯಲ್ಲಿ ಒಟ್ಟು 5 ಸಾವಿರ ಉದ್ಯೋಗಿಗಳು ಇದ್ದಾರೆ. ಉದ್ಯೋಗಿಗಳ ಷೇರು ಮಾಲೀಕತ್ವ ಯೋಜನೆಗಳ (ಇಎಸ್‌ಒಪಿ) ಮೂಲಕ ಎಲ್ಲಾ ಉದ್ಯೋಗಿಗಳಿಗೆ ₹9,000 ಕೋಟಿ ಮೌಲ್ಯದ ಷೇರುಗಳನ್ನು ಹಂಚಿಕೆ ಮಾಡಲಾಗಿದೆ. ಈ ಪೈಕಿ ಕಂಪನಿಯಲ್ಲಿ ನಿಷ್ಠೆಯಿಂದ ದುಡಿದ ಶೇ 10ರಷ್ಟು ಹಾಲಿ ಹಾಗೂ ಮಾಜಿ ನೌಕರರು ಒಂದೇ ದಿನದಲ್ಲಿ ಕೋಟ್ಯಧಿಪತಿಗಳಾಗಿದ್ದಾರೆ.

ಬುಧವಾರ ಕಂಪನಿಯು ಅಧಿಕೃತವಾಗಿ ಷೇರು ಮಾರುಕಟ್ಟೆ ಪ್ರವೇಶಿಸಿದೆ. ಐಪಿಒ ಮೂಲಕ ಷೇರು ಹಂಚಿಕೆ ದರವನ್ನು ₹371ರಿಂದ ₹390ಕ್ಕೆ ನಿಗದಿಪಡಿಸಲಾಗಿತ್ತು.

ಬಿಎಸ್‌ಇಯಲ್ಲಿ ಪ್ರತಿ ಷೇರು ಶೇ 5.64ರಷ್ಟು ಪ್ರೀಮಿಯಂ ದರದಲ್ಲಿ ₹412ಕ್ಕೆ ನಿಗದಿಯಾಗಿತ್ತು. ವಹಿವಾಟಿನ ಅಂತ್ಯಕ್ಕೆ ಶೇ 16.91ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹455.95 ಆಗಿದೆ.

ಎನ್‌ಎಸ್‌ಇಯಲ್ಲಿ ಪ್ರತಿ ಷೇರು ಶೇ 7.69ರಷ್ಟು ಪ್ರೀಮಿಯಂ ದರದಲ್ಲಿ ₹420ಕ್ಕೆ ನಿಗದಿಯಾಗಿತ್ತು. ವಹಿವಾಟಿನ ಅಂತ್ಯಕ್ಕೆ ಶೇ 16.92ರಷ್ಟು ಏರಿಕೆಯಾಗಿದ್ದು, ₹456 ಆಗಿದೆ. ಕಂಪನಿಯ ಮಾರುಕಟ್ಟೆ ಮೌಲ್ಯ ₹1.02 ಲಕ್ಷ ಕೋಟಿಗೆ ತಲುಪಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	42000-50000
ಕಾರ್ಕಳ	
ಹಳತು	30000-42000
ಕುಮಟ	
ಬೆಟ್ಟೆ	31699-40009
ಚಿಪ್ಪು	21311-24609
ಕೋಕ	16299-24599
ಹಳೆಚಾಲಿ	38799-38799
ಹೊಸಚಾಲಿ	32499-33899
ಪುತ್ತೂರು	
ಹೊಸತು	28000-33000
ಹಳತು	32000-50000
ಶಿವಮೊಗ್ಗ	
ಬೆಟ್ಟೆ	51029-57209
ಗೊರಬಲು	17009-32299
ಹೊಸತು	45109-49901
ರಾಶಿ	36199-50391
ಸರಕು	52100-75696
ಸಿದ್ದಾಪುರ	
ಬಿಳಿಗೋಟು	24109-27399
ಚಾಲಿ	30509-35359
ಕೋಕ	21699-26909
ಕೆಂಪುಗೋಟು	18699-20699
ರಾಶಿ	41699-46499
ತಟ್ಟಿಬೆಟ್ಟೆ	26219-30000
ಶಿರಸಿ	
ಬೆಟ್ಟೆ	29499-39909
ಬಿಳಿಗೋಟು	21019-30609
ಚಾಲಿ	32518-36001
ಕೆಂಪುಗೋಟು	18899-24099
ರಾಶಿ	41709-45109

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

11ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ. ಸಿ. ನಂಜೇಗೌಡ
ಇಂತಿ: ಕೆ. ಎಚ್. ಲಕ್ಷ್ಮಮ್ಮ, ಎನ್. ಎಸ್. ಕುಮಾರ್, ರಾಧಾ, ಕೆ. ಎನ್. ರಘುನಾಥ ಕುಟುಂಬ

ಸಂಕ್ಷಿಪ್ತ ಸುದ್ದಿ

ಐಒಸಿ ನೂತನ ಅಧ್ಯಕ್ಷರಾಗಿ ಅರವಿಂದರ್ ಸಾಹ್ನಿ

ನವದೆಹಲಿ (ಪಿಟಿಐ): ಭಾರತೀಯ ತೈಲ ನಿಗಮದ (ಐಒಸಿ) ನೂತನ ಅಧ್ಯಕ್ಷರಾಗಿ ಅರವಿಂದರ್ ಸಿಂಗ್ ಸಾಹ್ನಿ ಅವರು ಆಯ್ಕೆಯಾಗಿದ್ದಾರೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಬುಧವಾರ ತಿಳಿಸಿದೆ.

ಅವರ ಅಧಿಕಾರಾವಧಿಯು 5 ವರ್ಷ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ ಎಂದು ತಿಳಿಸಿದೆ. ಆಗಸ್ಟ್‌ನಲ್ಲಿ ಐಒಸಿಯ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ (ಬ್ಯುಸಿನೆಸ್ ಡೆವಲಪ್‌ಮೆಂಟ್– ಪೆಟ್ರೋಕೆಮಿಕಲ್ಸ್) ಅವರು ನೇಮಕವಾಗಿದ್ದರು.

1993ರಲ್ಲಿ ಐಒಸಿಗೆ ಸೇರಿದ ಸಾಹ್ನಿ ಅವರು ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಕಾನ್ಪುರದ ಹರ್‌ಕೋರ್ಟ್ ಬಟ್ಲರ್ ತಾಂತ್ರಿಕ ವಿಶ್ವವಿದ್ಯಾಲಯದಿಂದ ಕೆಮಿಕಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹1,200 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಇಳಿಕೆಯಾಗಿದ್ದರೆ, ಬೆಳ್ಳಿ ಧಾರಣೆಯು ಏರಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹1,200 ಏರಿಕೆಯಾಗಿ, ₹92,500ಕ್ಕೆ ತಲುಪಿದೆ.

ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) 10 ಗ್ರಾಂಗೆ ₹50 ಇಳಿಕೆಯಾಗಿ, ₹77,750 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆ ಸಹ ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿದ್ದು, ₹77,350 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಟಾವು ಆರಂಭ: ಈರುಳ್ಳಿ ಬೆಲೆ ಇಳಿಕೆ ನಿರೀಕ್ಷೆ– ಕೇಂದ್ರ

ನವದೆಹಲಿ (ಪಿಟಿಐ): ಮುಂಗಾರು ಅವಧಿಯಲ್ಲಿ ಬಿತ್ತನೆಯಾಗಿದ್ದ ಈರುಳ್ಳಿಯ ಕಟಾವು ಆರಂಭವಾಗಿದೆ. ಈ ಹೊಸ ಸರಕು ಮಾರುಕಟ್ಟೆಗೆ ಪ್ರವೇಶಿಸಿದ ಬಳಿಕ ಚಿಲ್ಲರೆ ದರದಲ್ಲಿ ಮತ್ತಷ್ಟು ಇಳಿಕೆಯಾಗಲಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಬುಧವಾರ ತಿಳಿಸಿದೆ.

ಪ್ರಸ್ತುತ ದೇಶದಲ್ಲಿ ಈರುಳ್ಳಿಯ ಸರಾಸರಿ ಬೆಲೆಯು ಕೆ.ಜಿಗೆ ₹54 ಇದೆ. ಕಳೆದ ಒಂದು ತಿಂಗಳ ಹಿಂದೆ ಕೇಂದ್ರ ಸರ್ಕಾರವು ರಿಯಾಯಿತಿ ದರದಡಿ ಈರುಳ್ಳಿ ಮಾರಾಟಕ್ಕೆ ಚಾಲನೆ ನೀಡಿತ್ತು. ಹಾಗಾಗಿ, ಮಾರುಕಟ್ಟೆಯಲ್ಲಿ ಧಾರಣೆ ಇಳಿಕೆಯಾಗಿದೆ ಎಂದು ಹೇಳಿದೆ.

ದೆಹಲಿ ಮಾರುಕಟ್ಟೆಯಲ್ಲಿ ಕೆ.ಜಿಗೆ ₹35 ರಿಯಾಯಿತಿ ದರದಡಿ ಮಾರಾಟ ಮಾಡಲಾಗುತ್ತಿದೆ ಎಂದು ತಿಳಿಸಿದೆ.

ಸರ್ಕಾರವು ಒಟ್ಟು 4.5 ಲಕ್ಷ ಟನ್ ಈರುಳ್ಳಿ ಕಾಪು ದಾಸ್ತಾನು ಮಾಡಿದೆ. ಈ ಪೈಕಿ 1.5 ಲಕ್ಷ ಟನ್‌ನಷ್ಟು ಈರುಳ್ಳಿಯನ್ನು ರಿಯಾಯಿತಿ ದರದಲ್ಲಿ ಮಾರಾಟಕ್ಕೆ ವಿವಿಧ ರಾಜ್ಯಗಳಿಗೆ ಹಂಚಿಕೆ ಮಾಡಿದೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ದರ ನಿಯಂತ್ರಿಸುವ ಉದ್ದೇಶದಿಂದ ಮೊದಲ ಬಾರಿಗೆ ರೈಲಿನ ಮೂಲಕ ಈರುಳ್ಳಿಯನ್ನು ದೆಹಲಿಗೆ ಸಾಗಣೆ ಮಾಡಲಾಗಿದೆ. ಬೆಲೆ ನಿಯಂತ್ರಣಕ್ಕೆ ಬರುವವರೆಗೂ ದಾಸ್ತಾನು ಇಟ್ಟಿರುವ ಈರುಳ್ಳಿಯನ್ನು ಇದೇ ಮಾದರಿಯಲ್ಲಿ ವಿವಿಧ ಮಾರುಕಟ್ಟೆಗಳಿಗೆ ಸಾಗಣೆ ಮಾಡಲಾಗುವುದು ಎಂದು ಸಚಿವಾಲಯ ತಿಳಿಸಿದೆ.

ಕೆಲವು ವಾರದ ಹಿಂದೆ ದೆಹಲಿ, ಚೆನ್ನೈ ಮತ್ತು ಗುವಾಹಟಿಗೆ ರೈಲಿನ ಮೂಲಕ 4,850 ಟನ್ ಈರುಳ್ಳಿ ರವಾನೆಯಾಗಿದೆ. ಈ ಪೈಕಿ 3,170 ಟನ್‌ನಷ್ಟು ಈರುಳ್ಳಿ ದೆಹಲಿಗೆ ಪೂರೈಕೆಯಾಗಿದೆ. ಗುರುವಾರ 730 ಟನ್‌ನಷ್ಟು ಸರಕು ದೆಹಲಿ ತಲುಪಲಿದೆ ಎಂದು ವಿವರಿಸಿದೆ.

ಹಬ್ಬದ ಋತುವಿನಿಂದಾಗಿ ಮಂಡಿಗಳು ಕಾರ್ಯ ನಿರ್ವಹಿಸಲಿಲ್ಲ. ಇದರಿಂದ ಕಾರ್ಮಿಕರಿಗೆ ರಜೆ ಇತ್ತು. ಹಾಗಾಗಿ, ಕಳೆದ ಎರಡು ದಿನದಿಂದ ತುಸು ಏರಿಕೆ ಕಂಡಿದ್ದ ಈರುಳ್ಳಿ ಬೆಲೆಯು ಸದ್ಯ ನಿಯಂತ್ರಣದಲ್ಲಿದೆ ಎಂದು ಹೇಳಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಭೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕು ಹೆಚ್ಚು ಸಂಪಾದಿಸಿ ತರಭೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

Wanted

ಲೇಡೀಸ್ ಮತ್ತು ಜೆಂಟ್ಸ್ ಬ್ಯೂಟಿ ಪಾರ್ಲರ್ ನಲ್ಲಿ, ಬ್ಯೂಟಿಷಿಯನಗಳಿಗೆ ಮತ್ತು ಹೆಲ್ಪರಗಳಿಗೆ ಕೆಲಸ ಖಾಲಿಇದೆ. ತಿಂಗಳಿಗೆ ಸಂಬಳ 20 ರಿಂದ 25 ಸಾವಿರದವರೆಗೆ. ಶೇಷಾದ್ರಿಪುರ- 9019626612

ಪ್ರವಾಸ

Travel

04.12.2024 ರಿಂದ ಅಷ್ಟ ಜ್ಯೋತಿರ್ಲಿಂಗಗಳ ಪ್ರವಾಸ. 20.12.2024 ರಿಂದ ಕಾಶಿ,ಗಯಾ, ಅಯೋಧ್ಯ ಚಿತ್ರಕೂಟ ಬೈದ್ಯನಾಥ ನೈಮಿಷಾರಣ್ಯ 18.01.2025 ಆಗ್ರಾ ಮಥುರಾ ಜೈಪುರ್ ಪುಷ್ಕರ್ ಜೈಸೆಲ್ ಮೇರ್ ಬಿಕಾನೇರ್ ಕಾರಣಿಮಾತ ಜೋದ್-ಪುರ್ ನಾಥದ್ವಾರ್ ಉದಯಪುರ್ ಮೌಂಟ್ ಅಬು 12ದಿನಗಳ ಪ್ರವಾಸ. ಜನವರಿ ತಿಂಗಳಲ್ಲಿ ನೇಪಾಳ ಮುಕ್ತಿನಾಥ ಪ್ರವಾಸ 17ದಿನಗಳು. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು-70. 9342287551, 8050629305

04.01.2025 12.03.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 13.01.2025 ದುಬೈ,ಅಬುದಾಬಿ 5 ದಿನಗಳು. 23.11.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 6 ದಿನಗಳು. 30.11.2024 ಅಸ್ಸಾಂ,ಮೇಘಾಲಯ 9 ದಿನಗಳು. 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಕಿ ಜನಾಂಗದ 12ನೇ ತಲೆಮಾರಿನ 50ವರ್ಷ ಅನುಭವದ 35,000ಕ್ಕೂ ಹೆಚ್ಚು ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಶ್ರೀ.ದೇವಾನಂದ್.ನಿಮ್ಮೆಲ್ಲಾ ಕಷ್ಟಗಳಿಗೆ ಎಲ್ಲಿಲ್ಲದ_ಮುಕ್ತಿ, ಕಾಮಾಕ್ಯ_ಮೋಡಿವಶೀಕರಣ ಯಂತ್ರಕ್ಕೆ ರೂ.2300.ಪ್ರಾಚೀನ ಆಯುರ್ವೇದ ತೂಕ ಇಳಿಕೆ,ಹಸಿವು,ಲೈಂಗಿಕತೆ. 9353143216

★ವಶೀಕರಣ ಸ್ಪೆಷಲಿಸ್ಟ್★ ನಿಮ್ಮ ಯಾವುದೇ ಸಮಸ್ಯೆಯಿರಲಿ ಫೋನಿನ ಮೂಲಕ 2 ಗಂಟೆಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್. ರಾಘವೇಂದ್ರ ಗುರೂಜಿ. 6363533560

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ವಾಯುಮಾಲಿನ್ಯ ತಗ್ಗಿಸಲು ಸಹಭಾಗಿತ್ವಕ್ಕೆ ಭಾರತ ಕರೆ

ಬಾಕು (ಪಿಟಿಐ): ಮಾಲಿನ್ಯವು ಗಡಿಗಳನ್ನು ಮೀರಿದ ಸಮಸ್ಯೆ ಎಂದು ಹೇಳಿರುವ ಭಾರತವು, ವಾಯು ಮಾಲಿನ್ಯವನ್ನು ತಗ್ಗಿಸಲು ಸಹಭಾಗಿತ್ವದಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿವಿಧ ದೇಶಗಳನ್ನು, ಅದರಲ್ಲೂ ಮುಖ್ಯವಾಗಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶವನ್ನು ಒತ್ತಾಯಿಸಿದೆ.

ಉತ್ತರ ಭಾರತದಲ್ಲಿ ವಾಯುಮಾಲಿನ್ಯವು ಹೆಚ್ಚುತ್ತಿರುವ ಸಂದರ್ಭದಲ್ಲಿ ಈ ಒತ್ತಾಯ ಬಂದಿದೆ. ಅದರಲ್ಲೂ, ದೇಶದ ರಾಜಧಾನಿ ದೆಹಲಿಯಲ್ಲಿ ಗಾಳಿಯ ಗುಣಮಟ್ಟವು ಬಹಳ ಕುಸಿದಿದೆ.

ಅಜರ್‌ಬೈಜಾನ್ ದೇಶದ ರಾಜಧಾನಿ ಬಾಕುವಿನಲ್ಲಿ ಹವಾಮಾನ ಬದಲಾವಣೆ ತಡೆ ವಾರ್ಷಿಕ ಸಭೆ ನಡೆಯುತ್ತಿದೆ. ಭಾರತದ ಪರಿಸರ ಮತ್ತು ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯದ ಜಂಟಿ ಕಾರ್ಯದರ್ಶಿ ನರೇಶ್ ಪಾಲ್ ಗಂಗ್ವಾರ್ ಅವರು ಭಾಗಿಯಾಗಿದ್ದಾರೆ.

> **ಭೂಗ್ರಹದ ಉಷ್ಣಾಂಶ ಹೆಚ್ಚಾಗಲು ಕಾರಣವಾಗುತ್ತಿರುವ ದೇಶಗಳೇ ಹವಾಮಾನ ವೈಪರೀತ್ಯದ ಹೊಣೆ ಹೊತ್ತು, ಸಮಸ್ಯೆ ಬಗೆಹರಿಸಲು ಹಣದ ನೆರವು ನೀಡಬೇಕು**
> **ಮುಹಮ್ಮದ್ ಯೂನಿಸ್,** ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ಮುಖ್ಯಸ್ಥ

ಲಾಹೋರ್‌ನಲ್ಲಿ ಗಾಳಿಯ ಗುಣಮಟ್ಟ ಕಡಿಮೆ ಆಗುವುದಕ್ಕೆ ಭಾರತದ ಕಡೆಯಿಂದ ಬೀಸುವ ಗಾಳಿ ಕಾರಣ ಎಂದು ಪಾಕಿಸ್ತಾನವು ಈ ತಿಂಗಳ ಆರಂಭದಲ್ಲಿ ದೂರಿತ್ತು.

ಹಣಕಾಸಿನ ನೆರವು: ಅಭಿವೃದ್ಧಿ ಹೊಂದಿದ ದೇಶಗಳು ನ್ಯಾಯಸಮ್ಮತ ನೆಲೆಯಲ್ಲಿ ಹಣಕಾಸಿನ ನೆರವನ್ನು ಒದಗಿಸಬೇಕು ಎಂಬ ನಿಲುವಿಗೆ ಇಲ್ಲಿ ನಡೆಯುತ್ತಿರುವ ಹವಾಮಾನ ಬದಲಾವಣೆ ತಡೆ ಮಾತುಕತೆಯಲ್ಲಿ ಭಾರತವು ಬಲವಾಗಿ ಅಂಟಿಕೊಂಡಿತು ಎಂದು ಮೂಲಗಳು ಹೇಳಿವೆ.

ಅಭಿವೃದ್ಧಿ ಹೊಂದುತ್ತಿರುವ ಸಮಾನಮನಸ್ಕ ದೇಶಗಳ ಜೊತೆಗೂಡಿ ಭಾರತವು ಈ ನಿಲುವು ತಾಳಿದೆ ಎಂದು ಗೊತ್ತಾಗಿದೆ.

ಈಗ ದೊರೆತಿರುವ ಹಣಕಾಸಿನ ನೆರವಿನಲ್ಲಿ ಶೇಕಡ 69ರಷ್ಟು ಪಾಲು ಸಾಲದ ರೂಪದಲ್ಲಿ ಬಂದಿದೆ. ಇದರಿಂದಾಗಿ ಈಗಾಗಲೇ ದುರ್ಬಲವಾಗಿರುವ ದೇಶಗಳ ಆರ್ಥಿಕ ಹೊರೆಯು ಇನ್ನಷ್ಟು ಹೆಚ್ಚಾಗಿದೆ ಎಂಬ ಕಳವಳ ಕೂಡ ವ್ಯಕ್ತವಾಗಿದೆ.

ಕೀವ್ ಮೇಲೆ ರಷ್ಯಾ ಕ್ಷಿಪಣಿ ದಾಳಿ

ಕೀವ್ (ಎಪಿ): ಅತ್ಯಾಧುನಿಕ ಕ್ಷಿಪಣಿ ಹಾಗೂ ಡ್ರೋನ್‌ಗಳ ಮೂಲಕ ನಗರದ ಮೇಲೆ ರಷ್ಯಾವು ಬುಧವಾರ ನಸುಕಿನಲ್ಲೇ ದಾಳಿ ನಡೆಸಿದೆ.

73 ದಿನಗಳ ನಂತರ ಕೀವ್ ಮೇಲೆ ದಾಳಿ ನಡೆದಿದ್ದು, ಹಾನಿಯ ಮೌಲ್ಯ ಮಾಪನ ನಡೆದಿದೆ ಎಂದು ಉಕ್ರೇನ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಾಯುದಾಳಿಯ ಮುನ್ನೆಚ್ಚರಿಕೆಯ ಕರೆಗಂಟೆಗಳು ತಾಸುಗಟ್ಟಲೇ ಮೊಳಗಿದವು. ರಕ್ಷಣಾ ಪಡೆಗಳು ಹಲವಾರು ಕ್ಷಿಪಣಿಗಳನ್ನು ಹಾಗೂ ಡ್ರೋನ್‌ಗಳನ್ನು ನಾಶಪಡಿಸಿದವು ಎಂದು ಕೀವ್‌ನ ಮಿಲಿಟರಿ ಆಡಳಿತದ ಮುಖ್ಯಸ್ಥ ಸೆರ್ಹಿ ಪಾಪ್ಕೊ ಹೇಳಿದ್ದಾರೆ.

ದಾಳಿಯಿಂದ ಬ್ರೋವರಿ ಜಿಲ್ಲೆಯಲ್ಲಿ 48 ವರ್ಷದ ವ್ಯಕ್ತಿಯ ತಲೆಗೆ ಗಾಯಗಳಾಗಿವೆ. ಗೋದಾಮೊಂದರಲ್ಲಿ ಬೆಂಕಿ ಹೊತ್ತಿಕೊಂಡಿದೆ ಎಂದು ಕೀವ್ ಗವರ್ನರ್ ರುಸ್ಲಾನ್ ಕ್ರಾವ್ಚೆಂಕೊ ತಿಳಿಸಿದ್ದಾರೆ.

ವಿನಿಮಯ ದರ

$ ಡಾಲರ್	84.39
£ ಪೌಂಡ್	107.59
€ ಯುರೊ	89.68
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹14660-14660
ಮಧುಗಿರಿ	₹10000-13000
ತುರುವೇಕೆರೆ	₹14600-14600

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಟ್ರಂಪ್ ಸರ್ಕಾರದಲ್ಲಿ ಮಸ್ಕ್, ವಿವೇಕ್‌ಗೆ ಮಹತ್ವದ ಸ್ಥಾನ

ವಾಷಿಂಗ್ಟನ್ (ಪಿಟಿಐ): ಟೆಸ್ಲಾ ಮಾಲೀಕ ಇಲಾನ್ ಮಸ್ಕ್ ಮತ್ತು ಭಾರತ ಮೂಲದ ಅಮೆರಿಕ ಉದ್ಯಮಿ ವಿವೇಕ್ ರಾಮಸ್ವಾಮಿ ಅವರು ಅಮೆರಿಕ ಸರ್ಕಾರದ ಕಾರ್ಯದಕ್ಷತಾ ಇಲಾಖೆಯ (ಡಿಒಜಿಇ) ಉಸ್ತುವಾರಿ ವಹಿಸಿಕೊಳ್ಳಲಿದ್ದಾರೆ ಎಂದು ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಘೋಷಿಸಿದ್ದಾರೆ.

ಆಡಳಿತ ವ್ಯವಸ್ಥೆ ಸುಧಾರಣೆಗೆ ಕ್ರಮ ಕೈಗೊಳ್ಳುವುದರ ಜೊತೆಗೆ ಅನಗತ್ಯ ವೆಚ್ಚಗಳನ್ನು ಕಡಿತ ಮಾಡುವುದು ಈ ಇಲಾಖೆಯ ಉದ್ದೇಶ. ಈ ಗುರಿ ಸಾಧನೆಗಾಗಿ ಟ್ರಂಪ್ ಅವರು 2026, ಜುಲೈ 4ರ ಗಡುವು ನೀಡಿದ್ದಾರೆ.

ಟ್ರಂಪ್ ಅವರ ಎರಡನೇ ಅವಧಿಯ ಆಡಳಿತಕ್ಕೆ ಸೇರ್ಪಡೆಯಾದ ಭಾರತ ಮೂಲದ ಮೊದಲಿಗ ಎಂಬ ಗೌರವ ವಿವೇಕ್ ಅವರದ್ದಾಗಿದೆ. ವಿವೇಕ್ ಪೋಷಕರು ಕೇರಳದಿಂದ ಅಮೆರಿಕಕ್ಕೆ ವಲಸೆ ಹೋಗಿದ್ದರು.

‘ದಕ್ಷತೆ ಜೊತೆಗೆ ಫೆಡರಲ್ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ಹಾಗೂ ಅಮೆರಿಕನ್ನರೆಲ್ಲರ ಉತ್ತಮ ಜೀವನಕ್ಕಾಗಿ ಇಲಾನ್ ಮಸ್ಕ್ ಮತ್ತು ವಿವೇಕ್ ತರಲಿರುವ ಬದಲಾವಣೆಗಳಿಗಾಗಿ ನಾನು ಎದುರು ನೋಡುತ್ತಿದ್ದೇನೆ’ ಎಂದು ಟ್ರಂಪ್ ಹೇಳಿದ್ದಾರೆ.

ಇಲಾನ್ ಮಸ್ಕ್, ಡೊನಾಲ್ಡ್ ಟ್ರಂಪ್, ವಿವೇಕ್ ರಾಮಸ್ವಾಮಿ

ಇದೇ ಸಂದರ್ಭದಲ್ಲಿ ಟ್ರಂಪ್ ಅವರು, ಶ್ವೇತಭವನದ ಮಾಜಿ ಸಂಪುಟ ಕಾರ್ಯದರ್ಶಿ ಬಿಲ್ ಮಿಕ್‌ಜಿನ್ಲಿ ಅವರನ್ನು ಶ್ವೇತಭವನದ ಸಲಹೆಗಾರರನ್ನಾಗಿ ನೇಮಿಸಿರುವುದಾಗಿ ತಿಳಿಸಿದರು.

ರಾಷ್ಟ್ರೀಯ ಗುಪ್ತಚರ ದಳದ ಮಾಜಿ ನಿರ್ದೇಶಕ ಜಾನ್ ರಾಟ್‌ಕ್ಲಿಫ್ ಅವರನ್ನು ಕೇಂದ್ರೀಯ ಗುಪ್ತಚರ ದಳದ ಮುಖ್ಯಸ್ಥರನ್ನಾಗಿ ಮತ್ತು ಮಾಜಿ ಗವರ್ನರ್ ಮೈಕ್ ಹುಕಬೀ ಅವರನ್ನು ಇಸ್ರೇಲ್‌ನ ರಾಯಭಾರಿಯಾಗಿ ನೇಮಿಸಿರುವುದಾಗಿ ತಿಳಿಸಿದರು.

ಮಿಕ್ ವಾಲ್ಟ್ಜ ಅವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಮತ್ತು ರಿಯಲ್ ಎಸ್ಟೇಟ್ ಉದ್ಯಮಿ ಸ್ಟೀವನ್ ಸಿ. ವಿಟ್‌ಕಾಫ್ ಅವರನ್ನು ಪಶ್ಚಿಮ ಏಷ್ಯಾದ ವಿಶೇಷ ರಾಯಭಾರಿಯಾಗಿ ನೇಮಿಸಿದ್ದಾರೆ.

ಶ್ರೀಲಂಕಾ ಸಂಸತ್ತಿಗೆ ಇಂದು ಚುನಾವಣೆ

ಕೊಲಂಬೊ (ಪಿಟಿಐ): ದ್ವೀಪರಾಷ್ಟ್ರ ಶ್ರೀಲಂಕಾದ ಸಂಸತ್ತಿಗೆ ಗುರುವಾರ ಚುನಾವಣೆ ನಡೆಯಲಿದೆ. 2022ರಲ್ಲಿ ಆರ್ಥಿಕ ಬಿಕ್ಕಟ್ಟು ಎದುರಾದ ಬಳಿಕ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ.

ಚುನಾವಣೆ ಕಾರಣಕ್ಕೆ ದೇಶದಾದ್ಯಂತ ಭದ್ರತೆಗಾಗಿ 90 ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪೊಲೀಸರ ಜೊತೆಗೆ ಸೇನೆಯನ್ನು ಭದ್ರತೆಗೆ ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

225 ಸದಸ್ಯ ಬಲದ ಸಂಸತ್ತಿಗೆ ಗುರುವಾರ, ಸ್ಥಳೀಯ ಸಮಯ ಬೆಳಿಗ್ಗೆ 7ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. 17 ಲಕ್ಷ ಮತದಾರರು ಹಕ್ಕು ಚಲಾಯಿಸಲಿದ್ದು, 13,314 ಮತಗಟ್ಟೆ ಸ್ಥಾಪಿಸಲಾಗಿದೆ.

ಚುನಾವಣಾ ಆಯೋಗದ ಪ್ರಧಾನ ನಿರ್ದೇಶಕ ಸಮನ್ ಶ್ರೀ ರತ್ನಾಯಕ ಅವರು, ಮತಗಟ್ಟೆಗಳಿಗೆ ಮತಯಂತ್ರ ಹಾಗೂ ಇತರ ಪರಿಕರಗಳನ್ನು ಪೂರೈಸಲಾಗಿದೆ ಎಂದು ತಿಳಿಸಿದ್ದಾರೆ.

ಅಧ್ಯಕ್ಷ ಅನುರಾ ಕುಮಾರ ಡಿಸ್ಸನಾಯಕೆ ನೇತೃತ್ವದ ನ್ಯಾಷನಲ್ ಪೀಪಲ್ಸ್ ಪವರ್ ಪಕ್ಷದ ಜನಪ್ರಿಯತೆಯನ್ನು ಒರೆಗೆಹಚ್ಚುವ ಚುನಾವಣೆ ಇದಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಬ್ರಿಟಿಷ್ ಲೇಖಕಿ ಸಮಂತಾ ಹಾರ್ವೆಗೆ ಪ್ರತಿಷ್ಠಿತ ‘ಬೂಕರ್ ಸಾಹಿತ್ಯ ಪ್ರಶಸ್ತಿ’

ಲಂಡನ್ (ಪಿಟಿಐ): ಬ್ರಿಟಿಷ್ ಲೇಖಕಿ ಸಮಂತಾ ಹಾರ್ವೆ ಅವರು 2024ನೇ ಸಾಲಿನ ಪ್ರತಿಷ್ಠಿತ ಬೂಕರ್ ಸಾಹಿತ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿಯು ₹53.75 ಲಕ್ಷ ನಗದು (50 ಸಾವಿರ ಪೌಂಡ್) ಒಳಗೊಂಡಿದೆ.

ಬಾಹ್ಯಾಕಾಶ ಕೇಂದ್ರದ ಕಥನವುಳ್ಳ ಅವರ ‘ಆ್ಯಂಬಿಷಿಯಸ್ ಅಂಡ್ ಬ್ಯೂಟಿಫುಲ್’ ಮತ್ತು ‘ಆರ್ಬಿಟಲ್’ ಕೃತಿಗಳಿಗಾಗಿ ಪ್ರಶಸ್ತಿಯು ಸಂದಿದೆ. ಪ್ರಶಸ್ತಿಗೆ ಅಂತಿಮಗೊಳಿಸಲಾಗಿದ್ದ ಪಟ್ಟಿಯಲ್ಲಿ ಲೇಖಕಿಯರೇ ಪ್ರಾಬಲ್ಯ ಮೆರೆದಿದ್ದರು. ಅಂತಿಮವಾಗಿ ಲೇಖಕಿಗೇ ಈ ವರ್ಷದ ಪ್ರಶಸ್ತಿ ಗೌರವ ಸಂದಿದೆ.

‘ಆರ್ಬಿಟಲ್’ ಈ ವರ್ಷ ಬ್ರಿಟನ್‌ನಲ್ಲಿ ಹೆಚ್ಚು ಮಾರಾಟವಾದ ಕೃತಿ. ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿದ್ದ ಆರು ಗಗನಯಾತ್ರಿಗಳ ಒಂದು ದಿನದ ಬದುಕನ್ನು ಈ ಕೃತಿ ಕಟ್ಟಿಕೊಟ್ಟಿದೆ. ಈ ‘ಒಂದು ದಿನ’ದಲ್ಲಿ ಗಗನಯಾತ್ರಿಗಳು 16 ಸೂರ್ಯೋದಯ ಹಾಗೂ ಸೂರ್ಯಾಸ್ತವನ್ನು ಕಂಡಿರುತ್ತಾರೆ.

ಮಂಗಳವಾರ ಲಂಡನ್‌ನ ಓಲ್ಡ್ ಬಿಲ್ಲಿಂಗ್ಸ್‌ಗೇಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಘೋಷಿಸಲಾಯಿತು. ‘ಆರ್ಬಿಟಲ್’ ಬಿಗಿಯಾದ ನಿರೂಪಣೆಯ ಕೃತಿ. ಈ ಕೃತಿಯು ಓದುಗರನ್ನು ಭೂಮಿಯ ಕೌತುಕಗಳತ್ತ ಸೆಳೆಯುವಂತಿದೆ’ ಎಂದು ತೀರ್ಪುಗಾರರು ಬಣ್ಣಿಸಿದರು.

ಲೇಖಕಿ ಹಾರ್ವೆ ಅವರು ‘ಭೂಮಿಯ ಪರವಾಗಿ ಧ್ವನಿ ಎತ್ತುವ ಎಲ್ಲರಿಗೂ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ’ ಎಂದು ಪ್ರತಿಕ್ರಿಯಿಸಿದರು. ‘ಬಾಹ್ಯಾಕಾಶ ಒಂದು ಗ್ರಾಮ. ಅಲ್ಲಿನ ಸೌಂದರ್ಯ, ಬೆರಗನ್ನು ಅಕ್ಷರಗಳಲ್ಲಿ ಕಟ್ಟಿಕೊಡುವ ಪ್ರಯತ್ನವಾಗಿ ಈ ಕೃತಿ ರಚಿಸಿದೆ’ ಎಂದು ಹೇಳಿದರು.

ಮೊದಲ ದಿನವೇ 15 ವಿಕೆಟ್ ಪತನ: ಕರ್ನಾಟಕ ತಂಡಕ್ಕೆ ಮುನ್ನಡೆ; ಮಿಂಚಿದ ಶ್ರೀಜಿತ್

ಕೌಶಿಕ್ ದಾಳಿಗೆ 'ಉತ್ತರ' ನಿರುತ್ತರ

ಪ್ರಜಾವಾಣಿ ವಾರ್ತೆ

ಲಖನೌ: ಏಕಾನಾ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ದಿನವೇ 15 ವಿಕೆಟ್‌ಗಳು ಪತನಗೊಂಡವು. ಉಭಯ ತಂಡಗಳ ಬೌಲರ್‌ಗಳ ಆರ್ಭಟದ ನಡುವೆಯೂ ಕರ್ನಾಟಕ ಬಳಗವು ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಇದಕ್ಕೆ ಪ್ರಮುಖ ಕಾರಣರಾದವರು ಕರ್ನಾಟಕದ ಮಧ್ಯಮವೇಗಿ ವಾಸುಕಿ ಕೌಶಿಕ್ ಅವರು. 32 ವರ್ಷದ ಕೌಶಿಕ್ (16-8-20-5) ಅವರು ಕಳೆದ ಪಂದ್ಯದಲ್ಲಿ (ಬಂಗಾಳ ಎದುರು) ಕೂಡ ಐದು ವಿಕೆಟ್ ಗೊಂಚಲು ಗಳಿಸಿದ್ದರು. ಇಲ್ಲಿಯೂ ಅವರ ದಾಳಿಗೆ ಉತ್ತರ ಪ್ರದೇಶ ತಂಡವು ಕೇವಲ 89 ರನ್‌ಗಳಿಗೆ ಕುಸಿಯಿತು. ಇದಕ್ಕುತ್ತರವಾಗಿ ಕರ್ನಾಟಕ ತಂಡವು ದಿನದಾಟದ ಅಂತ್ಯಕ್ಕೆ 31 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 127 ರನ್ ಗಳಿಸಿತು. 38 ರನ್‌ಗಳ ಮುನ್ನಡೆ ಸಾಧಿಸಿತು.

ಆದರೆ ಈ ಪಂದ್ಯದಲ್ಲಿಯೂ ಅಗ್ರಕ್ರಮಾಂಕದ ಬ್ಯಾಟರ್‌ಗಳು ದೀರ್ಘ ಇನಿಂಗ್ಸ್ ಆಡುವಲ್ಲಿ ವಿಫಲರಾದರು. ಈ ಸಂದರ್ಭದಲ್ಲಿ ಪದಾರ್ಪಣೆ ಮಾಡಿದ ಕೃಷ್ಣನ್ ಶ್ರೀಜಿತ್ (ಬ್ಯಾಟಿಂಗ್ 68; 77ಎ, 4X9) ಮತ್ತು ಅನುಭವಿ ಶ್ರೇಯಸ್ ಗೋಪಾಲ್ (ಬ್ಯಾಟಿಂಗ್ 14) ತಂಡಕ್ಕೆ ಆಸರೆಯಾದರು. ಆರಂಭಿಕ ಬ್ಯಾಟರ್ ನಿಕಿನ್ ಜೋಸ್ ಹಾಗೂ ಆರ್. ಸ್ಮರಣ್ ಅವರಿಬ್ಬರನ್ನೂ ವೇಗಿ ಆಕಿಬ್ ಖಾನ್ ಅವರು ಒಂದೇ ಓವರ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಶ್ರೀಜಿತ್ ತಮ್ಮ ಆಯ್ಕೆಯನ್ನು ಅಚ್ಚುಕಟ್ಟಾಗಿ ಸಮರ್ಥಿಸಿಕೊಂಡರು.

ಈ ಸಂದರ್ಭದಲ್ಲಿ ನಾಯಕ ಮಯಂಕ್ (30; 39ಎ, 4X4) ಹಾಗೂ ಶ್ರೀಜಿತ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 48 ರನ್ ಸೇರಿಸಿದರು. ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಅವರ ಎಸೆತದ ಚಲನೆಯ ಜಾಡು ಹಿಡಿಯುವುದರಲ್ಲಿ ಎಡವಿದ ಮಯಂಕ್ ಕ್ಲೀನ್‌ಬೌಲ್ಡ್ ಆದರು. ಮನೀಷ್ ಪಾಂಡೆ ಮತ್ತು ಅಭಿನವ್ ಮನೋಹರ್ ತಲಾ 6 ರನ್ ಗಳಿಸಿದರು. ಅವರಿಬ್ಬರ ವಿಕೆಟ್‌ಗಳನ್ನೂ ಶಿವಂ ಮಾವಿ ತಮ್ಮ ಬುಟ್ಟಿಗೆ ಹಾಕಿಕೊಂಡರು. ಕರ್ನಾಟಕದ ಇಬ್ಬರೂ ಬ್ಯಾಟರ್‌ಗಳು ವಿಕೆಟ್‌ಕೀಪರ್ ಆರ್ಯನ್ ಜುಯಾಲ್‌ಗೆ ಕ್ಯಾಚ್ ಆದರು.

ಕರ್ನಾಟಕದ ವಾಸುಕಿ ಕೌಶಿಕ್

ಕೌಶಿಕ್ ಕೈಚಳಕ: ಬೆಳಗಿನ ವಾತಾವರಣದಲ್ಲಿ ಲಖನೌನಲ್ಲಿ ಇಬ್ಬನಿಮಿಶ್ರಿತ ತಂಪು ಗಾಳಿಯಲ್ಲಿ ಆರಂಭವಾದ ಪಂದ್ಯದಲ್ಲಿ ಆತಿಥೇಯ ತಂಡವು ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ತನ್ನ ಪ್ರಮುಖ ಬೌಲರ್‌ಗಳಿಲ್ಲದೇ ಕಣಕ್ಕಿಳಿದ ಕರ್ನಾಟಕ ತಂಡದಲ್ಲಿ ಯಶೋವರ್ಧನ್ ಪರಂತಾಪ್ ಪದಾರ್ಪಣೆ ಮಾಡಿದರು. ಕಳೆದ ಪಂದ್ಯದಲ್ಲಿ ಆಡಿದ್ದ ಅಭಿಲಾಷ್ ಶೆಟ್ಟಿಗೆ ವಿಶ್ರಾಂತಿ ನೀಡಲಾಯಿತು. ಸ್ಪಿನ್ನರ್ ಮೊಹಸಿನ್ ಖಾನ್ ಕೂಡ ಇಲ್ಲಿ ಕಣಕ್ಕಿಳಿದರು.

ವಿದ್ವತ್ ಕಾವೇರಪ್ಪ ಹಾಗೂ ವೈಶಾಖ ವಿಜಯಕುಮಾರ್ ಅನುಪಸ್ಥಿತಿಯಲ್ಲಿ ಕೌಶಿಕ್ ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ಅವರಿಗೆ ವಿದ್ಯಾಧರ್ ಪಾಟೀಲ (22ಕ್ಕೆ3) ಉತ್ತಮ ಬೆಂಬಲ ನೀಡಿದರು.

ಇನಿಂಗ್ಸ್‌ನ ಮೊದಲ ವಿಕೆಟ್ ಗಳಿಸಿದ್ದು ವಿದ್ಯಾಧರ್ ಅವರೇ. ಐದನೇ ಓವರ್‌ನಲ್ಲಿ ಕೌಶಿಕ್ ಅವರು ಮಾಧವ್ ಕೌಶಿಕ್ ಮತ್ತು ಆರ್ಯನ್ ಜುಯಾಲ್ ಅವರನ್ನು ಖಾಲಿ ಕೈನಲ್ಲಿ ಪೆವಿಲಿಯನ್‌ಗೆ ಮರಳುವಂತೆ ಮಾಡಿದರು. ಕೆಳಕ್ರಮಾಂಕದಲ್ಲಿ ಇನಿಂಗ್ಸ್ ಚೇತರಿಕೆ ನೀಡುವ ಪ್ರಯತ್ನ ಮಾಡಿದ ಸಮೀರ್ ರಿಜ್ವಿ (25; 59ಎ), ಕೃತಾಗ್ನ ಸಿಂಗ್ (13 ರನ್) ಹಾಗೂ ಸೌರಭ್ ಕುಮಾರ್ (13 ರನ್) ಅವರ ವಿಕೆಟ್‌ಗಳನ್ನೂ ಕೌಶಿಕ್ ಕಬಳಿಸಿದರು.

ಇನ್ನೊಂದೆಡೆ ಪರಂತಾಪ್ ಮತ್ತು ಮೊಹಸಿನ್ ಕೂಡ ತಲಾ ಒಂದು ವಿಕೆಟ್ ಗಳಿಸಿದರು.

ಸ್ಕೋರ್ ಕಾರ್ಡ್ (ರಣಜಿ ಮೊದಲ ದಿನ)

ಮೊದಲ ಇನಿಂಗ್ಸ್: ಉತ್ತರಪ್ರದೇಶ
89 (40.3 ಓವರ್‌ಗಳಲ್ಲಿ) ಆರ್ಯನ್ ಬಿ ಪಾಟೀಲ 5 (13ಎ, 4x1), ಮಾಧವ್ ಸಿ ಸ್ಮರಣ್ ಬಿ ಕೌಶಿಕ್ 0 (12ಎ), ಶರ್ಮಾ ಸಿ ಸ್ಮರಣ್ ಬಿ ಯಶೋವರ್ಧನ್ 12 (48ಎ, 4x2), ಆರ್ಯನ್ ಬಿ ಕೌಶಿಕ್ 0 (1ಎ), ಆದಿತ್ಯ ಸಿ ಶ್ರೀಜಿತ್ ಬಿ ವಿದ್ಯಾಧರ್ 9 (31ಎ, 4x1), ನಿತೀಶ್ ಬಿ ಮೊಹಸಿನ್ 6 (23ಎ, 4x1), ಸಮೀರ್ ಸಿ ಶ್ರೀಜಿತ್ ಬಿ ಕೌಶಿಕ್ 25 (59ಎ, 4x3, 6x1), ಕೃತಾಗ್ನ ಸಿ ನಿಕಿನ್ ಬಿ ಕೌಶಿಕ್ 13 (28ಎ, 4x2), ಸೌರಭ್ ಬಿ ಕೌಶಿಕ್ 13 (20ಎ, 4x2), ಶಿವಂ ಸಿ ಸ್ಮರಣ್ ಬಿ ವಿದ್ಯಾಧರ್ 0 (3ಎ), ಆಕಿಬ್ ಔಟಾಗದೆ 0 (5ಎ). ಇತರೆ: 6 (ಬೈ 1, ಲೆಗ್‌ಬೈ 4, ವೈಡ್ 1)
ವಿಕೆಟ್ ಪತನ: 1-5 (ಆರ್ಯನ್ ಗೋಸ್ವಾಮಿ; 3.5), 2-5 (ಮಾಧವ್ ಕೌಶಿಕ್; 4.2), 3-5 (4.3; ಆರ್ಯನ್ ಜುಯಾಲ್), 4-26 (ಆದಿತ್ಯ ಶರ್ಮಾ; 13.5), 5-37 (ನಿತೀಶ್ ರಾಣಾ; 20.4), 6-37 (ರಿತುರಾಜ್ ಶರ್ಮಾ; 21.4), 7-56 (ಕೃತಾಗ್ನ ಸಿಂಗ್; 31.2), 8-82 (ಸೌರಭ್ ಕುಮಾರ್; 37.6), 9-89 (ಸಮೀರ್ ರಿಜ್ವಿ; 39.1), 10-89 (ಶಿವಂ ಮಾವಿ; 40.3)
ಬೌಲಿಂಗ್: ವಿ. ಕೌಶಿಕ್ 16-8-20-5, ವಿದ್ಯಾಧರ್ ಪಾಟೀಲ 9.3-3-22-3, ಯಶೋವರ್ಧನ್ ಪರಂತಾಪ್ 6-2-19-1, ಮೊಹಸಿನ್ ಖಾನ್ 9-2-23-1

ಮೊದಲ ಇನಿಂಗ್ಸ್: ಕರ್ನಾಟಕ
5ಕ್ಕೆ 127 (31 ಓವರ್) ನಿಕಿನ್ ಎಲ್‌ಬಿಡಬ್ಲ್ಯು ಬಿ ಆಕಿಬ್ 0 (3ಎ), ಮಯಂಕ್ ಬಿ ಸೌರಭ್ 30 (39ಎ, 4x4), ಸ್ಮರಣ್ ಎಲ್‌ಬಿಡಬ್ಲ್ಯು ಬಿ ಆಕಿಬ್ 0 (4ಎ), ಶ್ರೀಜಿತ್ ಔಟಾಗದೆ 68 (77ಎ, 4x9), ಪಾಂಡೆ ಸಿ ಆರ್ಯನ್ ಬಿ ಶಿವಂ 6 (24ಎ, 4x1), ಅಭಿನವ್ ಸಿ ಆರ್ಯನ್ ಬಿ ಶಿವಂ 6 (14ಎ, 4x1), ಶ್ರೇಯಸ್ ಔಟಾಗದೆ 14 (25 ಎ, 4x2)
ಇತರೆ: 3 (ಲೆಗ್‌ಬೈ3)
ವಿಕೆಟ್ ಪತನ: 1-5 (ನಿಕಿನ್ ಜೋಸ್; 1.1), 2-5 (ಆರ್. ಸ್ಮರಣ್; 1.5), 3-53 (ಮಯಂಕ್ ಅಗರವಾಲ್; 10.4), 4-74 (ಮನೀಷ್ ಪಾಂಡೆ; 17.6), 5-84 (ಅಭಿನವ್ ಮನೋಹರ್; 23.2)
ಬೌಲಿಂಗ್: ಶಿವಂ ಮಾವಿ 11-2-52-2, ಆಕಿಬ್ ಖಾನ್ 7-0-31-2, ಸೌರಭ್ ಕುಮಾರ್ 12-2-38-1, ವಿಪ್ರಜ ನಿಗಂ 1-0-3-0.

(ಮಾಹಿತಿ: ಬಿಸಿಸಿಐ ಡಾಟ್ ಟಿವಿ ವೆಬ್‌ಸೈಟ್)

ಡಿ. ನಿಶ್ಚಲ್ ಮತ್ತೊಂದು ಶತಕ

ನದಿಯಾದ್: ಕನ್ನಡಿಗ ಡಿ. ನಿಶ್ಚಲ್ (145; 169ಎ, 4X23) ಮತ್ತು ಚೇತನ್ ಬಿಷ್ಟ್ (ಬ್ಯಾಟಿಂಗ್ 120; 194ಎ, 4X14, 6X1) ಅವರಿಬ್ಬರ ಶತಕಗಳ ಬಲದಿಂದ ನಾಗಾಲ್ಯಾಂಡ್ ತಂಡವು ಪ್ಲೇಟ್ ಗುಂಪಿನ ಪಂದ್ಯದಲ್ಲಿ ದೊಡ್ಡ ಮೊತ್ತ ಪೇರಿಸಿತು.

ಬುಧವಾರ ಇಲ್ಲಿ ಮಿಜೋರಾಂ ಎದುರು ಆರಂಭವಾದ ಪಂದ್ಯದಲ್ಲಿ ನಾಗಾಲ್ಯಾಂಡ್ ತಂಡವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 363 ರನ್ ಗಳಿಸಿತು. ನಿಶ್ಚಲ್ ಅವರು ಈ ಋತುವಿನಲ್ಲಿ ಗಳಿಸಿದ ನಾಲ್ಕನೇ ಶತಕ ಇದಾಗಿದೆ.

ಸಂಕ್ಷಿಪ್ತ ಸ್ಕೋರು: ನಾಗಾಲ್ಯಾಂಡ್: 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 363 (ಸೆದೆಝೂಲಿ ರುಪೆರೊ 31, ಡಿ. ನಿಶ್ಚಲ್ 145, ಚೇತನ್ ಬಿಷ್ಟ್ ಬ್ಯಾಟಿಂಗ್ 120, ಕೆ.ಸಿ. ಕಾರ್ಯಪ್ಪ 64ಕ್ಕೆ2) ವಿರುದ್ಧ ಮಿಜೋರಾಂ

ತಿಲಕ್ ಅಬ್ಬರದ ಶತಕ

ಅಭಿಷೇಕ್ ಶರ್ಮಾ ಬೀಸಾಟ; ಭಾರತಕ್ಕೆ ರೋಚಕ ಜಯ

ಸೆಂಚುರಿಯನ್ (ಪಿಟಿಐ): ಬುಧವಾರ ರಾತ್ರಿ ಕೊನೆಯ ಓವರ್‌ನವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಭಾರತ ತಂಡವು ಅಮೋಘ ಜಯ ಸಾಧಿಸಿತು.

ಸೂಪರ್‌ಸ್ಪೋರ್ಟ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವರ್ಮಾ ಅಜೇಯ ಶತಕ (107; 56ಎಸೆತ) ಮತ್ತು ಅಭಿಷೇಕ್ ಶರ್ಮಾ ಅವರ ಅಬ್ಬರದ ಅರ್ಧಶತಕದ ಬಲದಿಂದ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 219 ರನ್ ಗಳಿಸಿತು. ಇದಕ್ಕುತ್ತರವಾಗಿ ಆತಿಥೇಯ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 208 ರನ್ ಗಳಿಸಿತು. ಕೊನೆಯ ಹಂತದಲ್ಲಿ ಮಾರ್ಕೊ ಯಾನ್ಸೆನ್ ಅವರು ಸಿಡಿಲಬ್ಬರದ ಅರ್ಧಶತಕ (54; 17ಎ, 4X4, 6X5) ಹೊಡೆದು ದಕ್ಷಿಣ ಆಫ್ರಿಕಾಕ್ಕೆ ಗೆಲುವಿನ ಭರವಸೆ ಮೂಡಿಸಿದ್ದರು. ನಾಟಕೀಯ ತಿರುವು ಕಂಡ ಕೊನೆಯ ಓವರ್‌ನ ಎರಡನೇ ಎಸೆತದಲ್ಲಿ ಯಾನ್ಸೆನ್ ಒಂದು ಸಿಕ್ಸರ್ ಹೊಡೆದರು. ನಂತರದ ಎಸೆತದಲ್ಲಿ ಅವರನ್ನು ಎಲ್‌ಬಿ ಬಲೆಗೆ ಕೆಡವಿದ ಅರ್ಷದೀಪ್ ಸಿಂಗ್ ಮಿಂಚಿದರು. ಭಾರತ 11 ರನ್‌ಗಳಿಂದ ಜಯಿಸಿತು. ಸರಣಿಯಲ್ಲಿ 2-1ರ ಮುನ್ನಡೆ ಸಾಧಿಸಿತು. ಇನ್ನೊಂದು ಪಂದ್ಯ ಬಾಕಿ ಇದೆ.

ಬೃಹತ್ ಗುರಿ ಬೆನ್ನಟ್ಟಿದ ಆತಿಥೇಯ ತಂಡಕ್ಕೆ ಭಾರತದ ಅರ್ಷದೀಪ್ ಸಿಂಗ್ ಮತ್ತು ಸ್ಪಿನ್ನರ್ ವರುಣ ಚಕ್ರವರ್ತಿ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಅಕ್ಷರ್ ಪಟೇಲ್ ಕೂಡ ಜೊತೆಗೂಡಿದರು. ಇದರಿಂದಾಗಿ ದಕ್ಷಿಣ ಆಫ್ರಿಕಾ ತಂಡವು 10 ಓವರ್‌ಗಳಲ್ಲಿ 84 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಜೊತೆಗೂಡಿದ ಹೆನ್ರಿಚ್ ಕ್ಲಾಸನ್ (41; 22ಎ) ಮತ್ತು ಡೇವಿಡ್ ಮಿಲ್ಲರ್ (18; 18ಎ) ಭಾರತ ತಂಡಕ್ಕೆ ಆತಂಕ ಮೂಡಿಸಿದರು. ಅದರಲ್ಲೂ ಕ್ಲಾಸನ್ ಅವರು ವರುಣ್ ಹಾಕಿದ 14ನೇ ಓವರ್‌ನಲ್ಲಿ ಸಿಕ್ಸರ್ ಹ್ಯಾಟ್ರಿಕ್ ಸಾಧಿಸಿದರು. ಈ ಓವರ್‌ನಲ್ಲಿ ಒಟ್ಟು 23 ರನ್‌ಗಳು ಹರಿದುಬಂದವು. ಇದೇ ಓವರ್‌ನಲ್ಲಿ ಸೂರ್ಯಕುಮಾರ್ ಯಾದವ್ ಅವರು ಕ್ಲಾಸನ್ ಕ್ಯಾಚ್ ಕೈಚೆಲ್ಲಿದರು. ಆದರೆ ಇನ್ನೊಂದು ಕಡೆ ಹಾರ್ದಿಕ್ ಮತ್ತು ರವಿ ಬಿಷ್ಣೋಯಿ ಕಡಿವಾಣ ಹಾಕಿದರು. ಇದರಿಂದಾಗಿ ಗೆಲುವಿನ ಅಂತರ ಹೆಚ್ಚಿತು.

ವರ್ಮಾ–ಶರ್ಮಾ ಜೊತೆಯಾಟ: ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಮಾರ್ಕೊ ಯಾನ್ಸೆನ್ ಅವರು ಸಂಜು ಸ್ಯಾಮ್ಸನ್ ಅವರನ್ನು ಬೌಲ್ಡ್ ಮಾಡಿದರು. ಇದರಿಂದಾಗಿ ಒತ್ತಡಕ್ಕೊಳಗಾದ ಭಾರತ ತಂಡವನ್ನು ಅಭಿಷೇಕ್ ಮತ್ತು ತಿಲಕ್ ಜೋಡಿಯು ಪಾರು ಮಾಡಿತು. ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದ ಅಭಿಷೇಕ್ ಇಲ್ಲಿ 24 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. 3 ಬೌಂಡರಿ ಮತ್ತು 5 ಸಿಕ್ಸರ್ ಎತ್ತಿದರು. ಇಬ್ಬರೂ 2ನೇ ವಿಕೆಟ್ ಜೊತೆಯಾಟದಲ್ಲಿ 107 ರನ್ ಸೇರಿಸಿದರು. 9ನೇ ಓವರ್‌ನಲ್ಲಿ ಕೇಶವ್ ಮಹಾರಾಜ್ ಎಸೆತವನ್ನು ಮುನ್ನುಗ್ಗಿ ಹೊಡೆಯಲು ಯತ್ನಿಸಿದ ಎಡಗೈ ಬ್ಯಾಟರ್ ಅಭಿಷೇಕ್ ಅವರನ್ನು ವಿಕೆಟ್‌ಕೀಪರ್ ಕ್ಲಾಸೆನ್ ಸ್ಟಂಪಿಂಗ್ ಮಾಡಿದರು.

ಆದರೆ ಇನ್ನೊಂದು ಬದಿಯಲ್ಲಿ ಅಬ್ಬರಿಸುತ್ತಿದ್ದ ತಿಲಕ್ ತಮ್ಮ ಆಟದ ವೇಗವನ್ನು ಮತ್ತಷ್ಟು ಹೆಚ್ಚಿಸಿದರು. 32 ಎಸೆತಗಳಲ್ಲಿ 50 ರನ್ ಗಳಿಸಿದರು. ತಾವೆದುರಿಸಿದ 51ನೇ ಎಸೆತದಲ್ಲಿ ಬೌಂಡರಿ ಹೊಡೆಯುವ ಮೂಲಕ ಶತಕದ ಗಡಿ ಮುಟ್ಟಿದರು.

ಸಂಕ್ಷಿಪ್ತ ಸ್ಕೋರು: ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 219 (ಅಭಿಷೇಕ್ ಶರ್ಮಾ 50, ತಿಲಕ್ ವರ್ಮಾ ಔಟಾಗದೆ 107, ಹಾರ್ದಿಕ್ ಪಾಂಡ್ಯ 18, ರಮಣದೀಪ್ ಸಿಂಗ್ 15 , ಆ್ಯಂಡಿಲೆ ಸೈಮ್‌ಲೇನ್ 34ಕ್ಕೆ2, ಕೇಶವ್ ಮಹಾರಾಜ್ 36ಕ್ಕೆ2) ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 7ಕ್ಕೆ208 (ರಿಯಾನ್ ರಿಕೆಲ್ಟನ್ 20, ರೀಜಾ ಹೆನ್ರಿಕ್ಸ್ 21, ಏಡನ್ ಮರ್ಕರಂ 29, ಹೆನ್ರಿಚ್ ಕ್ಲಾಸನ್ 41, ಮಾರ್ಕೊ ಯಾನ್ಸೆನ್ 54, ಅರ್ಷದೀಪ್ ಸಿಂಗ್ 37ಕ್ಕೆ3, ವರುಣ ಚಕ್ರವರ್ತಿ 54ಕ್ಕೆ2)
ಫಲಿತಾಂಶ : ಭಾರತಕ್ಕೆ 11 ರನ್ ಜಯ. ಸರಣಿಯಲ್ಲಿ 2–1 ಮುನ್ನಡೆ.

ರೆಕ್ಕೆ ಇರುವೆ ಹಾರಾಟ: ನಿಂತ ಆಟ

ಸೆಂಚುರಿಯನ್ (ರಾಯಿಟರ್ಸ್): ಸೂಪರ್‌ಸ್ಪೋರ್ಟ್ ಮೈದಾನದಲ್ಲಿ ಬುಧವಾರ ರಾತ್ರಿ ರೆಕ್ಕೆ ಇರುವೆಗಳ ದೊಡ್ಡ ಸಂಖ್ಯೆಯ ಹಾರಾಟದಿಂದಾಗಿ ಅರ್ಧ ಗಂಟೆ ಆಟ ಸ್ಥಗಿತವಾಯಿತು.

ಭಾರತ ತಂಡವು ಒಡ್ಡಿದ್ದ 219 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡವು ಮೊದಲ ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 7 ರನ್ ಗಳಿಸಿದ್ದ ಸಂದರ್ಭದಲ್ಲಿ ಈ ಘಟನೆ ನಡೆಯಿತು.

ದಕ್ಷಿಣ ಆಫ್ರಿಕಾದಲ್ಲಿ ಕೀಟಗಳ ಕಾಟದಿಂದಾಗಿ ಪಂದ್ಯ ಸ್ಥಗಿತವಾಗಿದ್ದು ಇದೇ ಮೊದಲೇನಲ್ಲ. 2017ರಲ್ಲಿ ಶ್ರೀಲಂಕಾ ವಿರುದ್ಧ ನಡೆದಿದ್ದ ಪಂದ್ಯದಲ್ಲಿಯೂ ಸುಮಾರು ಒಂದು ಗಂಟೆ ಕಾಲ ಕೀಟಗಳಿಂದಾಗಿ ಅಟ ಸ್ಥಗಿತವಾಗಿತ್ತು.

ತಿಲಕ್ ವರ್ಮಾ ಶತಕ ಸಂಭ್ರಮ

ಸೋಲಿನ ಕೊಂಡಿ ಕಳಚಿದ ಜೈಂಟ್ಸ್

ನೊಯ್ಡಾ (ಪಿಟಿಐ): ನಾಯಕ ಗುಮಾನ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಗುಜರಾತ್ ಜೈಂಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡವನ್ನು 47–28 ರಲ್ಲಿ 19 ಅಂಕಗಳಿಂದ ಮಣಿಸಿತು.

ಇದರೊಂದಿಗೆ ಸರಣಿ ಸೋಲುಗಳ ನಂತರ ಟೂರ್ನಿಯಲ್ಲಿಎರಡನೇ ಜಯ ದಾಖಲಿಸುವಲ್ಲಿ ಜೈಂಟ್ಸ್ ಯಶಸ್ವಿಯಾಯಿತು. ಹಿಂದಿನ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ವಿರುದ್ಧ ಗೆಲುವಿನ ಲಯಕ್ಕೆ ಮರಳಿದ್ದ ಬೆಂಗಾಲ್, ಸ್ಥಿರತೆ ಕಾಯ್ದುಕೊಳ್ಳಲು ವಿಫಲವಾಯಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಮೊದಲ ಪಂದ್ಯದ ಉಭಯ ಅವಧಿಗಳಲ್ಲಿ ಜೈಂಟ್ಸ್ ತಂಡ ರೇಡಿಂಗ್ ಮತ್ತು ಟ್ಯಾಕಲ್‌ಗಳಲ್ಲಿ ಮಿಂಚಿತು. ಗುಮಾನ್ ಸಿಂಗ್ 17 ಅಂಕ ಕಲೆಹಾಕಿ ಪಂದ್ಯದ ಗೆಲುವಿನ ರೂವಾರಿಯೆನಿಸಿರು. ಪ್ರತೀಕ್ ದಹಿಯಾ, ಹಿಮಾಂಶು ಮತ್ತು ಜಿತೇಂದರ್ ಯಾದವ್ ತಲಾ 6 ಅಂಕಗಳನ್ನು ಕಲೆಹಾಕಿದರು.

ಬೆಂಗಾಲ್ ತಂಡದ ಪರ ನಿತಿನ್ ಕುಮಾರ್ 11 ಅಂಕ ಗಳಿಸಿದರೆ, ಸುಶೀಲ್ ಕಂಬ್ರೇಕರ್ 5 ಅಂಕ ತಂದರು. ಆದರೆ ಸ್ಟಾರ್ ರೇಡರ್ ಮಣಿಂದರ್ ಸಿಂಗ್ ಮತ್ತು ಫಜಲ್ ಅತ್ರಾಚಲಿ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲರಾಗಿದ್ದು ಬೆಂಗಾಲ್ ದುಬಾರಿಯಾಯಿತು.

ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡ ಇನ್ನೊಂದು ಪಂದ್ಯದಲ್ಲಿ 37–32 ಪಾಯಿಂಟ್‌ಗಳಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು.

ಗುರುವಾರದ ಪಂದ್ಯಗಳು: ಯು.ಪಿ. ಯೋಧಾಸ್– ತೆಲುಗು ಟೈಟನ್ಸ್ (ರಾತ್ರಿ 8.00); ತಮಿಳ್ ತಲೈವಾಸ್ –ಯು ಮುಂಬಾ (ರಾತ್ರಿ 9.00)

ಬೆಂಗಾಲ್ ವಾರಿಯರ್ಸ್ ತಂಡದ ಆಟಗಾರರಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ಗುಜರಾತ್ ರೇಡರ್

ಗುಜರಾತ್ ಜೈಂಟ್ಸ್ ಸಹಾಯಕ ಕೋಚ್ ಆಗಿ ಪಾರ್ಥಿವ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ವಿಕೆಟ್ ಕೀಪರ್–ಬ್ಯಾಟರ್ ಪಾರ್ಥಿವ್ ಪಟೇಲ್ ಅವರಿಗೆ ಮುಂಬರುವ ಐಪಿಎಲ್‌ನಲ್ಲಿ ಗುಜರಾತ್ ಟೈಟನ್ಸ್ ತಂಡ ಎರಡು ಹೊಣೆಗಳನ್ನು ನೀಡಿದೆ. ಅವರು ತಂಡದ ಸಹಾಯಕ ಕೋಚ್ ಜೊತೆಗೆ ಬ್ಯಾಟಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಫ್ರ್ಯಾಂಚೈಸಿ ಬುಧವಾರ ತಿಳಿಸಿದೆ.

ಆಶಿಶ್ ನೆಹ್ರಾ ಅವರು ಟೈಟನ್ಸ್‌ನ ಹೆಡ್ ಕೋಚ್ ಆಗಿದ್ದಾರೆ. ಪಾರ್ಥಿವ್ ಅವರಿಗೆ ಐಪಿಎಲ್‌ನಲ್ಲಿ ಇದು ಮೊದಲ ಕೋಚಿಂಗ್ ಜವಾಬ್ದಾರಿಯಾಗಿದೆ. ನಿವೃತ್ತಿ ನಂತರ ಪಾರ್ಥಿವ್ ಅವರು ಮುಂಬೈ ಇಂಡಿಯನ್ಸ್ ಪ್ರತಿಭಾ ಶೋಧದ ಜವಾಬ್ದಾರಿ ವಹಿಸಿದ್ದರು.

ರಾಜ್ಯ ಟಿ.ಟಿ 22ರಿಂದ

ಬೆಂಗಳೂರು: ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯು ಇದೇ 22 ರಿಂದ 25ರವರೆಗೆ ಮಲ್ಲೇಶ್ವರದ ಕೆನರಾ ಯೂನಿಯನ್‌ನಲ್ಲಿ ಸಿ.ವಿ.ಎಲ್. ಶಾಸ್ತ್ರಿ ಸ್ಮಾರಕ ಕರ್ನಾಟಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಹಮ್ಮಿಕೊಂಡಿದೆ.

11, 13, 15, 17, 19 ವರ್ಷದೊಳಗಿನವರ ಮತ್ತು ಪುರುಷರ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಸ್ಪರ್ಧೆಗಳು ನಡೆಯಲಿವೆ. ವಿವರಗಳಿಗೆ ಸಂಜಯ್ (94484 85357) ಸಂಪರ್ಕಿಸಿ.

ಪ್ರಿಕ್ವಾರ್ಟರ್‌ಗೆ ಸಿಂಧು

ಕುಮಾಮೊಟೊ, ಜಪಾನ್ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ಕುಮಾಮೊಟೊ ಮಾಸ್ಟರ್ಸ್ ಜಪಾನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪ್ರೀ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಆದರೆ ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಅವರು ಮೊದಲ ಸುತ್ತಿನಲ್ಲಿಯೇ ನಿರ್ಗಮಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 20ನೇ ಸ್ಥಾನದಲ್ಲಿರುವ ಸಿಂಧು ಅವರು 21–12, 21–18ರಿಂದ ಥಾಯ್ಲೆಂಡ್‌ನ ಬುಸನನ್ ಒಂಗ ಬಾಮ್ರುಂಗಪನ್ ವಿರುದ್ಧ ಜಯಿಸಿದರು. ಸಿಂಧು ವಿಶ್ವ ರ‍್ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ ಬುಸನನ್ ಅವರನ್ನು 38 ನಿಮಿಷದಲ್ಲಿ ಮಣಿಸಿದರು.

ಮುಂದಿನ ಪಂದ್ಯದಲ್ಲಿ ಕೆನಡಾದ ಮಿಚೆಲ್ ಲೀ ವಿರುದ್ಧ ಆಡಲಿದ್ದಾರೆ.

ಪುರುಷರ ವಿಭಾಗದಲ್ಲಿ ಲಕ್ಷ್ಯ ಸೇನ್ 22–20, 17–21, 16–21ರಿಂದ ಮಲೇಷ್ಯಾದ ಲಿಯಾಂಗ್ ಜುನ್ ಹಾವೊ ವಿರುದ್ಧ ಸೋಲನುಭವಿಸಿದರು.

ವಿಶ್ವ ವಿ.ವಿ. ಶೂಟಿಂಗ್ ಚಾಂಪಿಯನ್‌ಷಿಪ್

ಐಶ್ವರಿ– ಸಂಜೀತಾ ಜೋಡಿಗೆ ಚಿನ್ನ

ನವದೆಹಲಿ (ಪಿಟಿಐ): ಒಲಿಂಪಿಯನ್ ಐಶ್ವರಿ ಪ್ರತಾಪ್ ತೋಮಾರ್ ಮತ್ತು ಸಂಜೀತಾ ದಾಸ್ ಜೋಡಿ ಇಲ್ಲಿ ನಡೆಯುತ್ತಿರುವ ವಿಶ್ವ ವಿಶ್ವವಿದ್ಯಾಲಯಗಳ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀ. ಮಿಶ್ರ ತಂಡ ವಿಭಾಗದಲ್ಲಿ ಭಾರತಕ್ಕೆ ಬುಧವಾರ ಚಿನ್ನದ ಪದಕ ಗಳಿಸಿಕೊಟ್ಟಿತು. ಇದು ಭಾರತಕ್ಕೆ ಈ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಚಿನ್ನ.

ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಐದನೇ ಸ್ಥಾನ ಮತ್ತು 50 ಮೀ. ರೈಫಲ್ 3–ಪೊಸಿಷನ್ಸ್‌ನಲ್ಲಿ ಬೆಳ್ಳಿಗೆ ಸೀಮಿತಗೊಂಡಿದ್ದ ಐಶ್ವರಿ, ಕೊನೆಗೂ ಸಂಜೀತಾ ಜೊತೆಗೂಡಿ ಚಿನ್ನದ ಪದಕ ಗೆದ್ದರು. ಈ ಇಬ್ಬರು, ದಕ್ಷಿಣ ಕೊರಿಯಾದ ಕಿಮ್ ಹ್ಯೊಬೀನ್–ಲೀ ಜುನ್‌ವಾನ್ ಜೋಡಿಯ ಪ್ರಬಲ ಸವಾಲನ್ನು 17–15 ರಿಂದ ಪ್ರಯಾಸದಿಂದ ಬದಿಗೊತ್ತಿದ್ದರು.

ಕಂಚಿನ ಪದಕಕ್ಕೆ ನಡೆದ ಪ್ಲೇ ಆಫ್‌ನಲ್ಲಿ ಪೋಲೆಂಡ್‌ನ ಜೂಲಿಯಾ ಪಿಯೊಟ್ರೊವ್‌ಸ್ಕಾ– ಮಸಿಜ್ ಕೊವಾಲೆವಿಕ್ಜ್ ಜೋಡಿ 16–0 ಯಿಂದ ಭಾರತದ ಮಾನಿನಿ ಕೌಶಿಕ್– ಉಮಾಮಹೇಶ್ ಮದ್ದಿನೇನಿ ಜೋಡಿಯನ್ನು ಸೋಲಿಸಿತು.

ಕ್ವಾಲಿಫಿಕೇಷನ್ ಸುತ್ತಿನಲ್ಲಿ ಸಂಜೀತಾ (316.8) ಮತ್ತು ಐಶ್ವರಿ (316.2) ಒಟ್ಟು 633 ಸ್ಕೋರ್ ಗಳಿಸಿ ಫೈನಲ್ ತಲುಪಿದ್ದರು. ಕೊರಿಯಾದ ಜೋಡಿ 631.7ರ ಸ್ಕೋರ್ ಪಡೆದಿತ್ತು. ಮೂರು ಮತ್ತು ನಾಲ್ಕನೇ ಸ್ಥಾನ ಪಡೆದ ಜೋಡಿಗಳು ಕಂಚಿನ ಪದಕಕ್ಕಾಗಿ ಸೆಣಸಿದವು.

ಮಾನಿನಿ ಮತ್ತು ಉಮಾಮಹೇಶ್ ಜೋಡಿ ಕ್ವಾಲಿಫಿಕೇಷನ್ ಸುತ್ತಿನಲ್ಲಿ 628.7 ಸ್ಕೋರ್ ಕಲೆಹಾಕಿ ನಾಲ್ಕನೇ ಸ್ಥಾನ ಗಳಿಸಿತ್ತು. ಮೂರನೇ ಸ್ಥಾನ ಗಳಿಸಿದ ಪೋಲೆಂಡ್‌ನ ಜೋಡಿ 629.8ರ ಸ್ಕೋರ್ ಗಳಿಸಿತ್ತು. ಮಂಗಳವಾರ ಭಾರತದ ಸ್ಕೀಟ್ ಶೂಟರ್ ಭವತೇಗ್ ಸಿಂಗ್ ಗಿಲ್ ಎರಡನೇ ಚಿನ್ನ ಗೆದ್ದುಕೊಟ್ಟಿದ್ದರು. ಪಲಕ್ ಗುಲಿಯಾ ಮತ್ತು ಅಮಿತ್ ಮಾರ್ ಏರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು.

ಬೋಪಣ್ಣ, ಎಬ್ಡೆನ್ ಸೆಮಿ ಕನಸು ಭಗ್ನ

ಟ್ಯುರಿನ್ (ಇಟಲಿ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯಲ್ಲಿ ಸತತ ಎರಡನೇ ಸೋಲು ಅನುಭವಿಸಿತು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸುವ ಆಸೆ ಬಹುತೇಕ ಭಗ್ನಗೊಂಡಿತು.

ಅಗ್ರ ಶ್ರೇಯಾಂಕದ ಮಾರ್ಸೆಲೊ ಅರವೆಲೊ ಮತ್ತು ಮೆಟ್ ಪವಿಕ್ (ಕ್ರೊವೇಷ್ಯಾ) ಜೋಡಿ 68 ನಿಮಿಷಗಳ ಪಂದ್ಯದಲ್ಲಿ 7–5, 3–6 ರಲ್ಲಿ ಬೋಪಣ್ಣ–ಎಬ್ಡೆನ್ ಜೋಡಿ ಮೇಲೆ ಜಯಗಳಿಸಿತು.

ಎರಡು ವರ್ಷ ಜೊತೆಗಾರರಾಗಿದ್ದ ಬೋಪಣ್ಣ ಮತ್ತು ಎಬ್ಡೆನ್‌ಗೆ ಇದು ಕೊನೆಯ ಟೂರ್ನಿಯಾಗಿತ್ತು.

ಮೊದಲ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಸಿಮೋನ್ ಬೊಲೆಲಿ ಮತ್ತು ಆ್ಯಂಡ್ರಿಯಾ ವಾವಸ್ಸೊರಿ (ಇಟಲಿ) ಜೋಡಿಗೆ ಮಣಿದಿದ್ದರು. ಗುಂಪು ಹಂತದ ಕೊನೆ ಪಂದ್ಯದಲ್ಲಿ ಬೋಪಣ್ಣ–ಎಬ್ಡೆನ್ ಜೋಡಿ ಜರ್ಮನಿಯ ಕೆವಿನ್ ಕ್ರಾವಿಟ್ಜ್ ಮತ್ತು ಟಿಮ್ ಪುಟ್ಜ್ ಜೋಡಿಯನ್ನುಎದುರಿಸಲಿದೆ.

ಕಣಕ್ಕಿಳಿದ ಮೊಹಮ್ಮದ್ ಶಮಿ

ಇಂದೋರ್ (ಪಿಟಿಐ): ಸುಮಾರು ಒಂದು ವರ್ಷದ ನಂತರ ವೇಗಿ ಮೊಹಮ್ಮದ್ ಶಮಿ ಅವರು ಸ್ಪರ್ಧಾತ್ಮಕ ಕ್ರಿಕೆಟ್ ಕಣಕ್ಕೆ ಮರಳಿದರು.

ಹೋಳ್ಕರ್ ಮೈದಾನದಲ್ಲಿ ಬುಧವಾರ ಆರಂಭವಾದ ಸಿ ಗುಂಪಿನ ಪಂದ್ಯದಲ್ಲಿ ತಮ್ಮ ತವರು ಬಂಗಾಳ ತಂಡದಲ್ಲಿ ಶಮಿ ಕಣಕ್ಕಿಳಿದರು. ಮಧ್ಯಪ್ರದೇಶ ಎದುರು 10 ಓವರ್ ಬೌಲಿಂಗ್ ಮಾಡಿದ ಅವರು 34 ರನ್ ನೀಡಿ, 1 ಓವರ್ ಮೇಡನ್ ಮಾಡಿದರು. ಆದರೆ ಒಂದೂ ವಿಕೆಟ್ ಒಲಿಯಲಿಲ್ಲ.

ಶಮಿ ಅವರು 2023ರ ನವೆಂಬರ್ 19ರಂದು ಅಹಮದಾಬಾದಿನಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಆಡಿದ್ದರು. ಅದರ ನಂತರ ಅವರು ಯಾವುದೇ ಪಂದ್ಯದಲ್ಲಿ ಆಡಿರಲಿಲ್ಲ. ಹಿಮ್ಮಡಿಯ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದ ಅವರು ಎನ್‌ಸಿಎ ಪುನಶ್ಚೇತನ ವಿಭಾಗದಲ್ಲಿ ಆರೈಕೆ ಪಡೆದಿದ್ದರು.

ಈ ರಣಜಿ ಪಂದ್ಯದಲ್ಲಿ ಟಾಸ್ ಗೆದ್ದ ಮಧ್ಯಪ್ರದೇಶ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬಂಗಾಳ ತಂಡವು 51.2 ಓವರ್‌ಗಳಲ್ಲಿ 228 ರನ್ ಗಳಿಸಿ ಆಲೌಟ್ ಆಯಿತು. ಇನಿಂಗ್ಸ್ ಆರಂಭಿಸಿರುವ ಆತಿಥೇಯ ತಂಡವು ದಿನದಾಟದ ಅಂತ್ಯಕ್ಕೆ 30 ಓವರ್‌ಗಳಲ್ಲಿ 1 ವಿಕೆಟ್‌ಗೆ 103 ರನ್ ಗಳಿಸಿದೆ.

ಶಮಿ

ಬಂಗಾಳದ ವೇಗಿಗಳಾದ ಇಶಾನ್ ಪೊರೆಲ್, ರಿಷವ್ ವಿವೇಕ್ ಗಾಯಗೊಂಡಿದ್ದಾರೆ. ಮುಕೇಶ್ ಕುಮಾರ್ ಮತ್ತು ಆಕಾಶ್ ದೀಪ್ ಭಾರತ ತಂಡದಲ್ಲಿ ಆಡುತ್ತಿದ್ದಾರೆ. ಆದ್ದರಿಂದ ಶಮಿ ಬಂಗಾಳಕ್ಕೆ ಆಸರೆಯಾಗಬೇಕಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ: 51.2 ಓವರ್‌ಗಳಲ್ಲಿ 228 (ಶಹಬಾಜ್ ಅಹಮದ್ 92, ಅನುಸ್ಟುಪ್ 44, ಆರ್ಯನ್ ಪಾಂಡೆ 47ಕ್ಕೆ4, ಕುಲವಂತ್ ಖೆಜ್ರೊಲಿಯಾ 94ಕ್ಕೆ4) ಮಧ್ಯಪ್ರದೇಶ: 30 ಓವರ್‌ಗಳಲ್ಲಿ 1 ವಿಕೆಟ್‌ಗೆ 103 (ಶುಭ್ರಾಂಶು ಸೇನಾಪತಿ ಬ್ಯಾಟಿಂಗ್ 44, ರಜತ್ ಪಾಟೀದಾರ್ ಬ್ಯಾಟಿಂಗ್ 41, ಕೈಫ್ 31ಕ್ಕೆ1)

ಇಂದಿನಿಂದ ಮಿನಿ ಒಲಿಂಪಿಕ್ ಕೂಟ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 4,000 ಕ್ರೀಡಾಪಟುಗಳು, ಗುರುವಾರ ನಗರದಲ್ಲಿ ಆರಂಭವಾಗುವ ಏಳು ದಿನಗಳ ಮೂರನೇ ಮಿನಿ ಒಲಿಂಪಿಕ್ (14 ವರ್ಷದೊಳಗಿನವರ) ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಫೆನ್ಸಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಕೊಕ್ಕೊ, ಕಬಡ್ಡಿ, ವಾಲಿಬಾಲ್, ಈಜು ಸೇರಿದಂತೆ 24 ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗುತ್ತಿದೆ. ರಾಜ್ಯ ಸರ್ಕಾರ ಈ ಕ್ರೀಡೆಗಳಿಗೆ ₹3 ಕೋಟಿ ಮಂಜೂರು ಮಾಡಿದೆ ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಅಧ್ಯಕ್ಷ ಕೆ.ಗೋವಿಂದರಾಜ್ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದರು.

ಕೆಒಎ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಈ ಕೂಟವನ್ನು ನಡೆಸುತ್ತಿದೆ.

ಕೆಒಎ ಮಹಾ ಕಾರ್ಯದರ್ಶಿ ಟಿ.ಅನಂತರಾಜು, ಇಲಾಖೆ ಕಾರ್ಯದರ್ಶಿ ಡಿ.ರಣದೀಪ್ ಅವರೂ ಹಾಜರಿದ್ದರು.

ಎಳೆಯ ಪ್ರತಿಭಾನ್ವಿತರಿಗೆ ಬಹುಮಾನ

ಈ ಕ್ರೀಡೆಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ 15 ಮಂದಿ ಅಥ್ಲೀಟುಗಳಿಗೆ ಸೆಂಟರ್ ಫಾರ್ ಸ್ಪೋರ್ಟ್ಸ್ ಸೈನ್ಸ್‌ನಿಂದ (ಸಿಒಎಸ್) ತಲಾ ₹5000 ನಗದು ಬಹುಮಾನ ನೀಡಲಾಗುವುದು. ಈ ಸ್ಪರ್ಧಿಗಳನ್ನು ಕೆಒಎ ಆಯ್ಕೆ ಮಾಡಲಿದೆ ಎಂದು ಸಿಒಎಸ್‌ನ ನಿರ್ದೇಶಕ ಅಂಥೋನಿ ಚಾಕೊ ತಿಳಿಸಿದರು.

ಇದರ ಜೊತೆಗೆ 200 ಅತ್ಯುತ್ತಮ ಅಥ್ಲೀಟುಗಳನ್ನು ಗುರುತಿಸಿ ಒಂದು ತಿಂಗಳ ತರಬೇತಿ ನೀಡಲಾಗುವುದು. ಅವರ ಕ್ರೀಡಾ ವಿಜ್ಞಾನ ಮೌಲ್ಯಮಾಪನ ನಡೆಸಲಾಗುವುದು. ಮೊದಲ ಸಲ ಇಂಥ ಯೋಜನೆ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಡ್ರೀಮ್ ಸ್ಪೋರ್ಟ್ಸ್ ಫೌಂಡೇಷನ್ ಇದರ ಪ್ರಾಯೋಜಕತ್ವ ವಹಿಸುತ್ತಿದೆ.

ಐಪಿಎಲ್ ಬಿಡ್ ಕಾಮೆಂಟ್ರಿಗೆ ಪಾಂಟಿಂಗ್, ಲ್ಯಾಂಗರ್

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ರಿಕಿ ಪಾಂಟಿಂಗ್ ಮತ್ತು ಜಸ್ಟಿನ್ ಲ್ಯಾಂಗರ್ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಆಟಗಾರರ ಬಿಡ್‌ನಲ್ಲಿ ಕಾಮೆಂಟ್ರಿ ಮಾಡಲಿದ್ದಾರೆ. ಅದಕ್ಕಾಗಿ ಅವರು ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಸರಣಿಯ ಮೊದಲ ಪಂದ್ಯದ ವೀಕ್ಷಕ ವಿವರಣೆಗೆ ಅಲಭ್ಯರಾಗಿದ್ದಾರೆ.

ಸೌದಿ ಅರೇಬಿಯಾದ ಜೆದ್ದಾದಲ್ಲಿ ಇದೇ 24 ಮತ್ತು 25ರಂದು ಮೆಗಾ ಹರಾಜು ನಡೆಯಲಿದೆ.

ಆಸ್ಟ್ರೇಲಿಯಾ ಟೆಸ್ಟ್ ಪಂದ್ಯದ ಪ್ರಸಾರ ಮಾಡಲಿರುವ ಚಾನೆಲ್ ಸೆವೆನ್ ವಾಹಿನಿಯಲ್ಲಿ ಪಾಂಟಿಂಗ್ ಮತ್ತು ಲ್ಯಾಂಗರ್ ಕಾಮೆಂಟ್ರಿ ಬಾಕ್ಸ್‌ನಲ್ಲಿ ಕಾಣಿಸಿಕೊಳ್ಳದಿರುವ ಸಾಧ್ಯತೆ ಇದೆ ಎಂದು 'ದ ಏಜ್' ಪತ್ರಿಕೆ ವರದಿ ಮಾಡಿದೆ.

ಗಂಭೀರ್‌ಗೆ ರಿಕಿ ತಿರುಗೇಟು: 'ವಿರಾಟ್ ಕೊಹ್ಲಿ ಕುರಿತ ನನ್ನ ಹೇಳಿಕೆಗೆ ಪ್ರತಿಕ್ರಿಯೆ ನೋಡಿ ಅಚ್ಚರಿಗೊಂಡೆ. ಆದರೆ ಅದನ್ನು ನೀಡಿದ್ದು ಗೌತಮ್ ಗಂಭೀರ್ ಎಂಬುದನ್ನು ನೋಡಿ ಅಚ್ಚರಿಯಾಗಲಿಲ್ಲ. ಅವರದ್ದು ವಿಚಿತ್ರ ಮನೋಭಾವ. ನಮ್ಮಿಬ್ಬರ ನಡುವಿನ 'ಬಾಂಧವ್ಯ'ಗೆ ಇತಿಹಾಸವಿದೆ. ಡೆಲ್ಲಿ ಕ್ಯಾಪಿಟಲ್ಸ್ ನಲ್ಲಿ ಅವರಿಗೆ ನಾನು ಕೋಚ್ ಆಗಿದ್ದೆ' ಎಂದು ರಿಕಿ ಪಾಂಟಿಂಗ್ ಹೇಳಿದ್ದಾರೆ.

ಅಂಕಿತ್‌ಗೆ ಆಘಾತ: ಫೈನಲ್‌ಗೆ ಅಮಿತ್

ಪ್ರಜಾವಾಣಿ ವಾರ್ತೆ

ಮೈಸೂರು: ಶ್ರೇಯಾಂಕರಹಿತ ಆಟಗಾರ ಅಮಿತ್ ಶರ್ಮ ಅವರು ಎರಡನೇ ಶ್ರೇಯಾಂಕದ ಅಂಕಿತ್ ಮಲ್ಲಿಕ್ ಅವರಿಗೆ ಆಘಾತ ನೀಡುವ ಮೂಲಕ ಅಂಚೆ ನೌಕರರ 38ನೇ ಅಖಿಲ ಭಾರತ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್ ಪ್ರವೇಶಿಸಿದರು.

ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಉತ್ತರಪ್ರದೇಶದ ಅಮಿತ್ 21-23, 21-16, 21-14 ರಿಂದ ಹರಿಯಾಣದ ಮಲ್ಲಿಕ್ ಎದುರು ಅಚ್ಚರಿಯ ಗೆಲುವು ದಾಖಲಿಸಿದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಹಿಮಾಚಲ ಪ್ರದೇಶದ ಅಜಯ್ ಕೈತ್ 21–19, 11–5ರಿಂದ ಮುಂದಿದ್ದ ವೇಳೆ ಕೇರಳದ ರಂಜಿತ್ ಸನ್ನಿ ಗಾಯದ ಕಾರಣಕ್ಕೆ ಪಂದ್ಯದಿಂದ ಹೊರ ನಡೆದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಗುಜರಾತ್‌ನ ವೈಷ್ಣವಿ ಬರಿಯಾ ಪಶ್ಚಿಮ ಬಂಗಾಳದ ಅನುರಿಯಾ ದಾಸ್ ಫೈನಲ್‌ಗೆ ಲಗ್ಗೆ ಇಟ್ಟರು. ಡಬಲ್ಸ್‌ನಲ್ಲಿ ಕರ್ನಾಟಕದ ಆರ್. ಲೀಲಾ ಲಕ್ಷ್ಮಿ ದೆಹಲಿಯ ಮಯೂರಿ ಯಾದವ್ ಜೊತೆಗೂಡಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಇತರೆ ವಿಭಾಗದ ಪಂದ್ಯಗಳ ಫಲಿತಾಂಶ (ಸೆಮಿಫೈನಲ್ ಮಾತ್ರ): ಪುರುಷರು: ಸಿಂಗಲ್ಸ್ (45 ವರ್ಷ ಮೇಲ್ಪಟ್ಟವರು): ಮಧ್ಯಪ್ರದೇಶದ ಕುನಾಲ್ ಮಕ್ವಾನಗೆ 21–14, 21–11ರಿಂದ ಕೇರಳದ ಜೋಮನ್ ಜಾರ್ಜ್ ವಿರುದ್ಧ; ಹಿಮಾಚಲ ಪ್ರದೇಶದ ವಿಕಾಸ್ ಸೂದ್‌ಗೆ 21–14, 22–20ರಿಂದ ಗೆಲುವು. ಡಬಲ್ಸ್: ತಮಿಳುನಾಡಿನ ಈ. ಯುವರಾಜ್ – ಸುಬ್ರಮಣಿಯಂ ಜೋಡಿಗೆ 21–13, 21–13ರಿಂದ ಕೇರಳದ ಆಕಾಶ್ ಶಿವಾಜಿ– ಎಂ. ಶ್ರೀಧಿನ್ ವಿರುದ್ಧ ಜಯ; ಶುಭಂ ಯಾದವ್ (ದೆಹಲಿ)– ಸಾದ್ವಿನ್ ಗೌಡ (ಒಡಿಶಾ) ಜೋಡಿಗೆ 14–21, 21–8, 21–13ರಿಂದ ಅಂಕಿತ್ ಮಲ್ಲಿಕ್ (ಹರಿಯಾಣ), ಪ್ರಮೇಶ್ ಪಟಿದಾರ್ ವಿರುದ್ಧ ಗೆಲುವು.

ಮಹಿಳೆಯರ ಸಿಂಗಲ್ಸ್: ಗುಜರಾತ್‌ನ ವೈಷ್ಣವಿ ಅವರಿಗೆ 21–13, 21–13ರಿಂದ ಹಿಮಾಚಲ ಪ್ರದೇಶದ ಚಾವಿ ಠಾಕೂರ್ ಎದುರು; ಪಶ್ಚಿಮ ಬಂಗಾಳದ ಅನುರಿಯಾ ದಾಸ್‌ಗೆ 14–21, 21–12, 21–10ರಿಂದ ಅಸ್ಸಾಂನ ಮಧಫಾ ಬೋರಾ ಎದುರು ಗೆಲುವು.

ಮಹಿಳಾ ಎಸಿಟಿ ಹಾಕಿ: ಇಂದು ಥಾಯ್ಲೆಂಡ್ ವಿರುದ್ಧ ಪಂದ್ಯ

ಲೋಪಗಳನ್ನು ಸರಿಪಡಿಸಲು ಅವಕಾಶ

ರಾಜಗೀರ್ (ಪಿಟಿಐ): ಎರಡು ಪಂದ್ಯಗಳಲ್ಲಿ ಸತತ ಗೆಲುವುಗಳನ್ನು ಪಡೆದು ಶುಭಾರಂಭ ಮಾಡಿರುವ ಭಾರತ ತಂಡವು, ಗುರುವಾರ ನಡೆಯುವ ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಥಾಯ್ಲೆಂಡ್ ತಂಡವನ್ನು ಎದುರಿಸಲಿದ್ದು, ಇದುವರೆಗಿನ ಲೋಪಗಳನ್ನು ತಿದ್ದಿಕೊಳ್ಳುವ ಅವಕಾಶ ಹೊಂದಿದೆ.

ಆತಿಥೇಯ ಭಾರತ ಮತ್ತು ಒಲಿಂಪಿಕ್ ಬೆಳ್ಳಿ ವಿಜೇತ ಚೀನಾ ತಂಡಗಳು ಆಡಿರುವ ಎರಡೂ ಪಂದ್ಯಗಳನ್ನು ಗೆದ್ದು ಸಮಾನ ಅಂಕ ಗಳಿಸಿವೆ. ಆದರೆ ಚೀನಾದ ಗೋಲು ವ್ಯತ್ಯಾಸ ಉತ್ತಮವಾಗಿದೆ. ಚೀನಾದ ಗೋಲು ವ್ಯತ್ಯಾಸ 20 ಇದ್ದರೆ, ಭಾರತದ ಗೋಲು ವ್ಯತ್ಯಯ 5. ಥಾಯ್ಲೆಂಡ್ ವಿರುದ್ಧ ಗುರುವಾರ ಭರ್ಜರಿ ಗೆಲುವು ದಾಖಲಿಸಿದರೆ ಅದು ತಂಡದ ನೆರವಿಗೆ ಬರಲಿದೆ.

ಈ ಪಂದ್ಯದ ನಂತರ ಭಾರತಕ್ಕೆ ಪ್ರಬಲ ಚೀನಾ ಮತ್ತು ಜಪಾನ್ ವಿರುದ್ಧ ಆಡಲು ಇದೆ. ರೌಂಡ್‌ರಾಬಿನ್ ಹಂತದ ನಂತರ ಮೊದಲ ನಾಲ್ಕು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯುತ್ತವೆ.

ಭಾರತ, ಮೊದಲೆರಡೂ ಪಂದ್ಯಗಳಲ್ಲಿ ಜಯಗಳಿಸಿದೆ ನಿಜ, ಆದರೆ ಅನೇಕ ಬಾರಿ ಗೋಲು ಗಳಿಸುವ ಉತ್ತಮ ಅವಕಾಶಗಳನ್ನು ಸೃಷ್ಟಿಸಿಕೊಂಡ ನಂತರ ಕೊನೆಯಲ್ಲಿ ಎಡವುತ್ತಿದೆ.

'ಭಾರತದ ಆಟಗಾರ್ತಿಯರು ಎದುರಾಳಿಯ ಗೋಲು ಆವರಣದಲ್ಲಿ ಉತ್ತಮ ಅವಕಾಶಗಳನ್ನು ಪರಿವರ್ತಿಸಲು ವಿಫಲರಾಗುತ್ತಿದ್ದಾರೆ' ಎಂದು ಚೀಫ್ ಕೋಚ್ ಹರೇಂದ್ರ ಸಿಂಗ್, ಮಂಗಳವಾರದ ಪಂದ್ಯದ ನಂತರ ಒಪ್ಪಿಕೊಂಡಿದ್ದರು.

ಭಾರತ ತಂಡದ ಚಿಂತೆಗೆ ಕಾರಣವಾಗಿರುವ ಮತ್ತೊಂದು ವಿಷಯವೆಂದರೆ ಪೆನಾಲ್ಟಿ ಕಾರ್ನರ್‌ಗಳನ್ನು ಪರಿವರ್ತಿಸುವಲ್ಲಿ ವಿಫಲವಾಗುತ್ತಿರುವುದು. ಮಲೇಷ್ಯಾ ವಿರುದ್ಧ 11 ಪೆನಾಲ್ಟಿ ಕಾರ್ನರ್‌ಗಳು ದೊರೆತರೂ, ಮೂರಷ್ಟೇ ಗೋಲಾಗಿದ್ದವು.

ಭಾರತದ ಮುಂಚೂಣಿ ಆಟಗಾರ್ತಿಯರಲ್ಲಿ ಸಂಗೀತಾ ಕುಮಾರಿ ಮತ್ತು ದೀಪಿಕಾ ಉತ್ತಮ ಪ್ರದರ್ಶನ ನೀಡಿದ್ದು, ತಲಾ ಮೂರು ಗೋಲುಗಳನ್ನು ಗಳಿಸಿದ್ದಾರೆ. ಇತರ ಫಾರ್ವರ್ಡ್ ಆಟಗಾರ್ತಿಯರಾದ ಶರ್ಮಿಳಾ ದೇವಿ, ಪ್ರೀತಿ ದುಬೆ, ಬ್ಯೂಟಿ ಡಂಗ್‌ಡಂಗ್ ಕೂಡ ಹೊಣೆಯರಿತು ಆಡಬೇಕಾಗಿದೆ.

ಥಾಯ್ಲೆಂಡ್ ವಿರುದ್ಧದ ಗೆಲುವು, ಭಾರತದ ಸೆಮಿಫೈನಲ್ ಸ್ಥಾನವನ್ನು ಖಚಿತಪಡಿಸಲಿದೆ. ವಿಶ್ವ ಕ್ರಮಾಂಕದಲ್ಲಿ ಭಾರತ 9ನೇ ಸ್ಥಾನದಲ್ಲಿದೆ. ಥಾಯ್ಲೆಂಡ್ 29ನೇ ಸ್ಥಾನದಲ್ಲಿದೆ. ಹೀಗಾಗಿ ಭಾರತಕ್ಕೆ ಈ ಪಂದ್ಯ ಹೆಚ್ಚು ಕಠಿಣವಾಗದು. ಟೂರ್ನಿಯಲ್ಲಿ ಥಾಯ್ಲೆಂಡ್ ಸದ್ಯ ಕೊನೆಯ ಸ್ಥಾನದಲ್ಲಿದೆ.

ಗುರುವಾರ ನಡೆಯುವ ಇತರ ಪಂದ್ಯಗಳಲ್ಲಿ ಮಲೇಷ್ಯಾ, ಚೀನಾ ತಂಡವನ್ನು ಎದುರಿಸಲಿದೆ. ಚೀನಾ ತಂಡವು, ಜಪಾನ್ ವಿರುದ್ಧ ಆಡಲಿದೆ.

ಭಾರತ ಹಾಕಿ ತಂಡದ ಆಟಗಾರ್ತಿಯರ ಸಂತಸದ ಕ್ಷಣ....

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಕರ್ನಾಟಕಕ್ಕೆ ಸೋಲು

ಚೆನ್ನೈ (ಪಿಟಿಐ): ಒಡಿಶಾ ತಂಡ, ಪುರುಷರ ಸೀನಿಯರ್ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಬುಧವಾರ ಕರ್ನಾಟಕ ತಂಡವನ್ನು ಶೂಟೌಟ್‌ನಲ್ಲಿ 3–1 ರಿಂದ ಸೋಲಿಸಿತು. ನಿಗದಿ ಆಟ ಮುಗಿದಾಗ ಸ್ಕೋರ್ 3–3 ಸಮನಾಗಿತ್ತು.

ಪೃಥ್ವಿರಾಜ್ ಜಿ.ಎನ್. (5ನೇ ನಿಮಿಷ), ಭರತ್ ಮಹಾಲಿಂಗಪ್ಪ ಕುರ್ತಕೋಟಿ (11ನೇ ನಿಮಿಷ) ಮತ್ತು ವಿಶ್ವಾಸ್ ಜಿ (26ನೇ ನಿಮಿಷ) ಅವರು ಕರ್ನಾಟಕ ತಂಡದ ಪರ ಗೋಲು ಗಳಿಸಿದರು. ಒಡಿಶಾ ಪರ ಮಂಗಲ್ ಲೋಹಾರ್ (14ನೇ ನಿಮಿಷ), ಶಿಲಾನಂದ ಲಾಕ್ರಾ (20ನೇ ನಿಮಿಷ) ಮತ್ತು ಪ್ರತಾಪ್ ಲಾಕ್ರಾ (50ನೇ ನಿಮಿಷ) ಗೋಲು ಗಳಿಸಿದರು.

ಶೂಟೌಟ್‌ನಲ್ಲಿ ಒಡಿಶಾ ಗೋಲ್‌ಕೀಪರ್ ಸಾಹಿಲ್ ಕುಮಾರ್ ನಾಯಕ್, ಒಂದು ಗೋಲನ್ನು ಮಾತ್ರ ಬಿಟ್ಟುಕೊಟ್ಟರು. ಒಡಿಶಾದ ಮೂವರು ತಮ್ಮ ಯತ್ನಗಳಲ್ಲಿ ಯಶ ಕಂಡರು. ಒಡಿಶಾ 3–1ರಲ್ಲಿ ಶೂಟೌಟ್‌ನಲ್ಲಿ ಜಯಶಾಲಿಯಾಯಿತು.

|| ಓಂ ಶ್ರೀ ಮಂಜುನಾಥಾಯ ನಮಃ ||

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.)

ಧರ್ಮಸ್ಥಳ - 574 216

skdrdp

ಸ್ವ-ಸಹಾಯ ಸಂಘಗಳ ಸದಸ್ಯರಿಗೆ ಲಾಭಾಂಶ ವಿತರಣಾ ಕಾರ್ಯಕ್ರಮ

ದಿನಾಂಕ : 14.11.2024, ಗುರುವಾರ **ಸಮಯ:** ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ಅಮೃತವರ್ಷಿಣಿ, ಧರ್ಮಸ್ಥಳ

ಉದ್ಘಾಟಕರು:
ಶ್ರೀಮತಿ ನಿರ್ಮಲಾ ಸೀತಾರಾಮನ್
ಸನ್ಮಾನ್ಯ ಕೇಂದ್ರ ಹಣಕಾಸು ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ:
ಡಾ|| ಡಿ. ವೀರೇಂದ್ರ ಹೆಗ್ಗಡೆಯವರು
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ

ಗೌರವ ಉಪಸ್ಥಿತಿ:

ಶ್ರೀ ದಿನೇಶ್ ಗುಂಡೂರಾವ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಉಸ್ತುವಾರಿ ಸಚಿವರು, ದಕ್ಷಿಣಕನ್ನಡ.

ಶ್ರೀ ಶಾಜಿ ಕೆ.ವಿ.
ಅಧ್ಯಕ್ಷರು, ನಬಾರ್ಡ್, ಮುಂಬೈ.

ಶ್ರೀಮತಿ ಹೇಮಾವತಿ ವಿ. ಹೆಗ್ಗಡೆ
ಅಧ್ಯಕ್ಷರು
ಜ್ಞಾನವಿಕಾಸ ಕಾರ್ಯಕ್ರಮ, SKDRDP

ಕ್ಯಾಪ್ಟನ್ ಬ್ರಿಜೇಶ್ ಚೌಟ
ಸಂಸದರು
ದಕ್ಷಿಣಕನ್ನಡ ಲೋಕಸಭಾ ಕ್ಷೇತ್ರ

ಶ್ರೀ ಹರೀಶ್ ಪೂಂಜ
ಶಾಸಕರು
ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ

ಸಾಮಾನ್ಯವಾಗಿ ಮೂರು ವರ್ಷಕ್ಕೊಮ್ಮೆ ಅರ್ಹ ಸಂಘಗಳಿಗೆ ಲಾಭಾಂಶ ವಿತರಣೆ ಮಾಡುತ್ತಿದ್ದು , ಕಳೆದ ಸಾಲಿನ ಲಾಭಾಂಶವನ್ನು 2021 ರಲ್ಲಿ ಮಾಡಲಾಗಿತ್ತು.

ಯೋಜನೆ ನಿರ್ವಹಣೆಯಲ್ಲಿ ಒಟ್ಟು ಸಂಘಗಳು	ಒಳಗೊಂಡ ಒಟ್ಟು ಸದಸ್ಯರು	ಪ್ರಸ್ತುತ ಹೊರಬಾಕಿ ಸಾಲ	ಬಿ.ಸಿ. ಗ್ರಾಹಕ ಸೇವಾ ಕೇಂದ್ರಗಳು	ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು
6,45,285	54,47,398	₹ 24,629 ಕೋಟಿ	13,161	45,000
ಸಾಲದ ಬಡ್ಡಿದರ 14% ವಾರ್ಷಿಕ ಕಡಿತ ಬಡ್ಡಿದರ (ಬ್ಯಾಂಕ್ ಬಡ್ಡಿದರ* + ಬಿ.ಸಿ. ಸೇವಾಶುಲ್ಕ ಸೇರಿ)	**ಸಾಲ ಸೌಲಭ್ಯ** ದೇಶದ ಪ್ರಮುಖ 6 ಬ್ಯಾಂಕುಗಳಿಂದ ನೇರ ಸಾಲ ಸೌಲಭ್ಯ.	**ತಂತ್ರಜ್ಞಾನ ಮತ್ತು ಪಾರದರ್ಶಕತೆ** ISO-27001 ಅಂತರಾಷ್ಟ್ರೀಯ ಮಾನ್ಯತೆ ಪಡೆದ ದೇಶದ ಏಕೈಕ BC ಸಂಸ್ಥೆ SKDRDP BC Trust	**ಯೋಜನೆಯ ಪಾತ್ರ** ಬ್ಯಾಂಕುಗಳಿಗೆ ಬಿ.ಸಿ.ಯಾಗಿ ಸಂಘಗಳ ಸಂಪೂರ್ಣ ನಿರ್ವಹಣೆ ಮತ್ತು ಮರುಪಾವತಿ ಜವಾಬ್ದಾರಿ.	**ಸಂಸ್ಥೆಯ ನೋಂದಾವಣೆ ಮತ್ತು ಉದ್ದೇಶ** ಚಾರಿಟೇಬಲ್ ಟ್ರಸ್ಟ್ ಆಗಿ ನೋಂದಾವಣೆ ಆಗಿದ್ದು , ಸಂಸ್ಥೆಯ ಯಾವುದೇ ಮಿಗತೆಯನ್ನು ಸಂಸ್ಥೆಯನ್ನು ಸ್ಥಾಪಿಸಿದ ಪ್ರವರ್ತಕರಿಗಾಗಲೀ, ಟ್ರಸ್ಟಿಗಳಿಗಾಗಲೀ ವಿತರಣೆ ಮಾಡುವಂತಿಲ್ಲ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಇಂಡಿಯನ್ ಟ್ರಸ್ಟ್ ಕಾಯ್ದೆಯಡಿ ನೋಂದಾವಣೆ ಆಗಿದ್ದರಿಂದ ಸಂಸ್ಥೆಗೆ ಬ್ಯಾಂಕ್ ನೀಡುವ ಬಿ.ಸಿ. ಸೇವಾಶುಲ್ಕ ಹಾಗೂ ಇತರ ಯಾವುದೇ ಆದಾಯವನ್ನು ತನ್ನ ಖರ್ಚು ವೆಚ್ಚಗಳಿಗೆ ಹಾಗೂ ಸುಸ್ಥಿರತೆ ಕಾಯ್ದುಕೊಳ್ಳಲು ವಿನಿಯೋಗಿಸುತ್ತಿದೆ. ಈ ಟ್ರಸ್ಟಿನ ನೋಂದಾವಣೆ ಅನ್ವಯ ಯೋಜನೆಗೆ ಬರುವ ಯಾವುದೇ ಆದಾಯವನ್ನು ಸಂಸ್ಥೆಯನ್ನು ಸ್ಥಾಪಿಸಿದ ಪ್ರವರ್ತಕರಿಗಾಗಲಿ, ಟ್ರಸ್ಟಿಗಳಿಗಾಗಲಿ ಹೋಗುವಂತಿಲ್ಲ. ಆದುದರಿಂದಲೇ ಈ ಯೋಜನೆಯು ತನ್ನ ಆದಾಯದ ಮಿಗತೆಯನ್ನು ಸಮಾಜದ ಹಾಗೂ ಸಮುದಾಯದ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿದೆ. ಯೋಜನೆಯ ಸಮಾಜಮುಖಿ ಪ್ರಮುಖ ಕಾರ್ಯಕ್ರಮಗಳಾದ ಸುಜ್ಞಾನನಿಧಿ ಶಿಷ್ಯವೇತನ, ಅಶಕ್ತರಿಗೆ ಮಾಸಾಶನ, ವಾತ್ಸಲ್ಯ ಕಾರ್ಯಕ್ರಮ, ನಮ್ಮೂರು ನಮ್ಮ ಕೆರೆ - ಕೆರೆ ಪುನಶ್ಚೇತನ ಕಾರ್ಯಕ್ರಮ, ಜ್ಞಾನದೀಪ ಶಿಕ್ಷಣ ಕಾರ್ಯಕ್ರಮ, ಗ್ರಾಮಕಲ್ಯಾಣ ಯೋಜನೆ, ಜನಮಂಗಲ ಕಾರ್ಯಕ್ರಮ, ಶುದ್ಧಗಂಗಾ ಕಾರ್ಯಕ್ರಮ, ಜನಜಾಗೃತಿ ಕಾರ್ಯಕ್ರಮ, ಸಾಮಾಜಿಕ ಅರಣ್ಯೀಕರಣ, ಹಿಂದೂ ರುದ್ರಭೂಮಿ ಅಭಿವೃದ್ಧಿ , ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಯೋಜನೆಯ ಕಾರ್ಯವೈಖರಿಯ ಬಗ್ಗೆ ಸ್ವ-ಸಹಾಯ ಸಂಘಗಳಿಗೆ ಸಾಲ ನೀಡುತ್ತಿರುವ ಬ್ಯಾಂಕುಗಳ ಅಭಿಪ್ರಾಯಗಳು

SBI The banker to every Indian

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ನಮ್ಮ ಬ್ಯಾಂಕ್‌ನ ಅತೀ ದೊಡ್ಡ ಬಿಸಿನೆಸ್ ಕರೆಸ್ಪಾಂಡೆಂಟ್ (ಬಿ.ಸಿ) ಸಂಸ್ಥೆಯಾಗಿ ಸೇವೆ ಸಲ್ಲಿಸುತ್ತಿದೆ. ಈ ವ್ಯವಸ್ಥೆಯಲ್ಲಿ ಒಟ್ಟು ಸುಮಾರು 2 ಲಕ್ಷ ಸ್ವಸಹಾಯ ಸಂಘಗಳು ನಮ್ಮ ಬ್ಯಾಂಕ್‌ನಿಂದ ಸಾಲ ಸೌಲಭ್ಯ ಪಡೆದುಕೊಂಡಿದೆ. ಈ ವ್ಯವಸ್ಥೆಯು ಲಕ್ಷಾಂತರ ಬಡ ಹಾಗೂ ಗ್ರಾಮೀಣ ಕುಟುಂಬಗಳಿಗೆ ಆಶಾಕಿರಣವಾಗಿ ನಿಂತಿದೆ. SKDRDP BC Trust (R.) ಒಂದು ಸ್ವಯಂಸೇವಾ ಸಂಸ್ಥೆಯಾಗಿ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಅನುಷ್ಠಾನಿಸುತ್ತಾ ಬಂದಿದೆ. SBI ಹಾಗೂ SKDRDP ಸಂಸ್ಥೆಗಳ ನಡುವೆ 10 ವರ್ಷದ ಭಾಂದವ್ಯವಿದೆ. ಈ ಭಾಂಧವ್ಯವು ಇನ್ನಷ್ಟು ಕುಟುಂಬಗಳಿಗೆ ಆಶಾಕಿರಣವಾಗಲಿ ಎಂದು ಆಶಿಸುತ್ತೇವೆ.

ಶ್ರೀಮತಿ ಜೂಹಿ ಸ್ಮಿತಾ ಸಿನ್ಹ, ಮುಖ್ಯ ಪ್ರಧಾನ ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್, ಸ್ಥಳೀಯ ಪ್ರಧಾನ ಕಚೇರಿ, ಬೆಂಗಳೂರು.

Bank of Baroda

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ನ ಅತ್ಯುತ್ತಮ ಬಿ.ಸಿ ಸೇವೆಯಿಂದಾಗಿ ಇಂದು ನಮ್ಮ ರಾಜ್ಯದಲ್ಲಿ ಸುಮಾರು 1,61,000 ಸ್ವಸಹಾಯ ಸಂಘಗಳಿಗೆ ನಮ್ಮ ಬ್ಯಾಂಕ್‌ನಿಂದ ಸಾಲ ಸೌಲಭ್ಯ ದೊರಕಿಸಿಕೊಡುವಂತಾಗಿದೆ. ಪ್ರಸ್ತುತ ರೂ. 5,008 ಕೋಟಿ ಮೊತ್ತದ ಹೊರಬಾಕಿ ಚಾಲ್ತಿ ಸಾಲ ಇರುತ್ತದೆ. ಈ ಉತ್ತಮ ವ್ಯವಸ್ಥೆಯಿಂದಾಗಿ ಬ್ಯಾಂಕಿನ ಆರ್ಥಿಕ ಸಾಲ ಸೌಲಭ್ಯಗಳು ರಾಜ್ಯದ ಹಳ್ಳಿ-ಹಳ್ಳಿಗೂ ತಲುಪಿ ರೈತರ, ಬಡವರ ಹಾಗೂ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಕಾರಣವಾಗಿದೆ. ಯೋಜನೆಯು ಸ್ವಸಹಾಯ ಸಂಘಗಳನ್ನು ರಚಿಸಿ, ತರಬೇತಿಗೊಳಿಸಿ, ನಿರ್ವಹಣೆ ಮಾಡುವುದಲ್ಲದೇ, ಮರುಪಾವತಿಯ ಎಲ್ಲಾ ಪ್ರಕ್ರಿಯೆಗಳನ್ನು ನಿರ್ವಹಿಸುತ್ತದೆ.

ಶ್ರೀ ರಾಜೇಶ್ ಖನ್ನ, ಮಹಾಪ್ರಬಂಧಕರು ಮತ್ತು ವಲಯ ಮುಖ್ಯಸ್ಥರು, ಬ್ಯಾಂಕ್ ಆಫ್ ಬರೋಡ, ಮಂಗಳೂರು ವಿಭಾಗ

Bank of Maharashtra

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಬ್ಯಾಂಕಿನ ಬಿಸಿನೆಸ್ ಕರೆಸ್ಪಾಂಡೆಂಟ್ ಮಾದರಿಯಲ್ಲಿ ಮಾಡಿರುವ ಪರಿವರ್ತನಾತ್ಮಕ ಸ್ವ-ಸಹಾಯ ಸಂಘ ಚಳುವಳಿಯನ್ನು ಬ್ಯಾಂಕ್ ಆಫ್ ಮಹಾರಾಷ್ಟ್ರವು ಹೆಮ್ಮೆಯಿಂದ ಬೆಂಬಲಿಸುತ್ತದೆ. ಲಾಭಾಂಶ ವಿತರಣಾ ಕಾರ್ಯಕ್ರಮವು ಬಿ.ಸಿ ಟ್ರಸ್ಟ್ ನವರು ಸ್ವ-ಸಹಾಯ ಸಂಘಗಳನ್ನು ಯಾವ ರೀತಿ ಮುನ್ನಡೆಸಿದ್ದಾರೆ, ಮಹಿಳೆಯರು ಹಾಗೂ ಗ್ರಾಮೀಣ ಜನರ ಆರ್ಥಿಕ ಸೇರ್ಪಡೆಗೆ ಹೇಗೆ ಕಾರಣವಾಗಿದೆ ಎಂಬುದನ್ನು ತೋರಿಸುತ್ತದೆ. ಸ್ವ-ಸಹಾಯ ಸಂಘಗಳ ಸದಸ್ಯರಿಗೆ ತರಬೇತಿ ಮತ್ತು ಸೂಕ್ತ ರೀತಿಯ ಮಾರ್ಗದರ್ಶನಗಳನ್ನು ನೀಡಿ ಸದಸ್ಯರನ್ನು ಉತ್ತಮ ಸ್ವಾವಲಂಭಿಗಳನ್ನಾಗಿ ಮತ್ತು ಉತ್ತಮ ನಾಯಕರನ್ನಾಗಿ ಸೃಷ್ಠಿ ಮಾಡಿದೆ. ಎಲ್ಲಾ ಸ್ವ-ಸ್ವಹಾಯ ಸಂಘಗಳ ಸದಸ್ಯರಿಗೂ ಅಭಿನಂದನೆಗಳು, ಎಲ್ಲರಿಗೂ ಒಳ್ಳೆಯದಾಗಲಿ.

ಶ್ರೀ ಸುಜೀತ್ ಡಿಸೋಜ, ವಲಯ ವ್ಯವಸ್ಥಾಪಕರು, ಬ್ಯಾಂಕ್ ಆಫ್ ಮಹಾರಾಷ್ಟ್ರ , ಹುಬ್ಬಳ್ಳಿ-ವಲಯ

IDBI BANK Bank Aisa Dost Jaisa

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಸಂಸ್ಥೆಯು ಸ್ವಸಹಾಯ ಸಂಘಗಳನ್ನು ರಚಿಸಿ ಜನಸಾಮಾನ್ಯರ ಆರ್ಥಿಕ ಸಾಮಾಜಿಕ ಸುಧಾರಣೆಗಾಗಿ ಬೇಕಾಗುವ ಎಲ್ಲಾ ರೂಪುರೇಷಗಳನ್ನು ಒದಗಿಸುತ್ತದೆ. ಸಂಘಗಳಲ್ಲಿ ಆರ್ಥಿಕ ಶಿಸ್ತು, ಉಳಿತಾಯ ಮನೋಭಾವನೆ, ಸಾಲ ಸೌಲಭ್ಯಗಳ ಸದ್ಬಳಕೆ ಕೌಶಲ್ಯತೆ ಬೆಳೆಸಿ ರಾಜ್ಯದ ಜನಸಾಮಾನ್ಯರ ಆರ್ಥಿಕ ಸೇರ್ಪಡೆಗೆ ಬಹುದೊಡ್ಡ ಕೊಡುಗೆ ನೀಡಿದೆ.
ನಮ್ಮ ಬ್ಯಾಂಕ್ ಮೂಲಕ ರಾಜ್ಯದಲ್ಲಿ ಸುಮಾರು 95,660 ಸ್ವ-ಸಹಾಯ ಸಂಘಗಳಿಗೆ ಬಿ.ಸಿ ವ್ಯವಸ್ಥೆಯಲ್ಲಿ ಸಾಲ ಸೌಲಭ್ಯವನ್ನು ನೀಡುತ್ತಿದೆ. ಪ್ರಸ್ತುತ ರೂ. 2,667 ಕೋಟಿ ಮೊತ್ತದ ಹೊರಬಾಕಿ ಸಾಲ ಇರುತ್ತದೆ.

ಶ್ರೀಮತಿ ಅನುರಾಧಾ ರಾಜನ್ ಕಾಂತ್, ಮುಖ್ಯ ಮಹಾ ಪ್ರಬಂಧಕರು, ಐ.ಡಿ.ಬಿ.ಐ ಬ್ಯಾಂಕ್, ಬೆಂಗಳೂರು ವಲಯ

Karnataka Grameena Bank

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ನ ಮೂಲಕ ರಚಿಸಲಾದ ಸ್ವಸಹಾಯ ಸಂಘಗಳು ನಮ್ಮ ಬ್ಯಾಂಕಿನಿಂದ ನೇರ ಸಾಲಸೌಲಭ್ಯ ಪಡೆದಯುವದಲ್ಲದೇ ಅದರ ಸಂಪೂರ್ಣ ನಿರ್ವಹಣೆಯನ್ನು ಯೋಜನೆ ಕೈಗೊಳ್ಳುತ್ತದೆ.
ಈ ವ್ಯವಸ್ಥೆಯಲ್ಲಿ ನಮ್ಮ ಬ್ಯಾಂಕ್ ಮೂಲಕ ಸುಮಾರು 1,00,000 ಸ್ವ-ಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಒದಗಿಸಿದ್ದು ಒಟ್ಟು ರೂ. 2,800 ಕೋಟಿ ಮೊತ್ತದಷ್ಟು ಚಾಲ್ತಿ ಸಾಲ ಹೊಂದಿರುತ್ತದೆ. ಸ್ವಸಹಾಯ ಸಂಘದಲ್ಲಿನ ಶಿಸ್ತುಬದ್ಧ ವ್ಯವಹಾರದ ನಿರ್ವಹಣೆಯ ಕಾರಣ ಸಂಘಗಳು ಲಾಭಾಂಶ ಪಡೆಯಲು ಅರ್ಹವಾಗುತ್ತದೆ.

ಶ್ರೀ ಜಿ.ಆರ್ ದಿಲ್ಲಿ ಬಾಬು, ಚೇರ್‌ಮೆನ್, ಕರ್ನಾಟಕ ಗ್ರಾಮೀಣ ಬ್ಯಾಂಕ್

Karnataka Bank 100 Year-Old-Private Sector Bank

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸಂಸ್ಥೆಯು ಸ್ವ-ಸಹಾಯ ಸಂಘಗಳನ್ನು ರಚಿಸಿ, ಬ್ಯಾಂಕ್ ಮೂಲಕ ಸಿ.ಸಿ. / ಓಡಿ ಮಾದರಿಯಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ. ಈ ಯೋಜನೆಯಿಂದ ಪ್ರಾಯೋಜಿತ ಸಂಘಗಳಿಗೆ ಆಕರ್ಷಕ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದೇವೆ ಹಾಗೂ SKDRDP BC Trust ಸಂಸ್ಥೆಯು ಬ್ಯಾಂಕುಗಳಿಗೆ ಮರುಪಾವತಿಯ ಭದ್ರತೆಯಾಗಿ ನಿಂತಿದೆ. ಈ ಬಡ್ಡಿ ದರದಲ್ಲಿ ಯೋಜನೆಯ ಸೇವಾಶುಲ್ಕವು ಕೂಡ ಒಳಗೊಂಡಿದ್ದು , ಅತ್ಯಂತ ಕಡಿಮೆ ವೆಚ್ಚದಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಮನೆ ಬಾಗಿಲಿನಲ್ಲಿಯೇ ಬ್ಯಾಂಕ್ ಮೂಲಕ ಆರ್ಥಿಕ ಸಹಾಯ ಸಿಕ್ಕಂತಾಗಿದೆ.

ಶ್ರೀ ರವಿಚಂದ್ರನ್ ಎಸ್., ಮಹಾ ಪ್ರಬಂಧಕರು, ಕರ್ನಾಟಕ ಬ್ಯಾಂಕ್, ಮುಖ್ಯ ಕಚೇರಿ, ಮಂಗಳೂರು.

* SHG ಸದಸ್ಯರು ಬ್ಯಾಂಕ್ OD/CC ಸಾಲದ ಮೂಲಕ ಪಡೆಯುವ ಸಾಲದ ಬಡ್ಡಿ ದರವು 13.5 % (ದಕ್ಷಿಣ ಕನ್ನಡ ಮತ್ತು ಉಡುಪಿ) ಮತ್ತು 14 % (ಬೆಳಗಾವಿ ಹೊರತುಪಡಿಸಿ ಎಲ್ಲಾ ಜಿಲ್ಲೆಗಳು). ಬ್ಯಾಂಕ್ ಪರಿಷ್ಕರಿಸಿದ ದರಕ್ಕೆ ಅನುಗುಣವಾಗಿ ದರವು ಬದಲಾಗಬಹುದು.

ಪ್ರಕಟಣೆ:

ಅನಿಲ್ ಕುಮಾರ್ ಎಸ್. ಎಸ್.
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.)